"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

16ನೇ ಮಾರ್ಚ್ 2017
ಗುರುವಾರ

## ವಿಷಯಾನುಕ್ರಮಣಿಕೆ


1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.
   ವಿಷಯ: ಸರ್ಕಾರದಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ
   – ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
   – ಡಾ: ಜಿ.ಪರಮೇಶ್ವರ್ (ಸಭಾನಾಯಕರು)
2. ಪ್ರಶ್ನೋತ್ತರಗಳು
   ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**520** – ಮನೋರಂಜನೆ ಕ್ಲಬ್‌ಗಳಿಗೆ ಅನುಮತಿ ನೀಡಿರುವ ಬಗ್ಗೆ.
– ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ (ಅಣ್ಣಯ್ಯ)

**526** –ರಾಯಚೂರು, ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಬಗ್ಗೆ.
– ಶ್ರೀ ಎನ್.ಎಸ್.ಬೋಸ್‌ರಾಜು

**482** – ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸ್ಥಳಾಂತರಿಸುವ ಬಗ್ಗೆ.
– ಶ್ರೀ ಐವನ್ ಡಿ'ಸೋಜಾ

**539** – ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಗಳಲ್ಲಿ ತ್ಯಾಜ್ಯ ಮತ್ತು ರಾಸಾಯನಿಕ ವಸ್ತುಗಳು ಸೇರಿ ಮಲಿನಗೊಳ್ಳುತ್ತಿರುವುದನ್ನು ತಡೆಗಟ್ಟುವ ಬಗ್ಗೆ.
– ಶ್ರೀ ರಾಮಚಂದ್ರಗೌಡ

**502** –ಜನ ಸ್ನೇಹಿ ಪೊಲೀಸ್ ಠಾಣೆಗಳ ಬಗ್ಗೆ
– ಶ್ರೀ ಭಾನುಪ್ರಕಾಶ

**530** –ರಾಜ್ಯದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳ, ಸಿಬ್ಬಂದಿ ಕೊರತೆ ಎದುರಿಸುತ್ತಿರುವ ಬಗ್ಗೆ
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

**594** – ಮಲ್ಟಿಪ್ಲೆಕ್ಸ್‌ಗಳಲ್ಲಿ ಎಳನೀರು ಮಾರಾಟದ ಬಗ್ಗೆ
– ಶ್ರೀ ಎಂ.ಕೆ.ಪ್ರಾಣೇಶ್

**559** – ಬೆಳಗಾವಿ ಜಿಲ್ಲೆಯ ರಾಯಭಾಗ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಬಗ್ಗೆ
– ಶ್ರೀ ವಿವೇಕರಾವ್ ವಸಂತರಾವ್ ಪಾಟೀಲ್

**517** – ಮಾದಕ ವಸ್ತುಗಳ ಮಾರಾಟ ಮತ್ತು ಪ್ರಕರಣಗಳ ಬಗ್ಗೆ.
– ಶ್ರೀ ವಿ.ಸೋಮಣ್ಣ

**533** – ಶಾಶ್ವತ ಕುಡಿಯುವ ನೀರಿನ ಕಾಮಗಾರಿಗಳ ಬಗ್ಗೆ
– ಶ್ರೀ ವಿಜಯ ಸಿಂಗ್

**586** – ಪ್ರಿಯದರ್ಶಿನಿ ಯೋಜನೆಯಡಿ ಮಹಿಳೆಯರ ಬಗ್ಗೆ


"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

– ಶ್ರೀಮತಿ ಮೋಟಮ್ಮ

ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

**3.ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.**

ಅ) ಅರಣ್ಯ ಪ್ರದೇಶದಲ್ಲಿ ಕಾಡಿನ ಬೆಂಕಿ ಹತ್ತಿಕೊಂಡಿರುವ ಬಗ್ಗೆ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಆ) ಹೆಗ್ಗಡದೇವನಕೋಟೆ ಪಟ್ಟಣದಲ್ಲಿ ಹರಿಯುವ ತಾರಕಾ ನದಿಯ ನೀರು ಕಲುಷಿತಗೊಂಡಿರುವ ಬಗ್ಗೆ.
- ಶ್ರೀ ಸಂದೇಶ ನಾಗರಾಜು

ಇ) ಪಶು ವೈದ್ಯರ ನೇಮಕಾತಿ ಬಗ್ಗೆ
- ಶ್ರೀ ರಘುನಾಥರಾವ್ ಮಲ್ಕಾಪೂರೆ
- ಶ್ರೀ ಎ.ಮಂಜು (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು)

ಈ) ಕಸ್ತೂರಿರಂಗನ್ ವರದಿ ಅನುಷ್ಠಾನ ಮಾಡಿದರೆ ಅರಣ್ಯ ಪ್ರದೇಶದಲ್ಲಿ ವಾಸಿಸುವ ಅದಿವಾಸಿಗಳಿಗೆ ತೊಂದರೆಯಾಗುವ ಬಗ್ಗೆ
- ಘೋಟ್ನೆಕರ್ ಶ್ರೀಕಾಂತ ಲಕ್ಷ್ಮಣ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಉ) ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಕೈಗೊಳ್ಳುವ ಕರ್ನಾಟಕ ಪ್ರವಾಸ ವಿಳಂಬವಾಗಿರುವ ಬಗ್ಗೆ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್
- ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**4.ವರದಿಯನ್ನೊಪ್ಪಿಸುವುದು**

**5.ಗಮನ ಸೆಳೆಯುವ ಸೂಚನೆ**

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ತರೀಕೆರೆಯಿಂದ ಕೆಮ್ಮಣ್ಣುಗುಂಡಿವರೆಗಿನ ರಸ್ತೆಯು ಹಾಳಾಗಿ ಕೆಮ್ಮಣ್ಣುಗುಂಡಿ ಗಿರಿಧಾಮಕ್ಕೆ ಬರುವ ಪ್ರವಾಸಿಗರಿಗೆ ತೊಂದರೆಯುಂಟಾಗಿರುವ ಹಾಗೂ ಪ್ರವಾಸಿಗರಿಗೆ ಸೂಕ್ತ ಮೂಲ ಸೌಕರ್ಯಗಳನ್ನು ಒಗದಿಸುವ ಬಗ್ಗೆ.
- ಶ್ರೀಮತಿ ಮೋಟಮ್ಮ
- ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

ಆ) ರಾಜ್ಯಾದ್ಯಂತ ಕೃಷಿ ಜಮೀನಿನಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸಿ ನೋಂದಣಿ ಮಾಡುತ್ತಿರುವ ಬಗ್ಗೆ
- ಶ್ರೀ ಎಂ.ಕೆ.ಪ್ರಾಣೇಶ್
- ಶ್ರೀಮತಿ ಮೋಟಮ್ಮ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್

"ತಿದ್ದುಪಡಿಯಾಗದ ಪ್ರತಿ/ ಸ್ಪಂದನಾ ಆರ್/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

- ಶ್ರೀ ಭಾನುಪ್ರಕಾಶ್
- ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

**6.ನಿಯಮ 330ರ ಮೇರೆಗೆ ಚರ್ಚೆ**

ಅ) ಶಿಕ್ಷಣ ಇಲಾಖೆ ಶಾಲಾ ಸಮವಸ್ತ್ರಗಳ ದರ ಕಡಿತ ಮಾಡಿರುವುದರಿಂದ ರಾಜ್ಯದ ನೇಕಾರರು ಉದ್ಯೋಗ ತೊರೆದು ವಲಸೆ ಹೋಗುವ ಪರಿಸ್ಥಿತಿ ಉಂಟಾಗಿರುವ ಬಗ್ಗೆ.

- ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ
- ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಸಚಿವರು)
- ಶ್ರೀ ರಮೇಶ್ ಬಾಬು
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ವಿ.ಎಸ್.ಉಗ್ರಪ್ಪ
- ಶ್ರೀ ರಾಮಚಂದ್ರಗೌಡ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

**7.ವಿತ್ತೀಯ ಕಾರ್ಯಕಲಾಪ**

**2017-2018**ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ

- ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

– – –

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

(220)/16-03-2017/11-00/RC-GR

**ಕರ್ನಾಟಕ ವಿಧಾನ ಪರಿಷತ್ತು**

***ಗುರುವಾರ, 16ನೇ ಮಾರ್ಚ್, 2017***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 08 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

**ಸಭಾಪತಿಯವರು:–** ನೀವು ಕಳುಹಿಸಿರುವಂತಹ ನಿಲುವಳಿ ಸೂಚನೆಯನ್ನು ನಾನು ನೋಡಿದೆ.

**01.ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.**

ವಿಷಯ:– "ಸರ್ಕಾರದಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ"

– – –

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕೇಂದ್ರದಲ್ಲಿರುವಂತಹ ಕಾಂಗ್ರೆಸ್ ಪಕ್ಷದ ಹೈ ಕಮಾಂಡಿಗೆ ಕರ್ನಾಟಕದಿಂದ ನೂರಾರು ಕೋಟಿ ರೂಪಾಯಿಗಳನ್ನು ಕಪ್ಪ ಕಾಣಿಕೆಯಾಗಿ ಹಣವನ್ನು ಕಳುಹಿಸಲಾಗಿದೆ ಎಂಬುದರ ಬಗ್ಗೆ ಇಡೀ ರಾಜ್ಯಾದ್ಯಂತ ಚರ್ಚೆಯಾಗಿದೆ.

**(ಗೊಂದಲ)**

**ಡಾ॥ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಪ್ರತಿ ಸಲ ಈ ರೀತಿಯಾಗುತ್ತಿದೆ. ಇದಕ್ಕೆ ಏನಾದರು ಒಂದು ಅಂತ್ಯ ಕಾಣಿಸಲೇಬೇಕು. ಪ್ರತಿ ಸಲ ನಾವು ಪ್ರಶ್ನೋತ್ತರ ವೇಳೆಯನ್ನು ಬಿಟ್ಟು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುತ್ತಾ ಹೋದರೆ ....

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಖಂಡಿತವಾಗಿಯು ನಾನು ಪ್ರಶ್ನೋತ್ತರ ವೇಳೆ ಬೇಡವೆಂದು ಹೇಳುತ್ತಿಲ್ಲ. ಆದರೆ ಇಲ್ಲಿ ಏನಾಗಿದೆ ಎಂದರೆ....

**ಡಾ॥ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ದಯಮಾಡಿ ತಾವು ಇದಕ್ಕೆ ಅವಕಾಶ ಕೊಡಬೇಡಿ. ಯಾವರೀತಿಯಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತು ಹೇಳುತ್ತಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಿಂದ ಸುಮಾರು 600 ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಗ್ರಹ ಮಾಡಿ ಕೇಂದ್ರದಲ್ಲಿರುವಂತಹ ಕಾಂಗ್ರೆಸ್ ಪಕ್ಷದ ಹೈ ಕಮಾಂಡಿಗೆ ಕಳುಹಿಸಿ ಕೊಟ್ಟಿದ್ದಾರೆ. ಆ ಹಣ ಕಳುಹಿಸಿರುವಂಥದ್ದರಲ್ಲಿ ಮಾನ್ಯ ಗೋವಿಂದರಾಜುರವರು ಬರೆದಿರುವಂತಹ ಡೈರಿಯಲ್ಲಿ ಅನೇಕ ಮಂತ್ರಿಗಳ ಹೆಸರು ಇದೆ. ಮಾನ್ಯಜಾರ್ಜ್‌ರವರ ಹೆಸರು ಸಹ ಇದೆ.

**(221)16.03.2017 ಕೆಜಿ/ಜಿಆರ್ 11.10**

**ಸಭಾಪತಿಯವರು:-** ದಯವಿಟ್ಟು ಎಲ್ಲಾ ಸದಸ್ಯರು ಒಂದು ನಿಮಿಷ ಕುಳಿತುಕೊಳ್ಳಿ. ನಾನು ಮಾತನಾಡುತ್ತೇನೆ. ಈಗ ಸದನವನ್ನು ನಡೆಸುವುದಕ್ಕೆ ಬಿಡಿ.

**(ಗೊಂದಲ)**

**ಡಾ|| ಜಿ.ಪರಮೇಶ್ವರ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ನಮ್ಮ ಹತ್ತಿರ ಅವರ ಡೈರಿ ಇದೆ. ಅವರ ಹಣೆ ಬರಹ ಆ ಡೈರಿಯಲ್ಲಿದೆ. ಇದನ್ನು ಅವರೇ ಬರೆದಿರುವುದು.

(ಈ ಹಂತದಲ್ಲಿ ಆಡಳಿತ ಪಕ್ಷದವರು ಡೈರಿಯ ನಕಲು ಪ್ರತಿಗಳನ್ನು ಹಿಡಿದುಕೊಂಡು ಪ್ರದರ್ಶಿಸಿದರು)

**(ಗೊಂದಲ)**

**ಶ್ರೀ ಐವನ್ ಡಿ'ಸೋಜ (ಸರ್ಕಾರದ ಮುಖ್ಯ ಸಚೇತಕರು):-**ಮಾನ್ಯ ಸಭಾಪತಿಯವರೆ, ಲೇಹರ್‌ಸಿಂಗ್ ನಿವಾಸದ ಮೇಲೆ ಐ.ಟಿ. ದಾಳಿ ನಡೆಸಿದ ಸಂದರ್ಭದಲ್ಲಿದೊರೆತಡೈರಿ ಪ್ರಕರಣದ ಬಗ್ಗೆಯೂತನಿಖೆಯಾಗಲಿ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಸುಮಾರು 600 ಕೋಟಿ ರೂಪಾಯಿಗಳಷ್ಟು ಹೈಕಮಾಂಡ್‌ಗೆ ಕಪ್ಪ ಹೋಗಿದೆ. ಈ ಎರಡೂ ಡೈರಿಗಳನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಿ. ನಮ್ಮ ರಾಜ್ಯದ ಜನತೆಗೆ ಇದರ ಬಗ್ಗೆ ಅನುಮಾನ ಇದೆ. ಹೀಗಾಗಿ, ಇದನ್ನು ಸಿ.ಬಿ.ಐ. ತನಿಖೆಗೆ ಕೊಡಿ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರುಕನ್ನಡ ಪ್ರಭ ದಿನಪತ್ರಿಕೆಯನ್ನು ಹಿಡಿದುಕೊಂಡು ಪ್ರದರ್ಶಿಸಿದರು)**

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ ಗಣಕಯಂತ್ರ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ. ಈಗ ನಾನು ಮಾತನಾಡುತ್ತೇನೆ. ಈಗ ಸದನವನ್ನು ನಡೆಸುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನನಗೆ ಈ ವಿಷಯದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಅದನ್ನು ಸದನದಲ್ಲಿ ಚರ್ಚೆ ಮಾಡೋಣ.

**(ಗೊಂದಲ)**

**ಡಾ||ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಬಿ.ಎಸ್.ವೈ. 19 ಕೋಟಿ....

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ದಯವಿಟ್ಟು ಕುಳಿತುಕೊಳ್ಳಿ. ಈ ವಿಷಯದ ಬಗ್ಗೆ ನಾನು ಬಂದ ತಕ್ಷಣವೆ ನೋಡಿದೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೊರಟಿದ್ದೆ. ಅಷ್ಟರಲ್ಲಿ ತಾವೆಲ್ಲರೂ ಮಾತನಾಡಲು ಪ್ರಾರಂಭ ಮಾಡಿದ್ದೀರಿ. ಅದಕ್ಕೆ ನಾನು ಮಾತನಾಡುವುದಕ್ಕೆ ಆಗಲಿಲ್ಲ. ನಿಲುವಳಿ ಸೂಚನೆಯನ್ನು ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಸದಸ್ಯರು ಸಹಿ ಮಾಡಿಕೊಟ್ಟಿದ್ದೀರಿ. ಇವತ್ತಿನ ಈ ಅಧಿವೇಶನವು ಹೊಸ ಅಧಿವೇಶನ ಅಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಜೊತೆಗೆ ಪ್ರಾರಂಭವಾದಂತಹ ಮುಂದುವರೆದ ಅಧಿವೇಶನ ಆಗಿರುತ್ತದೆ. ಇದು ಪ್ರತ್ಯೇಕವಾದ ಅಧಿವೇಶನ ಅಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಸಲ್ಲಿಸುವ ಸಲುವಾಗಿ ನಡೆದ ಹಿಂದಿನ ಅಧಿವೇಶನದಲ್ಲಿ ಇದೇ ವಿಷಯದ ಮೇಲೆ ನಿಲುವಳಿ ಸೂಚನೆ ಮಂಡನೆ ಆಗಿತ್ತು. ಅಂದು ತಾಂತ್ರಿಕ ಕಾರಣಗಳಿಗಾಗಿ ಅದನ್ನು ತಿರಸ್ಕರಿಸಿ ಮಾರನೇ ದಿವಸ ಪುನಃ ಕೊಟ್ಟರು. ಅವತ್ತಿನ ದಿವಸ ಸ್ವಲ್ಪ ಮಾತನಾಡಲಿಕ್ಕೆ ಅವಕಾಶ ಕೊಡಲಾಗಿತ್ತು. ಈ ಹಿನ್ನೆಲೆಯಲ್ಲಿ ಮುಂದುವರಿದ ಅಧಿವೇಶನದಲ್ಲಿ ಎರಡನೇ ಬಾರಿಗೆ ಅದೇ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಕೊಡಲಿಕ್ಕೆ ಬರುವುದಿಲ್ಲ. ಅದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ನಮ್ಮ Rules of procedure and conduct of business in the Karnataka Legislative Council ಪುಸ್ತಕದಲ್ಲಿ ಅವಕಾಶ ಇದ್ದರೆ ಸ್ವಲ್ಪ ಹೊತ್ತು ಮಾತನಾಡಲಿಕ್ಕೆ ಮತ್ತು ಅವರ ಅಭಿಪ್ರಾಯ ಹೇಳಲಿಕ್ಕೆ ಅವಕಾಶ ಕೊಡಬೇಕಾಗಿತ್ತು. ಯಾವುದೇ ಒಂದು ನಿಲುವಳಿ ಸೂಚನೆಯನ್ನು ವಿರೋಧ ಪಕ್ಷದ ನಾಯಕರು ಕೊಟ್ಟಾಗ, ಅವರಿಗೆ ಸ್ವಲ್ಪವಾದರೂ ಸಮಯ ಕೊಡಬೇಕಾಗಿದ್ದು ನನ್ನ ಧರ್ಮ. ಆದರೂ ಸಹ, ನಮ್ಮ Rules of

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

procedure and conduct of business in the Karnataka Legislative Council ಪುಸ್ತಕದ ಪ್ರಕಾರ ಅವಕಾಶವನ್ನು ಕೊಡುವುದು ಕಷ್ಟವಾಗುತ್ತದೆ. ಕಳೆದ ಬಾರಿ ತಾಂತ್ರಿಕ ಕಾರಣಗಳಿಂದಾಗಿ ನಾನು ಅದನ್ನು ತಿರಸ್ಕರಿಸಿದ್ದೆ. ಮಾರನೇ ದಿವಸ ಮತ್ತೆ ಇನ್ನೊಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದರು. ಮಾನ್ಯ ಹಿರಿಯ ಸದಸ್ಯರು ಮಾತನಾಡಿದ್ದರು. ಅವರಿಗೂ ಅವಕಾಶ ಕೊಟ್ಟಿದ್ದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇವತ್ತಿನ ಈ ನಿಲುವಳಿ ಸೂಚನೆಯ ಬಗ್ಗೆ ಪುನಃ ಚರ್ಚೆ ಮಾಡುವುದು ಕಷ್ಟವಾಗುತ್ತದೆ. ಇದು ಹಳೆಯ ವಿಷಯವಾಗಿರುವುದರಿಂದ ಬಜೆಟ್‌ನ ಮೇಲೆ ಮಾತನಾಡುವಾಗ ಪ್ರಸ್ತಾಪ ಮಾಡಬಹುದು. ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಆದರೆ, ನಿಲುವಳಿ ಸೂಚನೆ ಹೆಸರಿನಲ್ಲಿ ಇದನ್ನು ನಾನು ಪುರಸ್ಕರಿಸುವುದು ಕಷ್ಟವಾಗುತ್ತದೆ. ದಯವಿಟ್ಟು ನನ್ನನ್ನು ಕ್ಷಮಿಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಕೊಟ್ಟಂತಹ ನಿಲುವಳಿ ಸೂಚನೆ....

**(ಗೊಂದಲ)**

**ಡಾ॥ಜಿ.ಪರಮೇಶ್ವರ:-**ಮಾನ್ಯ ಸಭಾಪತಿಯವರೆ, ತಾವು ರೂಲಿಂಗನ್ನು ಕೊಟ್ಟ ಮೇಲೆ, ಮಾನ್ಯ ವಿರೋಧ ಪಕ್ಷದ ನಾಯಕರು ಸಭಾಪತಿಯವರ ಪೀಠಕ್ಕೆ ಅಗೌರವ ತೋರುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ರೂಲಿಂಗನ್ನು ಪ್ರಶ್ನೆ ಮಾಡುತ್ತಿಲ್ಲ. ನಾವು ಕಳೆದ ಬಾರಿಕೊಟ್ಟಂತಹ ನಿಲುವಳಿ ಸೂಚನೆ ಭ್ರಷ್ಟಚಾರದ ಬಗ್ಗೆ ಯಾರಯಾರ ಮನೆಗಳ ಮೇಲೆ ಐ.ಟಿ., ದಾಳಿ ಆಗಿತ್ತೋ ಅದರ ಬಗ್ಗೆ ಮಾತ್ರ ಕೊಟ್ಟಿದ್ದೇವೆ. ಆಗ ಈ ಡೈರಿಯ ಬಗ್ಗೆ ಪ್ರಸ್ತಾಪ ಮಾಡಿಲ್ಲ. ದಯವಿಟ್ಟು ಇದನ್ನು ಗಮನಿಸಿ.

**(ಗೊಂದಲ)**

**ಡಾ॥ಜಿ.ಪರಮೇಶ್ವರ:-**ಮಾನ್ಯ ಸಭಾಪತಿಯವರೆ, ಇಲ್ಲಇಲ್ಲ......

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತಾವು ನಮಗೆ ಇಲ್ಲಿ ರಕ್ಷಣೆ ಕೊಡಬೇಕು. ನಾವು ಈ ಡೈರಿಯ ಬಗ್ಗೆ ಪ್ರಸ್ತಾಪ ಮಾಡಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಐವನ್‌ಡಿಸೋಜ (ಸರ್ಕಾರಿ ಮುಖ್ಯ ಸಚೇತಕರು):–**ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾನ್ಯ ನರೇಂದ್ರ ಮೋದಿಯವರ ಸಹಾರಾ ಡೈರಿಯ ಬಗ್ಗೆ ಮಾತನಾಡಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಆ ಡೈರಿಯಲ್ಲಿರುವ ವಿಷಯವನ್ನುಓದಲಿ.

**(ಗೊಂದಲ)**

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ತಾವು ರೂಲಿಂಗನ್ನು ಕೊಟ್ಟಿದ್ದೀರಿ.

**(ಗೊಂದಲ)**

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅದನ್ನು ಓದಲಿ. ಅದು ಮಾಧ್ಯಮಗಳ ಮೂಲಕ ಬರಲಿ.

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ಈಗಾಗಲೇ ಹೇಳಿದ್ದೇನೆ. ಈ ವಿಷಯವನ್ನು ನಿಯಮ 59ರ ಅಡಿಯಲ್ಲಿ ತೆಗೆದುಕೊಳ್ಳಲು ಕಷ್ಟವಾಗುತ್ತದೆ. ಬೇರೆ ರೀತಿಯಲ್ಲಿ ಬಂದರೆ ಅದನ್ನು ಪರಿಶೀಲಿಸುತ್ತೇನೆ. ಮುಂದೆ ನೋಡೋಣ. ಇವತ್ತು ಆಗುವುದಿಲ್ಲ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬೇರೆ ನಿಯಮಕ್ಕೆ ಅದನ್ನು convert ಮಾಡಿ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ನಾನು convert ಮಾಡುವುದಿಲ್ಲ. ಬೇರೆ ರೀತಿಯಲ್ಲಿ ಬಂದಾಗ ನೋಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ತಾವು ಯಾವ ರೂಪದಲ್ಲಿ convert ಮಾಡುತ್ತೀರಿ ಎಂಬುದನ್ನು ಹೇಳಿ ಬಿಟ್ಟರೆ...

**(ಗೊಂದಲ)**

**ಸಭಾಪತಿಯವರು:–** ನಾನು convert ಮಾಡುವುದಿಲ್ಲ. Convert ಮಾಡುತ್ತೇನೆ ಎಂದು ನಾನೇಕೆ ಹೇಳಲಿ? ಮುಂದೆ ತಾವು ಬೇರೆ ನೋಟೀಸ್ ಕೊಟ್ಟರೆ ನೋಡೋಣ.

**(ಗೊಂದಲ)**

**Sri SIDDARAMAIAH, Chief Minister:-**Mr.Chairman Sir, it is inadmissible.

"ತಿದ್ದುಪಡಿಯಾಗದ ಪ್ರತಿ/ಉಪಯೋಗಿಸಕೂಡದು ಅಥವಾ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಸಭಾಪತಿಯವರು:-** ಮುಖ್ಯಮಂತ್ರಿಯವರೆ, 'inadmissible'ಎಂದು ಹೇಳಲಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಬೇರೆ ರೂಪದಲ್ಲಿ ನೋಟೀಸನ್ನು ಕೊಟ್ಟರೆ ನೋಡೋಣ.

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಹಿಂದೆಯೇ ಪ್ರಸ್ತಾಪ ಮಾಡಿದ್ದಾರೆ. ಪುನಃ ಅದೇ ವಿಚಾರಗಳನ್ನು ಪದೇ ಪದೇ ಪ್ರಸ್ತಾಪ ಮಾಡುವುದು ಸರಿಯಲ್ಲ. ತಾವು ರೂಲಿಂಗ್ ಕೊಟ್ಟಿದ್ದೀರಿ. ಹಾಗಿದ್ದರೂ ಮಾನ್ಯ ಸದಸ್ಯರು ಮತ್ತೆ ಅದನ್ನೇ ಹೇಳುವಂತಹದ್ದು ಎಷ್ಟರ ಮಟ್ಟಿಗೆ ಸರಿ ಇದೆ?

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತಾವೇ ಬೇರೆ ರೂಪದಲ್ಲಿ ಕೊಡಿ ಎಂದು ಹೇಳುತ್ತಿದ್ದೀರಿ....

**(ಗೊಂದಲ)**

**ಸಭಾಪತಿಯವರು:-**ಮಾನ್ಯ ವಿರೋಧ ಪಕ್ಷದ ನಾಯಕರೆ, ಬೇರೆ ರೂಪದಲ್ಲಿ ಕೊಡಿ ಎಂದು ತಿಳಿಸಿದೆ ಅಷ್ಟೇ.

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಮಾನ್ಯ ಕೆ.ಎಸ್.ಈಶ್ವರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದು, ಬಹಳ ಅನುಭವ ಇರುವಂತಹವರು.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯ ಮಂತ್ರಿಗಳು 12 ಬಾರಿ ಬಜೆಟ್‌ನ್ನು ಮಂಡಿಸಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪದೇ ಪದೇ ಈ ತರಹ ಯಾವುದೋ ಒಂದು inconclusive proof ಅನ್ನು ... ಹಾಗಾದರೆ, ಮಾನ್ಯ ಪ್ರಧಾನ ಮಂತ್ರಿಗಳಿಗೆ ಸರ್ವೋಚ್ಚ ನ್ಯಾಯಾಲಯದಲ್ಲಿ 'inconclusive proof' ಎಂದು ತೀರ್ಮಾನ ಆಗಿದೆಯಲ್ಲ, ಅದರ ಬಗ್ಗೆ ಚರ್ಚೆ ಆಗಬೇಕು ಅಲ್ಲವೇ? ಮಾನ್ಯ ಪ್ರಧಾನ ಮಂತ್ರಿಗಳ ಬಗ್ಗೆ ತೀರ್ಮಾನ ಆಗಬೇಕು ಅಲ್ಲವೇ?

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/ ಗಣಕೀಕೃತ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಚರ್ಚೆ ಆಗಲಿ...

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಎಲ್ಲರೂ ಎದ್ದು ನಿಂತು ಈ ಬಗ್ಗೆ ಚರ್ಚೆ ಆಗಲಿ ಎಂದು ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಮಾನ್ಯ ನರೇಂದ್ರ ಮೋದಿಯವರ ಬಗ್ಗೆ ಸಹಾರಾ ಮತ್ತು ಬಿರ್ಲಾ ಬಗ್ಗೆ ಇದೆ. ಅದರ ಬಗ್ಗೆ ಚರ್ಚೆ ಆಗಬೇಕು ಅಲ್ಲವೇ? ಯಾರಾದರೂ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಸಾಧ್ಯವೆ?

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ಸಾವಿರ ಕೋಟಿ ರೂಪಾಯಿಗಳು ಎಂದು ಇದೆ. (ಈ ಹಂತದಲ್ಲಿ ದಿನಪತ್ರಿಕೆಯೊಂದನ್ನು ಹಿಡಿದು ಪ್ರದರ್ಶಿಸಿದರು) ತಾವು ಹೇಳುತ್ತೀರಿ, ಬೇರೆ ರೂಪದಲ್ಲಿ ಕೊಡಿ ಅವಕಾಶ ಕೊಡುತ್ತೇನೆಂದು....

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೆ, ನಾನು ಕೊಡಿ ಎಂದು ಹೇಳಿದ್ದೇನೆ ಅಷ್ಟೇ. ಅವಕಾಶ ಕೊಡುತ್ತೇನೆ ಎಂದು ಹೇಳಿರುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದನ್ನು ಸೇರಿಸಿ ಸಿ.ಬಿ.ಐ., ತನಿಖೆಗೆ ಕೊಡಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಯಾವಾಗಿನಿಂದ ಸಿ.ಬಿ.ಐ.,ನ ಮೇಲೆ ವ್ಯಾಮೋಹ ಬಂತು? ಅವರ ಅಧಿಕಾರದಲ್ಲಿ ಎಷ್ಟು ಪ್ರಕರಣಗಳನ್ನು ಸಿ.ಬಿ.ಐ., ತನಿಖೆಗೆ ವಹಿಸಿದ್ದಾರೆ ಹೇಳಿ? ಸಿ.ಬಿ.ಐ ತನಿಖೆಗೆ ಕೊಟ್ಟಿರುವಂತಹ ಒಂದು ಘಟನೆಯನ್ನು ಹೇಳಿ? 'Chorbhachav institution, chorbhachav institution' ಎಂದು ಹೇಳುತ್ತಿದ್ದೀರಿ. ಈಗ ಮಾನ್ಯ ನರೇಂದ್ರ ಮೋದಿಯವರು ಬಂದ ಮೇಲೆ ಸಿ.ಬಿ.ಐ., ಬಂದಿದೆ.

**(ಗೊಂದಲ)**

**ಶ್ರೀ ಐವನ್‌ಡಿಸೋಜ:-** ಮಾನ್ಯ ಸಭಾಪತಿಯವರೆ, ಮಾನ್ಯ ನರೇಂದ್ರ ಮೋದಿಯವರು ಬಂದ ಮೇಲೆ ಇವರಿಗೆಲ್ಲ ಸಿ.ಬಿ.ಐ., ಮೇಲೆ ವ್ಯಾಮೋಹ ಬಂದು ಬಿಟ್ಟಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಯಾವುದೇ ಕಾರಣಕ್ಕೂ ನಿಲುವಳಿ ಸೂಚನೆ ಮೇರೆಗೆ ಚರ್ಚೆಗೆ ಅವಕಾಶ ಕೊಡಬೇಡಿ. ಈ Adjournment Motion ಕಸದ ಬುಟ್ಟಿಗೆ ಎಸೆಯುವಂತಹದ್ದು.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಡಿ.ಕೆ.ಶಿ, ಮಾನ್ಯ ಜಾರ್ಜ್, ಮಾನ್ಯ ದೇಶಪಾಂಡೆ ಅವರಿಗೆ ಚರ್ಚೆ ಮಾಡುವುದಕ್ಕೆ ಏಕೆ ಅವಕಾಶ ಕೊಡುತ್ತಿಲ್ಲ? ಮಾನ್ಯ ನರೇಂದ್ರ ಮೋದಿಗೆ ಕಳುಹಿಸಿದ್ದರೆ ಅದು ಸಹ ಚರ್ಚೆಗೆ ಬರಲಿ. ಶ್ರೀಮತಿ ಸೋನಿಯಾಗಾಂಧಿಗೆ ಕಳುಹಿಸಿದ್ದರೆ ಅದು ಚರ್ಚೆಗೆ ಬರಲಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧಪಕ್ಷದ ನಾಯಕರುಅವರ ಮನೆಯಲ್ಲಿnote counting machine ಇಟ್ಟುಕೊಂಡು ಮಾತನಾಡುತ್ತಾರೆ.

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರುಮಾನ್ಯ ಪ್ರಧಾನ ಮಂತ್ರಿಯವರಿಗೆ ಹೇಳಿ ಎಲ್ಲವನ್ನು ಸಿ.ಬಿ.ಐ., ತನಿಖೆಗೆ ಕೊಡಿಸಲಿ. ಇವರ ಮನೆಯಲ್ಲಿ ಡೈರಿ ಸಿಕ್ಕಿದೆ ಅದನ್ನು ಸಿ.ಬಿ.ಐ.ಗೆ ಕೊಡಿಸಲಿ. ತಾವು ಏನು ಮಾತನಾಡುತ್ತೀರಿ? ಎಲ್ಲರಿಗೂ principle ಒಂದೆ. ಕಾನೂನು ನಿಮಗೂ, ನಮಗೂ ಒಂದೆ.

**(ಗೊಂದಲ)**

**ಶ್ರೀ ಕೆ.ಬಿ.ಶಾಣಪ್ಪ:-**ಮಾನ್ಯ ಸಭಾಪತಿಯವರೆ, ನೀವು ಮಾಡುವುದನ್ನು ಅವರಿಗೆ ಏಕೆ ಹೇಳುತ್ತೀರಿ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೆ, ದಯವಿಟ್ಟು ಕುಳಿತುಕೊಳ್ಳಿ. ಈಗ ನನಗೆ ಸದನವನ್ನು ನಡೆಸಲು ಅವಕಾಶ ಮಾಡಿಕೊಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರು ಯಾವುದನ್ನು ಸಿ.ಬಿ.ಐ ತನಿಖೆಗೆ ಕೊಟ್ಟಿದ್ದಾರೆ? ಮಾನ್ಯ ಯಡಿಯೂರಪ್ಪನವರು ಚೆಕ್ ಮೂಲಕ ಹಣ ಪಡೆದಿದ್ದಾರೆ. ಅದನ್ನು ಸಿ.ಬಿ.ಐ ತನಿಖೆಗೆ ಕೊಟ್ಟಿದ್ದಾರೆಯೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಬೋಸ್‌ರಾಜುರವರೆ, ದಯವಿಟ್ಟು ಕುಳಿತುಕೊಳ್ಳಿ. ಈಗ ನನಗೆ ಸದನ ನಡೆಸಲು ಬಿಡಿ.

**(ಗೊಂದಲ)**

**ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರ ಮನೆಯಲ್ಲಿರುವ note counting machine ಗಳ ಬಗ್ಗೆ ಸಿ.ಬಿ.ಐ ತನಿಖೆಗೆ ಒಪ್ಪಿಸಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–**ಮಾನ್ಯ ಸಭಾಪತಿಯವರೆ, ಕಳೆದ ಬಾರಿ ನಾನು ಕೊಟ್ಟಿರುವ ನಿಲುವಳಿ ಸೂಚನೆಯನ್ನು ಗಮನಿಸಿ. ಅದರಲ್ಲಿ ಈ ಡೈರಿಯ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆಡಳಿತ ಯಂತ್ರ ನಡೆಸುವ ಮಂತ್ರಿಗಳು ಸರ್ಕಾರಿ ಸ್ವಾಮ್ಯ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. . . . .

**(ಗೊಂದಲ)**

(222) 16.03.2017 ಸಿಎಸ್/ಎಂಡಿ 11.20

**Sri SIDDARAMAIAH:-**No Sir, this should not be allowed. It is going to the record. ಈಶ್ವರಪ್ಪನವರು ಹೇಳಿದ್ದು ರೆಕಾರ್ಡ್‌ಗೆ ಹೋಗಬಾರದು. Do not allow this.

**Mr.CHAIRMAN:-** I am not allowing.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ ಗಣಜೂಣಾಜಜ ಅಂತರಂಗ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-**ದಯಮಾಡಿ ಕುಳಿತುಕೊಳ್ಳಿ, ಸದನ ನಡೆಸಲು ಅನುವು ಮಾಡಿಕೊಡಿ. I will start the Question Hour. ನಾನೀಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭಿಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರು ಆಡುವ ಮಾತುಗಳು ಮುಖ್ಯಮಂತ್ರಿಗಳ ಸ್ಥಾನಕ್ಕೆ ಶೋಭೆ ತರತಕ್ಕದ್ದಲ್ಲ.

**ಶ್ರೀ ಸಿದ್ದರಾಮಯ್ಯ:-** ನಿಮ್ಮ ಸರ್ಕಾರ ಇದ್ದಾಗ ಲೂಟಿ ಮಾಡಿ ಜೈಲಿಗೆ ಹೋಗಿದ್ದಾರೆ, ನಿಮಗೆ ನಾಚಿಕೆ ಆಗುವುದಿಲ್ಲವೇ? ಎಷ್ಟು ಸಲ ನೀವು ಜೈಲಿಗೆ ಹೋಗಿದ್ದೀರಾ ನೀವು?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮುಂದೆ ನೀವು ಸಹ ಜೈಲಿಗೆ ಹೋಗುತ್ತೀರಾ.

**ಶ್ರೀ ಸಿದ್ದರಾಮಯ್ಯ:-** ಜೈಲಿಗೆ ಹೋಗಿ ಬಂದಿದ್ದರೂ ಸಹ ನಿಮಗೆ ನಾಚಿಕೆ ಆಗುವುದಿಲ್ಲ. ಚೆಕ್ ಮೂಲಕ ಲಂಚ ತೆಗೆದುಕೊಂಡಿದ್ದೀರಿ.

**ಸಭಾಪತಿಯವರು:-**ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, I will start the Question Hour. ನಾನೀಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭಿಸುತ್ತಿದ್ದೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಭ್ರಷ್ಟ ಸರ್ಕಾರಒಂದು ಸಾವಿರಕೋಟಿ ರೂಪಾಯಿಗಳ ಲೂಟಿ ಮಾಡಿರುವ ಸರ್ಕಾರವನ್ನು ವಿರೋಧಿಸಿ, ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ..

**ಶ್ರೀ ಸಿದ್ದರಾಮಯ್ಯ:-**ನಿಮ್ಮ ಕಾಲದಲ್ಲಿ ಭ್ರಷ್ಟಚಾರ ಮುಗಿಲು ಮುಟ್ಟಿತ್ತು. ಅದಕೋಸ್ಕರ ಜೈಲಿಗೆ ಸಹ ಹೋಗಿದ್ದೀರಿ.

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು Shame-Shame ಎಂದು ಕೂಗುತ್ತಾ, ಸಭಾತ್ಯಾಗ ಮಾಡಿದರು. ಆಡಳಿತ ಪಕ್ಷದ ಕಡೆಯಿಂದಲೂ ಸಹ Shame-Shame ಎನ್ನುವ ಘೋಷಣೆಗಳನ್ನು ಕೂಗಿದರು.)**

**ಸಭಾಪತಿಯವರು:-** ಈಗ ನಾನು ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭಿಸುತ್ತಿದ್ದೇನೆ. ಎಲ್ಲರಿಗೂ ಪ್ರಶ್ನೋತ್ತರ ಅವಧಿಯಲ್ಲಿ ಭಾಗವಹಿಸಲು ಆಸೆ ಇರುತ್ತದೆ. ಏಕೆಂದರೆ ಎಲ್ಲರೂ ಉತ್ತಮವಾದ ಪ್ರಶ್ನೆಗಳನ್ನೇ ಕೇಳಿರುತ್ತಾರೆ. ಮಂತ್ರಿಗಳು ಉತ್ತರ ಕೊಟ್ಟ ಮೇಲೆ ನಾನು ಕೂಡ ಈ ವಿಚಾರದಲ್ಲಿ

"ತಿದ್ದುಪಡಿಯಾಗದ ಪ್ರತಿ/ ಗಣಕಯಂತ್ರ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದೆರಡು ಪ್ರಶ್ನೆಗಳನ್ನು ಕೇಳಬೇಕೆಂಬ ಆಸೆ ಆಗುತ್ತದೆ. ಆದರೆ ಎಲ್ಲರಿಗೂ ಅವಕಾಶ ನೀಡಲು ನನ್ನ ಬಳಿ ಸಮಯ ಇರುವುದಿಲ್ಲ. ಇರುವ ಸಮಯವನ್ನು ನಾನು ಲಿಮಿಟ್ ಮಾಡಬೇಕಾಗುತ್ತದೆ. ಪ್ರಶ್ನೆ ಕೇಳಿದವರನ್ನು ಬಿಟ್ಟು ಬೇರೆಯವರಿಗೆ ಉಪಪ್ರಶ್ನೆಗಳನ್ನು ಕೇಳುವುದಕ್ಕೆ ಸಾಮಾನ್ಯವಾಗಿ ನಾನು ಅವಕಾಶ ನೀಡುವುದಿಲ್ಲ. ವಿಶೇಷ ಸಂದರ್ಭದಲ್ಲಿ ಮಾತ್ರ ನಾನು ಅವಕಾಶ ಕೊಡುತ್ತೇನೆ. ಇಲ್ಲದಿದ್ದರೆ ಸಾಮಾನ್ಯವಾಗಿ ಪ್ರಶ್ನೆ ಕೇಳಿದವರಿಗೆ ಮಾತ್ರ ಉಪಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. Let the question be specific. ಹಾಗೆಯೇ ಸಚಿವರುಗಳು ಸಹ, ಈಗ ಸದನದಲ್ಲಿರುವ ಸಚಿವರುಗಳು ಪರವಾಗಿಲ್ಲ, ಆದರೆ ಕೆಲವು ಸಚಿವರುಗಳು ಉತ್ತರ ನೀಡುವ ಸಂದರ್ಭದಲ್ಲಿ ಇಡೀ ಇಲಾಖೆಯ ಬಗ್ಗೆ ಉತ್ತರವನ್ನು ನೀಡುತ್ತೀರಿ. ದಯಮಾಡಿ ಹಾಗೆ ಮಾಡದೇ to the point ಉತ್ತರ ನೀಡಿದರೆ ಬೇಗ ಪ್ರಶ್ನೋತ್ತರ ಅವಧಿ ಮುಗಿಯುತ್ತದೆ.

**02. ಪ್ರಶ್ನೋತ್ತರಗಳು**

ಅ)ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆಸಂಖ್ಯೆ 520**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ):-** ಮಾನ್ಯ ಸಭಾಪತಿಗಳೇ, ಮಾನ್ಯ ಗೃಹಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಕೇಳಿರುವ ಪ್ರಶ್ನೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರತಕ್ಕ ಮನರಂಜನೆಯ ಕ್ಲಬ್‌ಗಳು, ಅದರಲ್ಲಿಯೂ ವಿಶೇಷವಾಗಿ ಮಕ್ಕಳ ಮತ್ತು ಕುಟುಂಬದವರ ಮನರಂಜನೆಗಾಗಿ ಇರುವ ಕ್ಲಬ್‌ಗಳ ಮಾನದಂಡನೆಯ ಬಗ್ಗೆ ಪ್ರಶ್ನೆ ಮಾಡಿದ್ದೆನು. ಕೆಲವು ಕ್ಲಬ್‌ಗಳ ವ್ಯವಸ್ಥಾಪಕರು ನನ್ನ ಹತ್ತಿರ ಮಾತನಾಡತಕ್ಕ ಸಂದರ್ಭದಲ್ಲಿ ಈ ಕ್ಲಬ್‌ಗಳಿಗೆ ಪರವಾನಗಿಯನ್ನು ನೀಡತಕ್ಕ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ಅನುಮತಿ ಪಡೆಯಬೇಕಾಗುತ್ತದೆ ಎನ್ನುವ ಪ್ರಸ್ತಾಪವನ್ನು ಉಲ್ಲೇಖಿಸಿದ್ದರು. ಆದರೆ ಮನರಂಜನೆಯ ಕ್ಲಬ್‌ಗಳನ್ನು ನಡೆಸುವ ಸಂದರ್ಭದಲ್ಲಿ ಯಾವುದೇ ಪೋಲೀಸ್ ಇಲಾಖೆಯ ಅವಶ್ಯಕತೆ ಇಲ್ಲ ಎನ್ನುವ ಉತ್ತರವನ್ನು ಗೃಹಸಚಿವರು ನೀಡಿದ್ದಾರೆ. ಆದ್ದರಿಂದ ಉತ್ತರ ಸಮರ್ಪಕವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ನನ್ನ ಉತ್ತರವನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಪೋಲೀಸ್ ಇಲಾಖೆಯ ಪ್ರಕಾರ ಮನೋರಂಜನಾ ಕ್ಲಬ್‌ಗಳು, ಲೈವ್‌ಬ್ಯಾಂಡ್

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಮತ್ತು ಡಿಸ್ಕೋತೆಕ್‌ಗಳನ್ನು ನಡೆಸುವುದಕ್ಕೆ ಕೆಲವು ನಿಯಮಗಳಿವೆ. ಈ ನಿಯಮಗಳ ಚೌಕಟ್ಟಿನಲ್ಲಿ ಇವುಗಳಿಗೆ ಅನುಮತಿಯನ್ನು ನೀಡಬೇಕಾಗುತ್ತದೆ, ಅದಲ್ಲದೇ ಪೊಲೀಸ್ ಇಲಾಖೆಗೆ ಯಾವುದೇ ಜವಾಬ್ದಾರಿ ಇಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ದಿನಾಂಕ: 06–07–2013ರಲ್ಲಿ ಸರ್ಕಾರ ಒಂದು ಆದೇಶವನ್ನು ಹೊರಡಿಸಿ, ಇವುಗಳಿಗೆಲ್ಲ ಒಂದು ಗೈಡ್‌ಲೆನ್ಸ್ ಮತ್ತು ನಿಬಂಧನೆಗಳನ್ನು ನೀಡಲಾಗಿದೆ. ಅದರ ಪ್ರಕಾರ Licensing Authority: guidelines shall be implemented by the licensing authorities. Namely District Magistrates and Commissioners of Police in their respective jurisdiction along with the rules already imposed and where applicable in suppression of the existing guidelines and also as per the guidelines issued by the Government from time to time. ಅದರಲ್ಲಿ ನಾವು ಯಾವ್ಯಾವ ರೀತಿಯಲ್ಲಿ ಯಾವ್ಯಾವ ಗೈಡ್‌ಲೆನ್ಸ್‌ಗಳ ಆಧಾರದ ಮೇಲೆ ಇಂತಹ ಲೈಸೆನ್ಸ್‌ಗಳನ್ನು ನೀಡಬೇಕು ಎನ್ನುವುದನ್ನು ಉಲ್ಲೇಖಿಸಲಾಗಿದೆ. Commissionerate ಇರುವ ಕಡೆ ನಗರ ಪ್ರದೇಶದಲ್ಲಿ Licensing Authority ಕಮೀಷನರ್ ಮಾಡುತ್ತಾರೆ, ಜಿಲ್ಲಾಮಟ್ಟಗಳಲ್ಲಿ District Magistrates ಬರುತ್ತಾರೆ. ಆ ಪ್ರಕಾರವೇ ಈ ಲೈಸೆನ್ಸ್‌ಗಳನ್ನು ನೀಡುತ್ತಿರುವುದು. ಈ ಬಗ್ಗೆ ಅನುಬಂಧದಲ್ಲಿ ವಿವರಗಳನ್ನು ನೀಡಿದ್ದೇನೆ. ಬೆಂಗಳೂರಿನಲ್ಲಿ ಸುಮಾರು 250 ಇಂತಹ Recreation Club ಗಳಿಗೆ ನೀಡಲಾಗಿದೆ. Registrar of Cooperative Societies ಕೆಳಗೆ register ಮಾಡಿರುತ್ತಾರೆ. ಆದರೆ ಪರವಾನಗಿ ನೀಡುವವರು, District Magistrate and Commissioner ರವರು, ಆರೀತಿಯಾಗಿ ಬೆಂಗಳೂರಿನಲ್ಲಿ ಸುಮಾರು 250 ಕ್ಲಬ್‌ಗಳಿಗೆ ಅನುಮತಿಯನ್ನು ನೀಡಲಾಗಿದೆ. ಆದರೆ ಪಂಚತಾರಾ ಹೋಟೆಲ್ ಮತ್ತು ಈ ರೀತಿಯ establishments ಗಳಲ್ಲಿ ಬಹಳ verify ಮಾಡಿ, ಇಂತಹ ಅಹಿತಕರ ಘಟನೆಗಳು ನಡೆಯದ ಹಾಗೆ ಕಾನೂನು ಬಾಹಿರ ಹಾಗೂ ನಿಯಮಬಾಹಿರ ಘಟನೆಗಳು ನಡೆಯದ ಹಾಗೆ ಖಾತ್ರಿ ಮಾಡಿಕೊಂಡು ಪರವಾನಗಿಯನ್ನು ನೀಡಲಾಗುವುದು.

ತಿದ್ದುಪಡಿಯಾಗದ ಪ್ರತಿ, ಗಣಜರುಬಳಕೆ ಅಥವಾ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 526**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಗಳೇ, ರಾಯಚೂರು ನಗರದಲ್ಲಿ ಕೆಯುಐಡಿಎಫ್‌ಸಿ ವತಿಯಿಂದ 'ತೆಗೆದುಕೊಂಡ 24 x 7 ಕುಡಿಯುವ ನೀರಿನ ಯೋಜನೆಯು ಮಂದಗತಿಯಲ್ಲಿ ನಡೆಯುತ್ತಿದ್ದು, ಯೋಜನೆ ತಡವಾಗಿರುವ ಕಾರಣ ಅವರಿಗೆ 34 ಲಕ್ಷ ರೂಪಾಯಿಗಳ ದಂಡ ವಸೂಲಿ ಮಾಡಿದ್ದೇವೆ ಎಂದು ಲಿಖಿತ ಉತ್ತರದಲ್ಲಿ ಹೇಳಲಾಗಿದೆ. ಯೋಜನೆ ತಡ ಆಗಿರುವ ಹಿನ್ನಲೆಯಲ್ಲಿ ಸಹಜವಾಗಿ ಅಂದಾಜುವೆಚ್ಚ ಹೆಚ್ಚಾಗುವುದು ಮತ್ತು work slip ಮಾಡುವ ಪರಿಪಾಠ ಆಗಿದೆ, ಅಲ್ಲಿನ ಜನರಿಗೆ ತೊಂದರೆ ಆಗಿರುವ ಹಿನ್ನಲೆಯಲ್ಲಿ ಈ ಯೋಜನೆ ತಡ ಆಗದ ರೀತಿಯಲ್ಲಿ ಮುಗಿಸುವ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಕೇಂದ್ರ ಪುರಸ್ಕೃತ ಅಮೃತ್‌ಯೋಜನೆಯಡಿಯಲ್ಲಿ, ರಾಯಚೂರು ನಗರದ ನೀರು ಸರಬರಾಜು ಯೋಜನೆಯ ಉನ್ನತೀಕರಣಕ್ಕೆ 57 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದ್ದು, letter of acceptance ಆಗಿದೆ. ಇಲಾಖೆಯಿಂದ ಟೆಂಡರ್ ಕರೆದು ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆದಾರರು ಅದನ್ನು accept ಮಾಡಿ ಕೆಲಸ ಕೈಗೆತ್ತಿಕೊಳ್ಳದ ಕಾರಣ ಅವರ ಗುತ್ತಿಗೆಯನ್ನು ರದ್ದುಗೊಳಿಸಿ ಮತ್ತೊಂದು ಹೊಸ ಟೆಂಡರ್ ಕರೆಯುವ ವ್ಯವಸ್ಥೆ ಮಾಡಲಾಗುವುದು ಎಂದು ಲಿಖಿತ ಉತ್ತರದಲ್ಲಿ ತಿಳಿಸಿರುತ್ತಾರೆ. ಈಗ ಹೊಸದಾಗಿ tender process ಆಗಬೇಕಾದಲ್ಲಿ ಸಮಯ ಬೇಕಾಗುತ್ತದೆ. ಹಾಗಾಗಿ ಗುತ್ತಿಗೆಯನ್ನು ವಹಿಸುವ ಸಂದರ್ಭದಲ್ಲಿ ಸರ್ಕಾರ ಸರಿಯಾದ ರೀತಿಯಲ್ಲಿ ಚಿಂತನೆಯನ್ನು ಮಾಡಿ ಗುತ್ತಿಗೆದಾರರ ಆಯ್ಕೆಯನ್ನು ಮಾಡಬೇಕಾಗುತ್ತದೆ. ಹಾಗಾಗಿ ಇದು ತಡ ಆಗದ ರೀತಿಯಲ್ಲಿ ಸರ್ಕಾರ ಯೋಜನೆ ಕೈಗೊಳ್ಳಬೇಕೆನ್ನುವುದು ನನ್ನ ವಿನಂತಿ.

ಮಾನ್ವಿ ಪಟ್ಟಣದ ಕುಡಿಯುವ ನೀರಿಗಾಗಿ Impounding Reservoir ಕೆರೆ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದರೆ 2005ರಲ್ಲಿ ಇದು ಬಂದಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದು ಈ ಯೋಜನೆಗೆ ಅನುಮೋದನೆ ನೀಡಿದ್ದರು. ಇದರಲ್ಲಿ ಒಂದು ಸಣ್ಣ mistake ಆಗಿ ಆರ್ಥಿಕ ಇಲಾಖೆಯಿಂದ ಕ್ಲಿಯರ್ ಆಗಿ ಬಂದಿದೆ. Impounding Reservoir ಕಾಮಗಾರಿಗಾಗಿ 88 ಕೋಟಿ ರೂಪಾಯಿಗಳು ಬೇಕಾಗಿದೆ. KUWSDBಯವರು ಸಹ ನಗರಾಭಿವೃದ್ಧಿ ಇಲಾಖೆಯವರಿಗೆ ಪತ್ರ ಕಳುಹಿಸಿದ್ದಾರೆ. ಆದರೆ 82 ಕೋಟಿ ರೂಪಾಯಿಗಳ ಒಂದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫೈಲ್ 24 x 7 ಕ್ಲಿಯರ್ ಆಗಿ ಕ್ಯಾಬಿನೆಟ್‌ಗೆ ಬರುವ ಪರಿಸ್ಥಿತಿಯಲ್ಲಿ ಅದನ್ನು ನಿಲ್ಲಿಸಿ, ಅವಶ್ಯಕತೆ ಇರುವ 88 ಕೋಟಿ ರೂಪಾಯಿಗಳ Impounding Reservoir ನಮಗೆ ಅತಿ ಮುಖ್ಯವಾಗಿ ಬೇಕಾಗಿದೆ. ಏಕೆಂದರೆ ತುಂಗಭದ್ರಾ ನದಿಯಲ್ಲಿ ನೀರು ಬತ್ತಿ ಹೋದಾಗ 4-5 ತಿಂಗಳ ಕಾಲ ನೀರು ಇರುವುದಿಲ್ಲ. ಹಾಗಾಗಿ ಈಗಾಗಲೇ 70 ಎಕರೆ ಭೂಮಿಯನ್ನು ಖರೀದಿಸಿದ್ದು, ಅಲ್ಲಿ Impounding Reservoir ಗಾಗಿ 88 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಲಾಗಿದೆ. ಅದನ್ನು ತಕ್ಷಣಕ್ಕೆ clearance ಮಾಡಿ, ಟೆಂಡರ್ ಕರೆದು ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆನ್ನುವುದು ನಮ್ಮ ವಿನಂತಿ.

**ಶ್ರೀ ಈಶ್ವರ್‌ಖಂಡ್ರೆ (ಪೌರಾಡಳಿತ ಸಚಿವರು, (ನಗರಾಭಿವೃದ್ಧಿ ಹಾಗೂ ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ರಾಯಚೂರು ನಗರದಲ್ಲಿ ಕೆಯುಐಡಿಎಫ್‌ಸಿ ವತಿಯಿಂದ ಏಷಿಯನ್ ಅಭಿವೃದ್ಧಿ ಬ್ಯಾಂಕಿನಿಂದ 117 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರಂತರ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದೇವೆ.

**(223):11.30:16-03-2017:ಎಂವಿ:ಎಂಡಿ**

**ಶ್ರೀ ಈಶ್ವರ್‌ಬಿ.ಖಂಡ್ರೆ (ಮುಂದು):-**

ಈ ಯೋಜನೆಗೆ ಮೂವತ್ತು ತಿಂಗಳ ಕಾಲಾವಕಾಶವಿದೆ. ಈಗಾಗಲೇ ಸುಮಾರು 60 ಪ್ರತಿಶತ ಕಾಮಗಾರಿ ಮುಗಿದಿದೆ. ನಮ್ಮ ಕಾಲ ಮಿತಿಯೆಂದರೆ ಆಗಸ್ಟ್ 2017. ಈ ಎಲ್ಲಾ ಕಾಮಗಾರಿಗಳ ಬಗ್ಗೆ ಈಗಾಗಲೇ ದಿನವಹಿ ಪ್ರಗತಿ ಪರಿಶೀಲನೆಯನ್ನು ನಮ್ಮ ಅಧಿಕಾರಿಗಳು ಮಾಡುತ್ತಿದ್ದಾರೆ ಮತ್ತು ನಿಗದಿತ ಸಮಯದಲ್ಲಿ ಸೆಪ್ಟೆಂಬರ್ 2017ರ ಒಳಗೆ ಸಂಪೂರ್ಣವಾದ ಕಾಮಗಾರಿಯನ್ನು ಮುಗಿಸಿ, ನಿರಂತರ ಕುಡಿಯುವ ನೀರಿನ ಯೋಜನೆಯನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನಲ್ಲಿ ಇದನ್ನು ಮುಗಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಕೇಂದ್ರ ಪುರಸ್ಕೃತ ಅಮೃತ್‌ಯೋಜನೆ ಏನು ನಡೆಯುತ್ತಿದೆ. ಈ ಅಮೃತ್‌ಯೋಜನೆಯಲ್ಲಿ ಈಗಾಗಲೇ ಬಾಕಿ ಉಳಿದಂತಹ zone ಗಳೇನಿವೆ 57 ಕೋಟಿ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯನ್ನು ಒಳಚರಂಡಿ ಮತ್ತು ನೀರು ಸರಬರಾಜಿಗೆ ತೆಗೆದುಕೊಂಡಿದ್ದೇವೆ. ಗುತ್ತಿಗೆದಾರರು ಯಾರು Lowest Bidder (L-1) ಇದ್ದಾರೆ, ಅವರು ಕರಾರು ಮಾಡಕೊಂಡಿಲ್ಲ, ಅವರಿಗೆ ಕರಾರು ಮಾಡಿಕೊಳ್ಳುವುದಕ್ಕೆ ಕೊನೆ ಅವಕಾಶ ಕೊಡಲಾಗಿದೆ. ನಿಯಮದ ಪ್ರಕಾರ ಒಂದು ವೇಳೆ ಅವರು ಕರಾರು ಮಾಡಿಕೊಂಡಿಲ್ಲವೆಂದರೆ,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ನಾವು ಪುನಃ ಟೆಂಡರ್ ಕರೆದು ಗುತ್ತಿಗೆಯನ್ನು ಕೊಡಬೇಕಾಗುತ್ತದೆ, ಆದಷ್ಟು ಶೀಘ್ರದಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಮಾನ್ವಿ ಪಟ್ಟಣದಲ್ಲಿ 2005ನೇ ಇಸವಿಯಲ್ಲಿ 815 ಲಕ್ಷಗಳಿಗೆ ಒಂದು ಆಡಳಿತಾತ್ಮಕ ಅನುಮೋದನೆ ದೊರೆತಿತ್ತು. ಬೇಸಿಗೆಯಲ್ಲಿ ತುಂಗಭದ್ರ ನದಿಯಲ್ಲಿ ಯಾವಾಗಲೂ ನೀರಿನ ಕೊರತೆ ಇರುತ್ತದೆ. ಅಲ್ಲಿ ಎರಡು–ಮೂರು ತಿಂಗಳವರೆಗೆ ನೀರು ಲಭ್ಯವಾಗುವುದಿಲ್ಲ ಎನ್ನುವಂತಹ ಒಂದು ನಿಟ್ಟಿನಲ್ಲಿ ಭೂ–ಸ್ವಾಧೀನ ಪ್ರಕ್ರಿಯೆ ಬಹಳ ವಿಳಂಬವಾದ ಕಾರಣ ಈ ಯೋಜನೆ ಅನುಷ್ಠಾನಕ್ಕೆ ಬಂದಿಲ್ಲ. ಸುಮಾರು ಐದುಕೋಟಿ ರೂಪಾಯಿಗಳ ಅನುದಾನ ಖರ್ಚು ಮಾಡಿ, ಮುಂದಿನ ಕಾಲುವೆ, intake canal ಎಲ್ಲವನ್ನು ಮಾಡುತ್ತಿದ್ದಾರೆ. ಆದರೆ ಅಷ್ಟೇ ಅಲ್ಲದೆ 82 ಕೋಟಿ ರೂಪಾಯಿಯ ಒಂದು ಯೋಜನೆ ಇದೆ ಹಾಗೂ 88 ಕೋಟಿ ರೂಪಾಯಿಗಳ ಮತ್ತೊಂದು ಯೋಜನೆ ಇದೆ. ಈ 88 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದರೆ ನಿಮ್ಮ Impounding Reservoir ಆಗುತ್ತದೆ. Impounding Reservoir ಆಗದೆ, ಬೇರೆ ನಿಮ್ಮ distributions lines ಆಗಲಿ ಮತ್ತು overhead tanks ಆಗಲಿ, ಅದು ಉಪಯೋಗವಾಗುವುದಿಲ್ಲ, ಅದಕ್ಕೆ ಮೊದಲನೆಯ ಆದ್ಯತೆ Impounding Reservoir ಕೊಟ್ಟು, ಅದನ್ನು ಸಚಿವ ಸಂಪುಟಕ್ಕೆ ಕಳುಹಿಸಿ ಅನುಮೋದನೆ ಮಾಡಿಸಿ, ಅದು ಮುಗಿದ ಮೇಲೆ ಮತ್ತೆ ಮುಂದಿನ ಕಾಮಗಾರಿ ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುವಂತಹ ಹಂತದಲ್ಲಿ, ಆದಷ್ಟು ಬೇಗ ರಾಯಚೂರು ಮತ್ತು ಮಾನ್ವಿ ಪಟ್ಟಣಗಳಲ್ಲಿ ನಿರಂತರ ಕುಡಿಯುವ ನೀರಿನ ಯೋಜನೆ ಕಾರ್ಯಕ್ರಮ ಅನುಷ್ಠಾನಕ್ಕೆ ತರಲಾಗುವುದು ಎಂದು ಹೇಳಿ ಗೌರವಾನ್ವಿತ ಸದಸ್ಯರಿಗೆ ಸರ್ಕಾರದ ಪರವಾಗಿ ನಾನು ವಿಶ್ವಾಸಕೊಡುತ್ತಿದ್ದೇನೆ.

**ಸಭಾಪತಿಯವರು:–**ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದಂತಹ ಶ್ರೀ ಎಸ್.ವ್ಹಿ. ಸಂಕನೂರವರದ್ದು ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಎಸ್.ವಿ.ಸಂಕನೂರ:–**ಮಾನ್ಯ ಸಭಾಪತಿಯವರೆ, ನಾನು ಪ್ರಶ್ನೆ ಕೇಳಿರುವುದು ಬಹಳ ಸರಳವಿದೆ. ಇಲಾಖೆಯಲ್ಲಿ ಎಷ್ಟು ಖಾಲಿ ಹುದ್ದೆಗಳಿವೆ ಎಂಬುದು, ಅದಕ್ಕೂ ಅವರು ಕಾಲಾವಕಾಶ ಕೇಳಿದ್ದಾರೆ, ಸರ್ಕಾರದ ಮುಖ್ಯಸ್ಥರು ಅದನ್ನು ready reckoner type ಇಟ್ಟುಕೊಳ್ಳಬೇಕು. ಅದಕ್ಕೂ ಕಾಲಾವಕಾಶ ಕೇಳುತ್ತಾರೆ ಎಂದರೆ ನನಗೆ ಅರ್ಥವಾಗುತ್ತಿಲ್ಲ. ನಿವೃತ್ತಿ ಮತ್ತು ನಿಧನದಿಂದ

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಖಾಲಿಯಾದ ಹುದ್ದೆಗಳು ಎಷ್ಟು ಎನ್ನುವ ಮಾಹಿತಿ ಮುಖಸ್ಥರ ಬಳಿ ಇರಬೇಕು. ಅವರಿಗೆ ಅಷ್ಟು ಗೊತ್ತಿಲ್ಲವೆಂದರೆ ಅವರು ಏನು ಕೆಲಸ ಮಾಡುತ್ತಾರೆ?

**ಸಭಾಪತಿಯವರು:-**ಮಾನ್ಯ ಮುಖ್ಯಮಂತ್ರಿಗಳೇ ತಮ್ಮ ಪ್ರಶ್ನೆಗೆ ಏಕೆ ಕಾಲಾವಕಾಶ ಕೇಳಿದ್ದೀರಿ ಎಂದು ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಸಮಯಾವಕಾಶ ಕೇಳಿದ್ದೇವೆ, ಅವರಿಗೆ ಮಾಹಿತಿಕೊಡುತ್ತೇವೆ.

**ಶ್ರೀ ಎಸ್.ವಿ.ಸಂಕನೂರ:-**ಮಾನ್ಯ ಸಭಾಪತಿಯವರೆ, ಈ ಅಧಿವೇಶನದಲ್ಲೆ ಉತ್ತರ ಕೊಡುತ್ತೀರಾ.

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಸಮಯಾವಕಾಶ ಕೇಳಿದ್ದೇವೆ, ಈ ಅಧಿವೇಶನದಲ್ಲೆ ಉತ್ತರ ಕೊಡುತ್ತೇವೆ.

**ಸಭಾಪತಿಯವರು:-**ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದಂತಹ ಶ್ರೀ ಅಮರನಾಥ ಪಾಟೀಲರದ್ದು, ಅದಕ್ಕೂ ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು):-**ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳುವಾಗ ತಕ್ಷಣ ಉತ್ತರ ಕೊಡುವಂತಹ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಬೇಕು.

**ಶ್ರೀ ಅಮರನಾಥ ಪಾಟೀಲ್:-**ಮಾನ್ಯ ಸಭಾಪತಿಯವರೆ, ನನ್ನ ಈ ಪ್ರಶ್ನೆ ಕಳೆದ ಎರಡು ವರ್ಷದಿಂದ ಮೂರು ಬಾರಿ ಚುಕ್ಕೆ ಗುರುತಿನ ಪ್ರಶ್ನೆಯಾಗಿದೆ ಮತ್ತು ಮೂರು ಬಾರಿ ಚುಕ್ಕೆರಹಿತ ಪ್ರಶ್ನೆಯಾಗಿದೆ. ಪ್ರತಿಬಾರಿ ಇದಕ್ಕೆ ಸರ್ಕಾರದವರು ಕಾಲವಕಾಶ ತೆಗೆದುಕೊಂಡಿದ್ದಾರೆ. ನನ್ನ ಪ್ರಶ್ನೆ ಹೈದರಾಬಾದ್-ಕರ್ನಾಟಕದ 371(ಜೆ) ಅಡಿಯಲ್ಲಿ ಬರುವ ಎಷ್ಟು ಹುದ್ದೆಗಳು ಖಾಲಿ ಇದೆ ಎನ್ನುವುದು ಬಹಳ ಸರಳವಾಗಿದೆ.

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಅರ್ಟಿಕಲ್ 371(ಜೆ) ನಲ್ಲಿ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಕೊಡಿಸುತ್ತೇನೆ. ಈಗ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಪಡೆದುಕೊಳ್ಳಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಅಮರನಾಥ ಪಾಟೀಲ್:–**ಮಾನ್ಯ ಸಭಾಪತಿಯವರೆ, ನಾನು ಎಲ್ಲಾ ಜಿಲ್ಲೆಗಳ ಬಗ್ಗೆ ಕೇಳಿಲ್ಲ.

**ಶ್ರೀ ಸಿದ್ದರಾಮಯ್ಯ:–**ಮಾನ್ಯ ಸಭಾಪತಿಯವರೆ, 371(ಜೆ) ನಲ್ಲಿ ಆರು ಜಿಲ್ಲೆಗಳು ಬರುತ್ತವೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಇರುವಂತಹ ಆರು ಜಿಲ್ಲೆಗಳ ಮಾಹಿತಿಯನ್ನು ಕೊಡುವುದಕ್ಕೆ ಎರಡು ವರ್ಷದಿಂದ ಕಾಲವಕಾಶ ತೆಗೆದುಕೊಳ್ಳುತ್ತಿದ್ದಾರೆ.

**ಸಭಾಪತಿಯವರು:–**ಮಾನ್ಯ ಮುಖ್ಯಮಂತ್ರಿಗಳು ಮಾಹಿತಿಯನ್ನು ಕೊಡಿಸುತ್ತೇನೆಂದು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–**ಮಾನ್ಯ ಸಭಾಪತಿಯವರೆ, ಒಟ್ಟು 39 ಇಲಾಖೆಗಳಿವೆ, ಎಲ್ಲಾ ಇಲಾಖೆಗಳಿಂದ ಮಾಹಿತಿ ಸಂಗ್ರಹ ಮಾಡಿ, ಮಾಹಿತಿಯನ್ನುಕೊಡಿಸುತ್ತೇನೆ.

**ಶ್ರೀ ಅಮರನಾಥ ಪಾಟೀಲ್:–**ಮಾನ್ಯ ಸಭಾಪತಿಯವರೆ, ಎರಡು ವರ್ಷದಿಂದ ಇದೇರೀತಿಯಲ್ಲಿ ಹೇಳುತ್ತಿದ್ದಾರೆ. ಪಕ್ಕಾ ಮಾಹಿತಿಯನ್ನು ಕೊಡುತ್ತಾರೆಯೇ?

**ಶ್ರೀ ಸಿದ್ದರಾಮಯ್ಯ:–**ಮಾನ್ಯ ಸಭಾಪತಿಯವರೆ, ಈ ಸಲ ಮಾಹಿತಿಯನ್ನು ಕೊಡುತ್ತೇವೆ. ಪಕ್ಕಾ ಅಂದರೆ ಏನು ಎಂದು ನನಗೆ ಅರ್ಥವಾಗಿಲ್ಲ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಪಕ್ಕಾ ಅಂದರೆ ನಮ್ಮ ಕಡೆಗಟ್ಟಿ ಎಂದು ಅರ್ಥ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾವು ಯಾವಾಗಲೂ ಗಟ್ಟಿ ಮತ್ತು ನಮ್ಮ ಸರ್ಕಾರವೂ ಕೂಡ ಗಟ್ಟಿಯಾಗಿದೆ.

**ಶ್ರೀ ಅಮರನಾಥ ಪಾಟೀಲ್:–**ಮಾನ್ಯ ಸಭಾಪತಿಯವರೆ, ಏಕೋ ಮಾನ್ಯ ಮುಖ್ಯಮಂತ್ರಿಗಳು ಹೈದ್ರಬಾದ್ ಕರ್ನಾಟಕದ ಪರವಾಗಿ ಗಟ್ಟಿಯಾಗಿಲ್ಲವೆಂದು ಅನಿಸುತ್ತದೆ.

**ಸಭಾಪತಿಯವರು:–**ಮುಂದಿನ ಪ್ರಶ್ನೆ ಮಾನ್ಯ ಸದಸ್ಯರುಗಳಾದಂತಹ ಶ್ರೀ ರಘುನಾಥರಾವ್ ಮಲ್ಕಾಪೂರೆ ಮತ್ತು ಶ್ರೀ ಎನ್.ಎಸ್.ಬೋಸ್‌ರಾಜು ರವರುಗಳದ್ದು ಇಬ್ಬರು ಒಂದೇ ಪ್ರಶ್ನೆ

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಕೇಳಿದ್ದಾರೆ. ಅದು ಅದೇ ವಿಷಯಕ್ಕೆ ಸಂಬಂಧಪಟ್ಟಿರುವುದು, ಮಾನ್ಯ ಮುಖ್ಯಮಂತ್ರಿಗಳ ಕಚೇರಿಯಿಂದ ಸಮಯಬೇಕೆಂದು ಮುಖ್ಯಮಂತ್ರಿಗಳು ನನ್ನನ್ನು ಕೇಳಿದ್ದಾರೆ. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದಂತಹ ಶ್ರೀ ಐವನ್ ಡಿ'ಸೋಜಾರವರದ್ದು.

**ಪ್ರಶ್ನೆ ಸಂಖ್ಯೆ482**
**(ಉತ್ತರವನ್ನುಒದಗಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಮಂಗಳೂರು ಗ್ರಾಮಾಂತರ ಪೊಲೀಸ್‌ಠಾಣೆಯ ಈಗ ಅಕ್ಕಿ ಗಿರಣಿ ಕಟ್ಟಡದಲ್ಲಿ ನಡೆಯುತ್ತಿದೆ ಎಂದು ನಾನು ಅನೇಕ ಬಾರಿ ಈ ಸದನದಲ್ಲಿ ಹೇಳಿದ್ದೇನೆ. ಈ ಹಿಂದೆ ಮಾನ್ಯ ಸಚಿವರು ಅದನ್ನು ಖಂಡಿತವಾಗಿ ಹೊಸ ಸ್ಥಳಕ್ಕೆ ಸ್ಥಳಾಂತರ ಮಾಡುತ್ತೇನೆ ಎಂದು ಆಶ್ವಾಸನೆಕೊಟ್ಟಿದ್ದರು ಮತ್ತು ಆ ಪೊಲೀಸ್‌ಠಾಣೆಯನ್ನು ಹೊಸದಾಗಿ ರಚನೆ ಮಾಡಿಕೊಡುತ್ತೇನೆಂದು ಕೂಡ ಹೇಳಿದ್ದರು. ಆ ರೀತಿ ಹೇಳಿದ ಮೇಲೆ ಅಕ್ಕಿ ಗಿರಣಿಕಟ್ಟಡದಿಂದ ಬೇರೆ ಊರಿನಲ್ಲಿ ಆ ಪೊಲೀಸ್‌ಠಾಣೆಯಾಗುತ್ತದೆ ಎಂದು ಊರಿನಲ್ಲೆಲ್ಲಾ ಸುದ್ದಿಯಾಯಿತು. ಆದರೆ ಆ ರೀತಿ ಹೇಳಿ ಮೂರು ವರ್ಷವಾಯಿತು, ಆದರೆಇನ್ನೂಆಗಿಲ್ಲ. ಆ ಭಾಗಕ್ಕೆ ಹೋದಾಗಜನ ನನ್ನ ಹತ್ತಿರ ಏನಾಯಿತು ಎಂದು ಕೇಳುತ್ತಾರೆ. ನೀವು ಸದನದಲ್ಲಿ ಮಾತನಾಡಿದ್ದೀರಿ, ಮಾಡುತ್ತೇನೆಂದು ಹೇಳಿದ್ದೀರಿ, ಆದರೆ ಇನ್ನೂ ಏಕೆ ಆಗಲಿಲ್ಲವೆಂದು ಕೇಳುತ್ತಾರೆ. ಹಾಗಾಗಿ ಏನು ಉಪಾಯವಿಲ್ಲದೆ, ನಾನು ಈ ಪ್ರಶ್ನೆಯನ್ನು ಚುಕ್ಕೆಗುರುತಿನ ಪ್ರಶ್ನೆಯಾಗಿ ಕೇಳಿದ್ದೇನೆ ಹಾಗೂ ಅದಕ್ಕೆ ಸರ್ಕಾರದಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದಂತಹ ಶ್ರೀ ಐವನ್ ಡಿ'ಸೋಜಾರವರು ಆತಂಕಪಡಬೇಕಾಗಿಲ್ಲ. ನಮಗೆ ಕುಲಶೇಖರ ಕೈಕಂಬ ಎಂದು ಹೇಳಿ ಅಲ್ಲಿ ಈ ಮೊದಲು ಮಾರುಕಟ್ಟೆ ಸಮೀಪದಲ್ಲಿ ಈ ಪೊಲೀಸ್‌ಠಾಣೆ ಇತ್ತು. 2011ರಲ್ಲಿ ಅಲ್ಲಿಗೆ ರಾಷ್ಟ್ರೀಯ ಹೆದ್ದಾರಿ ಬಂದ ಕಾರಣಕ್ಕಾಗಿ ಅದನ್ನು shift ಮಾಡಬೇಕಾದಂತಹ ಪರಿಸ್ಥಿತಿ ಬಂತು. Shift ಮಾಡಿ, ತಕ್ಷಣ ಅಲ್ಲಿ ತಾತ್ಕಲಿಕವಾಗಿ ಅಕ್ಕಿ ಗಿರಣಿಕಟ್ಟಡವನ್ನು ಅವರು ಉಚಿತವಾಗಿ ಪೊಲೀಸ್‌ಠಾಣೆ ಮಾಡಲು ಕೊಟ್ಟು ನಮ್ಮಲ್ಲೆ ಮಾಡಿಕೊಳ್ಳಿ ಪರವಾಗಿಲ್ಲ ಎಂದು ಹೇಳಿದ ಮೇಲೆ ನಾವು ಅಲ್ಲಿ ಅದನ್ನು ಮಾಡಿದ್ದೇವೆ. ಅಲ್ಲಿಯೇ ಎಲ್ಲಿಯಾದರು ಜಾಗಕೊಡಿ, ತಕ್ಷಣ ಒಂದು ಪೊಲೀಸ್‌ಠಾಣೆಯನ್ನು ಕಟ್ಟುತ್ತೇವೆ ಎಂದು ನಾವು ಆಗಿನಿಂದಲೂ ಕೂಡ ಜಿಲ್ಲಾಡಳಿತಕ್ಕೆ ಜಾಗವನ್ನು ಕೇಳುತ್ತಿದ್ದೇವೆ. ಆದರೆ

"ತಿದ್ದುಪಡಿಯಾಗದ ಪ್ರತಿ/ ಗಣಕೀಕರಣ ಶಾಖೆ. ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಇಲ್ಲಿಯವರೆವಿಗೂ ಯಾವುದೇ ಜಾಗವನ್ನು ಜಿಲ್ಲಾಡಳಿತದವರು ಕೊಟ್ಟಿಲ್ಲ. ಆದರೂ ನಾವು ಈಗ ತಕ್ಷಣಕ್ಕೆ ಏನು ಮಾಡಿದ್ದೇವೆಂದರೆ ಅಕ್ಕಿ ಗಿರಣಿಕಟ್ಟಡದಲ್ಲಿ ಮಾಡುವುದು ಬೇಡವೆಂದು ಹೇಳಿ ನಮ್ಮದೇ ನಾಲ್ಕು ಪೊಲೀಸ್‌ಕ್ವಾಟ್ರಸ್ ಇರುವುದನ್ನು convert ಮಾಡಿದ್ದೇವೆ. ಅಲ್ಲಿ ಈಗ ಕೆಲಸ ನಡೆಯುತ್ತಿದೆ. ಆದರೆ ಅದೂ ಕೂಡ ತಾತ್ಕಲಿಕವೆ, ಆದಷ್ಟು ಶೀಘ್ರವಾಗಿ ಅದನ್ನು ಮುಗಿಸಿ ಕೊಡುತ್ತೇವೆ ಮತ್ತು ಜಾಗ ಕೊಡಿಸಿದರೆ, ಮಾನ್ಯ ಸದಸ್ಯರಾದಂತಹ ಶ್ರೀ ಐವನ್ ಡಿ'ಸೋಜಾರವರು ಪ್ರಬಲರಾಗಿರುವಂತಹವರು ಅವರು ಅಲ್ಲಿ ಬೇಗ ಜಾಗವನ್ನು ಕೊಡಿಸಿದರೆ, ನಾವು ತಕ್ಷಣ ಕಟ್ಟಡ ಕಟ್ಟಿಸಿ ಕೊಡುತ್ತೇವೆ. ಈಗ ತಾತ್ಕಲಿಕವಾಗಿ ನಾಲ್ಕು ಕ್ವಾಟ್ರಸ್‌ಗಳ ಕೆಲಸ ಏನು ನಡೆಯುತ್ತಿದೆ ಅದನ್ನು ಶೀಘ್ರವಾಗಿ ಮುಗಿಸಿ, ಅಲ್ಲಿಗೆ ಪೊಲೀಸ್‌ಠಾಣೆಯನ್ನು ವರ್ಗಾವಣೆ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ539**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಕಳೆದ ಮೂರು ವರ್ಷಗಳಿಂದ ಬೆಂಗಳೂರಿನ ಸರಹದ್ದಿನಲ್ಲಿರತಕ್ಕಂಥ ಕೆರೆಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಖರ್ಚು ಮಾಡಿರುವಂತಹ ಹಣದ ಬಗ್ಗೆ ನನಗೆ ಬಂದಿರುವಂತಹ ಮಾಹಿತಿ ಪ್ರಕಾರ, ನಗರಸಭೆ ಆಡಳಿತದಲ್ಲಿರತಕ್ಕಂಥದ್ದು ಸುಮಾರು 152.9 ಕೋಟಿರೂಪಾಯಿ ಹಣವನ್ನು ಖರ್ಚು ಮಾಡಿದ್ದಾರೆ ಮತ್ತು ಪ್ರಾಧಿಕಾರದ ವತಿಯಿಂದ ಸುಮಾರು 912.31 ಲಕ್ಷರೂಪಾಯಿ ಹಣವನ್ನು ಖರ್ಚು ಮಾಡಿದ್ದಾರೆ. ಇಷ್ಟು ಹಣವನ್ನು ಖರ್ಚು ಮಾಡಿದರೂ ಕೂಡ, ದಿನಪತ್ರಿಕೆಗಳಲ್ಲಿ ಬರುತ್ತಿರತಕ್ಕಂಥದ್ದನ್ನು ನೋಡಿದರೆ, ವಿಶೇಷವಾದಂತಹ ಬೆಂಗಳೂರಿನ ಬೆಳ್ಳಂದೂರು ಕೆರೆ, ಅಗರಕೆರೆ, ವರ್ತೂರುಕೆರೆ ಮತ್ತು ಎಲೆ ಮಲ್ಲಪ್ಪನಕೆರೆ, ಈ ಕೆರೆಗಳಲ್ಲಿ ನೊರೆ ಮತ್ತು ಬೆಂಕಿ ಬರುತ್ತಿರುವಂಥದ್ದನ್ನು ನೋಡಿದರೆ, ಈ ಹಣ ನಿಜವಾಗಿಯೂಖರ್ಚಾಗಿದೆಯೆ? ಎಲ್ಲಿಗೆ ಹೋಗಿದೆ ಎಂಬ ಅನುಮಾನ ಬರುತ್ತಿದೆ. ಈಗ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಸತತವಾಗಿ ನೀವು ಬೆಳ್ಳಂದೂರು ಕೆರೆಯಲ್ಲಿ ಕಾಣಿಸಿಕೊಂಡ ದಟ್ಟವಾದ ನೊರೆ, ಸಾಮಾನ್ಯ ಹಾಗೂ ಬೆಂಕಿ ಸಂಬಂಧ ತಡೆಗಟ್ಟುವಲ್ಲಿ ಸರ್ಕಾರ ವಿಫಲವಾಗಿರಲೂ ಕಾರಣವೇನು? ಕಳೆದ ವರ್ಷ ಮೂರು ಬಾರಿ ಪರಿಶೀಲನೆ ನಡೆಸಿದಂತಹ ತಜ್ಞರ ಸಮಿತಿ ತನ್ನ ಅಂತಿಮ ವರದಿಯನ್ನು ಯಾವಾಗ ನೀಡಿದೆ? ಅದರಲ್ಲಿರುವ ಪ್ರಮುಖ ಅಂಶಗಳು ಯಾವುವು? ಸಮಿತಿಯು ನೀಡಿದ ಯಾವಯಾವ ಸಲಹೆಗಳನ್ನು ಇಲಾಖೆ ಪಾಲಿಸಿದ್ದಾರೆ? ಅಭಿವೃದ್ಧಿಪಡಿಸಿರುವ ಕೆರೆಗಳಿಗೆ ಕೊಳಚೆ ನೀರು ಸೇರುವುದನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆಯೆ? ಯಾವಯಾವ ಕೆರೆಗಳಲ್ಲಿ ಕೊಳಚೆ ನೀರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಸೇರುವುದನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆಯೆ? ಕೊಳಚೆ ನೀರು ಸೇರುವುದನ್ನು ನಿಲ್ಲಿಸದಿದ್ದಲ್ಲಿ, ಕೆರೆ ಅಭಿವೃದ್ಧಿಪಡಿಸಿ ಪ್ರಯೋಜನವೇನು? ನಾನು ದೀರ್ಘವಾಗಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ, ಬೇಕಾದರೆ ಈ ಪ್ರಶ್ನೆಗಳನ್ನು ಕಳುಹಿಸಿಕೊಡುತ್ತೇನೆ. ಈ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

**(224)16.03.2017 ಎಲ್‌ಎಲ್/ಎಕೆ 11.40**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳಲಿ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ನನ್ನ ಮೊದಲನೆಯ ಪ್ರಶ್ನೆಯೇನೆಂದರೆ, ಮೂರು ವರ್ಷಗಳಿಂದ ಬೆಳ್ಳಂದೂರು ಕೆರೆಯಲ್ಲಿ ಕಾಣಿಸಿಕೊಂಡ ದಟ್ಟವಾದ ನೊರೆ ಸಮಸ್ಯೆ ಹಾಗೂ ಬೆಂಕಿ ಸಮಸ್ಯೆಯನ್ನು ತಡೆಯುವಲ್ಲಿ ಸರ್ಕಾರ ವಿಫಲವಾಗಲು ಕಾರಣವೇನು?

ಎರಡನೆಯದು, ಕಳೆದ ವರ್ಷ ಮೂರು ಬಾರಿ ಪರಿಶೀಲನೆ ನಡೆಸಿದಂತಹ ತಜ್ಞರ ಸಮಿತಿ ತನ್ನ ಅಂತಿಮ ವರದಿಯನ್ನು ಯಾವಾಗ ನೀಡಿತು? ಅದರಲ್ಲಿರುವ ಪ್ರಮುಖ ಅಂಶಗಳೇನು? ಸಮಿತಿಯು ಯಾವಯಾವ ಸಲಹೆಗಳನ್ನು ನೀಡಿತು? ಅದರಲ್ಲಿ ಯಾವುದನ್ನು ಪಾಲಿಸಿದ್ದಾರೆ? ಅಭಿವೃದ್ಧಿಪಡಿಸಿರುವ ಕೆರೆಗಳಿಗೆ ಕೊಳಚೆ ನೀರು ಸೇರುವುದನ್ನು ಸಂಪೂರ್ಣ ನಿಲ್ಲಿಸಲಾಗಿದೆಯೇ?

**ಸಭಾಪತಿಯವರು:-** ಪ್ರಶ್ನೆ ಕೇಳಿದ್ದು, ಆಯಿತಲ್ಲವೇ? ಅವರು ಉತ್ತರ ಹೇಳಲಿ ಬಿಡಿ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ನನ್ನಲ್ಲಿರುವ ಪ್ರಶ್ನೆಗಳನ್ನು ಅವರಿಗೆ ನೀಡುತ್ತೇನೆ. ನಂತರ ಅವರು ನನಗೆ ಉತ್ತರ ಕಳುಹಿಸಲಿ.

**ಸಭಾಪತಿಯವರು:-**ಆಯಿತು. ಅದನ್ನು ಮಾನ್ಯ ಮಂತ್ರಿಗಳಿಗೆ ಕೊಡಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಪ್ರಶ್ನೆಗೆ, ಮಾನ್ಯ ಮಂತ್ರಿಯವರು ಉತ್ತರ ನೀಡಿದ ನಂತರ, ಪುನಃ ಪ್ರಶ್ನೆ ಕೇಳಲಿ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆಗಳಿಗೆ ಉತ್ತರ ನೀಡಿದರೆ ಸಾಕು. ನಾನು ಪದೇ ಪದೇ ಕೇಳುವುದಕ್ಕೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ ಗಣಕೀಕೃತ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳಿಬಿಡಿ.

**ಶ್ರೀ ಕೆ.ಜೆ. ಜಾರ್ಜ್:–** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರವರು ಹಿರಿಯ ಸದಸ್ಯರಿದ್ದಾರೆ. ಅವರು ಪ್ರಶ್ನೆ ಕೇಳಿರುವುದಕ್ಕೆ ಲಿಖಿತವಾಗಿ ಉತ್ತರವನ್ನು ಕೊಡಲಾಗಿದೆ. ಆದರೆ, ಈಗ ಉಪ ಪ್ರಶ್ನೆಗಳು ಬೇರೆಯೇ ಆಗಿದೆ. ಬೆಳ್ಳಂದೂರು ಕೆರೆಯ ಬಗ್ಗೆ ಪ್ರಶ್ನೆ ಕೇಳಿರುವುದಿಲ್ಲ. ಸಾಮಾನ್ಯವಾದ ಪ್ರಶ್ನೆ ಕೇಳಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿ.ಬಿ.ಎಂ.ಪಿ.) ವ್ಯಾಪ್ತಿಯಲ್ಲಿ ಬರುವ ಜೀವಂತ ಕೆರೆಗಳ ಸಂಖ್ಯೆ ಎಷ್ಟು? ಅದಕ್ಕೆ ಉತ್ತರ ನೀಡಲಾಗಿದೆ. ಇದರಲ್ಲಿ ಸುಮಾರು 120 ಕೆರೆಗಳಲ್ಲಿ 90 ಕೆರೆಗಳು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿವೆ. 26 ಕೆರೆಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿ.ಡಿ.ಎ.) ವ್ಯಾಪ್ತಿಯಲ್ಲಿವೆ. 4 ಕೆರೆಗಳು ಕರ್ನಾಟಕ ಸರೋವರ ಸಂರಕ್ಷಣಾ ವ್ಯಾಪ್ತಿಯಲ್ಲಿವೆ. ಇನ್ನು ತ್ಯಾಜ್ಯ ಮತ್ತು ರಾಸಾಯನಿಕಗಳಿಂದ ಮಲಿನವಾಗುತ್ತಿರುವ ಕೆರೆಗಳಾವುವುವೆಂದರೆ... ಬಹುಶಃ ಅದಕ್ಕೆ ಉತ್ತರವೇನೆಂದರೆ, ನಮ್ಮಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸುಮಾರು 40 ಕೆರೆಗಳನ್ನು ಎ.ಬಿ.ಸಿ.ಡಿ.ಇ. ಯಾಗಿ ವರ್ಗೀಕರಣ ಮಾಡಿದ್ದಾರೆ. ಎಲ್ಲಾ ಕೆರೆಗಳು ಎ.ಬಿ.ಸಿ.ಡಿ. ವರ್ಗೀಕರಣದಲ್ಲಿ ಬರುವುದಿಲ್ಲ. ಅವುಗಳಲ್ಲಿ ಕೆಲವು 'ಇ' ವರ್ಗದಲ್ಲಿ ಬರುತ್ತವೆ. ಇದಕ್ಕೆ ಕಾರಣವೇನೆಂದ್ದರೆ, ನಮ್ಮಲ್ಲಿ ಕಾವೇರಿಯಿಂದ ಸುಮಾರು 1350 ಎಂ.ಎಲ್.ಡಿ. ನೀರು ಪ್ರತಿನಿತ್ಯ ಪಂಪ್ ಆಗಿ ಬೆಂಗಳೂರಿಗೆ ಬರುತ್ತದೆ. ಬೋರ್‌ವೆಲ್‌ನಿಂದ ಸುಮಾರು 400 ಎಂ.ಎಲ್.ಡಿ. ನೀರು ಮತ್ತು ಒಟ್ಟಾರೆಯಾಗಿ 1750 ಎಂ.ಎಲ್.ಡಿ. ನೀರು ಪ್ರತಿನಿತ್ಯ ಬೆಂಗಳೂರಿಗೆ ಸರಬರಾಜು ಆಗುತ್ತದೆ. ಇದರಲ್ಲಿ ಏನಾಗಿದೆಯೆಂದರೆ, 1750 ಎಂ.ಎಲ್.ಡಿ. ನೀರಿನಲ್ಲಿ ಶೇಕಡ 20ರಷ್ಟು ಮಾತ್ರ ಉಪಯೋಗ ಮಾಡುತ್ತಿದ್ದು, ಉಳಿದೆಲ್ಲಾ ನೀರು ತ್ಯಾಜ್ಯ ನೀರಾಗಿ ಬರುತ್ತದೆ. ಈಗ ನಮ್ಮಲ್ಲಿ ಏನಾಗಿದೆಯೆಂದರೆ, ಈಗಿರುವುದು ಜುಲೈತನಕ 720 ಎಂ.ಎಲ್.ಡಿ. ನೀರು process ಆಗಿ ಮಲಿನ ನೀರು ಎಸ್.ಟಿ.ಪಿ.ಗಳಲ್ಲಿ ಸಂಸ್ಕರಿಸಲಾಗುತ್ತದೆ. ಈ ಜುಲೈನಲ್ಲಿ ಸುಮಾರು 150 ಎಂ.ಎಲ್.ಡಿ. ಮಲಿನ ನೀರಿನ ಎಸ್.ಟಿ.ಪಿ.ಗಳು ಪ್ರಾರಂಭವಾಗುತ್ತಿವೆ. ಈ ರೀತಿ ಮಾಡಿದರೆ ಒಟ್ಟಾರೆಯಾಗಿ 880 ಎಂ.ಎಲ್.ಡಿ. ನೀರು ಸಿಗುತ್ತದೆ. 1350 ಎಂ.ಎಲ್.ಡಿ. ನೀರಿನಲ್ಲಿ ಉಳಿದ ಮಲಿನ ನೀರನ್ನು ಸಂಸ್ಕರಿಸಿ ಉಪಯೋಗಿಸಬೇಕಾಗುತ್ತದೆ. ಇಲ್ಲಿ ಏನಾಗಿದೆಯೆಂದರೆ, ಬೆಂಗಳೂರಿನಲ್ಲಿ ಒಂದು ಕೆರೆಯಿಂದ ಮತ್ತೊಂದು ಕೆರೆಗೆ ಸಂಪರ್ಕವಾಗಿದೆ. ಒಂದು ಕೆರೆ ಮಾಲಿನ್ಯವಾದರೆ, ಅದುಎಲ್ಲಾ ಕೆರೆಗಳಿಗೂ ಹಬ್ಬುತ್ತದೆ. ಈ ಉದ್ದೇಶದಿಂದ ಈಗಾಗಲೇ ನಮ್ಮ ಸರ್ಕಾರ ಸುಮಾರು 336 ಎಂ.ಎಲ್.ಡಿ. ನೀರಿಗಾಗಿ ಸುಮಾರು ಹತ್ತು ಜಾಗದಲ್ಲಿ ಮಲೀನ ನೀರು ಶುದ್ಧೀಕರಣ ಘಟಕ(ಎಸ್.ಟಿ.ಪಿ.)ಗಳನ್ನು ಸ್ಥಾಪಿಸಲಾಗುತ್ತಿದೆ. ಅದು 2017ನೇ ಡಿಸೆಂಬರ್ ತಿಂಗಳ ಅಂತ್ಯಕ್ಕೆ ಪೂರ್ಣವಾಗುತ್ತವೆ. ಇದು ಪೂರ್ಣವಾದರೆ ಒಟ್ಟಾರೆಯಾಗಿ 270

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಎಂ.ಎಲ್.ಡಿ. ನೀರು ಸಿಗುತ್ತದೆ. ಈ ರೀತಿಯಾದರೂ ಸಹ... ಇನ್ನೊಂದು 60 ಎಂ.ಎಲ್.ಡಿ. ನೀರು 2018ನಲ್ಲಿ ಕೆಂಗೇರಿಯಲ್ಲಿ ಪೂರ್ಣಗೊಳ್ಳುತ್ತದೆ. ಶೇಕಡ 20ರಷ್ಟು ನಾವು ನೀರನ್ನು ಸಂಸ್ಕರಿಸಬೇಕಾಗುತ್ತದೆ. ಅದಕ್ಕಾಗಿ ಈಗಾಗಲೇ 440 ಎಂ.ಎಲ್.ಡಿ. ನೀರಿಗಾಗಿ ಎಸ್.ಟಿ.ಪಿ. ಮಾಡುವುದಕ್ಕೆ ಟೆಂಡರ್ ಪ್ರಕ್ರಿಯೆ ಕರೆದಿದ್ದೇವೆ. ಅದೇರೀತಿ ಇನ್ನೊಂದು 'ಅಮೃತ್ ಯೋಜನೆಯ' ಮುಖಾಂತರ 75 ಎಂ.ಎಲ್.ಡಿ. ನೀರಿಗಾಗಿ ಯೋಜನೆ ಮಾಡಿದ್ದೇವೆ. ಇವೆಲ್ಲಾ ಆಗಬೇಕಾದರೆ... 2020ನೇ ಇಸವಿಯಲ್ಲಿ ನಾವು ಶೇಕಡ 100ರಷ್ಟು ಮಲೀನ ನೀರು ಸಂಸ್ಕರಿಸುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಬಹುಶಃ ಅಲ್ಲಿಯ ತನಕ ನಾವು ಸುಮ್ಮನೆ ಕೂರುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಬೆಳ್ಳಂದೂರು ಕೆರೆ ಮತ್ತು ವರ್ತೂರು ಕೆರೆಗಳ ಬಗ್ಗೆ ಈಗಾಗಲೇ ಸಾಕಷ್ಟು ಪತ್ರಿಕೆಯಲ್ಲಿ ಬಂದಿದೆ. ಅಲ್ಲಿ ನೊರೆ ಬರುತ್ತದೆ. ನೊರೆ ಏತಕ್ಕೆ ಬರುತ್ತದೆಯೆಂದರೆ? ಎಲ್ಲಾ ರೀತಿಯ ಡಿಟರ್ಜೆಂಟ್ ಮತ್ತು ಸಲ್ಫರ್ ಬಂದ ಮೇಲೆ ಮತ್ತು ಅಲ್ಲಿ ಎರಡು ಕೋಡಿಯಿದೆ. ಆ ಕೋಡಿಗಳಲ್ಲಿ ವಾಟರ್ ಫಾಲ್ಸ್ ಆಗುತ್ತದೆ. ಎಲ್ಲಿ ಎತ್ತರದ ಸ್ಥಳದಿಂದ ನೀರು ಬೀಳುತ್ತದೆ, ಅಲ್ಲಿ ನೊರೆ ಬರುತ್ತದೆ, ಅದು ತಮಗೂ ಕೂಡ ಗೊತ್ತಿದೆ. ಒಂದು ಕೋಡಿಯಲ್ಲಿ ಈಗಾಗಲೇ ಬೆಂಗಳೂರು ನೀರು ಸರಬರಾಜುನವರು ಇಳಿಜಾರು ಮಾಡಿದ್ದಾರೆ. ಈ ವರ್ಷ ಇಳಿಜಾರು ಕೊಟ್ಟಂತಹ ಜಾಗದಲ್ಲಿ ನೊರೆ ಬರುತ್ತಿಲ್ಲ. ಮತ್ತೊಂದು ಕಡೆ ನೊರೆ ಬರುತ್ತಿದೆ. ಅಲ್ಲಿ ಇಳಿಜಾರು ಕೊಟ್ಟಿರುವುದಿಲ್ಲ. ಅಲ್ಲಿಯೂ ಸಹ ಇಳಿಜಾರು ಕೊಡುತ್ತೇವೆ. ತಜ್ಞರ ಸಮಿತಿಯವರು ಈಗಾಗಲೇ ವರದಿ ನೀಡಿರುತ್ತಾರೆ. ಅದರಲ್ಲಿ ಎರಡು ಹಂತಗಳ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದಾರೆ. ಅದರಲ್ಲಿ ಮೊದಲನೆಯ ಹಂತದಲ್ಲಿ ಕೆರೆಗಳಲ್ಲಿರುವ ಕಳೆ ತೆಗೆಸುವುದು ಮತ್ತು ಆಮ್ಲಜನಕವನ್ನು ಸರಬರಾಜು ಮಾಡುವುದು ಎಂಬ ಎರಡು ಹಂತಗಳನ್ನು ತಿಳಿಸಿದ್ದಾರೆ. ಅದಕ್ಕೆ ಈಗಾಗಲೇ ಟೆಂಡರ್ ಕರೆದಿದ್ದು, ಅದು ಕೂಡ ಅಂತಿಮ ಹಂತದಲ್ಲಿದೆ. ಇದರಲ್ಲಿ ಕೆಲವು ಸ್ಪಷ್ಟೀಕರಣ ಕೇಳಿದ್ದಾರೆ. ಇನ್ನು 10-15 ದಿನಗಳಲ್ಲಿ ಪೂರ್ಣಗೊಳ್ಳುತ್ತದೆ. ಆದಾದ ಕೂಡಲೇ ಕೆಲಸವನ್ನು ಪೂರ್ಣಗೊಳಿಸುತ್ತೇವೆ. ಇದರ ಜೊತೆಗೆ ಇನ್ನೊಂದು ಕೆರೆಗೆ ಇಳಿಜಾರು ಕೊಡುವುದಕ್ಕೆ... ಏಕೆಂದರೆ, ಹಿಂದಿನ ಕಾಲದಲ್ಲಿ ಆ ಕೆರೆಯನ್ನು ನೀರಾವರಿಗಾಗಿ ಉಪಯೋಗಿಸುತ್ತಿದ್ದರು. ತಮಗೂ ಕೂಡ ಗೊತ್ತಿದೆ. ಈಗ ಏನಾಗಿದೆಯೆಂದರೆ, ಅಲ್ಲಿ ಇಳಿಜಾರು ಕೊಟ್ಟರೆ ಬಹುಶಃ ನೊರೆ ಬರುವುದನ್ನು ನಿಲ್ಲಿಸುವಂತಹ ಕೆಲಸ ನಾವು ಮಾಡುತ್ತಿದ್ದೇವೆ. ನಂತರ, ಅದು ಮಾಡಿದರೂ ಸಾಕಾಗುವುದಿಲ್ಲವೆಂದರೆ, ನಾವು ಏನು ಮಾಡಬೇಕೆಂದರೆ, ನೀರು ಹರಿಯುವ ದಿಕ್ಕನ್ನು ಬದಲಾಯಿಸುವುದಕ್ಕೆ diversion canal ಅನ್ನು ಮಾಡುತ್ತಿದ್ದೇವೆ. ಅದಕ್ಕೆ wetland technology ಬಳಕೆ ಮಾಡುತ್ತಿದ್ದೇವೆ. ಏನಾದರೂ ಯಾವುದೇ ರೀತಿಯ ನೀರು

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದರೂ ಸಹ ಕೆರೆ ಒಳಗಡೆ ಬರಬಾರದೆಂಬ ಉದ್ದೇಶದಿಂದ ದಿಕ್ಕನ್ನು ಬದಲಾಯಿಸುವುದಕ್ಕಾಗಿ ಕಾಲುವೆ ಮಾಡಿ wetland technology ನಿಂದ ಸ್ವಾಭಾವಿಕವಾಗಿ ಟ್ರೀಟ್(ಸಂಸ್ಕರಣೆ) ಮಾಡುವಂತಹ ಕೆಲಸವನ್ನು ಸಹ ಎರಡು ಕಡೆ ಮಾಡುತ್ತಿದ್ದೇವೆ. 2020ನೇ ಇಸವಿ ಆದ ಮೇಲೆ ಬಹುಶಃ ಎಲ್ಲಾ ಕೆರೆಗಳ ಸಮೇತ ಮಲಿನವಾಗುವುದನ್ನು ತಡೆಯುವುದಕ್ಕೆ ನಮ್ಮ ಸರ್ಕಾರ ಮತ್ತು ಬೆಂಗಳೂರು ನೀರು ಸರಬರಾಜುರವರು ಕ್ರಮ ತೆಗೆದುಕೊಂಡಿದ್ದಾರೆ.

**ಸಭಾಪತಿಯವರು:–** ಧನ್ಯವಾದಗಳು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:–** ಗೌಡ್ರೇ, ಒಂದು ನಿಮಿಷ. ತಮ್ಮ ಪ್ರಶ್ನೆ ಪಟ್ಟಿಯಲ್ಲಿರುವುದು ನಿನ್ನೆ ದಿವಸ ರಾತ್ರಿ ಗೊತ್ತಾಯಿತು. ಆದರೆ, ನಿಯಮ 330ರಲ್ಲಿ ಇದೇ ವಿಷಯ ಇವತ್ತಿನ ದಿವಸವೇ ಪಟ್ಟಿಯಲ್ಲಿ ಇದೆ. ತಾವು ದೀರ್ಘವಾದ ಚರ್ಚೆ ಮಾಡುವುದಕ್ಕೆ ಅಲ್ಲಿ ಅವಕಾಶ ಕೊಡುತ್ತೇನೆ. ಏಕೆಂದರೆ, ಪ್ರಶ್ನೋತ್ತರ ಅವಧಿಯಲ್ಲಿ ಈ ಪ್ರಶ್ನೆಗೆ ಹತ್ತು ನಿಮಿಷ ಆಯಿತು.

**Sri RAMACHANDRAGOWDA:** I will not take more than two minutes; you know it.

**ಸಭಾಪತಿಯವರು:–** ಅದಲ್ಲಾ, ಅದೇ ವಿಷಯದ ಮೇಲೆ... ಬೇಡವೇ? ಹಾಗಾದರೆ ನಿಯಮ 330ರಲ್ಲಿ ಅವಕಾಶ ಬೇಡವೇ?

**ಶ್ರೀ ಕೆ.ಜೆ. ಜಾರ್ಜ್:–** ಮಾನ್ಯ ಸಭಾಪತಿಯವರೆ, ನಿಯಮ 330ರಲ್ಲಿಯೂ ಕೂಡ ಇದೇ ವಿಷಯ....

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಅದು ನನಗೂ ಗೊತ್ತು. ನಿಯಮ 330ರಲ್ಲಿ ಆಗುವುದಿಲ್ಲ, ಆ ವಿಷಯ ಬರುವುದಿಲ್ಲ.

**ಸಭಾಪತಿಯವರು:–** ಏತಕ್ಕೆ ಆಗುವುದಿಲ್ಲ?

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಸಮಯ ಇಲ್ಲಾ ನನಗೆ. ಅಷ್ಟೇ ಹೊರತಾಗಿ ಬೇರೆ ಏನೂ ಇಲ್ಲ.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಸಭಾಪತಿಯವರು:–** ಹಾಗಾದರೆ, ನಿಯಮ 330 ಬೇಡವೇ? ತೆಗೆದುಬಿಡುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ...

**ಸಭಾಪತಿಯವರು:–** ನಿಯಮ 330ರಲ್ಲಿರುವ ತಮ್ಮ ವಿಷಯವನ್ನು ತೆಗೆದುಬಿಡುತ್ತೇನೆ. ಅದರಲ್ಲಿ ಬೇರೆಯವರ ವಿಷಯ ಹಾಕುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. Please, ಒಂದು ನಿಮಿಷ, ಅವಕಾಶ ಕೊಡಿ.

**ಸಭಾಪತಿಯವರು:–** ಅದೇ ಚರ್ಚೆಯನ್ನು ಎರಡು ಬಾರಿ ಮಾಡುತ್ತೀರಿ.

**ಶ್ರೀ ರಾಮಚಂದ್ರಗೌಡ:–**ಮಾನ್ಯ ಸಭಾಪತಿಯವರೆ, ನಾನೇನು ಕೇಳುವುದಿಲ್ಲ. I don't take more time.

**ಸಭಾಪತಿಯವರು:–** ತಮಗೆ ನಾನು 10 ನಿಮಿಷ ಕಾಲಾವಕಾಶ ಕೊಟ್ಟಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಇದರಲ್ಲಿ ಸುಮಾರು 161 ಕೋಟಿ ರೂಪಾಯಿ ಹಣ ಖರ್ಚಾಯಿತು. ನಾನು ತಮಗೆ ಸಲಹೆ ಮಾಡುವುದೇನೆಂದರೆ, ದೊಡ್ಡದೊಡ್ಡ ಮೋರಿಗಳು ಬರುತ್ತವೆಯಲ್ಲವೇ? ಆ ಎರಡು ಬದಿಗಳಲ್ಲಿ ಸುಮಾರು 50–50 ಅಡಿಗಳಷ್ಟು ಸರ್ಕಾರ ಅಥವಾ ಕಾರ್ಪೋರೇಷನ್‌ನವರು ತೆಗೆದುಕೊಂಡು, ಕೊಳಚೆ ನೀರು ಅದರ ಒಳಗಡೆ ಹೋಗದಿರುವ ರೀತಿ ಪ್ರತ್ಯೇಕ ಮಾರ್ಗವನ್ನು ಮಾಡಬೇಕು. ಇದನ್ನು ಮಾಡದೇ ಹೋದರೆ... ಈಗ ತಿಪ್ಪಗೊಂಡನಹಳ್ಳಿಯಿಂದ ವಾಟರ್ ಲೈನ್ ಬರುತ್ತದೆ, ಅದಕ್ಕೆ ಪ್ರತ್ಯೇಕವಾದ maintenance road ಅನ್ನು ಇಟ್ಟುಕೊಂಡಿದ್ದಾರೆ. ಈ ದೊಡ್ಡ ಕಾಲುವೆಗಳು ಬರುತ್ತವೆಯಲ್ಲವೇ? ಅದರ ಎರಡು ಬದಿಯಲ್ಲಿ maintenance road ಮಾಡಿಕೊಂಡು ಕೊಳಚೆ ನೀರು ಈ ಕಡೆಯಿಂದ ಬರುತ್ತದೆ, ಅದಕ್ಕೆ ಬೇರೆದಾರಿ ಮಾಡಿಬಿಡಿ. ಈ ಕಡೆಯಿಂದ ಬರುತ್ತದೆ, ಅದಕ್ಕೆ ಬೇರೆದಾರಿ ಮಾಡಿಬಿಡಿ. ಈ ರೀತಿಯ ದೊಡ್ಡ ಯೋಜನೆ ಮಾಡಿದರೆ ಅನುಕೂಲವಾಗುತ್ತದೆ. ತಾವು ಎಲ್ಲದಕ್ಕಿಂತಲೂ ಮುಖ್ಯವಾಗಿ ಇದನ್ನು ಮಾಡಬೇಕಾಗುತ್ತದೆ. ಈ ವರ್ಷದ ಒಳಗಾಗಿ ಸರ್ಕಾರದವರು ಕೈಗೆತ್ತಿಕೊಂಡಿರುವ ಯೋಜನೆಯನ್ನು ಪೂರ್ಣಗೊಳಿಸುತ್ತಾರೆಯೇ? ಈಗ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಬೆಳ್ಳಂದೂರು ಕೆರೆ ಮತ್ತು ವರ್ತೂರು ಕೆರೆಗಳ ಇದನ್ನು ಈ ವರ್ಷದೊಳಗಾಗಿ ಪೂರ್ಣಗೊಳಿಸುತ್ತಾರೆಯೇ?

**ಶ್ರೀ ಕೆ.ಜೆ. ಜಾರ್ಜ್:–** ಮಾನ್ಯ ಸಭಾಪತಿಯವರೆ, ಈಗಾಗಲೇ ಯಾವ ಕೆರೆಗಳನ್ನು ನಾವು ಅಭಿವೃದ್ಧಿ ಮಾಡುತ್ತಿದ್ದೇವೆ. ಅದೆಲ್ಲದಕ್ಕೂ ಸಹ ಮಲೀನ ನೀರು ಹೋಗದಿರುವ ರೀತಿಯಲ್ಲಿ ಪ್ರತ್ಯೇಕವಾದ ಮಾರ್ಗವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, ಎಲ್ಲಾ ಕೆರೆಗಳನ್ನು ಮಾಡಿರುವುದಿಲ್ಲ. ನಗರ ಪ್ರದೇಶದಲ್ಲಿರುವ ಎಲ್ಲಾ ಕೆರೆಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಸಾಧ್ಯವಾಗಲಿಲ್ಲ. ಸುಮಾರು 56 ಕೆರೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ.)ಯಿಂದ ಈಗಾಗಲೇ ಅಭಿವೃದ್ಧಿಪಡಿಸಿದ್ದಾರೆ. ಅದು ಬೇಕಾದರೆ, ಫೋಟೋ ಕಾಪಿ ಕೂಡ ಇದೆ. ಆ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಅಭಿವೃದ್ಧಿಪಡಿಸಿದ ಎಲ್ಲಾ ಕೆರೆಗಳನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಇನ್ನು 5 ಕೆರೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿ.ಡಿ.ಎ.) ದವರು ಮಾಡಿದ್ದಾರೆ. ಅದು ಕೂಡ ಚೆನ್ನಾಗಿ ಆಗಿದೆ. ಬಾಕಿಯಿರುವ ಕೆರೆಗಳನ್ನು ಮಾಡಬೇಕಾಗಿದೆ. ಅದನ್ನು ಮಾಡಲಿಕ್ಕೆ ಈಗಾಗಲೇ ಹಂತ–ಹಂತವಾಗಿ ಆದ್ಯತೆ ಕೊಟ್ಟು ಮಾಡುತ್ತಿದ್ದೇವೆ. ಈ 2017–18 ರಲ್ಲಿ ಶೇಕಡ 80 ರಷ್ಟು ನೀರನ್ನು ಸಂಸ್ಕರಣೆ ಮಾಡಲಾಗುತ್ತಿದೆ. ಆದರೂ ಶೇಕಡ 20 ರಷ್ಟು ಮಲೀನ ನೀರು ಬರುತ್ತಿದೆ. ಅದಕ್ಕಾಗಿ, 2020 ರಲ್ಲಿಎಲ್ಲಾ ಮಲೀನ ನೀರು ಶುದ್ಧೀಕರಣ ಘಟಕ(ಎಸ್.ಟಿ.ಪಿ.)ಗಳನ್ನು ಮಾಡಿ ಯಾವುದೇ ಮಲೀನ ನೀರನ್ನು ಸಂಸ್ಕರಣೆ ಮಾಡಿಯೇ ಬಿಡುವಂತಹ ಕೆಲಸ ಮಾಡುತ್ತಿದ್ದೇವೆ. ಅದಲ್ಲದೇ, ನೀರಾವರಿ ಯೋಜನೆಗಳನ್ನು ಸಹ ಹಾಕಿದ್ದೇವೆ. ಕೋಲಾರ ಮತ್ತು ಹೊಸಕೋಟೆಗಳಲ್ಲಿ ಈಗಾಗಲೇ ಸಣ್ಣ ನೀರಾವರಿ ಯೋಜನೆ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಸುಮಾರು 1200 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿ ಕೆಲಸಗಳು ಕೂಡ ಪ್ರಾರಂಭವಾಗಿದೆ. ಇದರ ಜೊತೆಗೆ ಸಂಸ್ಕರಿಸಿದ ನೀರನ್ನು ಕೆರೆಗಳನ್ನು ತುಂಬಿಸುವುದಕ್ಕೆ ತೆಗೆದುಕೊಳ್ಳುತ್ತೇವೆ. ಅದೇ ರೀತಿಯಲ್ಲಿ ಆನೇಕಲ್‌ನಲ್ಲಿಯೂ ಸಹ ಮಾಡುತ್ತಿದ್ದೇವೆ. ಬಹುಶಃ ಇವೆಲ್ಲವನ್ನು ನಮ್ಮ ಸರ್ಕಾರ ದೂರದೃಷ್ಟಿಯನ್ನಿಟ್ಟುಕೊಂಡು ಮಾಡುತ್ತಿದೆ. ಮಾನ್ಯ ಸದಸ್ಯರು ಹೇಳಿದಂತೆ, ಬೆಳ್ಳಂದೂರು ಕೆರೆ ಮತ್ತು ವರ್ತೂರು ಕೆರೆಗಳಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಕರೆಯಲಾಗಿದ್ದು, ಅದರಲ್ಲಿ 4 ಕಂಪನಿಯವರು ಟೆಂಡರ್ ಅರ್ಜಿ ಹಾಕಿದ್ದಾರೆ. ಅದರಲ್ಲಿ 1 ಕಂಪನಿ ದಾಖಲಾಗಿದೆ. ಇನ್ನುಳಿದ 3 ಕಂಪನಿಯವರಿಗೆ ಕೆಲವು ಸ್ಪಷ್ಟೀಕರಣವನ್ನು ಬಿ.ಡಿ.ಎ.ಯವರು ಕೇಳಿದ್ದಾರೆ. ಇನ್ನು ಮುಂದಿನ 10–15 ದಿನಗಳಲ್ಲಿ ಆ ಕೆಲಸಕ್ಕಾಗಿ ಮೊದಲನೆಯ ಹಂತಕ್ಕೆ... ತಜ್ಞರ ಸಮಿತಿ ಶಿಫಾರಸ್ಸು ಮಾಡಿರುವ ರೀತಿ, ಮೊದಲನೆ ಹಂತದ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಅದೇ ರೀತಿ ಎರಡನೆಯ ಹಂತದ ಕೆಲಸಕ್ಕೂ ಸಹ

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಟೆಂಡರ್ ಪ್ರಕ್ರಿಯೆ ಕರೆದು ಕ್ರಮ ತೆಗೆದುಕೊಂಡು ಆದಷ್ಟು ಬೇಗ ಕೆಲಸ ಮಾಡುತ್ತೇವೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**(225) YL-AK/16.03.2017/11.50**

**ಪ್ರಶ್ನೆ ಸಂಖ್ಯೆ 502**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೆ, ಕಳೆದ ಬಜೆಟ್‌ನಲ್ಲಿ ಸುಮಾರು ಸಾವಿರ ಜನಸ್ನೇಹಿ ಪೊಲೀಸ್ ಠಾಣೆಯನ್ನು ಸ್ಥಾಪಿಸುವುದಕ್ಕೋಸ್ಕರ ರೂ.10.00 ಕೋಟಿಗಳಷ್ಟು ಹಣವನ್ನು ಮೀಸಲಿಟ್ಟಿತ್ತು. ಆದರೆ, ಈಗ ಉತ್ತರ ಕೊಟ್ಟಿದ್ದಾರೆ. ಜನ ಸ್ನೇಹಿ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ರೂ.760.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ರೂ.674.80 ಲಕ್ಷಗಳು ಖರ್ಚಾಗಿರುತ್ತದೆ. ಜನ ಸ್ನೇಹಿ ಪೊಲೀಸ್ ಠಾಣೆಗಳೆಂದರೆ ಪೊಲೀಸ್ ಅಧಿಕಾರಿಗಳು ಜನರ ಪರವಾಗಿ ನಿಂತು, ಪೊಲೀಸ್‌ನವರು ಜನರಿಗೆ ಗೌರವ ಕೊಟ್ಟು ಮಾತನಾಡುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಾರೆಂದು ನಾನು ತಿಳಿದಿದ್ದೆ. ಆದರೆ, ಇದನ್ನು ಮೂಲಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಎಂದು ಮಾಡಿದ್ದಾರೆ. ಒಳ್ಳೆಯ ಕೆಲಸವೇ? ಆದರೆ, ನಾನು ಮಾನ್ಯ ಗೃಹ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ ರಾಮನಗರದ ಪೊಲೀಸ್ ವರಿಷ್ಠಾಧಿಕಾರಿಯವರು ಖರೀದಿ ಮಾಡುವುದಕ್ಕೆ ಇನ್ನು ಪತ್ರ ವ್ಯವಹಾರ ಮಾಡಿದ್ದೇವೆಂದು ಹೇಳುತ್ತಾರೆ. ಉಪ ಪೊಲೀಸ್ ಆಯುಕ್ತರು, ಸಂಚಾರ ವಿಭಾಗ, ಬೆಂಗಳೂರಿನವರು ಸದುಪಯೋಗ ಮಾಡಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಪೊಲೀಸ್ ಆಯುಕ್ತರು, ಬೆಂಗಳೂರಿನವರು ದರ ಪಟ್ಟಿಯನ್ನು ಪಡೆದು ಆದೇಶ ನೀಡಲಾಗಿದೆ ಎಂದು ಹೇಳುತ್ತಾರೆ. ಹಾಗಾಗಿ ತಾವು ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ ಎನ್ನುವುದನ್ನು ಸ್ವಲ್ಪ ಪರಿಶೀಲನೆ ಮಾಡಬೇಕಾಗುತ್ತದೆ, ಅದು ಕೂಡ ಆಗುತ್ತದೆ. ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ಆದರೆ, ನನ್ನ ಎರಡನೇ ಪ್ರಶ್ನೆಯೇನೆಂದರೆ, ಯಾವ ಮಾನದಂಡದ ಮೇಲೆ ಜನ ಸ್ನೇಹಿ ಪೊಲೀಸ್ ಠಾಣೆಗಳನ್ನು ಆಯ್ಕೆ ಮಾಡಿದ್ದೀರಿ? ಏಕೆಂದರೆ ಸಿಟಿ ಪೊಲೀಸ್ ಠಾಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಮಾಡಿಕೊಳ್ಳುವುದು ಬಹಳ ಸುಲಭ. ಏಕೆಂದರೆ ಅವರಿಗೆ ಬೇಕಾದಂತಹ water filter, ನೀರು, ಇನ್ನಿತರ ಸೌಕರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಸಿಟಿ ಪೊಲೀಸ್ ಠಾಣೆಗಳಲ್ಲಿ ಸಾಕಷ್ಟು ಅವಕಾಶಗಳು ಇರುತ್ತದೆ. ಆದರೆ, ಹಳ್ಳಿಗಳಲ್ಲಿರತಕ್ಕಂಥ ಪೊಲೀಸ್ ಠಾಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಮಾಡಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದರೆ, ಮಾನ್ಯ ಗೃಹ ಸಚಿವರು ಸಿಟಿಯಲ್ಲಿರತಕ್ಕಂಥ ಪೊಲೀಸ್ ಠಾಣೆಗಳಿಗೂ ಹಾಗೂ ಹಳ್ಳಿಗಳಲ್ಲಿರತಕ್ಕಂಥ ಪೊಲೀಸ್ ಠಾಣೆಗಳಿಗೂ ಒಂದೇರೀತಿ ಹಾರಿಸಿ ಮಾಡಿದ್ದಾರೆ. ಹಾಗಾಗಿ ಹಳ್ಳಿಗಳಲ್ಲಿರತಕ್ಕಂಥ ಪೊಲೀಸ್ ಠಾಣೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದರೆ ನಮ್ಮ ಉದ್ದೇಶವು ಈಡೇರಿದಂತಾಗುತ್ತಿತ್ತು ಎನ್ನತಕ್ಕಂಥದ್ದು, ನನ್ನ ಮೊದಲನೆ ಪ್ರಶ್ನೆ. ಎರಡನೆಯದಾಗಿ ಇದೊಂದು ಪ್ರಯೋಗಾತ್ಮಕವಾಗಿ ಮಾಡಿರುವುದರಿಂದ ಎಲ್ಲಾ ಜಿಲ್ಲೆಗೂ ಸಮನಾಗಿ 12 ಕೊಟ್ಟಿದ್ರೆ ಚೆನ್ನಾಗಿತ್ತು. ಆದರೆ, ತುಮಕೂರಿಗೆ ಜಾಸ್ತಿ ಕೊಟ್ಟಿದ್ದಾರೆ ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಏಕೆಂದರೆ, ತುಮಕೂರು ಸಹ ನಮ್ಮದೇ. ಆದರೆ, 36 ತುಮಕೂರಿಗೆ, 12 ಇನ್ನುಳಿದ ಕಡೆಗೆಯೆಂದರೆ ಬಹಳ ತಾರತಮ್ಯ ಮಾಡಿದಂತಾಗುತ್ತದೆಂದು ನನ್ನಗನಿಸುತ್ತದೆ. ಈ ಬಜೆಟ್‌ನಲ್ಲಿಯೂ ಕೂಡ ಎಲ್ಲಾ ಜಿಲ್ಲೆಯಲ್ಲಿಯೂ ಜನ ಸ್ನೇಹಿ ಪೊಲೀಸ್‌ಠಾಣೆ ಕುರಿತು ಉಲ್ಲೇಖವಾಗಿಲ್ಲ. ಈ ವರ್ಷ ಮುಂದುವರೆಯುತ್ತದೆಯೇ? ಹೋದ ವರ್ಷದಲ್ಲಿ ಬಿಡುಗಡೆಯಾಗಿರುವ ರೂ.10.00 ಕೋಟಿಗಳನ್ನು ಉಪಯೋಗ ಮಾಡಿಕೊಂಡಿಲ್ಲ. ಹಾಗಾಗಿ ಇನ್ನುಳಿದಂತಹ ಅನುದಾನವನ್ನು ಉಪಯೋಗ ಮಾಡಿಕೊಳ್ಳುತ್ತೀರಾ ಎನ್ನುವುದು ನನ್ನ ಮೂರನೆಯ ಪ್ರಶ್ನೆ.

**ಡಾ.ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ನಮ್ಮೆಗೆಲ್ಲಾ ಗೊತ್ತಿರುವ ಹಾಗೆ ಪೊಲೀಸ್ ಠಾಣೆಗಳಿಗೆ ಸಾರ್ವಜನಿಕರು ಪೊಲೀಸ್ ಅಧಿಕಾರಿಗಳ ಹತ್ತಿರ ಹೋದಂತಹ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಸಾರ್ವಜನಿಕರ ಹತ್ತಿರ ನಡೆದುಕೊಳ್ಳುತ್ತಿದ್ದಂತಹ ವಿಪರೀತ ದೂರುಗಳನ್ನು ನಾವು ಕೇಳುತ್ತಿದ್ದೇವೆ. ಕಳೆದ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದಲ್ಲಿರತಕ್ಕಂಥ ಸಾವಿರಕ್ಕೂ ಹೆಚ್ಚು ಪೊಲೀಸ್ ಠಾಣೆಗಳಲ್ಲಿ ಯಾರಾದರೂ ದೂರು ಕೊಡುವುದಕ್ಕೆ ಬಂದರೆ ಪೊಲೀಸ್ ಅಧಿಕಾರಿಗಳು ಸಾರ್ವಜನಿಕರ ಜೊತೆ ಒಂದು ಒಳ್ಳೆಯ ಆತ್ಮೀಯತೆಯಿಂದ ಚೆನ್ನಾಗಿ ಮಾತನಾಡಿ, ಅವರ ದೂರು ತೆಗೆದುಕೊಂಡು, ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವ ರೀತಿಯಲ್ಲಿ ಮಾಡುವುದಕ್ಕಾಗಿ ಹಾಗೂ ಸಾರ್ವಜನಿಕರು ಕುಳಿತುಕೊಳ್ಳುವುದಕ್ಕೆ ಒಳ್ಳೆಯ ಕುರ್ಚಿ ಇಲ್ಲ, ಟೇಬಲ್ ಇಲ್ಲ, ಫ್ಯಾನ್ ಇಲ್ಲವೆನ್ನುವಂತಹ ದೂರು ಪೊಲೀಸ್ ಅಧಿಕಾರಿಗಳಿಂದ ಬರುತ್ತಿತ್ತು. ಅದಕ್ಕಾಗಿ ಪ್ರತಿ ಪೊಲೀಸ್ ಠಾಣೆಗಳಿಗೂ ಒಂದೊಂದು ಲಕ್ಷ ಕೊಡುವುದಾಗಿ ತೀರ್ಮಾನ ಮಾಡಿ, ಒಂದು ಲಕ್ಷ ರೂಪಾಯಿಗಳನ್ನು ಇಡೀ ರಾಜ್ಯದಲ್ಲಿರತಕ್ಕಂಥ ಪೊಲೀಸ್ ಠಾಣೆಗಳಿಗೆ ಕೊಡಬೇಕೆಂದು ಆದೇಶ ಮಾಡಿದ್ದವು. ಈಗ ಅದನ್ನು ಕಾರ್ಯಗತಗೊಳಿಸುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ರೂ.760.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಅದುಕೂಡ procedure ಪ್ರಕಾರ ಮಾಡಬೇಕು. ಪೊಲೀಸ್

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರೀಷ್ಠಾಧಿಕಾರಿ ಟೆಂಡರ್ ಕರೆಯಬೇಕು ಎಂದು ಹೇಳುತ್ತಾರೆ. ಏಕೆ ಅನುದಾನವನ್ನು ತೆಗೆದುಕೊಳ್ಳಬೇಕೆಂದು ರಾಮನಗರದ ಪೊಲೀಸ್ ಠಾಣೆಯವರು ಸ್ಪಷ್ಟೀಕರಣ ಮಾಡಿರಬಹುದು.

ಹಾಗೆ ತುಮಕೂರಿನಲ್ಲಿ 36 ತೆಗೆದುಕೊಂಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಇದು ಕೇವಲ ತುಮಕೂರಿನ ಪ್ರಶ್ನೆಯಲ್ಲ. ಇಡೀ ರಾಜ್ಯದಲ್ಲಿರತಕ್ಕಂಥ ಎಲ್ಲಾ ಪೊಲೀಸ್ ಠಾಣೆಗಳಿಗೂ ಕೂಡ ಈ ಹಣವನ್ನು ನಾವು ಕೊಡುತ್ತೇವೆ. ಸಾರ್ವಜನಿಕರಿಗೆ ಜನಸ್ನೇಹಿ ಆಗಬೇಕೆನ್ನುವಂತಹ ಉದ್ದೇಶವನ್ನಿಟ್ಟುಕೊಂಡು ಮಾಡಿದ್ದೇವೆ. ಇದಕ್ಕೆ ಮಾನದಂಡವೇನೆಂದರೆ ಅಲ್ಲಿ ಸ್ಥಳೀಯವಾಗಿ. . .

ತಮಗೆ ಗೊತ್ತಿರುವ ಹಾಗೆ ಹಳ್ಳಿಗಳಲ್ಲಿ ಬಹಳ ಚಿಕ್ಕದಾದ ಪೊಲೀಸ್ ಠಾಣೆಗಳಿವೆ. ಅಲ್ಲಿ modernize ಮಾಡುವುದಕ್ಕೆ ಏನು ಹಂತ ಹಂತವಾಗಿ ಮಾಡಿದ್ದೇವೆ ಅದನ್ನು ಇನ್ನು ಮಾಡಿಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮ ಶ್ರೀ ಐವನ್ ಡಿ'ಸೋಜಾರವರು ಹೇಳಿದ್ದರು ಅಕ್ಕಿ ಗಿರಣಿ ಕಟ್ಟಡದಲ್ಲಿ ತಾತ್ಕಾಲಿಕವಾಗಿ ಪೊಲೀಸ್‌ಠಾಣೆಯೂ ನಡೆಯುತ್ತಿದೆಂದು. ಇಂತಹದೆಲ್ಲಾ ಸ್ವಲ್ಪ practical difficulties ಇರುತ್ತದೆ. ಒಟ್ಟಾರೆಯಾಗಿ ಮಾನ್ಯ ಸದಸ್ಯರಿಗೆ ನಾನು ಭರವಸೆ ಕೊಡತಕ್ಕಂಥದ್ದು ಎಲ್ಲಾ ಪೊಲೀಸ್ ಠಾಣೆಗಳಲ್ಲಿಯೂ ಮೂಲಭೂತ ಸೌಕರ್ಯಗಳನ್ನು ಮಾಡುತ್ತೇವೆ. ಇದನ್ನು ನಾವು ಸಂಪೂರ್ಣವಾಗಿ ನಿಲ್ಲಿಸುವುದಿಲ್ಲ. ಬಜೆಟ್‌ನಲ್ಲಿಯೇ ಇದಕ್ಕೆ ಅನುದಾನ ಬರಬೇಕಾಗಿಲ್ಲ. ರೂ.10.00 ಕೋಟಿ ಅನುದಾನವೆನಿದೆ ಅದನ್ನು ಅವಶ್ಯಕತೆಯಿದ್ದರೆ ಬೇರೆ ಬೇರೆ ರೀತಿಯಲ್ಲಿ ಕೊಡುವುದಕ್ಕೆ ಅವಕಾಶವಿದೆ. ನಾವು ಜನ ಸ್ನೇಹಿ concept ಮುಂದುವರೆಸುತ್ತೇವೆ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ, ವಿಕಲಚೇತನರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ, ನಾವು ಬಹಳಷ್ಟು ಸಂದರ್ಭದಲ್ಲಿ ಅನೇಕ ಕಾರಣಗಳಿಂದ ಪೊಲೀಸ್ ಠಾಣೆಗಳಿಗೆ ಹೋಗುತ್ತೇವೆ. ಎಲ್ಲಿಯೂ ಅದು ಕಂಡು ಬರುವುದಿಲ್ಲ. ನಾನು ಸಾರಸಗಟಾಗಿ ಹೇಳುವುದಿಲ್ಲ. ವಿಕಲಚೇತನರಿಗೆ ರ್‍ಯಾಂಪ್ ಮಾಡತಕ್ಕಂಥದ್ದು ಎಲ್ಲಿಯೂ ಕಂಡು ಬರುತ್ತಿಲ್ಲ. ಅದು ಅತ್ಯಂತ ಅವಶ್ಯಕತೆ ಇದೆ. ವಿಕಲಚೇತನರು ಕೂಡ ಪೊಲೀಸ್ ಠಾಣೆಗಳಿಗೆ ಬರುತ್ತಾರೆ. ವಿಕಲಚೇತನರನ್ನು ಹೊರಗಡೆ ನಿಲ್ಲಿಸಿ ಮಾತನಾಡಿಸುವುದಕ್ಕೆ ಪೊಲೀಸ್‌ನವರಿಗೂ ಕೂಡ ತುಂಬಾ ತೊಂದರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಅದಕ್ಕೂ ಸ್ವಲ್ಪ ಆದ್ಯತೆ ನೀಡಲಾಗುವುದೆ?

"ತಿದ್ದುಪಡಿಯಾಗದ ಪ್ರತಿ/ಉನೆಡಿಟೆಡ್ ಕಾಪಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಡಾ: ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ನಮ್ಮ guidelines ನಲ್ಲಿ ಇವೆಲ್ಲವನ್ನು ಕೂಡ ಕೊಡುತ್ತೇವೆ. ವಿಕಲಚೇತನರಿಗೆ ಏನು ಸೌಕರ್ಯ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಸ್ವಾಗತಾರ್ಹ. ಎಲ್ಲಾ ಸಾರ್ವಜನಿಕ ಕಛೇರಿಯಲ್ಲಿಯೂ ಮಾಡಬೇಕೆಂದು ಈಗಾಗಲೇ ಸರ್ಕಾರದಲ್ಲಿ ಆದೇಶ ಇದೆ. ಹಾಗಾಗಿ ಪೊಲೀಸ್ ಠಾಣೆಯಲ್ಲಿಯೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 530**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಬಹಳ ದೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಹೊಸದಾಗಿ ಸೃಜಿಸಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳು ಸಿಬ್ಬಂದಿಗಳ ಕೊರತೆ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಹೌದು ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸತ್ಯವಾದ ವಿಚಾರವನ್ನು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ಯಾವಾಗಲ್ಲೂ ಸತ್ಯಾನೇ ಹೇಳುವುದು.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಸತ್ಯನೇ ಹೇಳಿದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ನನಗೆ ಕೊಟ್ಟಿರತಕ್ಕಂಥ ಅನುಬಂಧವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದು ನೋಡಬೇಕು. Principal Grade/Vice-Principal/Assistant Director - total number of sanctioned post is 285, number of posts filled is 142 and the number of posts vacant is 143. As far as Training Officers, Junior Training Officers and Superintendents are concerned, the total number of posts is 4340, number of posts filled is 2329 and the number of vacant posts is 2011. Workshop Attenders, Peons, Helpers – total number of posts is 5863, number of posts filled is 2757 and the number of posts vacant is 3106. ನಾನು ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಬಯಸುತ್ತೇನೆ. ದಯವಿಟ್ಟು ಗ್ರಾಮೀಣ ಭಾಗಗಳಲ್ಲಿರತಕ್ಕಂಥ ಯುವಕರಿಗೆ ಐಟಿಐ ಗಳ ಮುಖಾಂತರ ಒಂದು ಉದ್ಯೋಗಾವಕಾಶವನ್ನು ಕಲ್ಪಿಸತಕ್ಕಂಥ ವಿಚಾರದಲ್ಲಿ ಹೊಸದಾಗಿ 100 ಐಟಿಐ ಗಳನ್ನು ಪ್ರಾರಂಭ ಮಾಡಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಐಟಿಐ ಗಳಲ್ಲಿ ವಿಶೇಷವಾಗಿರುವುದು ಸಿಬ್ಬಂದಿ ಕೊರತೆ. ಯಾರು ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ನೀಡಬೇಕೋ ಅವರೇ ಇಲ್ಲದಿದ್ದರೆ, ಯಾವರೀತಿ ವಿದ್ಯಾಭ್ಯಾಸವನ್ನು ನಾವು ಕೊಡುವುದಕ್ಕೆ ಸಾಧ್ಯತೆ ಇದೆ. ಇದರ ಬಗ್ಗೆ ಪ್ರಜಾವಾಣಿಯಲ್ಲಿಯೂ ಒಂದು ವರದಿಯಾಗಿದೆ ಅದನ್ನು ತಾವು ದಯವಿಟ್ಟು ಗಮನಿಸಬೇಕು. ಔರಾದ್‌ನಲ್ಲಿ ಒಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಪ್ರಾರಂಭವಾಗಿದೆ. ಇಲ್ಲಿರತಕ್ಕಂಥ 3 ಕೋರ್ಸ್‌ಗಳಿಗೆ 121 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದಾರೆ. ಆದರೆ, ಅಲ್ಲಿ ಪಾಠವನ್ನು ಮಾಡಲು ಬೋಧಕರಿಲ್ಲ. ಒಟ್ಟು ಇರಬೇಕಾದ 6 ಕಿರಿಯ ತರಬೇತಿ ಶಿಕ್ಷಕರ ಪೈಕಿ 3 ಜನರಿದ್ದಾರೆ. 3 ಜನರಲ್ಲಿ ಇಬ್ಬರೂ ನಿಯೋಜನೆ ಮೇಲೆ ಹೋಗಿದ್ದಾರೆ. ಒಬ್ಬ ಕಿರಿಯ ತರಬೇತಿ ಶಿಕ್ಷಕರು 3 ತರಗತಿಗೆ ಪಾಠ ಮಾಡಬೇಕಾದಂತಹ ಪರಿಸ್ಥಿತಿ ಬಂದಿದೆ. ಹೀಗಿರುವಾಗ ಇಂತಹ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹೇಗೆ ಪ್ರವೇಶ ಪಡೆದುಕೊಳ್ಳಲು ಮುಂದೆ ಬರುತ್ತಾರೆ. ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕದ ಅತ್ಯಂತ ಕಟ್ಟಕಡೆಯ ಭಾಗ ಔರಾದ್. ಇವತ್ತು ಕರ್ನಾಟಕದಲ್ಲಿರತಕ್ಕಂಥ ಒಟ್ಟು ಐಟಿಐ ಪರಿಸ್ಥಿತಿ ಈ ರೀತಿಯಾದರೆ, ನಾವು ವಿದ್ಯಾರ್ಥಿಗಳಿಗೆ ನಿಜವಾಗಿಯೂ ನ್ಯಾಯಕೊಡುವುದಕ್ಕೆ ಸಾಧ್ಯವಿದೆಯೇ? ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಮಾಡುತ್ತೇವೆಂದು ಈ ಸಾಲಿನ ಬಜೆಟ್‌ನಲ್ಲಿಯೂ ಹೇಳಿದ್ದಾರೆ. ಕೌಶಲ್ಯ ಅಭಿವೃದ್ಧಿ ಸಾಧನೆಯಲ್ಲಿ ತಾವು ಹೇಳುತ್ತಿರುವಂತೆ 100 ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಿ, 8400 ಅಭ್ಯರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ. ದಯವಿಟ್ಟು ಮಾನ್ಯ ಸಭಾಪತಿಯವರೆ, 01 ಮಾರ್ಚ್ 2017 ರಂದು ಔರಾದ್ ಭಾಗದಲ್ಲಿರತಕ್ಕಂಥ ಪರಿಸ್ಥಿತಿಯನ್ನು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಣೆಯಾಗಿರುವುದನ್ನು ನೋಡಬೇಕು. ಅಲ್ಲಿರತಕ್ಕಂಥಹ ಪೀಠೋಪಕರಣಗಳ ಪರಿಸ್ಥಿತಿ ಹಾಗೂ ಸಿಬ್ಬಂದಿಗಳ ಕೊರತೆ ಯಾವರೀತಿ ಇದೆ ಎನ್ನುವುದು ಗೊತ್ತಾಗುತ್ತದೆ. ಈ ರೀತಿಯ ಐಟಿಐ ಗಳಲ್ಲಿ ನಮ್ಮ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯಬೇಕೇ? ಆದ್ದರಿಂದ ದಯವಿಟ್ಟು ಸರ್ಕಾರ ಐಟಿಐ ಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತಹ ವಿಚಾರದಲ್ಲಿ ಹಾಗೂ ಸಿಬ್ಬಂದಿ ಕೊರತೆ ವಿಚಾರದಲ್ಲಿ, ಕಿರಿಯತರಬೇತಿ ಶಿಕ್ಷಕರನ್ನು ಕೊಡತಕ್ಕಂಥ ವಿಚಾರದಲ್ಲಿ ನಿಮ್ಮ ಸ್ಪಷ್ಟತೆ ಬೇಕು ಮತ್ತು ಯಾವ ಕಾಲಮಿತಿಯಲ್ಲಿ ಈ ಒಂದು ಹುದ್ದೆಗಳಿಗೆ ಭರ್ತಿ ಮಾಡುತ್ತೀರಿ ಎನ್ನುವಂತಹ ವಿಚಾರವನ್ನು ಸಹ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ನಾನು ಪೂರಕ ಪ್ರಶ್ನೆಯಲ್ಲಿ ಕೇಳಿದ್ದೆ. ಅದರಲ್ಲಿಯೂ ಸ್ಪಷ್ಟತೆಯಿಲ್ಲ. ಯಾವ ಕಾಲಮಿತಿಯಲ್ಲಿ ಹುದ್ದೆಯನ್ನು ಭರ್ತಿ ಮಾಡುತ್ತೀರಿ. ಒಟ್ಟು ಖಾಲಿ ಇರತಕ್ಕಂಥ ಹುದ್ದೆಗಳನ್ನು ನಾವು ನೋಡಿದಾಗ more than 50% of the posts are vacant. How the ITI's are going to run?

**Mr. CHAIRMAN:** What is your question? ಪ್ರಶ್ನೆ ಕೇಳಿ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಯಾವ ಕಾಲಮಿತಿಯಲ್ಲಿ ಖಾಲಿ ಹುದ್ದೆಗಳನ್ನು ಪೂರ್ತಿಗೊಳಿಸುತ್ತಾರೆ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, 2014-15ನೇ ಸಾಲಿನಲ್ಲಿ 100 ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಕೊಟ್ಟಿದ್ದೇವೆ. ಅವೆಲ್ಲವೂ ಕೂಡ ಪ್ರಾರಂಭವಾಗಿದೆ. ಮೊದಲನೆಯದಾಗಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭ ಮಾಡಿದ ಕೂಡಲೇ ಎಲ್ಲದಕ್ಕೂ ತಕ್ಷಣವೇ ಕಟ್ಟಡಗಳನ್ನು ಒದಗಿಸುವುದಕ್ಕಾಗುವುದಿಲ್ಲ.

**(226) 16.03.2017ಎಲ್‌ಎಂ/ಆರ್‌ಎನ್ 12.00**

**ಶ್ರೀ ಸಿದ್ದರಾಮಯ್ಯ**(ಮುಂದು):-

ಎರಡನೆಯದಾಗಿ, ಇದೆಲ್ಲವನ್ನು ಮಾಡಬೇಕಾದರೆ ಜಾಗ ಬೇಕಾಗುತ್ತದೆ ಮತ್ತು ಸಿಬ್ಬಂದಿಗಳ ನೇಮಕಾತಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಹುದ್ದೆಗಳನ್ನು ಭರ್ತಿ ಮಾಡಿಕೊಂಡಿರುವುದಿಲ್ಲ ಎನ್ನುವುದು ನಿಜ. ಐಟಿಐ ಗಳಿಗೆ deputation ಮೂಲಕ, guest faculty ಮೂಲಕ ಈಗ ಕ್ಲಾಸ್‌ಗಳು ನಡೆಯುತ್ತಿವೆ. ಅಲ್ಲಿ ಬೇಕಾದ ಪೀಠೋಪಕರಣಗಳನ್ನು, ಬೇಕಾದ ಸಲಕರಣೆಗಳನ್ನು ಒದಗಿಸಿ ಕೊಡಲಾಗಿದೆ. ಆದರೆ ಸಿಬ್ಬಂದಿ ಮತ್ತು ಬಿಲ್ಡಿಂಗ್‌ಗಳ ಕೊರತೆ ಇದೆ. 41 ಕಡೆಗಳಲ್ಲಿ ಬೇರೆ-ಬೇರೆ ಇಲಾಖೆಗಳ ಕಟ್ಟಡಗಳನ್ನು ತೆಗೆದುಕೊಂಡು ಸರ್ಕಾರಿ ಕಟ್ಟಡಗಳನ್ನು ಕೊಡಲಾಗಿದೆ. ಇನ್ನು ಉಳಿದ ಕಾಲೇಜುಗಳನ್ನು ಬಾಡಿಗೆ ಬಿಲ್ಡಿಂಗ್‌ಗಳಲ್ಲಿ ನಡೆಸಲಾಗುತ್ತಿದೆ. 55 ಕಡೆಗಳಲ್ಲಿ ಜಾಗ ಸಿಕ್ಕಿದೆ. ಕೆಲವು ಕಡೆಗಳಲ್ಲಿ ಇನ್ನು ಜಾಗ ಸಿಗಬೇಕಾಗಿದೆ. ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಅದು ಆದಷ್ಟು ಬೇಗ ಆಗುತ್ತದೆ. ಬಹಳಷ್ಟು ಹುದ್ದೆಗಳು ಖಾಲಿ ಇವೆ ಎನ್ನುವುದು ಸತ್ಯ. ಭರ್ತಿ ಮಾಡಿಕೊಳ್ಳುವುದು

"ತಿದ್ದುಪಡಿಯಾಗದ ಪ್ರತಿ/ ಗಣಕೀಕೃತ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ವಿಳಂಬವಾಗಿದೆ ಅದನ್ನು ತ್ವರಿತಗೊಳಿಸಬೇಕೆಂದು ಇಲಾಖೆಗೆ ನಾನು ಹೇಳಿದ್ದೇನೆ. ಮಾನ್ಯ ಸದಸ್ಯರು ಔರಾದ್‌ದ ಉದಾಹರಣೆಯನ್ನು ಹೇಳಿದರು ಅದು ಸತ್ಯವಿದೆ. ಈಗ ಅಗತ್ಯವಾಗಿ ನಾವು 2000 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಉಳಿದವುಗಳನ್ನು outsource ಮೂಲಕ ಮಾಡಿಕೊಳ್ಳಬಹುದು. ಈಗ ಇದು ಹಣಕಾಸು ಇಲಾಖೆಗೆ ಹೋಗಿದೆ. ಅಲ್ಲಿಂದ ಒಪ್ಪಿಗೆ ಸಿಕ್ಕಮೇಲೆ ಭರ್ತಿ ಮಾಡುವ ಕೆಲಸವನ್ನು ಮಾಡುತ್ತೇವೆ. ಈ ಕೆಲಸವನ್ನು ಆದಷ್ಟು ಬೇಗ ಮಾಡುತ್ತೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಗಳೆ, ಕೌಶಲ್ಯ ತರಬೇತಿಯನ್ನು ಕೊಡಲು ಶಿಕ್ಷಕರೆ ಇಲ್ಲ ಎಂದ ಮೇಲೆ ನಾವು ವಿದ್ಯಾರ್ಥಿಗಳಿಂದ ಏನು ನಿರೀಕ್ಷೆ ಮಾಡಲು ಸಾಧ್ಯ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಮಾನ್ಯ ಕವಟಗಿಮಠರವರು ಬಹಳ ಬುದ್ಧಿವಂತರು ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಹೇಳಿರುವುದನ್ನೆ ಪುನ: ಕೇಳಿದರೆ ಏನು ಪ್ರಯೋಜನ? ಆದಷ್ಟು ಬೇಗ ಭರ್ತಿ ಮಾಡಲಾಗುವುದು.

**ಸಭಾಪತಿಯವರು:-** ಮುಂದಿನ ಪ್ರಶ್ನೆಕೋಟ ಶ್ರೀನಿವಾಸ್ ಪೂಜಾರಿಯವರದು, ಈ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ್ ಪೂಜಾರಿ:-** ಮಾನ್ಯ ಮುಖ್ಯಮಂತ್ರಿಗಳು ಲೋಕಸಭೆಯಿಂದ 24 ಗಂಟೆಯೊಳಗೆ ವರದಿಯನ್ನುತರಿಸಬಹುದು. ಏಕೆ ಸುಮ್ಮನೆ ಕಾಲಾವಕಾಶ ತೆಗೆದುಕೊಳ್ಳುತ್ತೀರಿ.

**ಶ್ರೀ ಸಿದ್ದರಾಮಯ್ಯ:-** ಈ ಸದನ ಮುಗಿಯುವುದರೊಳಗೆ ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ್ ಪೂಜಾರಿ:-** ಸರ್ಕಾರ ತಂತ್ರಜ್ಞಾನದಲ್ಲಿ ತುಂಬಾ ಮುಂದುವರೆದಿದೆ. ಏಕೆ ವಿಳಂಬ ಮಾಡುವುದು, ಇವತ್ತೆ ತರಿಸಿಕೊಳ್ಳಬಹುದಲ್ಲ ಎಂದು ಹೇಳುತ್ತಿದ್ದೇನೆ. ತಾವು ಸಮಯ ತೆಗೆದುಕೊಂಡಿರುವುದನ್ನು ನಾನು ಒಪ್ಪುತ್ತೇನೆ. ಆದರೆ...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, it will be furnished in the next week.

"ತಿದ್ದುಪಡಿಯಾಗದ ಪ್ರತಿ/ ಅನಧಿಕೃತ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 594**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಗಳೆ, ನಾನು ಕೇಳಿರುವ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದಿಗಳಲ್ಲಿ ಎಳನೀರು ಮಾರಾಟ ಮಾಡಲು ಅವಕಾಶ ಕಲ್ಪಿಸುವ ವಿಚಾರ ಸರ್ಕಾರದ ಮುಂದಿದೆಯೇ ಎನ್ನುವುದಕ್ಕೆ ಇರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಎರಡನೆ ಪ್ರಶ್ನೆ, ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದಿರಗಳಲ್ಲಿ ಕೂಲ್‌ಡ್ರಿಂಕ್ಸ್ ಮಾರಾಟ ರದ್ದುಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಎನ್ನುವುದಕ್ಕೆ ಅನ್ವಯಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮೂರನೆ ಪ್ರಶ್ನೆ, ರೈತರಿಗೆ ಉತ್ತೇಜನ ನೀಡಲು ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದಿರಗಳಲ್ಲಿ ಕಡ್ಡಾಯವಾಗಿ ಕೂಲ್‌ಡ್ರಿಂಕ್ಸ್ ಬದಲು ಎಳನೀರು ಮಾರಲು ಅವಕಾಶ ಕಲ್ಪಿಸಿ ಆದೇಶ ಹೊರಡಿಸಲಾಗಿದೆಯೇ ಎನ್ನುವುದಕ್ಕೆ ಹೊರಡಿಸಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನಾಲ್ಕನೆಯದಾಗಿ, ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದರಿಗಳಲ್ಲಿ ಕೂಲ್‌ಡ್ರಿಂಕ್ಸ್ ಮಾರಾಟ ರದ್ದುಪಡಿಸಲು ಇರುವ ತೊಂದರೆಗಳೇನು, ರೈತರಿಗೆ ಈ ವಿಚಾರವಾಗಿ ಅನುಕೂಲ ಮಾಡಿಕೊಡಲು ಹೊಸದಾಗಿ ಆದೇಶ ಹೊರಡಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ಎನ್ನುವುದಕ್ಕೆ ರೈತರಿಂದ ಮಾರಾಟ ಮಾಡಲು ಬೇಡಿಕೆ ಬಂದಲ್ಲಿ ಅವಕಾಶ ಕಲ್ಪಿಸಬಹುದಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಗೊತ್ತಾಗುತ್ತದೆ ಸರ್ಕಾರ ರೈತರ ಬಗ್ಗೆ ಎಷ್ಟೊಂದು ಕಾಳಜಿ ಇಟ್ಟುಕೊಂಡು ಕೆಲಸ ಮಾಡುತ್ತಿದೆ ಎಂದು. ಇಂದು ರಾಜ್ಯದಲ್ಲಿ ಬರ ಬಂದು ರೈತ ತತ್ತರಿಸಿ ಹೋಗಿದ್ದಾನೆ. ಸಾಲ ಮನ್ನಾ ಮಾಡಲಿಲ್ಲ ಅದು ಹೋಗಲಿ. ಆದರೆ ರೈತರಿಗೆ ಹೂ ಕೊಡುವಲ್ಲಿ ಹೂವಿನ ಎಸಳನ್ನು ಕೊಡುವ ವ್ಯವಸ್ಥೆ ಮಾಡಬೇಕು ಎನ್ನುವುದಾದರೆ ಅವರು ಬೆಳೆಯುವಂತಹ ಎಳನೀರನ್ನು ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಮಾರಾಟ ಮಾಡಲು ಅವಕಾಶ ಕೊಡಬೇಕು. ನನ್ನ ಬೇಡಿಕೆಏನೆಂದರೆ ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದರಿಗಳಲ್ಲಿ ಕೂಲ್‌ಡ್ರಿಂಕ್ಸ್ ಮಾರಾಟ ರದ್ದುಪಡಿಸಲು ಇರುವ ತೊಂದರೆಗಳೇನು? ರೈತರಿಗೆ ಈ ವಿಚಾರವಾಗಿ ಅನುಕೂಲ ಮಾಡಿಕೊಡಲು ಹೊಸದಾಗಿ ಆದೇಶ ಹೊರಡಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ಎನ್ನುವುದಕ್ಕೆ ಯಾವುದೆ ಸರಿಯಾದ ಉತ್ತರವನ್ನು ಕೊಟ್ಟಿರುವುದಿಲ್ಲ. ತಮಿಳು ನಾಡಿನಲ್ಲಿ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ತಂಪು ಪಾನೀಯಗಳಾದ ಪೆಪ್ಸಿ, ಕೋಲಾ ಇವುಗಳ ಮಾರಾಟವನ್ನು ನಿಷೇಧ ಮಾಡಿ ಎಳನೀರನ್ನು ಮಾರಾಟ ಮಾಡಲು ಅವಕಾಶ ಮಾಡಿಕೊಟ್ಟಿದೆ. ಆದರೆಇಲ್ಲಿ ನಾವು ರೈತರು ಪರ, ಸರ್ಕಾರ ಇರುವುದು ರೈತರಿಗಾಗಿ, ನಾವು ಮಾಡುವುದೆಲ್ಲವು ರೈತರಿಗಾಗಿ ಎಂದು ಹೇಳುತ್ತಾರೆ. ಬಜೆಟ್‌ನಲ್ಲಿಯು ನಾವು ಇದರ ಬಗ್ಗೆ ನಿರೀಕ್ಷೆಯನ್ನು

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಮಾಡಿದ್ದೆವು. ಆದರೆ ಇವತ್ತು ರೈತರ ಪರ ಎನ್ನುವುದನ್ನು ಪತ್ರಿಕೆಗಳಲ್ಲಿ, ಬಾಯಿ ಮಾತಿನಲ್ಲಿ ಹೇಳುವುದನ್ನು ಬಿಟ್ಟರೆ, ರೈತರ ಪರವಾಗಿ ಏನು ಮಾಡಿದ್ದೀರಿ?

**ಸಭಾಪತಿಯವರು:–** ನಿಮ್ಮ ಪ್ರಶ್ನೆಗೆ ಅವರು ಆಗುವುದಿಲ್ಲ ಎಂದು ಹೇಳಿದ್ದಾರೆ. ಮುಂದೆ ಏನು ಮಾಡಬೇಕು ಎನ್ನುವುದರ ಬಗ್ಗೆ ಹೇಳಿ.

**ಶ್ರೀ ಈಶ್ವರ. ಬಿ.ಖಂಡ್ರೆ (ಪೌರಾಡಳಿತ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು)(ನಗರಾಭಿವೃದ್ಧಿ ಮತ್ತು ಹಜ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ನಮ್ಮ ಸರ್ಕಾರ ರೈತರ ಪರವಾಗಿ ಇದೆ, ರೈತರ ಪರವಾಗಿಯೇ ಕೆಲಸ ಮಾಡುತ್ತಿದೆ ವಿಷಯಾಂತರ ಮಾಡುವ ಅವಶ್ಯಕತೆ ಇಲ್ಲ. ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದಿರಗಳಲ್ಲಿ ಕೂಲ್‌ಡ್ರಿಂಕ್ಸ್ ಸೇರಿದಂತೆ ಎಳನೀರು ಮಾರಾಟ ಮಾಡಲು ಯಾವುದೆ ನಿರ್ಬಂಧವಿಲ್ಲ. ಅಲ್ಲಿ ಐಸ್‌ಕ್ರೀಮ್ ಕೂಡಾ ಮಾರಾಟ ಮಾಡುತ್ತಾರೆ. ಆದರೆ ಇವರೆಲ್ಲರೂ ಮಹಾನಗರ ಪಾಲಿಕೆಯ ಪರವಾನಿಗೆಯನ್ನು ತೆಗೆದುಕೊಂಡು ಮಾರಾಟ ಮಾಡುತ್ತಾರೆ. ಆದರೆ ಕೂಲ್‌ಡ್ರಿಂಕ್ಸ್ ಮಾರಾಟವನ್ನು ರದ್ದುಮಾಡಬೇಕೆಂದು ತಾವು ಹೇಳುತ್ತಿದ್ದೀರಿ. ಆದರೆ ಎಳನೀರು ಮಾರಾಟ ಮಾಡಲು ಯಾವುದೆ ನಿರ್ಬಂಧವಿರುವುದಿಲ್ಲ. ಮಾನ್ಯ ಸದಸ್ಯರು ಸಲಹೆ ಕೊಟ್ಟ ಹಾಗೆ ಎಲ್ಲಾ ಚಲನಚಿತ್ರ ಮಂದಿರಗಳಿಗೆ ನಮ್ಮ ಇಲಾಖೆಯಿಂದ ಮಹಾನಗರ ಪಾಲಿಕೆಗಳಿಗೆ, ನಗರಪಾಲಿಕೆಗಳಿಗೆ ಸುತ್ತೋಲೆ ಹೊರಡಿಸಿ ಯಾವುದೇ ಚಿತ್ರಮಂದಿರವಿರಲಿ ಅಲ್ಲಿ ಎಳನೀರು ಮಾರಾಟ ಮಾಡಲು ಉತ್ತೇಜನ ಕೊಡಿ ಎಂದು ಆದೇಶವನ್ನು ಹೊರಡಿಸಲಾಗುತ್ತದೆ.

**ಶ್ರೀ ಪ್ರಾಣೇಶ್ ಎಂ.ಕೆ.:–** ಎಳನೀರು ಮಾರಾಟ ಮಾಡಲು ಬೇಡಿಕೆ ಬಂದಲ್ಲಿ ಅವಕಾಶ ಮಾಡಿಕೊಡಲಾಗುತ್ತದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ಸುತ್ತೋಲೆಯನ್ನು ಕಳುಹಿಸುತ್ತೇನೆ ಎಂದು ಹೇಳಿದ್ದಾರೆ ಅಲ್ಲವೇ?

**ಶ್ರೀ ಈಶ್ವರ ಬಿ.ಖಂಡ್ರೆ:–** ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇವೆ. ಪುನ: ಅದನ್ನೆ ಹೇಳುತ್ತಾ ಕೂಡುವ ಅವಶ್ಯಕತೆ ಏನು ಇದೆ?

"ತಿದ್ದುಪಡಿಯಾಗದ ಪ್ರತಿ/ ಗಣಕೀಕೃತ ಅಂತಿಮ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 559**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿವೇಕರಾವ್ ವಸಂತರಾವ್ ಪಾಟೀಲ್:-** ಮಾನ್ಯ ಸಭಾಪತಿಗಳೆ, I want to ask a specific question about how long it will takes? And who is responsible for this delay?

**ಶ್ರೀ ಈಶ್ವರ. ಬಿ.ಖಂಡ್ರೆ (ಪೌರಾಡಳಿತ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು) (ನಗರಾಭಿವೃದ್ಧಿ ಮತ್ತು ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಇದಕ್ಕೆ ಯಾರು ಜವಾಬ್ದಾರರಲ್ಲ, 2010-11ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ರಾಯಭಾಗ ಪಟ್ಟಣಕ್ಕೆ ಕೃಷ್ಣಾ ನದಿಯಿಂದ ಕುಡಿಯುವ ನೀರಿನ ಯಾವುದೇ ಯೋಜನೆಯು ಅನುಮೋದನೆಯಾಗಿರುವುದಿಲ್ಲ. ನಂತರ ಪಟ್ಟಣದ ನೀರು ಸರಬರಾಜು ಯೋಜನೆಯ 3884 ಲಕ್ಷ ರೂ.ಗಳ ಅಂದಾಜನ್ನು ತಯಾರಿಸಿ ಕೇಂದ್ರ ಪುರಸ್ಕೃತ ನಗರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳಲು ಅಂದಾಜನ್ನು ಮಂಜೂರಾತಿಗಾಗಿ ಸಲ್ಲಿಸಲಾಗಿತ್ತು. ಆದರೆ ದಿನಾಂಕ: 21-3-2014ರಲ್ಲಿ ಚುನಾವಣಾ ಘೋಷಣೆಯಾಗಿದ್ದರಿಂದ ಚುನಾವಣಾ ನೀತಿ ಸಂಹಿತೆ ಕಾರಣಕ್ಕಾಗಿ ಯೋಜನೆಯ ಅಂದಾಜು ಪಟ್ಟಿಯನ್ನು ಹಿಂದಿರುಗಿಸಿತ್ತು. ನಂತರ ಕೇಂದ್ರ ಪುರಸ್ಕೃತ ನಗರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಭೂತ ಸೌಕರ್ಯ ಅಭಿವೃದ್ಧಿಯೋಜನೆ ಮುಕ್ತಾಯಗೊಂಡಿರುತ್ತದೆ. ಈಗ ಬೆಳಗಾವಿ ಜಿಲ್ಲೆಯ ರಾಯಭಾಗ ಪಟ್ಟಣಕ್ಕೆ ಕೃಷ್ಣಾ ನದಿಯಿಂದ ಕುಡಿಯುವ ನೀತು ಸರಬರಾಜು ಯೋಜನೆಯನ್ನು ಆಗ 3884 ಲಕ್ಷ ರೂ.ಗಳ ಅಂದಾಜು ತಯಾರಿಸಲಾಗಿತ್ತು. ಈಗ 6524 ಲಕ್ಷ ರೂ.ಗಳಿಗೆ ಅಂದಾಜು ತಯಾರಿಸಲಾಗಿದೆ. ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುತ್ತದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಹಾಲಿ ಅನುಮೋದನೆಯಾಗಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಅನುದಾನದ ಕೊರತೆ ಇರುವುದು ಕಂಡು ಬರುತ್ತಿರುವುದರಿಂದ ಮುಂದಿನ ಎರಡು ವರ್ಷಗಳವರೆಗಾದರೂ ಯಾವುದೇ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳದಂತೆ ಆರ್ಥಿಕ ಇಲಾಖೆಯ ಸೂಚನೆ ಇರುವುದರಿಂದ ಅದು ಅಲ್ಲಿಯೇ ಇದೆ. ಮತ್ತೊಮ್ಮೆ ಇದನ್ನು ಪರಿಶೀಲಿಸಬೇಕು ಎನ್ನುವ ಪ್ರಸ್ತಾವನೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 517**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಗಳೆ, ಉತ್ತರವು ಸ್ಪಷ್ಟವಾಗಿಲ್ಲ, ಅಸ್ಪಷ್ಟವಾಗಿದೆ. ನಾನು ಮಾನ್ಯ ಗೃಹ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇಂದು ರಾಜಧಾನಿ ಬೆಂಗಳೂರಿನಲ್ಲಿ ಗಾಂಜಾ, ಮಾದಕ ದ್ರವ್ಯಗಳನ್ನು ಶಾಲೆ-ಕಾಲೇಜುಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಮಾರಾಟ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದಕ್ಕೆ ಅವರು ಅನುಬಂಧದಲ್ಲಿ ಉತ್ತರವನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಈಗ ನಾನು ಅವರನ್ನು ನೇರವಾಗಿ ಕೇಳುತ್ತೇನೆ, ತಾವು ಗೃಹ ಸಚಿವರಾಗಿ ದಕ್ಷತೆಯಿಂದ ಕೆಲಸ ಮಾಡುತ್ತೀದ್ದಿರಿ ಎನ್ನುವುದು ನನ್ನ ಅನ್ನಿಸಿಕೆ. ಅದು ಎಷ್ಟರಮಟ್ಟಿಗೆ ಇದೆ ಎನ್ನುವುದು ಗೊತ್ತಿಲ್ಲ. ಆದರೆಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕಠಿಣವಾದ ಕ್ರಮವೇನು? ಎರಡನೆಯದಾಗಿ, ಗಾಂಜಾ ಮಾರಾಟ ಮಾಡುವವರನ್ನು ಹಿಡಿದು ಕೇಸ್ ಹಾಕಿ ಬಂಧಿಸಲಾಗುತ್ತಿದೆ. ಆದರೆ ಎರಡು ದಿನಗಳಲ್ಲಿ ಬಂಧಿತರು ವಾಪಸ್ ಬರುತ್ತಿದ್ದಾರೆ. ಎಲ್ಲೆಲ್ಲಿ ಗಾಂಜಾ ಮಾರಾಟವಾಗುತ್ತದೆ ಎನ್ನುವುದನ್ನು ಸಿಐಡಿ ಯವರು ನಮ್ಮ ಪೊಲೀಸ್ ಇಲಾಖೆಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಸಂಬಂಧಪಟ್ಟ ಪೊಲೀಸ್‌ಠಾಣೆಯವರು ಅದರ ಬಗ್ಗೆ ಇವತ್ತಿನವರೆಗೆ ನಿಖರವಾದ, ನಿರ್ಧಿಷ್ಟವಾದ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

**(227) 16.03.2017 ಎಸ್‌ಕೆ/ಆರ್‌ಎನ್ 12.10**

**ಶ್ರೀ ವಿ. ಸೋಮಣ್ಣ (ಮುಂದು)**

ಸನ್ಮಾನ್ಯ ಸಭಾಪತಿಯವರೇ, ಮೂರನೆಯದಾಗಿ, ಎಲ್ಲೆಲ್ಲಿ ಗಾಂಜಾ ಮಾರುತ್ತಾರೆ ಎನ್ನುವುದನ್ನು 2015 ರಲ್ಲಿ ಸಿಐಡಿಯವರು ಮತ್ತು ಪೊಲೀಸ್ ಇಲಾಖೆಯವರು ಸೈಬರ್‌ಕ್ರೈಂ ವಿಭಾಗದವರಿಗೆ ಮಾಹಿತಿ ಕೊಟ್ಟರೂ ಕೂಡ ಸಂಬಂಧಪಟ್ಟ ಪೊಲೀಸ್‌ಠಾಣೆಗಳು ಇವತ್ತಿನವರೆಗೂ ಕೂಡ ಅದರ ಬಗ್ಗೆ ನಿರ್ದಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದರಿಂದ ಕೆ.ಆರ್.ಪುರ, ಬ್ಯಾಟರಾಯನಪುರ ಮತ್ತು ಬೆಂಗಳೂರಿನಲ್ಲಿ ಸುಮಾರು 15, 16 ಕಡೆಗಳಲ್ಲಿ ಈ ಗಾಂಜಾ ಮಾರಾಟ ಮಾಡುತ್ತಿದ್ದಾರೆ. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಈ ಒಂದು ಅವ್ಯವಸ್ಥೆಯ ಬಗ್ಗೆ ಕಠಿಣವಾಗಿ ಏನಾದರೂ ಕ್ರಮ ತೆಗೆದುಕೊಳ್ಳಬೇಕು ಹಾಗೂ ನೈಜೀರಿಯಾ ಪ್ರಜೆಗಳು ಬಂದು ವಾಸ ಮಾಡುತ್ತಿರುವುದರ ಬಗ್ಗೆ ನಾವು ಸುಮಾರು ಸಲ ಚರ್ಚೆ ಮಾಡಿದ್ದೇವೆ. ಆದರೆ ಯಾವುದಾದರೊಂದು logical end ಗೆ ಈ ಸರ್ಕಾರ

ತಿದ್ದುಪಡಿಯಾಗದ ಪ್ರತಿ/ ಗಣಕಯಂತ್ರ ಅಂತರ್ಜಾಲ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಬಂದಿದೆಯೇ? ಸಾಮಾನ್ಯ ಜನರಿಗೆ ಆಗುವಂತಹ ಅನಾನುಕೂಲಗಳನ್ನು ತಡೆಗಟ್ಟುವುದಕ್ಕೆ ಸರ್ಕಾರಕ್ಕೆ ಅನಾನುಕೂಲತೆಗಳೇನು? ಇವತ್ತು ಒಂದು ಕೆಜಿಗಿಂತಲೂ ಕಡಿಮೆ ಗಾಂಜಾ ಏನಾದರೂ ಇದ್ದರೆ ಅವರಿಗೆ ಗಾಂಜಾ ಮಾರುವುದರ ಬಗ್ಗೆ ಕೇಸ್ ಹಾಕುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಇದೆಯೋ ಅಥವಾ ಇಲ್ಲವೇ?

ಮಾನ್ಯ ಸಭಾಪತಿಯವರೇ, ಗೃಹ ಇಲಾಖೆಯಿಂದ ಸುಮಾರು 850 ನೈಜೀರಿಯ ಪ್ರಜೆಗಳನ್ನು ಗಡಿಪಾರು ಮಾಡಿ ಎಂಬ ಪತ್ರ ಸಂಬಂಧಪಟ್ಟಂತಹ ಇಲಾಖೆಗೆ ತಲುಪಿದೆ. ಆದರೆ ಇಷ್ಟು ವರ್ಷಗಳಲ್ಲಿ ತಾವು ಎಷ್ಟು ಜನರನ್ನು ಗಡಿಪಾರು ಮಾಡಿದ್ದೀರಿ? ಈ ಗಡಿಪಾರು ಮಾಡುವುದರ ಬಗ್ಗೆ ಪೊಲೀಸ್ ಇಲಾಖೆಯವರು ಯಾವರೀತಿ ಕ್ರಮವನ್ನು ತೆಗೆದುಕೊಂಡಿದ್ದಾರೆ? ಇವತ್ತು ಇಲ್ಲಿಯತನಕ ಕೇಸ್ ರಿಜಿಸ್ಟರ್ ಆಗಿ ಅವನು ಬಂಧಕ್ಕೊಳಗಾಗಿ ಹೊರಗಡೆ ಬಂದ ಮೇಲೆ ಆ ಮನೆ ಖಾಲಿ ಮಾಡಿಕೊಂಡು ಇನ್ನೊಂದು ಮನೆಗೆ ಹೋಗಿ ಪುನ: ಅದೇರೀತಿ ದಂಧೆ ಮಾಡುತ್ತಿದ್ದಾನೆ. ಒಂದೇ ಒಂದು ಉದಾಹರಣೆ ಕೊಡುವುದಾದರೆ ಯಶವಂತಪುರದ ಹತ್ತಿರ ಕೆಲವು ತಿಂಗಳ ಹಿಂದೆ ಗಾಂಜಾ ಮಾರಾಟ ಮಾಡಿದವರನ್ನು ಪೊಲೀಸನವರು ಒಬ್ಬ ಹೆಣ್ಣು ಮಗಳನ್ನು arrest ಮಾಡಿದರು. ಆ ಹೆಣ್ಣು ಮಗಳು ಆ ಸಂದರ್ಭದಲ್ಲಿ ಹೇಳಿದಂತಹ ವಿಷಯ ಏನೆಂದರೆ, ನಾನು ಒಂದು ದಿನಕ್ಕೆ 50 ರಿಂದ 60 ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದೇನೆ, ಸುಮಾರು 200 ರಿಂದ 300 ಪ್ಯಾಕೆಟ್‌ಗಳನ್ನು ಮಾರುತ್ತಿದ್ದೇನೆ, ಪ್ರತಿ ಶನಿವಾರ, ಭಾನುವಾರ, ಸೋಮವಾರಗಳಂದು ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದೇನೆಂದು ಒಪ್ಪಿಕೊಂಡಿದ್ದಾಳೆ. ಸುಮಾರು 1056 ನೈಜೀರಿಯ ಜನರು ಅಕ್ರಮವಾಗಿ ವಲಸೆ ಬಂದಿದ್ದಾರೆಂದು ತಾವು ಒಂದು ಕಡೆ ಸ್ಪಷ್ಟೀಕರಣವನ್ನು ಕೊಟ್ಟಿದ್ದೀರಿ. ಇಂತಹ ಸೂಕ್ಷ್ಮವಾದ ವಿಚಾರದ ಬಗ್ಗೆ ಇಲ್ಲಿಯವರೆಗೂ ಕೂಡ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇವತ್ತು ನಾವು ಮಾತನಾಡಿದಂತಹ ಮಾತುಗಳೆ ನಾಳೆ ಮಾಧ್ಯಮಗಳಲ್ಲಿ ಬರುತ್ತದೆ. ಮಾನ್ಯ ಸಭಾಪತಿಯವರೇ, ಈ ಮಾತನ್ನು ನಾನು ನೊಂದು ಹೇಳುತ್ತಿದ್ದೇನೆ. ನಾನು ಸುಮಾರು 49 ವರ್ಷಗಳಿಂದಲೂ ಬೆಂಗಳೂರಿನಲ್ಲಿದ್ದೇನೆ. ಇತ್ತೀಚಿನ ದಿನಗಳಲ್ಲಿ ಇದರ ಬಗ್ಗೆ ಒಂದು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದರೆ ಭವಿಷ್ಯದಲ್ಲಿ ಬೆಂಗಳೂರು ಏನಾಗುತ್ತದೆ? ಸರ್ಕಾರ ಈ ವಿಷಯದ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ಉಪಯೋಗಿಸಕೂಡದು ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಡಾ.ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂತಹ ಮಾನ್ಯ ವಿ. ಸೋಮಣ್ಣನವರು ಕೇಳಿದ ಎಲ್ಲ ಪ್ರಶ್ನೆಗಳಿಗೂ ಈಗಾಗಲೇ ಗೊಂದಲವಿಲ್ಲದೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ. ಅನೇಕ ಸಂದರ್ಭದಲ್ಲಿ ಈ ಮಾದಕ ವಸ್ತುಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನೆಗಳು ಈ ಸದನದಲ್ಲಿ ಮತ್ತು ಕೆಳಗಿನ ಮನೆಯಲ್ಲಿಯೂ ಬಂದಿದೆ. ಪ್ರತಿ ಅಧಿವೇಶನದಲ್ಲಿಯೂ ಈ ವಿಷಯದ ಬಗ್ಗೆ ಪ್ರಶ್ನೆಗಳು ಬರುತ್ತಿವೆ. ನಮ್ಮ ಸರ್ಕಾರ ಬಂದ ಮೇಲೆ ನಾವು ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಕಳೆದ ವರ್ಷದಿಂದ ನಾನು ಅನೇಕ ಸಂದರ್ಭದಲ್ಲಿ ಉತ್ತರಗಳನ್ನು ಕೊಟ್ಟಿದ್ದೇನೆ. ಇದು ಯಾವರೀತಿ ಶಾಲಾ ಕಾಲೇಜುಗಳಲ್ಲಿ ಹಬ್ಬಿಕೊಂಡಿದೆ, ಹೊರದೇಶದಿಂದ ಬಂದಂಥವರು ವಿದ್ಯಾರ್ಥಿಗಳ ಸೋಗಿನಲ್ಲಿ ಬಂದು ಇಲ್ಲಿ ಇರುವಂತಹವರು ಯಾವಯಾವ ರೀತಿಯಲ್ಲಿ ಈ ಕೆಲಸ ಮಾಡುತ್ತಿದ್ದಾರೆಂದರೆ, ಮಾನ್ಯ ಸೋಮಣ್ಣನವರೇ ತಮಗೆ ಆಶ್ಚರ್ಯವಾಗಬಹುದು ಮಾನ್ಯ ಸೋಮಣ್ಣನವರೇ, ಒಂದು ಪ್ರಕರಣವನ್ನು ತಮ್ಮ ಮುಖಾಂತರ ಈ ಸದನದ ಗಮನಕ್ಕೆ ತರಬಯಸುತ್ತೇನೆ. ನೈಜೀರಿಯದ couple ಬಂದು ಜಯನಗರದಲ್ಲಿರುವ ಶಾಲೆಯ ಹತ್ತಿರ ಇರುವ apartment ನಲ್ಲಿ ಒಂದು ಬಾಡಿಗೆ ಮನೆಯನ್ನು ತೆಗೆದುಕೊಳ್ಳುತ್ತಾರೆ. ಆ ನೈಜೀರಿಯ ಪ್ರಜೆಗಳ ದಂಪತಿಗಳಿಗೆ ಎರಡುಚಿಕ್ಕ ಮಕ್ಕಳು ಇರುತ್ತವೆ. ಅವರ ಮನೆಯ ಪಕ್ಕದಲ್ಲಿರುವ ಶಾಲೆಗೆ ಮಕ್ಕಳನ್ನು ಸೇರಿಸುತ್ತಾರೆ. ಆ ಮಕ್ಕಳು ಆ ಶಾಲೆಗೆ ಹೋಗಿ ಅಲ್ಲಿರುವ ಚಿಕ್ಕಚಿಕ್ಕ ಮಕ್ಕಳಿಗೆ ಉಚಿತವಾಗಿ ಚಾಕಲೇಟ್ ಕೊಡುತ್ತಾರೆ. ಅವರು ಅದರಲ್ಲಿ ಮಾದಕ ವಸ್ತುಗಳನ್ನು ಮಿಕ್ಸ್ ಮಾಡಿ, ಅಲ್ಲಿರುವ ಮಕ್ಕಳಿಗೆ ಉಚಿತವಾಗಿ ಆ ಚಾಕಲೇಟ್‌ಗಳನ್ನು ಕೊಡುತ್ತಾರೆ. ಆ ಚಾಕಲೇಟ್‌ನ್ನು ತಿಂದ ಮೇಲೆ, next time ಅವರಿಗೆ ಅದು ಬಹಳ ರುಚಿಯಾಗಿದೆ ಎನಿಸಿ ಮತ್ತೆ ಮತ್ತೆ ಅವರಿಗೆ ಅದು ಬೇಕೆನಿಸುತ್ತದೆ. ಆಗ ಅವರು ಅದನ್ನು ಕೊಳ್ಳಲು ಎಲ್ಲಿ ಹೋಗುವರು? ಹಣಕ್ಕಾಗಿ ತಂದೆ ತಾಯಿಗಳನ್ನು ಪೀಡಿಸುತ್ತಾರೆ. ಆಗ ತಂದೆ ತಾಯಿಗಳು picture ಗೆ ಬರುತ್ತಾರೆ. ಮಕ್ಕಳು ಮಾದಕ ವಸ್ತು ಮಾರಾಟ ಮಾಡುವವರಿಗೆ ಹಣವನ್ನು ಕೊಟ್ಟು ಆ ಚಾಕಲೇಟ್‌ಗಳನ್ನು ತೆಗೆದುಕೊಳ್ಳುತ್ತಾರೆ. ಎಷ್ಟರ ಮಟ್ಟಿಗೆ ಇದು ನಡೆಯುತ್ತಿದೆ ಎಂದು ಹೇಳುವಾಗ ಸರ್ಕಾರ ಇದನ್ನು ಕಣ್ಮುಚ್ಚಿ ನೋಡಿಕೊಂಡು ಕುಳಿತುಕೊಳ್ಳುವುದಿಲ್ಲ. ಮಾನ್ಯ ಸೋಮಣ್ಣನವರೇ, ಇದರ ಜವಾಬ್ದಾರಿ ನಮಗೆ ಮತ್ತು ಸರ್ಕಾರಕ್ಕೆ ಮಾತ್ರವಿದೆ, ನಿಮಗ್ಯಾರಿಗೂ ಜವಾಬ್ದಾರಿ ಇಲ್ಲ ಎನ್ನುವ ಪ್ರಶ್ನೆಯಲ್ಲ. ಇದು ಎಲ್ಲರಿಗೂ ಕೂಡ ಅನ್ವಯಿಸುವಂತಹ ವಿಚಾರವಾಗಿದೆ. ಇವತ್ತು ನಮ್ಮ ಮಕ್ಕಳು ಶಾಲಾ-ಕಾಲೇಜಿಗೆ ಹೋಗುವಂತಹವರು ಈ ಮಾದಕ ವಸ್ತುಗಳ ವ್ಯಸನಿಗಳಾದರೆ, ಅವರ ಇಡೀ ಜೀವನವೇ ಹಾಳಾಗುತ್ತದೆ. ನಾನು ಕೃಷಿ ಕಾಲೇಜಿನಲ್ಲಿ ಓದುತ್ತಿರವಾಗ, ಅದು ಆ

ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಕಾಲದಿಂದಲೂ ಇದೆ. ಆದರೆ ಇವತ್ತು ಇದರ ವ್ಯಾಪ್ತಿ ಹೆಚ್ಚಾಗಿದೆ. ಅಂತರಾಷ್ಟೀಯ ಜಾಲವೇ ಒಂದು ರೀತಿಯಲ್ಲಿ ಇದಕ್ಕೆ ಸೇರಿಕೊಂಡು ಬಿಟ್ಟಿದೆ. ಕೇವಲ ಗಾಂಜಾ ಒಂದೇ ಅಲ್ಲ, ಬೇರೆ ಬೇರೆ ರೀತಿಯ ಮಾದಕ ವಸ್ತುಗಳನ್ನು ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಅಪಾಯಕಾರಿಯಾಗಿದೆ. ಬೆಂಗಳೂರಿನ ಸುತ್ತಮುತ್ತನಲ್ಲಿರತಕ್ಕಂಥವರು Pharmacy ಕಂಪನಿಗಳು ಎಂದು ಹೇಳಿ, ಒಂದು ದೊಡ್ಡ ಬಾಡಿಗೆ ಮನೆಯನ್ನು ತೆಗೆದುಕೊಂಡು, ಅದರಲ್ಲಿ ಈ tablets ಗಳನ್ನು ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಾರೆ ಎನ್ನುವುದನ್ನು ನಾವು ತಿಳಿದುಕೊಂಡಿದ್ದೇವೆ. ತಾವು ಏನು ಹೇಳುತ್ತಿದ್ದೀರಿ, ನೈಜೀರಿಯದ ಪ್ರಜೆಗಳು ಇಲ್ಲಿಗೆ ಬಂದಂತಹವರ ಬಗ್ಗೆ ನಿಮಗೆ ಮಾಹಿತಿಯನ್ನು ಕೊಟ್ಟಿದ್ದೇನೆ. ಇದರಲ್ಲಿ ಈಗಾಗಲೇ ನೈಜೀರಿಯಾ only from Nigeria, ಏಕೋ ಏನೋ ನೈಜೀರಿಯಾದಿಂದ ಬಂದಂತಹ ವಿದ್ಯಾರ್ಥಿಗಳು ಅಥವಾ ವಿದ್ಯಾರ್ಥಿಗಳ ಸೋಗಿನಲ್ಲಿ ಬಂದು ಇಲ್ಲಿ ಸೇರಿಕೊಂಡಂತಹವರ ಮೇಲೆ 23 ಪ್ರಕರಣಗಳನ್ನು ನಾವು ಈಗಾಗಲೇ ದಾಖಲಿಸಿಕೊಂಡಿದ್ದೇವೆ. ಕಳೆದ 2015-16 ಮತ್ತು 2016-2017 ಈ ಎರಡು ವರ್ಷದ statistics ಪ್ರಕಾರದಲ್ಲಿ 31 ಜನ ನೈಜಿರೀಯಾದವರನ್ನು arrest ಮಾಡಿದ್ದೇವೆ. ಮೊನ್ನೆತಾನೇ ತಾವು ಕೇಳಿರಬಹುದು. ಅವನ ಹೆಸರು 'ಹಿಫೀಮಿ ಮಾಡು', 32 ವರ್ಷದವನು, ಪೊಲೀಸ್‌ನವರ ಕೈಗೆ ಸಿಕ್ಕಿ ಬಿಟ್ಟಿದ್ದಾನೆ. ಅವನ ಹತ್ತಿರ ಗಾಂಜಾ ಇದೆ. ಪೊಲೀಸರು ಅವನನ್ನು ಹಿಡಿದುಕೊಳ್ಳುವಾಗ, ಅವನು ಏನು ತೆಗೆದುಕೊಂಡಿದ್ದನೋ ಅಥವಾ ಏನಾಯಿತೋ ಗೊತ್ತಿಲ್ಲ, ಅವನು ಸತ್ತು ಹೋಗಿದ್ದಾನೆ. ಇಲ್ಲಿ ಈಗ ಅವನ identity ಮಾಡುವವರು ಯಾರು? Nobody is coming forward to identify. ನಮಗೂ ಕೂಡ ಈಗ ಅವನ identity establish ಆಗಿಲ್ಲ. ಆ community ಯವರು ನಮ್ಮ ಊರಿನವನು ಎಂದು ಹೇಳುವುದು ಮಾತ್ರ ಬಿಟ್ಟರೆ, ನಮಗೆ ಯಾವುದೇ ರೀತಿಯ ಅವನ ದಾಖಲಾತಿಗಳು ಸಿಗಲಿಲ್ಲ. ಏನಾಗಿದೆ ಎಂದರೆ, ವಿದ್ಯಾರ್ಥಿಗಳು ಎಂದು ಇಲ್ಲಿಗೆ ಬರುತ್ತಾರೆ, ಕಾಲೇಜುಗಳಲ್ಲಿ admissions ಕೊಟ್ಟುಬಿಡುತ್ತಾರೆ. ಯಾವುದೇ ವಿಶ್ವವಿದ್ಯಾಲಯದ permission ಇಲ್ಲ, ಯಾವುದೇ ರೀತಿಯ ಅವರ documentation ಇಲ್ಲ. ಅವನಿಗೆ ಕಾಲೇಜುಗಳಲ್ಲಿ admission ಕೊಡುತ್ತಾರೆ. ಅವನಿಗೆ admission ಕೊಟ್ಟ ಮೇಲೆ, ಅವನು ಪದವಿ ಶಿಕ್ಷಣಕ್ಕೆ ಸೇರಿದ್ದಾನೆಂದು ಇಟ್ಟುಕೊಳ್ಳಿ. ಅವನು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಮೂರುವರ್ಷದ ಪದವಿ ಶಿಕ್ಷಣದ ನಂತರ ತನ್ನ ಸ್ವದೇಶಕ್ಕೆ ಹೋಗಬೇಕು ಅಥವಾ ಫೇಲಾಗಿದ್ದರೆ ಇನ್ನೊಂದು ವರ್ಷವಿರಬಹುದು ಅಥವಾ ಅದೇ Visa extend ಮಾಡಬಹುದು. ಆದರೆ Visa extend ಆಗುವುದೇ ಇಲ್ಲ, ಅವನು ಹಾಗೆಯೇ ಇರುತ್ತಾನೆ. ನಮ್ಮಲ್ಲಿ ಕೇಂದ್ರ ಸರ್ಕಾರದವರು ಅದರ verification ಮಾಡಿಕೊಳ್ಳಬೇಕಾಗುತ್ತದೆ. ನಾವು ಹೊಸದಾಗಿ ಏನು ಮಾಡಿದ್ದೇವೆಂದು ಹೇಳಿದರೆ ಆ ಪೊಲೀಸ್‌ಠಾಣೆಯ ಲಿಮಿಟ್‌ನಲ್ಲಿ ಬರುವಂತಹ ಶಾಲಾ-ಕಾಲೇಜುಗಳವರು ಪೊಲೀಸ್‌ನವರಿಗೆ ಮಾಹಿತಿಕೊಡಬೇಕು. ನಿಮ್ಮಲ್ಲಿ foreign students ಎಷ್ಟು ಜನರಿದ್ದಾರೆ, ಅವರ Visa ಎಷ್ಟಿದೆ ಎನ್ನುವ ಆ ಮಾಹಿತಿಯನ್ನು ಆಯಾಯ limits ನಲ್ಲಿ ಬರುವಂತಹ ಪೊಲೀಸ್ ಸ್ಟೇಷನ್‌ನಲ್ಲಿ ತಿಳಿಸಬೇಕು ಎಂಬುದನ್ನು ಈಗ ಹೊಸದಾಗಿ ನಾವು ಪ್ರಾರಂಭ ಮಾಡಿದ್ದೇವೆ. ಅದರಿಂದ ಏನಾಗುತ್ತದೆ ಎಂದರೆ ಒಂದು ವೇಳೆ ವೀಸಾ ಅವಧಿ ಆಗಿ ಹೋಗಿದ್ದರೆ ಅದಕ್ಕೆ extension ತೆಗೆದುಕೊಳ್ಳಬೇಕು. ಅದಕ್ಕಾಗಿ ಮೂರು ತಿಂಗಳು ಸಮಯ ಕೊಡುತ್ತಾರೆ. ಒಂದು ವೇಳೆ ಅವರು ಆ extension ತೆಗೆದುಕೊಳ್ಳದೇ ಹೋದರೆ ಅವರನ್ನು deport ಮಾಡಬೇಕಾಗುತ್ತದೆ. ಇದು ಕೇಂದ್ರ ಸರ್ಕಾರದ External Affairs Ministry ವ್ಯಾಪ್ತಿಗೆ ಬರುತ್ತದೆ. ನಮ್ಮ ಸ್ವಾಮ್ಯದಲ್ಲಿ ಇಲ್ಲವೇ ಇಲ್ಲ. ಆದರೆ ಈಗ ನಾವು deport ಮಾಡುವಂತಹ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ. ಅವರು ವಿದ್ಯಾರ್ಥಿಗಳಾಗಿ ಬಂದು ವೀಸಾ ಅವಧಿ ಪೂರ್ಣಗೊಂಡ ನಂತರ ಇಲ್ಲಿ ಇರಬಾರದು ಎಂದು ತೀರ್ಮಾನ ಮಾಡಿದ್ದೇವೆ. ಆದರೆ ಅವರು ಇಲ್ಲಿ ಉಳಿದುಕೊಳ್ಳುವುದಕ್ಕೆ ಬಹಳ ಸುಲಭವಾದ ಮಾರ್ಗ ಕಂಡುಕೊಂಡಿದ್ದಾರೆ. ಏನೆಂದರೆ, ಯಾವುದೋ ಒಂದುರೀತಿಯ ಗಲಾಟೆ ಮಾಡಿ, ಪೊಲೀಸ್ ಸ್ಟೇಷನ್‌ಗೆ ಬಂದು ಕೇಸ್ ಹಾಕಿಸಿಕೊಳ್ಳುತ್ತಾರೆ. ಕೇಸ್ ಮುಗಿಯವರೆಗೆ ಅವನು ಹೋಗವಂತಿಲ್ಲ; ನಾವು ಕಳುಹಿಸುವಂತಿಲ್ಲ; ನಾವು deport ಮಾಡುವಂತಿಲ್ಲ. ಅದಕ್ಕೆ ಗೋವಾದಲ್ಲಿ ಹಿಂದೆ ಏನು ಮಾಡಿದ್ದಾರೆ ಎಂದರೆ ಕೇಸ್‌ಗಳನ್ನೆಲ್ಲಾ withdraw ಮಾಡಿ, ಅವರನ್ನು deport ಮಾಡಿ ಎನ್ನುವಂತಹ ಒಂದು ತೀರ್ಮಾನ ಗೋವಾದಲ್ಲಿ ಮಾಡಿದ್ದಾರೆಂಬ ಬಗ್ಗೆ ನಮಗೆ ಮಾಹಿತಿ ಇದೆ. ಆ ಮಾಹಿತಿಯನ್ನು ನಾನು ತರಿಸಿಕೊಳ್ಳುತ್ತೇನೆ. ಅಂತಹ ಏನಾದರೂ ಪ್ರಸಂಗ ಬಂದರೆ ನಾವು ಕೂಡ ಆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಕೂಡ ಈ ಗಾಂಜಾ ಇರಬಹುದು,

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

heroin ಇರಬಹುದು ಅಥವಾ ಮಾದಕ ವಸ್ತುಗಳನ್ನು ನಿಯಂತ್ರಣ ಮಾಡಿ ನಿಲ್ಲಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಯಾವುದೇ ಕಾರಣಕ್ಕೂ ಕೂಡ ಈ ವಿಚಾರದಲ್ಲಿcompromise ಆಗುವುದಿಲ್ಲ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಸಚಿವರು ಹೇಳಿದರು ಗೋವಾದಲ್ಲಿ ಬೀಚ್ ಇದೆ. ನಮ್ಮಲ್ಲಿ ಯಾವುದೇ ಬೀಚ್ ಇಲ್ಲ. ದಯಮಾಡಿ, ನೋಡಿ ಸನ್ಮಾನ್ಯ ಸಭಾಪತಿಯವರೇ, ಎರಡು ತಿಂಗಳ ಹಿಂದೆ 'ಫರೀದಾ ಸಾಹೀನಾ' ಎನ್ನುವಂತಹ ಒಬ್ಬಾಕೆಯನ್ನು ಅರೆಸ್ಟ್ ಮಾಡುತ್ತಾರೆ. ನಾನು ಶಾಲಾ ಕಾಲೇಜುಗಳ ಹತ್ತಿರ ಗಾಂಜಾ ಮಾರುತ್ತಿರುವುದು ಸತ್ಯ ಎಂದು ಆಕೆ ಒಪ್ಪಿಕೊಳ್ಳುತ್ತಾಳೆ. ಆಕೆಯನ್ನು ಏನು ಮಾಡಿದ್ದೀರಿ ಸ್ವಾಮಿ? ಮಾನ್ಯ ಸಚಿವರು ನಮ್ಮಲ್ಲಿ ಸುಮಾರು 850 ಜನ ನೈಜೀರಿಯಾ ಪ್ರಜೆಗಳಿದ್ದಾರೆ,

**(228) 16.03.2017 ಬಿಎಸ್‌ಡಿ/ವಿಕೆ**

**ಶ್ರೀ ವಿ. ಸೋಮಣ್ಣ (ಮುಂದು)**

ಅವರನ್ನು ಗಡಿಪಾರು ಮಾಡಿ ಎಂಬ ಪತ್ರವನ್ನು ಸಂಬಂಧಪಟ್ಟಂತಹ ಇಲಾಖೆ ಕಳಿಸಿದ್ದೇವೆ ಎಂದು ತಿಳಿಸಿದಿರಿ. ಆದರೆ ಇವತ್ತಿನವರೆಗೂ ಗಡಿಪಾರು ಮಾಡುವ ಬಗ್ಗೆ ಕಾಗದವು ಸಂಬಂಧಪಟ್ಟ ಇಲಾಖೆಗೆ ಹೋಗಿದೆಯೇ ಎಂಬುದನ್ನು ಅಧಿಕಾರಿಗಳು ನೋಡಿದ್ದಾರೆಯೇ? ಇಂತಹ ಸೂಕ್ಷ್ಮವಾದ ವಿಚಾರವನ್ನು ಚರ್ಚೆ ಮಾಡುವುದರ ಬದಲು ಪೊಲೀಸ್ ಇಲಾಖೆಯ ಸ್ಥೈರ್ಯವನ್ನೇ ಕುಂದಿಸಿದರೆ ಹೇಗೆ? ಪೊಲೀಸರು ಯಾರನ್ನೋ ಹೊಡೆದ ತಕ್ಷಣವೇ ಸಸ್ಪೆಂಡ್ ಮಾಡಿ ಎಂದರೆ ಅವರು ಹೇಗೆ ಕೆಲಸ ಮಾಡುತ್ತಾರೆ? ಮಾನ್ಯ ಸಭಾಪತಿಯವರೇ, ಅವರು ಬೇಸರ ಮಾಡಿಕೊಳ್ಳುತ್ತಾರೆ ಎಂದು ನಾನು ಹೇಳಲಿಲ್ಲ. ರಾಜಾರೋಷವಾಗಿ ಕೆ.ಆರ್.ಪುರ, ಬ್ಯಾಟರಾಯನಪುರ, ಬೆಂಗಳೂರು ವಿಶ್ವವಿದ್ಯಾಲಯ, ಉಲ್ಲಾಳು ಉಪನಗರ, ಅಂದ್ರಳ್ಳಿ, ಸಿಟಿ ಮಾರ್ಕೆಟ್, ಟ್ಯಾನರಿರಸ್ತೆ, ಚಾಮರಾಜಪೇಟೆ, ಬನಶಂಕರಿ, ಸುಬ್ರಮಣ್ಯಪುರ, ಕುಮಾರಸ್ವಾಮಿ ಲೇಔಟ್, ರಾಜಾಜಿನಗರ, ಮಾಗಡಿರಸ್ತೆ, ಕೆ.ಪಿ. ನಗರ, ಕೆ.ಪಿ, ಅಗ್ರಹಾರ, ಶಾಂತಿನಗರ, ಸುಧಾಮನಗರ, ಗೋರಿಪಾಳ್ಯ, ಅಮೃತಹಳ್ಳಿ, ಕೊಡಿಗೆಹಳ್ಳಿ, ಯಲಹಂಕ, ಟಿ.ಜೆ. ಹಳ್ಳಿ, ಮೈಕೋ ಲೇಔಟ್, ಮಡಿವಾಳ, ಹೆಚ್.ಎಸ್.ಆರ್. ಲೇಔಟ್‌ಗಳಲ್ಲದೇ ಚಿತ್ರಕಲಾ ಪರಿಷತ್ತಿನ ಹತ್ತಿರ ಕೂಡ ಗಾಂಜಾ ಮಾರಾಟ ಮಾಡುವ ಕೆಲಸ ನಡೆಯುತ್ತಿದೆ ಎಂದರೆ, ಇದಕ್ಕಿಂತ ಹೇಯವಾದ ಕೆಲಸ ಮತ್ತೊಂದಿಲ್ಲ. ಸರ್ಕಾರ ಇಷ್ಟೊಂದು ನಿಷ್ಕ್ರಿಯವಾದರೆ ಹೇಗೆ? ಇದನ್ನು ತಡೆಗಟ್ಟುವ ಮನೆ ಯಜಮಾನರು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಯಜಮಾನಿಕೆ ಮಾಡದಿದ್ದರೆ ಇನ್ಯಾರು ಮಾಡುವುದಕ್ಕೆ ಆಗುತ್ತದೆ? ಆದ್ದರಿಂದ ದಯಮಾಡಿ ಮಾನ್ಯ ಸಚಿವರಿಂದ ನಾನು ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ. ನಾಳೆಯಿಂದ ಏನಾಗುತ್ತದೋ ಬಿಡುತ್ತದೋ ಗೊತ್ತಿಲ್ಲ. ಆದರೆ ಗಡಿಪಾರು ಮಾಡಬೇಕಾದ 850 ನೈಜೀರಿಯಾದ ಪ್ರಜೆಗಳನ್ನು ತಕ್ಷಣವೇ ಗಡಿಪಾರು ಮಾಡಲು ಆಗುತ್ತದೋ ಇಲ್ಲವೋ? ಎರಡನೆಯದಾಗಿ ಪೊಲೀಸರಿಗೆ ಆತ್ಮಸ್ಥೈರ್ಯ ತುಂಬದಿದ್ದರೆ ಇಂತಹ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಒಂದು ಕೆ.ಜಿ.ಗಿಂತ ಕಡಿಮೆ ಗಾಂಜಾ ಇದ್ದಾಗ ಕೇಸ್ ಹಾಕುವುದಕ್ಕೆ ಬರುವುದಿಲ್ಲ ಎಂದು ನುಣುಚಿಕೊಳ್ಳುವುದು ನಡೆಯುತ್ತಿದೆ. ಅವರೇ ಡಿವೈಡ್ ಮಾಡುತ್ತಾರೆ. ನೂರು-ಇನ್ನೂರು ಗ್ರಾಮ್‌ಗಳ ಸಣ್ಣ ಸಣ್ಣ ಪ್ಯಾಕೇಟ್‌ಗಳನ್ನು ಮಾಡಿ ಮಾರುತ್ತಾರೆ. ಇಂತಹದ್ದಕ್ಕೆ ಕಠಿಣ ಕ್ರಮ ತೆಗೆದುಕೊಳ್ಳಲು ಸರ್ಕಾರವು ಬದ್ಧವಾಗಿದೆಯೋ ಇಲ್ಲವೋ ಎಂಬುದನ್ನು ತಿಳಿಸಬೇಕು.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವಯಾವ ಠಾಣೆಗಳ ವ್ಯಾಪ್ತಿಯಲ್ಲಿ ಆಗುತ್ತಿದೆ ಎಂದು ಒಂದು ಪಟ್ಟಿಯನ್ನು ಓದಿದರು, ಅದೇರೀತಿ ನಾನು ಸಹ ಒಂದು ಪಟ್ಟಿಯನ್ನು ಓದುತ್ತೇನೆ. ಬೆಂಗಳೂರಿನ ಹೆಚ್.ಎಸ್.ಆರ್ ಲೇಔಟ್, ಕೆ.ಆರ್.ಪುರಂ, ಕೊತ್ತನೂರು, ಮೈಕೋ ಲೇಔಟ್, ಪೀಣ್ಯ, ಜೆ.ಜೆ. ನಗರ, ಜಯನಗರ, ಕೆ.ಜೆ. ನಗರ, ಕಾಡುಗೋಡಿ, ಕೆಂಗೇರಿ, ಮಡಿವಾಳ, ಪುಲಿಕೇಶಿನಗರ ಠಾಣೆಗಳಲ್ಲಿ ಹೆಸರಿನ ಸಮೇತ ಕೇಸ್‌ಗಳನ್ನು ಬುಕ್ ಮಾಡಿದ್ದಾರೆ. ನಾನು ಮಾಹಿತಿಯನ್ನು ಕೊಟ್ಟಿದ್ದೇನೆ. ನಾವು ಇಡೀ ರಾಜ್ಯದಲ್ಲಿ ಸುಮಾರು 48 ಪೊಲೀಸ್ ಠಾಣೆಗಳನ್ನು ಗುರುತು ಮಾಡಿ, sensitize ಮಾಡಿದ್ದೇವೆ. ಸರ್ಕಾರ ಯಾವುದೇ ಕಾರಣಕ್ಕೂ compromise ಆಗುವುದಿಲ್ಲ. ಈ ವಿಷಯವು ನನಗೆ ಅಥವಾ ಮಾನ್ಯ ಸದಸ್ಯರಿಗೆ ಮಾತ್ರ ಸಂಬಂಧಪಟ್ಟಿಲ್ಲ. ಇಡೀ ರಾಜ್ಯದಲ್ಲಿ ಇಂತಹ ಮಾದಕ ವಸ್ತುಗಳನ್ನು ಮಾರಾಟ ಮಾಡುವವರು ಅಥವಾ ಉಪಯೋಗ ಮಾಡುವವರು ಇರಬಹುದು, ಮಾದಕ ವಸ್ತು ಎಷ್ಟೇ ಪ್ರಮಾಣದಲ್ಲಿ ಇರಲಿ, ನಿಯಮದಲ್ಲಿ ಒಂದು ಕೆ.ಜಿ.ಗೆ ಕಡಿಮೆ ಇದ್ದರೆ ಕೇಸ್ ತೆಗೆದುಕೊಳ್ಳುವಂತಿಲ್ಲ ಎಂದು ಇದೆ. ಆದರೆ ಅದನ್ನು ತಿದ್ದುಪಡಿ ಮಾಡುವ ಪ್ರಯತ್ನ ಮಾಡಿ, ಯಾವುದೇ ಕಾರಣಕ್ಕೂ ಇಂತಹದ್ದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಲು ಬಯಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-**ಇದು ಜನರಲ್ ಚರ್ಚೆಯಾಗುತ್ತದೆ, ದಯಮಾಡಿ ಬೇಡ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ,

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ ಯಾರಿಗೂ ಅವಕಾಶ ಕೊಟ್ಟಿಲ್ಲ, ಬೇಡ, ತಾವು ನೋಟೀಸ್ ಕೊಡಿ, ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ, ತಾವು ಗಮನ ಸೆಳೆಯುವ ಸೂಚನೆಯಲ್ಲಿ ಕೊಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಒಂದು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ ಬೇಡ, 16 ನಿಮಿಷ ಆಗಿದೆ. ಮಾನ್ಯ ವಿಜಯಸಿಂಗ್ ರವರು ಪ್ರಶ್ನೆ ಕೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಇದರಲ್ಲಿ ಒಬ್ಬರು ಮಾತ್ರ ಕಸ್ಟಡಿಯಲ್ಲಿದ್ದು, ಉಳಿದವರೆಲ್ಲರೂ ಹೊರಗಡೆ ಇದ್ದಾರೆ. ಆದ್ದರಿಂದ ಗಾಂಜಾ ಇನ್ನಿತರ ಅಪರಾಧ ಮಾಡಿರುವವರ ಮೇಲೆ ಗೂಂಡಾ ಕಾಯ್ದೆ ತರುವುದಕ್ಕೆ ಸಮಸ್ಯೆ ಏನಿದೆ ಎಂಬುದನ್ನು ಹೇಳಬೇಕು.

**ಸಭಾಪತಿಯವರು:–**ಆಯಿತು, ಹೇಳುತ್ತಾರೆ. ಮಾನ್ಯ ವಿಜಯಸಿಂಗ್‌ರವರು ಪ್ರಶ್ನೆ ಕೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಜನರ ಹಿತದೃಷ್ಟಿಯಿಂದ ಕೇಳಿದ್ದು, ಉತ್ತರ ಹೇಳಲಿಲ್ಲ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ ಕೇಳಿದರೆ ಹೇಗೆ? You give me a notice. ಗಮನ ಸೆಳೆಯುವ ಸೂಚನೆಯಲ್ಲಿ ಅವಕಾಶ ಕೊಡುತ್ತೇನೆ. I promise you. ಆದರೆ ಪ್ರಶ್ನೋತ್ತರ ಅವಧಿಯಲ್ಲಿ ಬೇಡ.

**ಶ್ರೀ ವಿ.ಎಸ್. ಉಗ್ರಪ್ಪ:–** ನಗರದ ಜನತೆಯ ಹಿತದೃಷ್ಟಿಯಿಂದ ಕೇಳುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಶ್ರೀಯುತ ವಿಜಯಸಿಂಗ್‌ರವರು ಪ್ರಶ್ನೆ ಕೇಳಿ.

"ತಿದ್ದುಪಡಿಯಾಗದ ಪ್ರತಿ/ ಗಟಣಿಜಿಜಜ ಅಥವಾ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 533**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ವಿಜಯಸಿಂಗ್:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಈ ಕಾಮಗಾರಿಗೆ 2010ರಲ್ಲಿ ರೂ.31 ಕೋಟಿ ಮಂಜೂರಾಗಿದ್ದು, ಇವತ್ತಿನವರೆಗೂ ರೂ.21 ಕೋಟಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಶೇಕಡ 50 ರಷ್ಟು ಕೆಲಸವಾಗಿದ್ದು, ಈ ಕೆಲಸವನ್ನು ಬೇಗ ಮುಗಿಸಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇದಲ್ಲದೇ ಕಳಪೆ ಕಾಮಗಾರಿ ನಡೆದಿದ್ದು, ಇದರ ಬಗ್ಗೆ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಈಶ್ವರ್ ಬಿ. ಖಂಡ್ರೆ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು) (ನಗರಾಭಿವೃದ್ಧಿ ಮತ್ತು ಹಜ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಔರಾದ್ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆ ಇದ್ದು, ಈ ಯೋಜನೆ 2016ರಲ್ಲಿಯೇ ಮುಗಿಸಿ, ಔರಾದ್ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ. ಔರಾದ್ ಪಟ್ಟಣದ ಜೊತೆಯಲ್ಲಿ ಮಾರ್ಗ ಮಧ್ಯದಲ್ಲಿ ಬರುವ ಆರು ಗ್ರಾಮಗಳಾದ ಹಾಲಹಳ್ಳಿ (ಬಾ), ಠಾಣಾಕುಶನೂರ, ಹೆಡಗಾಪೂರ, ಚೌಧರಿ ಬೆಳಕುಣಿ, ಮಹಾಡೋಣಗಾಂವ್ ಹಾಗೂ ಮುಂಗನಾಳಗಳಿಗೆ ಪಂಚಾಯತ್‌ರಾಜ್ ಇಲಾಖೆಯಿಂದ ಕುಡಿಯುವ ನೀರಿನ ಸರಬರಾಜು ಮಾಡಬೇಕೆಂದು ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತಿದೆ. ಈ ಯೋಜನೆಯನ್ನು ಪಂಚಾಯತ್‌ರಾಜ್ ಇಲಾಖೆ ಅನುಷ್ಠಾನಗೊಳಿಸಬೇಕಾಗಿದ್ದು, ವಿಸ್ತೃತ ಯೋಜನೆಯನ್ನು ತಯಾರು ಮಾಡಿ ಟೆಂಡರ್ ಕರೆಯುತ್ತಿದ್ದು, ಶೀಘ್ರದಲ್ಲಿ ಇದನ್ನು ಜಾರಿ ಮಾಡುತ್ತೇವೆಂದು ಆಶ್ವಾಸನೆ ಕೊಡಲು ಬಯಸುತ್ತೇನೆ.

ಇದರ ಜೊತೆಗೆ ಮಾನ್ಯ ಸದಸ್ಯರು ಹೇಳಿದಂತೆ ಔರಾದ್ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯಲ್ಲಿ ಕಳಪೆ ಕಾಮಗಾರಿ ನಡೆದಿರುವ ಬಗ್ಗೆ ಗಮನಕ್ಕೆ ತಂದಿದ್ದು, ಅದರ ಬಗ್ಗೆ ಪ್ರತ್ಯೇಕ ತಂಡವನ್ನು ಕಳುಹಿಸಿ, ತನಿಖೆ ಮಾಡಿಸುತ್ತೇನೆ. ಒಂದು ವೇಳೆ ಕಳಪೆ ಕಾಮಗಾರಿ ನಡೆದಿದೆ ಎಂದು ವರದಿ ಬಂದರೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಮೇಲೆ ತಕ್ಷಣವೇ ಕ್ರಮ ಜರುಗಿಸಿ, ಸರಿಪಡಿಸುವ ವ್ಯವಸ್ಥೆ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 586**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಮೊದಲನೆಯದಾಗಿ ಪ್ರಿಯದರ್ಶಿನಿ ಯೋಜನೆಯನ್ನು ಸಹಕಾರ ಇಲಾಖೆಯಲ್ಲಿ ಹೊಸದಾಗಿ ಪರಿಚಯ ಮಾಡಿದ ದಿವಂಗತ ಮಹದೇವ್ ಪ್ರಸಾದ್‌ರವರಿಗೆ ಅಭಿನಂದಿಸುತ್ತೇನೆ. ಇದು ಬಹಳ ಒಳ್ಳೆಯ ಯೋಜನೆಯಾಗಿದ್ದು, ಇದರಲ್ಲಿ ಹೆಚ್ಚೆಚ್ಚು ಹೆಣ್ಣುಮಕ್ಕಳನ್ನು ತೊಡಗಿಸಿಕೊಂಡರೆ ಸಹಕಾರ ಕ್ಷೇತ್ರ ಕೂಡ ಚೆನ್ನಾಗಿ ನಡೆಯುತ್ತದೆ. ಈಗ ಕೇವಲ 2.53 ಲಕ್ಷ ಹೆಣ್ಣು ಮಕ್ಕಳು ನೋಂದಣಿಯಾಗಿ. ಅದಕ್ಕೆ ರೂ.1152.96 ಲಕ್ಷಗಳನ್ನು ಇಟ್ಟಿದ್ದಾರೆ. ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದು, ಪ್ರಿಯದರ್ಶಿನಿ ಯೋಜನೆ ಹೆಚ್ಚು ಪ್ರಚಾರವಾಗಿಲ್ಲ. ಇದು ರಾಜ್ಯದಾದ್ಯಂತ ಹೆಣ್ಣು ಮಕ್ಕಳ ಪತ್ತಿನ ಸಹಕಾರ ಸಂಘ ಆಗಬೇಕು. ಏಕೆಂದರೆ ಅವರು ಹೆಚ್ಚು ಹಣವನ್ನು ಉಳಿತಾಯ ಮಾಡಿ ಮರುಪಾವತಿಯನ್ನು ಚೆನ್ನಾಗಿ ಮಾಡುತ್ತಾರೆ. ಸ್ತ್ರೀ ಶಕ್ತಿ ಸಂಘಟನೆಗಳಲ್ಲಿ ತಾವೆಲ್ಲರೂ ನೋಡಿದ್ದೀರಿ. ನಾವು ಕೂಡ ಚಿಕ್ಕಮಗಳೂರಿನಲ್ಲಿ ಕಾಫಿ ಮಹಿಳೆಯರ ಪತ್ತಿನ ಸಹಕಾರ ಸಂಘ ಮತ್ತು ಮೂಡಿಗೆರೆಯಲ್ಲಿ ದಲಿತ ಮಹಿಳೆಯರ ಚೈತನ್ಯ ಪತ್ತಿನ ಸಹಕಾರ ಸಂಘ ಎಂದು ಅನುದಾನವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಎಲ್ಲಾ ಜಿಲ್ಲೆಗಳಲ್ಲಿ ಮಹಿಳೆಯರಿಂದ ಈ ಯೋಜನೆ ಪ್ರಾರಂಭವಾಗಿರುವುದು ಬಹಳ ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು ಮಹಿಳಾಪೂರಕವಾದ ಬಜೆಟ್ ಅನ್ನು ಮಂಡಿಸಿರುವುದರಿಂದ ನಾನು ಅವರನ್ನು ಅಭಿನಂದಿಸುತ್ತೇನೆ. ಬಡ್ಡಿರಹಿತ ಸಾಲ ಕೂಡಕೊಟ್ಟಿದ್ದು, ಇದಕ್ಕಾಗಿ ವಿಶೇಷವಾಗಿ ವಂದಿಸುತ್ತೇನೆ. ಈ ರೀತಿ ಹೆಚ್ಚೆಚ್ಚು ಸಂಘಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಈ ಕಾರ್ಯಕ್ರಮವನ್ನು ನಾವೇ ಮಾಡಿದ್ದು, ಮಹಿಳೆಯರ ಪ್ರಾತಿನಿಧ್ಯ ಸಹಕಾರ ಸಂಘಗಳಲ್ಲಿ ಇರಬೇಕು. ಮಹಿಳೆಯರ ಸಹಕಾರ ಸಂಘಗಳು ರಚನೆಯಾಗಬೇಕೆಂಬ ಉದ್ದೇಶದಿಂದಲೇ 2014-15ರಲ್ಲಿ ಮಾಡಿದ್ದು, ಇಲ್ಲಿಯವರೆಗೆ ಸುಮಾರು 2,53,922 ಲಕ್ಷ ಮಹಿಳೆಯರು ಸದಸ್ಯರಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**(229) 16.03.2017 ಟಿ.ಸಿ.ಹೆಚ್/ವಿ.ಕೆ,12.30**

**ಶ್ರೀ ಸಿದ್ದರಾಮಯ್ಯ(ಮುಂದು):-**

ಈ 2017-18ನೇ ಸಾಲಿನಲ್ಲಿಯೂ ಸಹ ಸಂಘಗಳಲ್ಲಿ ಸದಸ್ಯರಾಗುತ್ತಿದ್ದು, ಸುಮಾರು 66 ಸಾವಿರ ಸಂಘಗಳನ್ನು ಮಾಡಬೇಕೆಂದು, ನಾವು ಅದಕ್ಕೂ ಸಹ ದುಡ್ಡನ್ನು ಮೀಸಲಿಟ್ಟಿದ್ದೇವೆ. ಮಹಿಳೆಯರು, ಪರಿಶಿಷ್ಟ ಜಾತಿಯವರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಸದಸ್ಯರು ಆಗಬೇಕು. ಇವರು ಬಹಳ ಕಡಿಮೆ ಸದಸ್ಯರಿದ್ದಾರೆ. ಆದರೆ ಬೇರೆಯವರು ಸದಸ್ಯರು ಆಗಬಾರದೆಂಬುದು ಅಲ್ಲ. ಆದರೆ ಎಲ್ಲರಿಗೂ ಪ್ರಾತಿನಿಧ್ಯ ಇರಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಈ ಪ್ರಿಯದರ್ಶಿನಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಇಲ್ಲಿಯವರೆಗೆ ಸುಮಾರು ಎರಡು ಲಕ್ಷ ಐವತ್ತನಾಲ್ಕು ಸಾವಿರ ಮಹಿಳೆಯರನ್ನು ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲಾಗಿದೆ. ಇದಕ್ಕೆ ನಾವು ಮೀಸಲಿಟ್ಟಿದ್ದಂತಹ ಹಣ ಸುಮಾರು 11.52 ಕೋಟಿ ರೂಪಾಯಿಗಳು, ಅಷ್ಟನ್ನೂ ಖರ್ಚು ಮಾಡಿದ್ದೇವೆ. ಮುಂದಿನ ವರ್ಷಕ್ಕೂ ಸಹ 3.33 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಇದು ಹೀಗೆಯೇ ಮುಂದುವರೆಯುತ್ತದೆ. ಆದ್ದರಿಂದ ಸಹಕಾರ ಸಂಘಗಳ ಸದಸ್ಯರಾಗಬೇಕು. ಸಂಘಗಳ ರಚನೆ ಆಗಬೇಕು ಎಂದು ಶ್ರೀಮತಿ ಮೋಟಮ್ಮರವರು ಏನು ತಮ್ಮ ಕಳಕಳಿಯನ್ನು ಇಟ್ಟುಕೊಂಡು ಹೇಳಿದ್ದಾರೆ, ಅದಕ್ಕೆ ನಮ್ಮ ಸರ್ಕಾರದ ಬದ್ಧತೆ ಇದೆ. ಅದನ್ನು ಮಾಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ॥ಜಿ.ಪರಮೇಶ್ವರ್(ಸಭಾನಾಯಕರು):-**ಮಾನ್ಯ ಸಭಾಪತಿಯವರೆ, ದಿನಾಂಕ: 16ನೇ ಮಾರ್ಚ್ 2017 ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 103 ಪ್ರಶ್ನೆಗಳ ಪೈಕಿ 46 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

ಅ) **ವಿಷಯ:-** ಅರಣ್ಯ ಪ್ರದೇಶದಲ್ಲಿ ಕಾಡಿನ ಬೆಂಕಿ ಹತ್ತಿಕೊಂಡಿರುವ ಕುರಿತು.

****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವಿಪರೀತ ಬರಗಾಲ ಮತ್ತು ಬಿಸಿಲಿನ ಝಳವೂ ಸೇರಿದಂತೆ, ಕರ್ನಾಟಕದ ಬಹುತೇಕ ಕಡೆಗಳಲ್ಲಿ ಕಾಡ್ಗಿಚ್ಚಿನ ಅನಾಹುತದಿಂದ, ರಾಜ್ಯಾದ್ಯಂತ ಆತಂಕಕಾರಿ ಬೆಳವಣಿಗೆ ಸೃಷ್ಟಿಯಾಗಿದೆ. ಅರಣ್ಯ ಪ್ರದೇಶವೆಂದು ಪರಿಗಣಿಸಲಾದ ರಾಜ್ಯದ ಬಂಡಿಪುರ, ಕಪ್ಪತಗುಡ್ಡ, ನಾಗರಹೊಳೆ, ಪಶ್ಚಿಮ ಘಟ್ಟದ ಕೆಲವು ಭಾಗಗಳು ಸಕಲೇಶಪುರದ ಶುಂಠಿಕೊಪ್ಪ ಮುಂತಾದ ಪ್ರದೇಶದಲ್ಲಿ ಕಾಡ್ಗಿಚ್ಚಿನ ಹಾವಳಿಯಿಂದ ಇಡೀ ಅರಣ್ಯ ಪ್ರದೇಶವೇ ಬೆಂಕಿಗಾಹುತಿಯಾಗುತ್ತಿದೆ. ಬಂಡಿಪುರದಲ್ಲಿ 1200 ಹೆಕ್ಟೇರ್ ಸಕಲೇಶಪುರದ ಕೆಲವು ಭಾಗ ಮತ್ತು ಕಪ್ಪತಗುಡ್ಡದ ಕೆಲವು ಭಾಗದಲ್ಲಿ 400 ಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶ, ಶುಂಟಿಕೊಪ್ಪದಲ್ಲಿ 700 ಹೆಕ್ಟೇರ್‌ಗೂ ಹೆಚ್ಚು ಪ್ರದೇಶ ಕಾಡ್ಗಿಚ್ಚಿನ ಹಾವಳಿಗೆ ತುತ್ತಾಗಿದೆ. ನಾಗರಹೊಳೆ ಪ್ರದೇಶದಲ್ಲಿ ಕಾಡ್ಗಿಚ್ಚಿಗೆ 500ಕ್ಕಿಂತ ಹೆಚ್ಚು ಹೆಕ್ಟೇರ್ ಪ್ರದೇಶ ಬೆಂಕಿಗಾಹುತಿಯಾಗಿದೆ.

ಇಂತಹ ಕಾಡ್ಗಿಚ್ಚಿನಿಂದ ಅಮೂಲ್ಯ ಮರಮುಟ್ಟುಗಳು ಶತಮಾನದಿಂದ ಬೆಳೆದು ನಿಂತಕಾಡು ಪ್ರದೇಶದ ಬೆಲೆಬಾಳುವ ಮರಗಳು, ಅಮೂಲ್ಯ ಔಷಧಿ ಸಸ್ಯಗಳು ಮತ್ತು ಜೀವಸಂಕುಲಗಳು ನಾಶವಾಗುತ್ತಿದ್ದರೂ ಅರಣ್ಯ ಇಲಾಖೆ ಕೈಚೆಲ್ಲಿ ಕುಳಿತ ಸುದ್ದಿ ಪ್ರಕಟವಾಗುತ್ತಿದೆ. ತಜ್ಞರ ಅನುಭವದ ಪ್ರಕಾರ, ಈಗ ನಶಿಸಿಹೋದ ಕಾಡಿನ ಮೌಲ್ಯ, ಗಿಡಬಳ್ಳಿ ಮರಗಳನ್ನು ಮತ್ತೆ ಸೃಷ್ಟಿಸಬೇಕಾದರೆ ಎಷ್ಟೇ ಪ್ರಯತ್ನ ಪಟ್ಟರು ಕನಿಷ್ಠ ಮುನ್ನೂರು ವರ್ಷಕಾಲ ಪುನರ್ ನಿರ್ಮಾಣ ಸಾಧ್ಯವಿಲ್ಲವೆಂದು ಹೇಳುತ್ತದೆ. ಈ ಪರಿ ಅರಣ್ಯ ನಾಶ, ವನ್ಯಜೀವಿಗಳಿಗೆ ತೊಂದರೆಯಾಗುವುದು, ಪರಿಸರ ಕಾಪಾಡುವ ದೃಷ್ಟಿಯಿಂದ ಯಾವುದೇ ಕಾರಣಕ್ಕೂ ದುರಂತ ಸಹಿಸಲು ಸಾಧ್ಯವಿಲ್ಲ. ಅರಣ್ಯ ಸಂರಕ್ಷಣೆಯ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಬೇಕಾದ ಹಿರಿಯ ಅಧಿಕಾರಿಗಳು, ರಾಜಧಾನಿಯ ಕಛೇರಿಯಲ್ಲಿ ಕುಳಿತು ಆದೇಶ ನೀಡುತ್ತಾ, ಕನಿಷ್ಠ ಹೊತ್ತಿ ಉರಿದ ಕಾಡಿನ ಹತ್ತಿರಕ್ಕೂ ಸುಳಿದಿಲ್ಲ ಎಂದು ಸುದ್ದಿ ಮಾಧ್ಯಮಗಳು ತಿಳಿಸುತ್ತಿವೆ. ಸ್ವತಃಅರಣ್ಯ ಮಂತ್ರಿಗಳು, ಮುಖ್ಯಮಂತ್ರಿಗಳು ಈ ಪರಿಸ್ಥಿತಿಯನ್ನು ನಿಭಾಯಿಸಲು ಸಾಧ್ಯವಿಲ್ಲದ ಪರಿಸ್ಥಿತಿಯನ್ನು ತಲುಪಿದ್ದಾರೆ. ಇಲಾಖೆಯಂತು ಕಾಡ್ಗಿಚ್ಚನ್ನು ನಿಯಂತ್ರಿಸುವ ಕಡೆ ಗಮನ ಕೊಡುವಷ್ಟು ಶಕ್ತಿಯನ್ನು ಹೊಂದಿಲ್ಲ ಎಂಬ ವರದಿ ಭಯಾನಕ ರೂಪ ತಾಳುತ್ತಿದೆ. ಕೆಳಮಟ್ಟದ ಅಧಿಕಾರಿಗಳು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಕಾಡ್ಗಿಚ್ಚನ್ನು ನಿಯಂತ್ರಿಸಲು ಅವಶ್ಯ ಮೂಲಭೂತ ಸೌಕರ್ಯಗಳಿಲ್ಲದೆ ಬೆಂಕಿಯನ್ನು ನಂದಿಸುವ ಬರದಲ್ಲಿ ಕಾಡ್ಗಿಚ್ಚಿಗೆ ಆಹುತಿಯಾದ ಸುದ್ದಿಗಳು ಬಂದಿವೆ. ಕಾಡುಗಳಲ್ಲಿ ಒಣಗಿದ ಗಿಡಬಳ್ಳಿಗಳು ಮತ್ತು ಉರುಳಿದ ಮರಗಳನ್ನು ವಿಲೇವಾರಿ ಮಾಡದಿರುವುದರಿಂದ ಕಾಡಿನ ಬೆಂಕಿಗೆ ಮತ್ತಷ್ಟು ಅವಕಾಶಗಳಾಗಿವೆ. ಗಸ್ತು ತಿರುಗಲು ಇಲಾಖೆಯಲ್ಲಿ ಇರುವ ಸಿಬ್ಬಂದಿಗಳ ಕೊರತೆ, ವಾಹನಗಳ ಸಮಸ್ಯೆ ಕಿರಿಯ ಅಧಿಕಾರಿಗಳು ಸಂಕಷ್ಟದಲ್ಲಿದ್ದಾರೆ.

ರಾಜ್ಯ ಸರಕಾರ ಮಂಡಿಸಿದ ಬಜೆಟ್‌ನಲ್ಲಿ, ಕಾಡ್ಗಿಚ್ಚಿನ ನಿಯಂತ್ರಣಕ್ಕೆ ಯೋಜನೆ ರೂಪಿಸಿದ ಸುದ್ದಿ ಕಂಡು ಬರುತ್ತಿಲ್ಲ. ಈ ಮಧ್ಯೆಕಾಡ್ಗಿಚ್ಚಿನ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವ ಬರದಲ್ಲಿ ಸಿ.ಐ.ಡಿ ತನಿಖೆಗೆ ಸರಕಾರ ಆದೇಶ ನೀಡಿದ ಸುದ್ದಿ ಇದೆ. ಬಂಡಿಪುರ ಹುಲಿ ಯೋಜನೆ ವ್ಯಾಪ್ತಿಗೆ ಒಳಪಟ್ಟ ಚಾಮರಾಜನಗರ ಜಿಲ್ಲೆಯ ಕಲ್ಕೆರಿ ಅರಣ್ಯ ಪ್ರದೇಶದಲ್ಲಿ ಕಾಡ್ಗಿಚ್ಚನ್ನು ನಂದಿಸುವ ಪ್ರಯತ್ನದಲ್ಲಿ, ಅರಣ್ಯರಕ್ಷಕ ಮುರುಗೇಶರವರು, ಕಾಡು ರಕ್ಷಿಸಲು ಹೋಗಿ ತಮ್ಮ ಪ್ರಾಣವನ್ನೇ ತೆತ್ತಿದ್ದರು. ನಾನು ಸರಕಾರಕ್ಕೆ ಆಗ್ರಹಪಡಿಸುವುದು, ಮುರುಗೇಶ 26 ವರ್ಷದ ಯುವಕನಾಗಿದ್ದು, ಪರಹಾರದ ಜೊತೆಗೆ ಆತನ ಕುಟುಂಬಕ್ಕೆ ಅನುಕಂಪದ ಆಧಾರದಲ್ಲಿ ಶೀಘ್ರವೇ ಉದ್ಯೋಗ ನೀಡಬೇಕೆಂದು ಕೋರುತ್ತೇನೆ ಮತ್ತು ಕಾಡ್ಗಿಚ್ಚಿನ ನಿಯಂತ್ರಣದ ವಿಚಾರದಲ್ಲಿ ಸರಕಾರ ಏನೇನು ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಬೇಕು ಮತ್ತು ಮುಂಬರುತ್ತಿರುವ ವಿಪರೀತ ಬೇಸಿಗೆಯಲ್ಲಿ ಮತ್ತೆ ಹೆಚ್ಚಬಹುದಾದ ಕಾಡ್ಗಿಚ್ಚಿನ ನಿಯಂತ್ರಣಕ್ಕೆ ಸರಕಾರ ವ್ಯಾಪಕವಾದ ಯೋಜನೆಗಳನ್ನು ರೂಪಿಸಲು ಈ ಮೂಲಕ ಅರಣ್ಯ ಮಂತ್ರಿಗಳು ಹಾಗೂ ಮತ್ತು ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

**ಡಾ|| ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಅರಣ್ಯ ಸಚಿವರಿಂದ ವಿವರವಾದ ಉತ್ತರವನ್ನು ಒದಗಿಸಿಕೊಡಲಾಗುವುದು.

**ಆ) ವಿಷಯ:-** ಹೆಗ್ಗಡದೇವನಕೋಟೆ ಪಟ್ಟಣದಲ್ಲಿ ಹರಿಯುವ ತಾರಕಾ ನದಿಯು ನೀರು ಕಲುಷಿತಗೊಂಡಿರುವ ಬಗ್ಗೆ.

****

**ಶ್ರೀ ಸಂದೇಶ ನಾಗರಾಜು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಕೆಳಕಂಡ ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ದಯಮಾಡಿ ಅನುಮತಿಯನ್ನು ನೀಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಹೆಗ್ಗಡದೇವನಕೋಟೆ ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ಹೆಗ್ಗಡದೇವನಕೋಟೆ ಪಟ್ಟಣದ ಮಧ್ಯದಲ್ಲಿ ಹರಿಯುವ ತಾರಕಾ ನದಿಯ ನೀರು ಕಲುಷಿತಗೊಂಡು, ಗಬ್ಬೆದ್ದು ನಾರುತ್ತಿದ್ದು ವಿಷಪೂರಿತವಾಗಿದೆ. ಇದರಿಂದ ಈ ನೀರನ್ನು ಸೇವಿಸುವ ಜನ ಜಾನುವಾರುಗಳಿಗೆ ಅಪಾಯ ಉಂಟಾಗಲಿದೆ. ಈ ಕಲುಷಿತ ನೀರಿನಲ್ಲಿ ಸೊಳ್ಳೆಗಳಿಂದ ಸಂತತಿ ಜಾಸ್ತಿ ಆಗುತ್ತಿದ್ದು, ಪಟ್ಟಣದ ಜನತೆಗೆ ವಿವಿಧ ರೀತಿಯ ಅಪಾಯಕಾರಿ ಖಾಯಿಲೆಗಳು ಹರಡುವ ಸಂಭವ ಇದೆ. ಈಗಾಗಲೇ ಸೊಳ್ಳೆಗಳಿಂದ ಎಚ್1 ಎನ್1 ಖಾಯಿಲೆ ಹರಡಿದೆ. ಬೇಸಿಗೆಯಲ್ಲಿ ಇದು ಇನ್ನೂ ಜಾಸ್ತಿಯಾಗಬಹುದಾಗಿದ್ದು, ಸಾಂಕ್ರಾಮಿಕ ಖಾಯಿಲೆಗಳು ಹರಡುವ ಸಂಭವಇದೆ. ಈ ಬಗ್ಗೆ ಕೂಡಲೇ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು.

ಪಟ್ಟಣದ ಕಸಾಯಿ ಖಾನೆಯಿಂದ ಬರುವ ಮಾಂಸದ ತ್ಯಾಜ್ಯವನ್ನು ತಂದು ಪಟ್ಟಣದಲ್ಲಿ ಹರಿಯುವ ತಾರಕಾ ನದಿಗೆ ಸುರಿಯಲಾಗುತ್ತಿದೆ. ಮಿನಿ ವಿಧಾನಸೌಧದ ಮತ್ತು ತಾಲ್ಲೂಕು ಆಸ್ಪತ್ರೆ ತ್ಯಾಜ್ಯವನ್ನೂ ಇಲ್ಲಿಗೆ ತಂದು ಸುರಿಯಲಾಗುತ್ತಿದೆ. ನದಿ ನೀರು ವಿಷಪೂರಿತವಾಗಿದ್ದು, ಮಿನಿ ವಿಧಾನಸೌಧದ ಮುಂದೆಯೇ ತ್ಯಾಜ್ಯ ರಾಶಿಯನ್ನು ಸುರಿಯುತ್ತಿದ್ದರೂ, ಅಧಿಕಾರಿಗಳು ಕಂಡೂ ಕಾಣದಂತಿದ್ದಾರೆ.

ಪಟ್ಟಣದಲ್ಲಿರುವ ಪುರಸಭೆಯಿಂದ ಅನುಮತಿ ಪಡೆದಿರುವ ಮಾಂಸದ ಅಂಗಡಿಗಳಿಗೆ ತ್ಯಾಜ್ಯವನ್ನು ಸಾರ್ವಜನಿಕರಿಗೆ ಅಪಾಯಕಾರಿಯಾಗದಂತೆ ವಿಲೇವಾರಿ ಮಾಡಲು ಲೈಸನ್ಸ್ ಪಡೆಯುವಾಗ ನಿಬಂಧನೆ ವಿಧಿಸಿದ್ದರೂ, ಅವರು ಸೂಕ್ತವಾದ ರೀತಿಯಲ್ಲಿ ವಿಲೇವಾರಿ ಮಾಡದೇ ನದಿಗೆ ತಂದು ಸುರಿಯುತ್ತಿದ್ದಾರೆ. ಕೂಡಲೇ ಇವರಿಗೆ ದಂಡ ವಿಧಿಸುವುದರ ಜೊತೆಗೆ, ತ್ಯಾಜ್ಯ ವಿಲೇವಾರಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಿ, ನದಿಯ ಸ್ವಚ್ಚತೆಯನ್ನು ಕಾಪಾಡುವುದರ ಜೊತೆಗೆ ಸಾರ್ವಜನಿಕರಿಗೆ ಅಪಾಯ ಉಂಟಾಗದ ರೀತಿಯಲ್ಲಿ ಪರಿಸರವನ್ನು ರಕ್ಷಿಸುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ನೀಡಬೇಕೆಂದು ವಿನಂತಿಸುತ್ತೇನೆ.

**ಡಾ|| ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಅರಣ್ಯ ಸಚಿವರಿಂದ ವಿವರವಾದ ಉತ್ತರವನ್ನು ಒದಗಿಸಿಕೊಡಲಾಗುವುದು.

**ಶ್ರೀ ಈಶ್ವರ್ ಬಿ.ಖಂಡ್ರೆ (ಪೌರಾಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು):–** ಸನ್ಮಾನ್ಯ ಸಭಾಪತಿಯವರೆ, ಗೌರವಾನ್ವಿತ ವಿಧಾನ ಪರಿಷತ್ತಿನ ಸದಸ್ಯರು, ಹೆಗ್ಗಡದೇವನಕೋಟೆ ಪಟ್ಟಣಕ್ಕೆ

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಕುಡಿಯುವ ನೀರನ್ನು ಸರಬರಾಜು ಮಾಡುವಂತಹ ತಾರಕಾ ನದಿಯ ನೀರು ಕಲುಷಿತಗೊಳ್ಳುತ್ತಿದೆ. ಗಬ್ಬೆದ್ದು ನಾರುತ್ತಿದೆ. ಅಲ್ಲಿ ಮಾಂಸ ಮಾರಾಟ ಮಾಡುವಂತದ್ದು ಇರಬಹುದು ಅಥವಾ ಆಸ್ಪತ್ರೆಯ ತ್ಯಾಜ್ಯವನ್ನು ಇಲ್ಲಿಗೆ ಸುರಿಯುತ್ತಿರುವುದು. ಇದು ವಿಷಪೂರಿತವಾಗುತ್ತಿದೆ ಎನ್ನುವಂತಹ ವಿಚಾರವನ್ನು ನಮ್ಮ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇಲಾಖೆಯ ಅಧಿಕಾರಿಗಳಿಗೆ ಆ ಬಗ್ಗೆ ಈಗಾಗಲೇ ಸೂಚನೆಯನ್ನು ಕೊಟ್ಟು ಅದನ್ನು ತನಿಖೆ ಮಾಡಿಸಿ, ಯಾವುದೇ ರೀತಿಯಲ್ಲಿ ಸ್ವಚ್ಛತೆ ಹಾಳಾಗದ ರೀತಿಯಲ್ಲಿ ಶುದ್ಧಕುಡಿಯುವ ನೀರು ಆ ಪಟ್ಟಣದ ಜನರಿಗೆ ಸರಬರಾಜು ಆಗುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಒಂದು ಕಟ್ಟುನಿಟ್ಟಿನ ಕ್ರಮವನ್ನು ಜರುಗಿಸಲಾಗುವುದು ಎನ್ನುವ ವಿಶ್ವಾಸವನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇ) **ವಿಷಯ:-** ಪಶು ವೈದ್ಯರ ನೇಮಕಾತಿ ಕುರಿತು.

****

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಪಶು ವೈದ್ಯರ ನೇಮಕಾತಿ, ಹೈದ್ರಾಬಾದ್ ಕರ್ನಾಟಕ ಮರೆತ ಸರ್ಕಾರ ಎಂಬ ವರದಿಯು ದಿನಾಂಕ:15-03-2017ರ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ವರದಿಯಾಗಿದ್ದು, ಪಶು ವೈದ್ಯ ವಿವಿಯ ನೇಮಕಾತಿಯಲ್ಲಿ ಬಿದ್ದಿದ್ದ ಪೆಟ್ಟು ಇನ್ನೂ ಮಾಸದ ಮುನ್ನವೇ ಪಶು ವೈದ್ಯಾಧಿಕಾರಿಗಳ ನೇಮಕಾತಿ ವಿಷಯವಾಗಿ ಸಚಿವಾಲಯ ಹೈದ್ರಾಬಾದ್ ಕರ್ನಾಟಕ ಭಾಗವನ್ನು ಮರೆತುಬಿಟ್ಟಿದೆ. ಅಧಿಸೂಚನೆ ಹೊರಡಿಸಿದಾಗೊಮ್ಮೆ ಮುಂದೂಡುತ್ತಾ ವಿಶೇಷ ಸ್ಥಾನಮಾನದ ಮೂಲಕ ಅಭಿವೃದ್ಧಿಯ ಆಶಾಕಿರಣ ಹೊತ್ತಿದ್ದ ಈ ಪ್ರದೇಶವನ್ನು ನೇಮಕಾತಿಯಲ್ಲಿ ಕಡೆಗಣಿಸಲಾಗುತ್ತಿದೆ.

ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ಆಯುಕ್ತಾಲಯ ಇದೇ ಮಾರ್ಚ್ 6 ರಂದು ಪಶು ವೈದ್ಯಾಧಿಕಾರಿಗಳ 100 ಬ್ಯಾಕ್‌ಲಾಗ್ ಸೇರಿದಂತೆ, ಒಟ್ಟು 550 ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿದೆಯಾದರೆ ಹೈದ್ರಾಬಾದ್ ಕರ್ನಾಟಕ ಭಾಗದವರಿಗಾಗಿನ 100 ಹುದ್ದೆಗಳ ಮಾತೇ ಎತ್ತಿಲ್ಲ. ಹೀಗಾಗಿ, ಖಾಲಿ ಹುದ್ದೆಗಳ ಭರ್ತಿಗಾಗಿ ಕಾಯುತ್ತಿರುವ ಹೈದ್ರಾಬಾದ್ ಕರ್ನಾಟಕ ಪ್ರದೇಶವನ್ನು ಸರ್ಕಾರ ಮರೆತಂತೆ ವರ್ತಿಸಿದ್ದು ಇಲ್ಲಿ ಸ್ಪಷ್ಟವಾಗುತ್ತದೆ.

ಸದರಿ ಅಧಿಸೂಚನೆಯ 550 ಹುದ್ದೆಗಳ ಪೈಕಿ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದದ ಹುದ್ದೆಗಳಿಗಾಗಿ 25 ಬ್ಯಾಕ್‌ಲಾಗ್ ಸೇರಿದಂತೆ ಒಟ್ಟು 60 ಹುದ್ದೆಗಳನ್ನು ಮಾತ್ರ ಮೀಸಲಿರಿಸಿದ್ದಾರಾದರೆ

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು”

ಹೈದ್ರಾಬಾದ್ ಕರ್ನಾಟಕ ಭಾಗಕ್ಕೆ ಸಚಿವ ಸಂಪುಟದ ಒಪ್ಪಿಗೆಯಂತೆ ಸಿಗಬೇಕಿದ್ದ 100 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಬೀಳದಿರುವುದು ಆ ಭಾಗದ ವೈದ್ಯ ಹುದ್ದೆ ಆಕಾಂಕ್ಷಿಗಳ ಆಶೋತ್ತರಗಳ ಮೇಲೆ ತಣ್ಣೀರೆರಚಿದಂತಾಗಿದೆ.

ಮೀಸಲು ಕಡಿತ ಮಾಡುತ್ತಲಿದೆ ಇಲಾಖೆ, ಹೈದ್ರಾಬಾದ್ ಕರ್ನಾಟಕ ಭಾಗವೆಂದಾಕ್ಷಣ ಸರ್ಕಾರಕ್ಕೆ ಅಸಡ್ಡೆ ಎಂಬಂತೆ ಭಾಸವಾಗುತ್ತಿದೆ. 2015ರ ಜೂನ್ 19ರಲ್ಲಿ ಪ್ರಕಟಿಸಿದ್ದ ನೇಮಕಾತಿ ಅಧಿಸೂಚನೆಯಲ್ಲಿ 150 ಹುದ್ದೆಗಳ ಪೈಕಿ, 76 ಹುದ್ದೆಗಳನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಮೀಸಲಿರಿಸಿದ್ದು (ಅಪಸಂ: ಸಿಬ್ಬಂದಿ 9:ವಿವ–9:2015–16) 2016ರ ಜನವರಿ 25ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿ 350 ಹುದ್ದೆಗಳ ಪೈಕಿ, 76 ಹುದ್ದೆಗಳನ್ನು ಮೀಸಲಿರಿಸಿದ್ದರೆ 2017ರಲ್ಲಿ ಮುಂದುವರೆದ ನೇಮಕಾತಿ ಅಧಿಸೂಚನೆಯಲ್ಲಿ 550 ಹುದ್ದೆಗಳ ಪೈಕಿ, 60 ಹುದ್ದೆಗಳನ್ನು ಮಾತ್ರ ತೋರಿಸಿದ್ದು, ಹುದ್ದೆಗಳ ಕಡಿತದಲ್ಲಿ ಭಾರಿ ಮೋಸವಾಗಿರುವುದು ಸ್ಪಷ್ಟವಾಗಿರುತ್ತದೆ.

ಕರ್ನಾಟಕ ಪಶು ವೈದ್ಯ ಸಂಘದ ಅಧ್ಯಕ್ಷರು, ಇನ್ನು ಇದೇ ಫೆಬ್ರವರಿಯಲ್ಲಿ ನಡೆದ ಅಧಿವೇಶನದಲ್ಲಿ ಪಶುಸಂಗೋಪನಾ ಸಚಿವ ಎ.ಮಂಜು ಅವರು, ಮೇಲ್ಮನೆಯ ಪ್ರಶ್ನೋತ್ತರ ಕಲಾಪದಲ್ಲಿ ಶಾಸಕ ಎಸ್.ವಿ.ಸಂಕನೂರ್‌ಅವರ ಪ್ರಶ್ನೆಗೆ ಉತ್ತರಿಸಿ, ಹೈದ್ರಾಬಾದ್ ಕರ್ನಾಟಕ ಭಾಗದವರಿಗೆ ಕೆ.ಪಿ.ಎಸ್.ಸಿ ಮೂಲಕ 100 ಹುದ್ದೆಗಳು ಸೇರಿದಂತೆ ಒಟ್ಟು 650 ಪಶು ವೈದ್ಯರ ನೇಮಕಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಬರುವ 45 ದಿನಗಳಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದಿದ್ದರಾದರೆ ಅದು ಕೂಡ ಈಗ ಪೂರ್ಣವಾಗಿ ಜಾರಿಯಾಗಿಲ್ಲ.

ಪಶುಸಂಗೋಪನಾ ಇಲಾಖೆಯು ನೇಮಕಾತಿ ವಿಷಯದಲ್ಲಿ ದ್ವಿಮುಖ ನೀತಿ ಅನುಸರಿಸುತ್ತಿರುವಂತೆ ಕಾಣುತ್ತಿದೆ. ಒಂದೆಡೆ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದರೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ನೇಮಕಾತಿಗೆ ಮಾತ್ರ ಕೆ.ಪಿ.ಎಸ್.ಸಿ ಹೆಗಲಿಗೆ ನೀಡಿ ಕೈತೊಳೆದುಕೊಂಡಿದ್ದಾರೆ. ಇದರಿಂದ ಅನಗತ್ಯ ವಿಳಂಬ ಸಹಜ. ತಕ್ಷಣವೇ ಸರ್ಕಾರ ಕೆ.ಪಿ.ಎಸ್.ಸಿ ಬದಲು ನೇರ ನೇಮಕಾತಿಗೆ ಸೂಚಿಸಿ, ಆದೇಶಿಸಿದಲ್ಲಿ ಹೈದ್ರಾಬಾದ್ ಕರ್ನಾಟಕ ಭಾಗದವರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಯಬಹುದು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೀಗಾಗಿ, ಹೈದ್ರಾಬಾದ್ ಕರ್ನಾಟಕ ಭಾಗಕ್ಕೆ ಸಿಕ್ಕಿರುವ ವಿಶೇಷ ಸ್ಥಾನಮಾನ ಸೂಕ್ತ ರೀತಿಯಲ್ಲಿ ಬಳಕೆಯಾಗಲು ಸರ್ಕಾರದ ನಿರ್ಲಕ್ಷ್ಯ ನಿಲ್ಲಬೇಕಿದೆ. ಸಚಿವ ಸಂಪುಟದಲ್ಲಿ ಒಪ್ಪಿಗೆ ಸಿಕ್ಕಿರುವ 650 ಹುದ್ದೆಗಳ ಪೈಕಿ ಹೈದ್ರಾಬಾದ್ ಕರ್ನಾಟಕ ಭಾಗಕ್ಕೆ ನಿಗದಿಯಾಗಿರುವ 100 ಪಶು ವೈದ್ಯಾಧಿಕಾರಿಗಳ ಹುದ್ದೆ ಭರ್ತಿಗೆ ಕೆ.ಪಿ.ಎಸ್.ಸಿ ನೆಪವನ್ನು ಮುಂದಿಡುವ ಬದಲು ತಕ್ಷಣವೇ ಕ್ರಮವಾಗುವತ್ತ ಸಚಿವರು ಮಂಜು ಚಿತ್ತಹರಿಸಬೇಕಿದೆ.

**(230)16.03.2017 ಹೆಚ್‌ವಿ/ಬಿಎನ್‌ಎಸ್ 12.40**

**ಶ್ರೀ ಎ.ಮಂಜು(ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತಹ ವಿಚಾರ ನೂರಕ್ಕೆ ನೂರರಷ್ಟು ಸತ್ಯವಾದ ವಿಚಾರವಾಗಿದೆ. ಸುಮಾರು 550 ಜನ ಪಶು ವೈದ್ಯರನ್ನು ನೇಮಕ ಮಾಡುವುದಕ್ಕೆ ಈಗಾಗಲೇ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಅದಕ್ಕಿಂತಲೂ ಮೊದಲು ಸುಮಾರು 650 ಪಶು ವೈದ್ಯರ ಹುದ್ದೆಗಳ ಪೈಕಿ ಸುಮಾರು 100 ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮೂಲಕ ತುಂಬಬೇಕೆನ್ನುವ ಉದ್ದೇಶದಿಂದ ಕೆ.ಪಿ.ಎಸ್.ಸಿ.ಗೆ ವಹಿಸಿಕೊಡಲಾಗಿತ್ತು. ಈಗ ಕೆ.ಪಿ.ಎಸ್.ಸಿ.ಗೆ ಪತ್ರವನ್ನು ಬರೆದು ಆ ಹುದ್ದೆಗಳನ್ನು ವಾಪಸ್ಸು ತರಿಸಿಕೊಂಡು ಆ ನೂರು ಹುದ್ದೆಗಳ ಜೊತೆಗೆ ಈ 550 ಹುದ್ದೆಗಳನ್ನು ಸೇರಿಸಿ ಒಟ್ಟು 650 ಪಶು ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು. ಯಾವುದೇ ರೀತಿಯ ನ್ಯೂನತೆ ಉಂಟಾಗುವುದಿಲ್ಲ. ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಕೊಡಬೇಕಾಗಿರುವ ಮೀಸಲಾತಿಯನ್ನು ನೀಡಿ, ಪಶು ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ.

**ಈ)ವಿಷಯ: ಕಸ್ತೂರಿರಂಗನ್ ವರದಿ ಅನುಷ್ಠಾನ ಮಾಡಿದರೇಅರಣ್ಯ ಪ್ರದೇಶದಲ್ಲಿ ವಾಸಿಸುವ ಅದಿವಾಸಿಗಳಿಗೆ ತೊಂದರೆಯಾಗುವ ಬಗ್ಗೆ.**

\- - -

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಡಾ॥ಕಸ್ತೂರಿರಂಗನ್ ವರದಿ ಅನುಷ್ಠಾನ ಮಾಡಿದರೆ ಪಶ್ಚಿಮ ಘಟ್ಟ ಮತ್ತು ಮಲೆನಾಡು ಪ್ರದೇಶ ಅತೀ ಸೂಕ್ಷ್ಮ ಪರಿಸರ ವಲಯವೆಂದು ಘೋಷಣೆ ಮಾಡಲಾಗುತ್ತದೆ. ಒಂದು ಬಾರಿ 'ಸೂಕ್ಷ್ಮ ವಲಯ' ಎಂದು ಘೋಷಣೆ ಮಾಡಿದರೆ ಆ ಪ್ರದೇಶದಲ್ಲಿ ಯಾವುದೇ ರೀತಿಯ ಚಟುವಟಿಕೆ ನಡೆಸುವಂತಿಲ್ಲ. ರಾಜ್ಯ ಸರ್ಕಾರ ಈ ಪ್ರದೇಶದ ಮೇಲೆ ಸಂಪೂರ್ಣ ಹತೋಟಿ ಕಳೆದುಕೊಂಡು ಕೇಂದ್ರ ಸರ್ಕಾರದ ಸುಪರ್ದಿಗೆ

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಬೇಕಾಗುತ್ತದೆ. ಪಶ್ಚಿಮಘಟ್ಟದಲ್ಲಿ ಅಪರೂಪದ ಪ್ರಾಣಿಪಕ್ಷಿಗಳು, ಗಿಡಮೂಲಿಕೆಗಳು, ವನ್ಯಜೀವಿಗಳು ಇರುವುದರಿಂದ ಇವುಗಳ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತದೆ. ಅಲ್ಲದೆ ದಶಕಗಳಿಂದ ಅರಣ್ಯ ಪ್ರದೇಶದಲ್ಲಿರುವ ಆದಿವಾಸಿಗಳ ಒಕ್ಕಲೆಬ್ಬಿಸಬೇಕಾಗುತ್ತದೆ. ಸಾಮಾಜಿಕ ಅಸಮತೋಲನ ಕಾರಣವಾಗಿರುವ ಕೇಂದ್ರದ ಪರಿಸರ ಮತ್ತು ಅರಣ್ಯ ಇಲಾಖೆ ನಿಲುವಿನಿಂದ ತಲತಲಾಂತರದಿಂದ ವಾಸಿಸುತ್ತಿರುವ ಅಲ್ಲಿನ ಆದಿವಾಸಿಗಳ ಮಾನವ ಹಕ್ಕುಗಳಿಗೆ ಕೊಡಲಿ ಪೆಟ್ಟು ಹಾಕುವ ಈ ಅಧಿಸೂಚನೆ ಕೂಡಲೇ ವಾಪಸ್ಸು ಪಡೆಯಬೇಕು. ಪಶ್ಚಿಮ ಘಟ್ಟದ ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯ ಬಗ್ಗೆ ರಾಜ್ಯ ಸರ್ಕಾರದಿಂದಾಗಲೀ ಯಾವುದೇ ತಕರಾರಿಲ್ಲ. ಆದರೆ, ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ಗುಡಿಕೈಗಾರಿಕೆ, ಸಣ್ಣಕೈಗಾರಿಕೆ, ಕೃಷಿ ಆಧಾರಿತ ಉದ್ಯಮ ಸೇರಿದಂತೆ ಪರಿಸರಕ್ಕೆ ಪೂರಕವಾದ ಚಟುವಟಿಕೆ ನಡೆಸುವುದಲ್ಲದೆ ಆ ಭಾಗದಲ್ಲಿರುವ ಮುಗ್ಧ ಗಿರಿ ಹಾಗೂ ಬುಡಕಟ್ಟು ಜನರ, ಕೂಲಿಕಾರರ ಹಿತಾಸಕ್ತಿ ರಕ್ಷಿಸುವುದು ಸಹ ಅಷ್ಟೇ ಮುಖ್ಯ ವಿಚಾರವಾಗಿದೆ. ಇದನ್ನು ಕೇಂದ್ರ ಕಡೆಗಣಿಸಿರುವುದು ಖಂಡನಾರ್ಹವಾಗಿದೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಅಭಿಪ್ರಾಯ, ಅಹವಾಲು ಪರಿಗಣಿಸಿ ತಕ್ಷಣವೇ ಈ ಅಧಿಸೂಚನೆ ವಾಪಸ್ಸು ಪಡೆಯಬೇಕು ಮತ್ತು ಈ ವಿಚಾರದಲ್ಲಿ ಕೇಂದ್ರ ತನ್ನ ಹಠ ಬಿಟ್ಟು ಸ್ಥಳೀಯರ ಹಿತರಕ್ಷಣೆಗೆ ಕೂಡಲೇ ಮುಂದಾಗಬೇಕೆನ್ನುವ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತಿದ್ದೇನೆ.

**ಡಾಃಜಿ.ಪರಮೇಶ್ವರ್(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಉ)ವಿಷಯಃ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಕೈಗೊಳ್ಳುವ ಕರ್ನಾಟಕ ಪ್ರವಾಸ ವಿಳಂಬವಾಗಿರುವ ಬಗ್ಗೆ.**

\- - -

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ವತಿಯಿಂದ ಪ್ರತಿ ವರ್ಷರಾಜ್ಯದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಕರ್ನಾಟಕ ಪ್ರವಾಸ' ಏರ್ಪಡಿಸುತ್ತಾ ಬಂದಿದ್ದು, ಈ ಪ್ರವಾಸವನ್ನು ಡಿಸೆಂಬರ್ ತಿಂಗಳಿನಲ್ಲಿಯೇ ಮುಗಿಸಬೇಕೆಂಬ ನಿಯಮವಿದೆ. ಆದರೆ, ಈ ಶೈಕ್ಷಣಿಕ ವರ್ಷದಲ್ಲಿ ಕೈಗೊಳ್ಳಬೇಕಾಗಿದ್ದ ಪ್ರವಾಸಕ್ಕೆ ನೀಡಬೇಕಾಗಿದ್ದ ಅನುದಾನ ವಿಳಂಬವಾಗಿರುವುದರಿಂದ ಮಾರ್ಚ್ ತಿಂಗಳಿನಲ್ಲಿ 'ಕರ್ನಾಟಕ ಪ್ರವಾಸ' ಮಾಡುವಂತೆ ಅಧಿಕಾರಿಗಳು ಶಿಕ್ಷಕರ ಮೇಲೆ ಒತ್ತಡ ಹೇರುತ್ತಿದ್ದಾರೆ. ಸಾಮಾನ್ಯವಾಗಿ ಈ ಪ್ರವಾಸಕ್ಕೆ

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಶೇಕಡಾ 90ರಷ್ಟು 10ನೇ ತರಗತಿ ಮಕ್ಕಳನ್ನು ಆಯ್ಕೆ ಮಾಡುವುದರಿಂದ ತಿಂಗಳಾಂತ್ಯದಲ್ಲಿ ಆರಂಭವಾಗಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಲು ಸಿದ್ಧತೆ ನಡೆಸಿರುವ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶ ವಿದ್ಯಾರ್ಥಿಗಳಲ್ಲಿ ಹಾಗೂ ಪೋಷಕರಲ್ಲಿ ಆತಂಕ ಸೃಷ್ಟಿಸಿದೆ. ಆದ್ದರಿಂದ ಈ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಸೂಕ್ತ ಕ್ರಮ ಕೈಗೊಳ್ಳಲು ಶೂನ್ಯ ವೇಳೆಯಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರ ಬರಬೇಕಾಗಿದೆ. ಆದರೂ ಸಹ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮೌಖಿಕವಾಗಿ ಉತ್ತರವನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಪ್ರತಿವರ್ಷ 'ಕರ್ನಾಟಕ ಪ್ರವಾಸ'ಕ್ಕೆ ಕರೆದುಕೊಂಡು ಹೋಗುವುದು ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟ ಕಾರ್ಯಕ್ರಮವಾಗಿದೆ. ಶಿಕ್ಷಣ ಇಲಾಖೆ ಇದರ ಬಗ್ಗೆ ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದೆ. ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಆತಂಕ ನಿಜವಾಗಿಯೂ ಸೂಕ್ತವಾಗಿದೆ. ಪರೀಕ್ಷೆ ಸಮಯದಲ್ಲಿ ಪ್ರವಾಸ ಕೈಗೊಂಡು ಮಕ್ಕಳಲ್ಲಿ ಆತಂಕ ಸೃಷ್ಟಿ ಮಾಡುವುದು ಸರಿಯಲ್ಲ. ಅಂತಹ ಯಾವುದಾದರು ಸುತ್ತೋಲೆ ಅಥವಾ ಆದೇಶವನ್ನು ನಮ್ಮ ಇಲಾಖೆಯಿಂದ ಹೊರಡಿಸಿದ್ದರೆ ಖಂಡಿತವಾಗಿಯೂ ಅದನ್ನು ತಡೆಹಿಡಿದು ಮಕ್ಕಳಿಗೆ ಅನುಕೂಲವಾಗುವಂತೆ ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾದ ಮೇಲೆ ಪ್ರವಾಸ ಕೈಗೊಳ್ಳುವಂತೆ ತಿಳಿಸಲಾಗುವುದು.

**ಸಭಾಪತಿಯವರು:-** ಈಗ ಕಾರ್ಯದರ್ಶಿಗಳು ವರದಿಯನ್ನೊಪ್ಪಿಸುವುದು.

## 4. ವರದಿಯನ್ನೊಪ್ಪಿಸುವುದು

**ಕಾರ್ಯದರ್ಶಿ(ಕ.ವಿ.ಪ):-** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

ರಾಷ್ಟ್ರಪತಿಯವರಿಂದ/ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕದ ಪಟ್ಟಿ

ವಿಧಾನ ಸಭೆಯ ವಿಧೇಯಕಗಳು

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01 | ಕರ್ನಾಟಕಧನವಿನಿಯೋಗ(ಸಂಖ್ಯೆ.4) ವಿಧೇಯಕ, 2016 | 16.12.2016 | ರಾಜ್ಯಪಾಲರು |
| | ಬೆಂಗಳೂರು ಮಹಾನಗರ ಪ್ರದೇಶ | | |

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

| | | | |
|---|---|---|---|
| 02. | ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2016 | 31.12.2016 | ರಾಜ್ಯಪಾಲರು |
| 03. | ಬೆಂಗಳೂರು ಮಹಾನರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2016 | 31.12.2016 | ರಾಜ್ಯಪಾಲರು |
| 04. | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ಎರಡನೇ ತಿದ್ದುಪಡಿ) ವಿಧೇಯಕ, 2016 | 31.12.2016 | ರಾಜ್ಯಪಾಲರು |
| 05. | ಕರ್ನಾಟಕಆಯುರ್ವೇದ, ಪ್ರಕೃತಿ ಚಿಕಿತ್ಸೆ, ಬಿದ್ಧ, ಯುನಾನಿ ಮತ್ತು ಯೋಗ ವೈದ್ ವೃತಿನಿರತರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ, 2016 | 31.12.2016 | ರಾಜ್ಯಪಾಲರು |
| 06. | ಕರ್ನಾಟಕ ಕೆಲವು ಸ್ಥಳಗಳ ಹೆಸರುಗಳನ್ನು ಬದಲಾಯಿಸುವ ವಿಧೇಯಕ, 2016 | 31.12.2016 | ರಾಜ್ಯಪಾಲರು |

## 5. ಗಮನ ಸೆಳೆಯುವ ಸೂಚನೆಗಳು

**ಅ)ವಿಷಯಃ ಚಿಕ್ಕಮಗಳೂರು ಜಿಲ್ಲೆಯಲ್ಲಿ ತರೀಕೆರೆಯಿಂದ ಕೆಮ್ಮಣ್ಣುಗುಂಡಿಯವರೆಗಿನ ರಸ್ತೆಯು ಹಾಳಾಗಿ ಕೆಮ್ಮಣ್ಣುಗುಂಡಿ ಗಿರಿಧಾಮಕ್ಕೆ ಬರುವ ಪ್ರವಾಸಿಗರಿಗೆ ತೊಂದರೆಯುಂಟಾಗಿರುವ ಹಾಗೂ ಪ್ರವಾಸಿಗರಿಗೆ ಸೂಕ್ತ ಮೂಲ ಸೌಕರ್ಯಗಳನ್ನು ಒದಗಿಸುವ ಬಗ್ಗೆ.**

– – –

**ಶ್ರೀಮತಿ ಜಿ.ಮೋಟಮ್ಮ(ವಿಧಾನಸಭಾಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ತರೀಕೆರೆಯಿಂದ ಕೆಮ್ಮಣ್ಣುಗುಂಡಿಯವರೆಗಿನ ರಸ್ತೆಯು ಹಾಳಾಗಿ ಕೆಮ್ಮಣ್ಣುಗುಂಡಿ ಗಿರಿಧಾಮಕ್ಕೆ ಬರುವ ಪ್ರವಾಸಿಗರಿಗೆ ತೊಂದರೆಯುಂಟಾಗಿರುವ ಹಾಗೂ ಪ್ರವಾಸಿಗರಿಗೆ ಸೂಕ್ತ ಮೂಲ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಗಮನ ಸೆಳೆಯುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕೆಮ್ಮಣ್ಣುಗುಂಡಿಗಿರಿ ಧಾಮವು ರಾಜ್ಯದಲ್ಲಿಯೇ ಇತಿಹಾಸ ಪ್ರಸಿದ್ಧವಾಗಿದ್ದು, ಸುಮಾರು 1942ರಲ್ಲಿ ಇದು ಪ್ರಾರಂಭವಾಗಿದ್ದು, ದಿನನಿತ್ಯ ಸಾವಿರಾರು ಜನ ಪ್ರವಾಸಿಗರು ಈ ಗಿರಿಧಾಮಕ್ಕೆ ಭೇಟಿ ನೀಡುತ್ತಾರೆ. ತೋಟಗಾರಿಕೆ ಇಲಾಖೆಯವರು ಇದರ ಅಭಿವೃದ್ಧಿ ಹಾಗೂ ನಿರ್ವಹಣೆಯನ್ನು ಮಾಡುತ್ತಿದ್ದು, ನಂತರ ಪ್ರವಾಸೋದ್ಯಮ ಇಲಾಖೆಗೆ ವರ್ಗಾವಣೆ ಮಾಡಲಾಗಿರುತ್ತದೆ. ಇದರಿಂದಾಗಿ ಆ ಗಿರಿಧಾಮ ಸರಿಯಾದ ನಿರ್ವಹಣೆಯಾಗದೇತೋಟಗಾರಿಕೆ ಇಲಾಖೆಗೆ ವಾಪಸ್ಸು ವರ್ಗಾವಣೆಯಾಗಿರುತ್ತದೆ. ಇತ್ತೀಚೆಗೆ ಮಾನ್ಯ ವಿ.ಎಸ್.ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ತಜ್ಞರ ಸಮಿತಿಯು ಅಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ತರೀಕೆರೆಯಿಂದ ಕೆಮ್ಮಣ್ಣುಗುಂಡಿಯವರೆಗಿನ ರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುತ್ತದೆ. ಇದರ ಜೊತೆಗೆ ಯಾವುದೇ ರೀತಿಯ ಮೂಲ ಸೌಲಭ್ಯಗಳು ಇಲ್ಲದೇ ಇರುವುದರಿಂದ ಈ ಕೂಡಲೇ ಪ್ರವಾಸಿಗರು ಉಳಿದುಕೊಳ್ಳಲು ಮತ್ತು ವಾಹನ ಸಂಚಾರಕ್ಕೆ ಅಡಚಣೆಯಾಗದಿರುವಂತೆ ಮೂಲಸೌಲಭ್ಯಗಳನ್ನು ಒದಗಿಸಬೇಕಾಗಿ ನಾನು ಒತ್ತಾಯಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಂಡನೆ ಮಾಡಿರುವ ಉತ್ತರವನ್ನು ನಾನು ಓದಿದ್ದೇನೆ. ಈ ಗಿರಿಧಾಮ ಮೊದಲು ತೋಟಗಾರಿಕೆಯ ವ್ಯಾಪ್ತಿಯಲ್ಲಿಯೇ ಇತ್ತು. ಗಿರಿಧಾಮ ಎಂದರೆ, ಬಹಳಷ್ಟು ಜನರು ಬೇಸಿಗೆಗಾಲದಲ್ಲಿ ಅಲ್ಲಿಗೆ ಭೇಟಿ ನೀಡುತ್ತಾರೆ ಮತ್ತು ಬಹಳಷ್ಟು ಜನ ಪ್ರವಾಸಿಗರು ಬೆಂಗಳೂರಿನಿಂದ ಅಲ್ಲಿಗೆ ಭೇಟಿ ನೀಡುತ್ತಾರೆ. ಈ ಗಿರಿಧಾಮ 1942ರಿಂದ ಇದೆಯೆಂದರೆ, ಅದು ನಮಗೆ ಹೆಮ್ಮೆಯ ವಿಚಾರವಾಗಿದೆ. ಇಲ್ಲಿಗೆ ಭೇಟಿ ನೀಡಿದ ಪ್ರವಾಸಿಗರಿಗೆ ಸರಿಯಾದ ಸೌಲಭ್ಯಗಳು ಸಿಗದಿದ್ದರೆ ಏನು ಪ್ರಯೋಜನ? ನಮ್ಮೆಲ್ಲರಿಗೂ ತಿಳಿದಿರುವಂತೆ ಬೇರೆ ದೇಶಗಳಲ್ಲಿ ಪ್ರವಾಸೋದ್ಯಮ ಎನ್ನುವುದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಅಲ್ಲಿನ ಆರ್ಥಿಕತೆಯ ಮೂಲವಾಗಿದೆ. ಉದಾಹರಣೆಗೆ ಹೇಳಬೇಕಾದರೆ ಮಲೇಶಿಯಾ ಮತ್ತು ಸಿಂಗಾಪೂರ್‌ಗಳಂತಹ ಸಣ್ಣ ದೇಶಗಳಲ್ಲಿ ಪ್ರವಾಸೋದ್ಯಮ ಎನ್ನುವುದು ಅಲ್ಲಿನ ಮುಖ್ಯ ಆರ್ಥಿಕ ಮೂಲವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ತೋಟಗಾರಿಕೆ ಮತ್ತು ಪ್ರವಾಸೋದ್ಯಮ ಇಲಾಖೆಗಳು ಈ ಗಿರಿಧಾಮಕ್ಕೆ ಅಗತ್ಯವಿರುವ ಎಲ್ಲ ಮೂಲಸೌಲಭ್ಯಗಳನ್ನು ಒದಗಿಸಿ ಆ ಮೂಲಕ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ರಾಜ್ಯದ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಇಲಾಖೆಗಳು ಏತಕ್ಕೋಸ್ಕರ ಆಸಕ್ತಿ ವಹಿಸುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಗಿರಿಧಾಮವನ್ನು ಕೃಷ್ಣರಾಜ ಗಿರಿಧಾಮ ಎಂದು ಕರೆಯುತ್ತಾರೆ. ಇಲ್ಲಿ ಮೊದಲು ಗಾರ್ಡನಿಂಗ್ ತುಂಬಾ ಚೆನ್ನಾಗಿತ್ತು. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಒಂದು ಅತಿಥಿಗೃಹ ಸಹ ಇಲ್ಲಿದೆ. ಅದರ ಸುತ್ತ ಗುಲಾಬಿ ಹೂವಿನ ಗಿಡಗಳು, ಬೇರೆ ಬೇರೆ ಗಿಡಗಳು ಹಾಗೂ ಔಷಧೀಯ ಗಿಡ ಮೂಲಿಕೆಗಳನ್ನು ಬೆಳೆಸಲಾಗಿತ್ತು. ಕಳೆದ ಆರು ತಿಂಗಳುಗಳ ಹಿಂದೆ ನಾವು ಅಲ್ಲಿಗೆ ಭೇಟಿ ನೀಡಿದಾಗ ಅಲ್ಲಿ ಯಾವುದೇ ರೀತಿಯ ಗಿಡಮರಗಳು ಇಲ್ಲದೇ ಆ ಗಿರಿಧಾಮ ಬರಡಾಗಿದೆ. ಅದನ್ನು ಈ ರೀತಿ ಬರಡಾಗಲು ಬಿಡದೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಅಲ್ಲಿ ರಸ್ತೆ ಅಭಿವೃದ್ಧಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಅದೇ ರೀತಿಯಲ್ಲಿ ಈ ಗಿರಿಧಾಮದ ಅಭಿವೃದ್ಧಿಗೆ ಸಾಕಷ್ಟು ಹಣವನ್ನು ಒದಗಿಸಿ ಇದನ್ನು ಜೀವಂತವಾಗಿಡುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಹಾಗೂ ಇದರ

**(231)16.03.2017 ಎಂಎಂ/ಬಿಎನ್‌ಎಸ್ 12.50**

**ಶ್ರೀಮತಿ ಮೋಟಮ್ಮ (ಮುಂದು):-**

ಪಕ್ಕದಲ್ಲೇ ಹೆಬ್ಬೆ ಫಾಲ್ಸ್ ಇದೆ. ಅದು ದೊಡ್ಡ ಫಾಲ್ಸ್ ಆಗಿದ್ದು ತುಂಬಾ ಚೆನ್ನಾಗಿದೆ. ಅದನ್ನು ಕೂಡ ಪ್ರವಾಸಿಗರಿಗೆ ಅನುಕೂಲವಾಗುವಂತೆ ಮಾಡಬಹುದು. ಹಾಗೂ ಅದರ ಪಕ್ಕದಲ್ಲೆ ಕಲ್ಲತ್ತಗಿರಿ ಜಲಾಶಯವಿದೆ. ನೀವು ನೋಡಿರಬಹುದು ಅದು ಕೂಡ ತುಂಬಾ ಚೆನ್ನಾಗಿದೆ. ಅವೆರಡೂ ಬಹಳ

ತಿದ್ದುಪಡಿಯಾಗದ ಪ್ರತಿ/ ಗಣಕೀಕರಣ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಸುಂದರವಾದ ಫಾಲ್ಸ್ ಹರಿಯುವ ಜಾಗವಾಗಿದೆ. ಆದ್ದರಿಂದ ಇನ್ನಷ್ಟು ಹಣವನ್ನು ಇಲಾಖೆಯಿಂದ ಪಡೆದುಕೊಂಡು ಉಳಿದ ಎಲ್ಲವನ್ನೂ ಸರಿ ಮಾಡಬೇಕು. ಅಲ್ಲಿ ವಿದ್ಯುತ್ ಇರಲಿಲ್ಲ, ವಿದ್ಯುತ್ ದೀಪ ಸರಿ ಇರಲಿಲ್ಲ ಅವೆಲ್ಲವನ್ನೂ ಸರಿ ಮಾಡಿದ್ದೇವೆಂದು ಹೇಳಿದ್ದಾರೆ. ಶ್ರೀ ಕೃಷ್ಣರಾಜೇಂದ್ರ ಗಿರಿಧಾಮದಲ್ಲಿ ನೀರು ಸಂಗ್ರಹಣೆಗಾಗಿ ಒಂದು ಲಕ್ಷ ಲೀಟರ್ ಮತ್ತು ಕಲ್ಲತ್ತಗಿರಿಯಲ್ಲಿ 30 ಸಾವಿರ ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್‌ಗಳನ್ನು ನಿರ್ಮಿಸಿದ್ದೇವೆ. ಪ್ರವಾಸಿಗರಿಗೆ ವೀಕ್ಷಣಾಗೋಪುರ ಮಾಡಿದ್ದೇವೆ ಎಂದು ಹೇಳಿರುವುದಕ್ಕೆ ಸಂತೋಷಿಸುತ್ತೇನೆ. ಆದರೆ ಅದನ್ನು ಇನ್ನಷ್ಟು ಚೆನ್ನಾಗಿ ಆಕರ್ಷಕವಾಗಿ ಮಾಡಿದರೆ ಸಾಕಷ್ಟು ಪ್ರವಾಸಿಗರು ಬರುತ್ತಾರೆ ಅದರಿಂದ ನಿಮಗೆ ಸಾಕಷ್ಟು ಆದಾಯ ಕೂಡ ಬರುತ್ತದೆ ಎಂದು ಹೇಳುವ ಮೂಲಕ ತಮ್ಮನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ವಿವರವಾದ ಹೇಳಿಕೆಯನ್ನು ನೀಡಿದ್ದಾರೆ. ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಕೆಲವು ಸಂಶಯಗಳು ನಮಗೂ ಅರ್ಥವಾಗುತ್ತದೆ. ಆದಾಗ್ಯೂ ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಂಡು ಒಂದು ಬಾರಿ ಅಲ್ಲಿಗೆ ಭೇಟಿ ಕೊಟ್ಟು ಏನೇನು ಕೊರತೆ ಇದೆ ಅದನ್ನು ನಿವಾರಣೆ ಮಾಡಿ ಇನ್ನೂ ಹೆಚ್ಚಿನ ಕೆಲಸ ಮಾಡುವುದಕ್ಕೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂಬ ಭರವಸೆಯನ್ನು ಕೊಡುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಐವತ್ತು ಲಕ್ಷ ರೂಪಾಯಿಗಳ ಹೆಚ್ಚುವರಿ ಅನುದಾನವನ್ನು ಕೊಟ್ಟರೆ ಇನ್ನಷ್ಟು ಚೆನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಕೇವಲ ಸುಮಾರು 13–20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

**ಉಪಸಭಾಪತಿಯವರು:–** ಧನ್ಯವಾದಗಳು. ಶ್ರೀ ಎಂ.ಕೆ. ಪ್ರಾಣೇಶ್.

**ಆ) ವಿಷಯ:– ರಾಜ್ಯಾದ್ಯಂತ ಕೃಷಿ ಜಮೀನಿನಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸಿ ನೋಂದಣಿ ಮಾಡುತ್ತಿರುವ ಬಗ್ಗೆ.**

– – –

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ರಾಜ್ಯಾದ್ಯಂತ ಕೃಷಿ ಜಮೀನಿನಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸಿ ನೋಂದಣಿ ಮಾಡುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ವಿವರವಾದ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಜ್ಯದ ಎಲ್ಲಾ ಭಾಗಗಳಲ್ಲೂ ಈಗ ಏನು ಸಾರ್ವಜನಿಕರ ರೆವಿನ್ಯೂ ಸೈಟ್‌ಗಳನ್ನು ಈಗಾಗಲೇ ನೋಂದಣಿ ಮಾಡುತ್ತಿರುವುದು ಕಾನೂನು ಬಾಹಿರವಾಗಿದೆ ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಮೂಡಿದೆ. ಏಕೆಂದರೆ ಸುಮಾರು 10–15 ಸಾವಿರ ಕಂದಾಯ ನಿವೇಶನಗಳನ್ನು ನೋಂದಣಿ ಮಾಡಿದರೆ ನಿವೇಶನಗಳನ್ನು ಖರೀದಿ ಮಾಡುವಂತಹ ಸಾವಿರಾರು ಜನರಿಗೆ ತೊಂದರೆಯಾಗಿದೆ. ಈಗ ಅದರಲ್ಲಿ ತುಂಬಾ ಜನರು ವಂಚನೆಗೊಳಗಾಗಿದ್ದಾರೆ. ಇದನ್ನು ತಡೆಗಟ್ಟಲು ಸರ್ಕಾರ ಇಲ್ಲಿಯವರೆಗೆ ಯಾವುದೇ ರೀತಿಯ ಕಾಯ್ದೆಗಳನ್ನು ರಚಿಸಿದರೂ ಕೂಡ ಅದರಲ್ಲಿ ಸರ್ಕಾರ ಯಶಸ್ವಿಯಾಗಿಲ್ಲ. ಇನ್ನೂ ನಿರಂತರವಾಗಿ ಈ ರೀತಿಯ ಚಟುವಟಿಕೆಗಳು ನಡೆಯುತ್ತಿವೆ. ಈ ಎಲ್ಲಾ ಕಾನೂನುಗಳು ಎಲ್ಲೆ ಮೀರಿದ ಸಂದರ್ಭದಲ್ಲಿ ಈ ನೋಂದಣಿ ಮಾಡುತ್ತಿರುವ ಹಲವಾರು ಕೇಸುಗಳನ್ನು ಕಂದಾಯ ನಿವೇಶನಗಳ ಮೇಲೆ ದಾಖಲಿಸಲಾಗಿದೆ. ಇದರಿಂದ ಸಾರ್ವಜನಿಕರು ಸಾಕಷ್ಟು ಸಂಖ್ಯೆಯಲ್ಲಿ ವಂಚನೆಗೊಳಗಾಗಿದ್ದಾರೆ. ಉಪ ನೋಂದಣಾಧಿಕಾರಿಗಳು ಮತ್ತು ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಳ್ಳುವುದಿಲ್ಲ, ಎಲ್ಲಿಯೋ ಹಿಂಬಾಗಿಲಿನಿಂದ ಸರ್ಕಾರವೇ ಸಹಾಯ ಮಾಡುತ್ತಿದೆ ಎಂದು ಜನರು ಹೇಳುತ್ತಿದ್ದಾರೆ. ನಾವು ಹೋದಂತಹ ಸಂದರ್ಭದಲ್ಲಿ ಮಾನ್ಯ ಕಂದಾಯ ಸಚಿವರ ದೆಸೆಯಿಂದ ಇದಕ್ಕೆಲ್ಲಾ ಪರಿಹಾರ ಸಿಗಬಹುದು ಎಂಬ ಜನರ ನಿರೀಕ್ಷೆಯೂ ಕೂಡ ಇದೆ. ಇಲ್ಲಿಯವರೆಗೂ ಆ ರೀತಿಯ ವ್ಯವಸ್ಥೆಗಳು ನಡೆದುಕೊಂಡು ಬಂದಿವೆ. ಆದರೆ ಅದನ್ನು ಹೋಗಲಾಡಿಸುವುದು, ಸರಿ ಮಾಡುವಂತಹ ಜವಾಬ್ದಾರಿ ಮಾನ್ಯ ಕಂದಾಯ ಸಚಿವರ ಮೇಲಿದೆ ಎಂದು ಭಾವಿಸಿದ್ದೇನೆ. ಸರ್ಕಾರ ನೋಂದಣಿ ಕಾಯ್ದೆಗಳನ್ನು ರಚನೆ ಮಾಡಿದೆ. ಈ ರೀತಿ ಅಕ್ರಮವಾಗಿ ನೋಂದಣಿ ಮಾಡುತ್ತಿರುವ ಉಪನೋಂದಣಾಧಿಕಾರಿಗಳು ಸರ್ಕಾರದ ನಿಯಂತ್ರಣದಲ್ಲಿಲ್ಲ. ಅವರು ಯಾರ ಮಾತನ್ನೂ ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಯಾವ ಚುನಾಯಿತ ಪ್ರತಿನಿಧಿಗಳು ಹೇಳಿದರೂ ಕೂಡ ಅದನ್ನು ಕೇಳದೇ, ಪ್ರತಿನಿಧಿಗಳು ಹೇಳುವುದು ಒಂದು ಅಧಿಕಾರಿಗಳು ಮಾಡುವುದೇ ಇನ್ನೊಂದು ಎಂದಾಗಿದೆ. ಇದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು”

ಅವ್ಯವಸ್ಥೆಯ ತಾಣವಾಗಿದೆ. ಸಾಮಾನ್ಯ ಬಡವರಿಗೆ ಸಾಕಷ್ಟು ತೊಂದರೆಗಳು ಇದರಿಂದ ಉಂಟಾಗಿದೆ. ಇದನ್ನು ಪರಿಹರಿಸುವ ವ್ಯವಸ್ಥೆಯಾಗಬೇಕೆಂಬುದು ನನ್ನ ಅಭಿಪ್ರಾಯ. ಈಗಾಗಲೇ ಈ ನಿವೇಶನಗಳ ಮೇಲೆ ಹಲವಾರು ಮೊಕದ್ದಮೆಗಳು ನ್ಯಾಯಾಲಯದಲ್ಲಿ ಇದ್ದರೂ ಕೂಡ ಈ ನೋಂದಣಾಧಿಕಾರಿಗಳು ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದಾರೆ. ಅದಕ್ಕೂ ಬೆಲೆಯನ್ನು ಕೊಡುತ್ತಿಲ್ಲ. ಮಾನ್ಯ ಸಚಿವರೇ, ಸಮಸ್ಯೆಗಳ ಆಗರ ಇದರೊಳಗೆ ಇದೆ. ಹಾಗಾಗಿ ಈ ಅಕ್ರಮಕ್ಕೆ ಸ್ಥಳೀಯ ಎಲ್ಲ ಅಧಿಕಾರಿಗಳು ಮತ್ತು ಮುಖಂಡರು ಸೇರಿಕೊಂಡಿದ್ದಾರೆ. ಕೇವಲ ಅಧಿಕಾರಿಗಳು ಒಂದು ಭಾಗವಾದರೆ ಮತ್ತೆ ಕೆಲವು ಮುಖಂಡರೂ ಇದರೊಟ್ಟಿಗೆ ಸೇರಿಕೊಂಡಿದ್ದಾರೆ. ಆದ್ದರಿಂದ ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆ ಇವತ್ತಿನ ನಿನ್ನೆಯ ಸಮಸ್ಯೆಯಲ್ಲ ಇದು ನಿರಂತರವಾದ ಸಮಸ್ಯೆಯಾಗಿದೆ. ಸಾಕಷ್ಟು ಸಮಯದಿಂದ ಈ ಸಮಸ್ಯೆ ಇದೆ. ಅದಕ್ಕೆ ಕೂಡಲೇ ಪರಿಹಾರ ಸಿಗಬೇಕು. ಆ ನಿಟ್ಟಿನಲ್ಲಿ ಯಾವ ರೀತಿ ಕೆಲಸ ಮಾಡುತ್ತೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ಈಗಾಗಲೇ ಕಂದಾಯ ಭೂಮಿಗಳಾದ ಗೋಮಾಳ, ಸ್ಮಶಾನ ಮತ್ತು ಸರ್ಕಾರಿ ಕಛೇರಿಗಳಿಗೆ ಜಾಗವನ್ನು ಕಾಯ್ದಿರಿಸಿದ್ದರು ಕೂಡ ಬೋಗಸ್ ವ್ಯವಹಾರದಿಂದ ಅದು ಬೇರೆಯವರ ಪಾಲಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದರೂ ಕೂಡ ಸರ್ಕಾರ ಈ ದಿಕ್ಕಿನಲ್ಲಿ ಗಮನ ಹರಿಸುತ್ತಿಲ್ಲ ಎಂಬುದು ಸಾರ್ವಜನಿಕವಾಗಿ ಇದರ ಬಗ್ಗೆ ಚರ್ಚೆಯಾಗುತ್ತಿರುವಂತಹ ವಿಚಾರವಾಗಿದೆ. ನಾನೇನು ಹೊಗಳುತ್ತಿಲ್ಲ. ಚರ್ಚೆಯಾಗುತ್ತಿರುವುದನ್ನು ಹೇಳುತ್ತಿದ್ದೇನೆ. ಮಾನ್ಯ ಕಂದಾಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಕಂದಾಯ ಸಚಿವರಾದ ಮೇಲೆ ಈ ಸಮಸ್ಯೆಗಳಿಗೆಲ್ಲಾ ಪರಿಹಾರ ಸಿಗುತ್ತದೆ ಎನ್ನುವ ನಿರೀಕ್ಷೆ ಇದೆ. ಆ ನಿರೀಕ್ಷೆ ಹುಸಿಯಾಗಬಾರದು. ಇದನ್ನು ತಾವು ಗಂಭೀರವಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಇದಕ್ಕೆ ಸಾಕಷ್ಟು ದಾಖಲೆಗಳು ಇವೆ. ಮಾನ್ಯ ಕಂದಾಯ ಸಚಿವರಿಗೆ ಅದರ ಪೂರ್ಣ ವಿಚಾರ ಗೊತ್ತಿದೆ ಎಂಬುದು ನನ್ನ ಅಭಿಪ್ರಾಯ. ಆದರೆ ಮಾನ್ಯ ಸಚಿವರಿಗೆ ಗೊತ್ತಿದ್ದರೂ ಕೂಡ ಅವರ ಗಮನವನ್ನು ಸೆಳೆಯಬೇಕು ಎಂಬ ದೃಷ್ಟಿಯಿಂದ ನಾನು ಮಾನ್ಯ ಮಂತ್ರಿಗಳಿಗೆ ಮತ್ತು ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದ್ದೇನೆ. ಇದು ನಿಮ್ಮ ಕೈಯಲ್ಲಿದೆ. ನೀವು ಮನಸ್ಸು ಮಾಡಿದರೆ ಖಂಡಿತವಾಗಿಯು ಇದಕ್ಕೆ ಪರಿಹಾರವನ್ನು ಕಂಡುಹಿಡಿಯುವುದು ಕಷ್ಟಸಾಧ್ಯವಲ್ಲ. ಆದರೆ ಅದಕ್ಕೆ ಇಚ್ಛಾಶಕ್ತಿ ಬೇಕು. ಆ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿದರೆ ಖಂಡಿತವಾಗಿಯೂ ನೋಂದಣಾಧಿಕಾರಿಗಳನ್ನು ಹದ್ದುಬಸ್ತಿನಲ್ಲಿಡಬಹುದು ಹಾಗೂ ಸಾರ್ವಜನಿಕರಿಂದ ಒಳ್ಳೆಯ ಹೆಸರನ್ನು ಪಡೆಯುವ ಅವಕಾಶಗಳು ಇದೆ. ಹಾಗಾಗಿ ದಯವಿಟ್ಟು ಸರ್ಕಾರ ಮತ್ತು ಮಂತ್ರಿಗಳು ಇದರ ಬಗ್ಗೆ ಕೂಡಲೇ ಗಂಭೀರವಾಗಿ ಯೋಚನೆ ಮಾಡಿ ಇದಕ್ಕೆ ಪರಿಹಾರವನ್ನು

ಕಂಡು ಹಿಡಿಯಬೇಕೆಂದು ನಿಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಇದರೊಳಗೆ ದಳ್ಳಾಳಿಗಳ ಹಸ್ತಕ್ಷೇಪಗಳು ಸಾಕಷ್ಟು ಇದೆ. ದಳ್ಳಾಳಿಗಳನ್ನು ಬಲಿ ಹಾಕುವ ಕೆಲಸ ಮಾಡಿದರೆ ಇದಕ್ಕೆಲ್ಲಾ ಪರಿಹಾರ ಮಾರ್ಗಗಳು ಸಿಗುತ್ತವೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ನಾನು ರಾಜಕೀಯಕ್ಕೆ ಬರುವುದಕ್ಕೆ ಮುಂಚೆ ಚಿಕ್ಕಮಗಳೂರಿನಲ್ಲಿ Probationary Sub Registrar ಆಗಿದ್ದೆ. ಆಗ ಉಪನೋಂದಣಾಧಿಕಾರಿಗಳ ಕಛೇರಿ ಹೇಗಿತ್ತು, ಈಗ ಹೇಗಿದೆ ಎಂಬ ವ್ಯತ್ಯಾಸಗಳು ನಮಗೆ ಗೊತ್ತಾಗುತ್ತದೆ. ಆದರೆ ನಾನು ಕಂಡಂತೆ ಕೆಲವೊಂದು ತಿದ್ದುಪಡಿಗಳನ್ನು ಮಾಡಲೇಬೇಕಾಗುತ್ತದೆ. ಈಗ ನೀವು ಒಂದು ದಾಖಲೆಯನ್ನು ತಂದು ಅದನ್ನು ನೋಂದಣಿ ಮಾಡಿ ಎಂದು ಹೇಳಿದರೆ ಅದು ನಿಮ್ಮ ಹೆಸರಿನಲ್ಲಿ ಇರುವುದೋ ಅಥವಾ ಇನ್ನೊಬ್ಬರ ಹೆಸರಿನಲ್ಲಿ ಇರುವುದೋ ಅದು ನನ್ನದು ಎಂದು ಹೇಳಿ ಅದನ್ನು submit ಮಾಡಿದರೆ ನೋಂದಣಿ ಮಾಡಿ ಬಿಡುತ್ತಾರೆ. ಇದನ್ನು ತಪ್ಪಿಸುವುದು ಹೇಗೆ? ಅದರ verification ಆಗಬೇಕು. Atleast 15-20 ದಿನ ಅದನ್ನು ಸೂಚನಾ ಫಲಕದಲ್ಲಿ ಹಾಕಿದರೆ ಯಾರಾದರೂ object ಮಾಡುವುದಿದ್ದರೆ ಅದನ್ನು object ಮಾಡಬಹುದು. ಅಣ್ಣತಮ್ಮಂದಿರಲ್ಲೂ ಇದೇ ಗಲಾಟೆ ಸಂಬಂಧಿಕರುಗಳಲ್ಲಿಯೂ ಇದೇ ಗಲಾಟೆಯಾಗುತ್ತಿದೆ. ಯಾರ ಹೆಸರಿನಲ್ಲೋ ಯಾರೋ ಬಂದು ನೋಂದಣಿ ಮಾಡಿಸುತ್ತಾರೆ. ಮೂಡಿಗೆರೆಯಲ್ಲಿ ಒಂದು ಮುಸ್ಲಿಂ ಕುಟುಂಬದ ಆಸ್ತಿಯೊಂದು ಹೀಗೇ ಆಗಿದೆ. Actually ಯಾರು ಮೂಲ ಭೂಮಾಲೀಕರಿದ್ದಾರೆ ಅವರ thumb impression ಇಲ್ಲ. ಬೇರೆ ಯಾರದ್ದೋ thumb impression ತೆಗೆದುಕೊಂಡು ಅದು ನೋಂದಣಿಯಾಗಿದೆ. ಅದಕ್ಕೆ ರೈತ ಸಂಘದವರೆಲ್ಲಾ ಹೋರಾಟ ಮಾಡಿದರು. Thumb Impression Machine ಎಲ್ಲಾ ಕಡೆ ಇರಬೇಕು. ವೆರಿಫಿಕೇಷನ್ ಮಾಡುವುದಕ್ಕೆ ಆ ಜಿಲ್ಲೆಯಲ್ಲಿ ಒಂದೇ Thumb Impression Machine ಇದೆ ಎಂದು ಹೇಳುತ್ತಾರೆ. ಅದಕ್ಕೆ ನೋಂದಣಿ ಮಾಡುವಾಗ ಸ್ವಲ್ಪ modification ಮಾಡಬೇಕಾಗುತ್ತದೆ. ಒಬ್ಬರ ಜಮೀನು ಮತ್ತೊಬ್ಬರ ಹೆಸರಿಗೆ ನೋಂದಣಿಯಾಗುವುದನ್ನು ಹೇಗೆ ತಡೆಯುತ್ತೀರಿ ಎಂಬುದು ನಿಮಗೆ ಬಿಟ್ಟಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಹಳ ಪ್ರಮುಖವಾದ ಮತ್ತು ಸಾಕಷ್ಟು ಅವ್ಯವಹಾರಗಳಿಗೆ ಅನುವು ಮಾಡಿಕೊಡುವ ವಿಷಯವನ್ನು ಮಾನ್ಯ ಪ್ರಾಣೇಶ್‌ರವರು

"ತಿದ್ದುಪಡಿಯಾಗದ ಪ್ರತಿ/ ಗಣಕಯಂತ್ರದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಪ್ರಸ್ತಾಪ ಮಾಡಿದ್ದಾರೆ. ಇವತ್ತು Registrar Office ನಲ್ಲಿ ನೋಂದಣಿಯನ್ನು ಮಾಡುವಾಗ Basically ಅವರು ಒಂದು document ಅನ್ನು registration ಮಾಡುತ್ತಾರೆ. ಆದರೆ ಆ document ನಲ್ಲಿ ಅನಧಿಕೃತವಾದ ದಾಖಲೆಗಳಿದ್ದರೆ ಅದನ್ನು verify ಮಾಡುವುದಕ್ಕೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಯಾವುದೇ ವ್ಯವಸ್ಥೆಗಳು ಇರುವುದಿಲ್ಲ. ಎರಡನೇ ಸಂಗತಿಯೆಂದರೆ, ಅಲ್ಲಿ ಅತ್ಯಂತ ಸುಸೂತ್ರವಾಗಿ ಕೆಲಸ ನಡೆಯಬೇಕೆಂದರೆ ದಲ್ಲಾಳಿಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಬೇಕು. ಅವರಿಗೆ ಹಣವನ್ನು ಕೊಟ್ಟರೆ ಮಾತ್ರ ಅವರ ಮೂಲಕ ಸಂಗ್ರಹಿಸುವ ವ್ಯವಸ್ಥೆ ಇದೆ. ಅದನ್ನು ತೆಗೆಯದಿದ್ದರೆ ಇದ್ಯಾವುದನ್ನೂ ನಡೆಸುವುದಕ್ಕಾಗುವುದಿಲ್ಲ. ಮೂರನೆಯ ಸಂಗತಿಯೆಂದರೆ, ಇತ್ತೀಚಿನ ದಿನಗಳಲ್ಲಿ ಆಧಾರ್ ಕಾರ್ಡ್ ಲಿಂಕ್ ಬಂದಿರುವುದರಿಂದ ಯಾವುದೇ ದಾಖಲೆಯು ನೋಂದಣಿಯಾಗಬೇಕಾದರೆ ಅದನ್ನು ಆಧಾರ್ ಕಾರ್ಡ್‌ಗೆ ಲಿಂಕ್ ಮಾಡದಿದ್ದರೆ ಈ ಅವ್ಯವಹಾರವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಕೋರ್ಟ್ ಕೇಸ್‌ಗಳು, ಸಿವಿಲ್ ದಾವೆಗಳು ಇದೆಲ್ಲಾ ಆಗುತ್ತಿರುವುದೇಕೆಂದರೆ ಉಪನೋಂದಣಾಧಿಕಾರಿ ಕಛೇರಿಯಲ್ಲಿ ಅನಧಿಕೃತವಾಗಿ ಈ ರೀತಿಯ ತಪ್ಪು ದಾಖಲೆಗಳನ್ನು ನೋಂದಣಿ ಮಾಡುತ್ತಿರುವುದರಿಂದ, ಆ ತಪ್ಪು ದಾಖಲೆಗಳ ಆಧಾರದಲ್ಲಿ ಅವ್ಯವಹಾರಗಳು ನಡೆಯುತ್ತಿವೆ. ಉಪನೋಂದಣಾಧಿಕಾರಿ ಕಛೇರಿಯಲ್ಲಿ documents registration ಮಾಡುವುದನ್ನು ನಿಯಂತ್ರಣ ಮಾಡದಿದ್ದರೆ ಮುಂದೆ ಆಗುವ ಎಲ್ಲಾ ಅವ್ಯವಹಾರಗಳಿಗೆ ಅದೇ ಒಂದು ಮೂಲ ದಾಖಲೆಯಾಗುತ್ತದೆ. ಇದನ್ನು ತಪ್ಪಿಸಬೇಕೆಂದರೆ ಪ್ರಮಾಣಿಕವಾಗಿ ನನಗನ್ನಿಸುವುದೇನೆಂದರೆ ಇವತ್ತಿನ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಆಧಾರ್‌ಕಾರ್ಡ್‌ಗೆ ಲಿಂಕ್ ಮಾಡುವ ವ್ಯವಸ್ಥೆ ಮಾಡಿದರೆ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಅದನ್ನು ತಾವು ದಯವಿಟ್ಟು ಗಮನಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**(232) 16.03.2017 ಪಿಕೆ/ಜಿಆರ್ 1.00**

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಕಾವೇರಿ ತಂತ್ರಾಂಶ ಉಪಯೋಗಿಸಿ ಇ-ಸ್ವತ್ತನ್ನು ನೋಂದಣಿ ಮಾಡುವುದಕ್ಕೆ ಅವಕಾಶ ಇದೆ ಎಂದು ಸರ್ಕಾರ ಹೇಳಿದೆ. ಮೊದಲು, ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಂಚಾಯತ್ ಅಧಿಕಾರಿಗಳು ಬರವಣಿಗೆಯಲ್ಲಿ ಕೊಡುತ್ತಿದ್ದರು, ಫಾರಂ-9 ಮತ್ತು ಫಾರಂ-11 ಅನ್ನು ಕೊಡುತ್ತಿದ್ದರು. ಈಗ ರಿಜಿಸ್ಟ್ರೇಷನ್ ಮಾಡಿಸಬೇಕಾದರೆ ಯಾವುದೇ ರೀತಿಯ ಕೈಬರಹಗಳಲ್ಲಿರುವುದನ್ನು ಒಪ್ಪಿಕೊಳ್ಳುತ್ತಿಲ್ಲ,

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ನೋಂದಣಿ ಮಾಡಿಸಬೇಕಾದರೆ ಆ ತಂತ್ರಾಂಶವನ್ನು ಕಂಪ್ಯೂಟರ್ ಅಕ್ಸೆಪ್ಟ್ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ, ಡಿಸೆಂಬರ್ 2016ರ ನಂತರ ತೆಗೆದುಕೊಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಮಾತ್ರ ಕಾವೇರಿ ಮತ್ತು ಭೂಮಿ ತಂತ್ರಾಂಶ ಹೊಂದಾಣಿಕೆ ಆಗುತ್ತಿದೆ, ಅದರ ಹಿಂದೆ ಏನು ಸ್ವತ್ತನ್ನು ಪಡೆದುಕೊಂಡಿದ್ದರೋ ಅದನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಹೇಳುತ್ತಾರೆ. 6 ತಿಂಗಳು, 8 ತಿಂಗಳ ಹಿಂದೆ ಯಾರ ಸ್ವತ್ತು ರಿಜಿಸ್ಟರ್ ಆಗಿದೆಯೋ ಅದು ಇ-ಸ್ವತ್ತಿನಲ್ಲಿ ಬರುತ್ತಿಲ್ಲ. ಯಾವುದಾದರೂ ಒಂದು ಹಂತದಲ್ಲಿ ಕಾವೇರಿ ಮತ್ತು ಭೂಮಿ ತಂತ್ರಾಂಶಗಳನ್ನು ಹೊಂದಾಣಿಕೆ ಮಾಡುವುದಕ್ಕೆ, ಹಳೆಯ ಬ್ಯಾಕ್‌ಲ್ಯಾಗನ್ನು ಲಿಂಕ್ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡುತ್ತೇನೆ. ನಾನು ನಮ್ಮ ತಾಯಿಯವರಿಂದ ಪಾಲು ತೆಗೆದುಕೊಂಡಿದ್ದರೂ ಅದು ಈಗಲೂ ನಮ್ಮ ತಾಯಿಯವರ ಹೆಸರಲ್ಲಿ ಇದೆಯೇ ಹೊರತು ನನ್ನ ಹೆಸರಿನಲ್ಲಿ ಬದಲಾವಣೆ ಮಾಡಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಕಂಪ್ಯೂಟರ್ ಇಂಥದ್ದಕ್ಕೆ ಸಹಕಾರ ಕೊಡುತ್ತಿಲ್ಲ ಎಂದು ಹೇಳುತ್ತಾರೆ. ಇ-ಸ್ವತ್ತಿಗೆ ಸಂಬಂಧಪಟ್ಟಂತೆ ಏನು ತಂತ್ರಾಂಶವನ್ನು ಹೊಂದಾಣಿಕೆ ಮಾಡಬೇಕಾಗಿದೆಯೋ ಅದರ ಕಡೆ ಸರ್ಕಾರ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಒಳ್ಳೆಯ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸುಮಾರು 1 ಕೋಟಿ 25 ಲಕ್ಷ ಹೆಕ್ಟೇರ್ ಕೃಷಿಯೋಗ್ಯ ಜಮೀನು ನಮ್ಮಲ್ಲಿ ಇದೆ. ಒಂದು ಕಡೆ ಕೃಷಿಯೇತರ ಚಟುವಟಿಕೆ ನಡೆಯುತ್ತಿದೆ, ಇನ್ನೊಂದು ಕಡೆ ಅರಣ್ಯ ನಾಶವಾಗುತ್ತಿದ್ದು ಇದರಿಂದ ಪರಿಸರದ ಮೇಲೆ ಕೆಟ್ಟ ಪರಿಣಾಮ ಆಗುತ್ತಿದೆ. ನಾನು ಆ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಪಟ್ಟಣ ಮತ್ತು ಹಳ್ಳಿಗಳಲ್ಲಿ, the Karnataka Land Revenue Act ಪ್ರಕಾರ ಕೃಷಿಯೇತರ ಬಾಬ್ತಿಗೆ ಜಾಗವನ್ನು ಬಳಕೆ ಮಾಡಿಕೊಳ್ಳುವಂಥದ್ದು ಅಪರಾಧವಾಗಿದೆ. The Karnataka Land Revenue Act ನಲ್ಲಿ there is a provision to impose fine. ಇಲ್ಲಿಯವರೆಗೂ ಕೃಷಿಯೇತರ ಚಟುವಟಿಕೆಗಳಿಗೆ ರಾಜ್ಯದ 176 ತಾಲ್ಲೂಕುಗಳಲ್ಲಿ, ಅವ್ಯಾಹತವಾಗಿ ನಡೆಯುತ್ತಿರುವ ಈ ಚಟುವಟಿಕೆ ಮೇಲೆ ಇಲಾಖೆಯವರು ಪರಿಣಾಮಕಾರಿಯಾಗಿ ಕ್ರಮ ಜರುಗಿಸಿಲ್ಲ. ಪಾವಗಡ, ಹೊಸಕೋಟೆ, ದೇವನಹಳ್ಳಿ, ಆನೇಕಲ್, ಬೆಂಗಳೂರಿನ ಸುತ್ತಮುತ್ತ ಅಥವಾ ಮೈಸೂರಿನ ನಂಜನಗೂಡು ಮತ್ತು ಹೆಚ್.ಡಿ.ಕೋಟೆ ಈ ಎಲ್ಲಾ ಭಾಗಗಳಲ್ಲಿ ಕೃಷಿಯೇತರ ಬಾಬ್ತಿಗೆ ಜಮೀನನ್ನು ಬಳಕೆ ಮಾಡಿಕೊಂಡಿದ್ದಾರೆ, ವಿಶೇಷವಾಗಿ ಇಂತಹ ಕಡೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಬಡಾವಣೆಗಳನ್ನು ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಎರಡನೆಯದಾಗಿ, ಕೃಷಿಯೇತರ ಬಾಬ್ತಿಗೋಸ್ಕರ ಡಿಸಿ ಅನುಮತಿ ಪಡೆದು ಆ ಮೂಲಕ ಕನ್‌ವರ್ಷನ್ ಮಾಡಿಸುವುದಕ್ಕೆ ಅವಕಾಶ ಇದೆ. ಕನ್‌ವರ್ಷನ್ ಆಗಿರುವ ಅನೇಕ ಕಡೆ contiguity ಇರುವುದಿಲ್ಲ. ಅನೇಕ ಕಡೆ ಅಭಿವೃದ್ಧಿ ಎನ್ನುವುದು ಒಂದೇ ಭಾಗದಲ್ಲಿ ಆಂಜನೇಯನ ಬಾಲದ ಹಾಗೆ ಉದ್ದಕ್ಕೂ ಬೆಳೆದು ಹೋಗಿರುತ್ತದೆ. ಪಾವಗಡದಲ್ಲಿ ಇದೇ ರೀತಿ ಒಂದೇ ಕಡೆ ಬೆಳೆದು ಹೋಗಿರುವುದನ್ನು ನಾವು ನೋಡಬಹುದು. ಒಂದು ವೇಳೆ ಕೃಷಿಯೇತರ ಬಾಬ್ತಿಗೆ, ವಿಶೇಷವಾಗಿ ನಿವೇಶನಗಳನ್ನು ವಿಂಗಡಣೆ ಮಾಡಲು ಅನುಮತಿ ಕೊಡುವ ಸಂದರ್ಭ ಬಂದರೆ, ಅಲ್ಲಿ ನೀರಿನ ವ್ಯವಸ್ಥೆ ಇದೆಯೇ, ರಸ್ತೆಯ ವ್ಯವಸ್ಥೆ ಇದೆಯೇ, contiguity ಇದೆಯೇ, ಜನರಿಗೆ ಇದು ಉಪಯೋಗವಾಗುತ್ತದೆಯೇ ಎನ್ನುವುದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಬಡಾವಣೆಗಳನ್ನು ಮಾಡುವುದಕ್ಕೆ ಅನುಮತಿ ಕೊಡಬೇಕು. ಆ ನಿಟ್ಟಿನಲ್ಲಿ ನಿಯಮಾವಳಿಗಳನ್ನು ರೂಪಿಸಿದರೆ ಇಂಥದ್ದನ್ನು ನಿಯಂತ್ರಿಸುವುದಕ್ಕೆ ಸಾಧ್ಯವಿದೆ. ಆ ಭಾಗದಲ್ಲಿ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಯಾವರೀತಿ ಕ್ರಮ ಕೈಗೊಳ್ಳಬಯಸಿದೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ ಹಾಗೆ, ಈ ವಿಷಯ ಗಂಭೀರವಾಗಿದೆ. ನಾನು ಇದನ್ನು ಗಂಭೀರವಾಗಿಯೇ ತೆಗೆದುಕೊಳ್ಳುತ್ತೇನೆ. ಈ ನ್ಯೂನತೆಗಳನ್ನು ತಡೆಗಟ್ಟಬೇಕು ಎನ್ನುವ ಕಾರಣದಿಂದ ಹಿಂದೆ ಈ ತಂತ್ರಾಂಶವನ್ನು ಜಾರಿಗೆ ತರಲಾಗಿತ್ತು. ಮಾನ್ಯ ಸದಸ್ಯರು ಕೊಟ್ಟ ಅಭಿಪ್ರಾಯದ ಪ್ರಕಾರ ಅದು ನಿರ್ದಿಷ್ಟ ರೂಪದಲ್ಲಿ ಕೆಲಸ ಮಾಡುತ್ತಿಲ್ಲ ಎನ್ನುವ ಸಂಶಯ ನನಗೆ ಬರುತ್ತಿದೆ. ಆ ದೃಷ್ಟಿಯಿಂದ ನಾನು ಇದನ್ನು ತತಕ್ಷಣ ಸಮಗ್ರವಾಗಿ ಆಲೋಚನೆ ಮಾಡಿ, ಒಂದು ರೂಪಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆ ಕೊಡುತ್ತೇನೆ. ನಮ್ಮ ಮಾನ್ಯ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಹೇಳಿದರು. ವಿಶೇಷವಾಗಿ ಬೆಂಗಳೂರಿನಂತಹ ನಗರದಲ್ಲಿ, ಬೇರೆ ನಗರ-ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಅಕ್ರಮ ವ್ಯವಹಾರ ನಡೆಯುತ್ತಿರುವುದು ನಿಜ. ಅದನ್ನು ತಡೆಗಟ್ಟುವ ಅಗತ್ಯತೆ ಕೂಡ ಇದೆ. ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿರುವ ಅನೇಕ ಜನ ನಮ್ಮ ರಾಜಕಾರಣಿಗಳಿಗೆ ಪೋಷಕರಾಗಿ ಸಹಾಯ ಮಾಡುತ್ತಿರುವಂಥದ್ದೂ ಕೂಡ ನಮ್ಮ ಗಮನಕ್ಕೆ ಬಂದಿದೆ. ಈ ದಿಸೆಯಲ್ಲಿ ಕಠಿಣ ಕ್ರಮ ಕೈಗೊಂಡು ನಿಯಂತ್ರಣಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಭಾನುಪ್ರಕಾಶ್‌ರವರು ಇ-ತಂತ್ರಾಂಶದ ಬಗ್ಗೆ ಹೇಳಿದರು.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದನ್ನೂ ಕೂಡ ನಾನು ಗಮನಿಸುತ್ತೇನೆ. ನನಗೂ ಕೂಡ ಇ- ಭೂಮಿ ತಂತ್ರಾಂಶದ ಬಗ್ಗೆ ವಿವರಗಳು ಗೊತ್ತಿರಲಿಲ್ಲ. ಇದು ಗೊತ್ತಾದ ಮೇಲೆ ನಾನೇ ಅಲ್ಲಿಗೆ ಹೋಗಿ ಅದರ ನ್ಯೂನತೆಗೆ ಸಂಬಂಧಪಟ್ಟಂತೆ ತಿದ್ದುಪಡಿ ಮಾಡಲು ಸೂಚಿಸಿದೆ. ಸಾಗುವಳಿ ಚೀಟಿ ಕೊಟ್ಟ ಕೂಡಲೇ ಅದು ಆರ್‌ಟಿಸಿಗೆ ಎಂಟ್ರಿ ಆಗಬೇಕು. ಆರ್‌ಟಿಸಿಗೆ ಎಂಟ್ರಿ ಆಗಬೇಕಾದರೆ ಇವರ ಅನುಮತಿ ಪಡೆಯಬೇಕಾಗಿತ್ತು. ಇದು ಗೊತ್ತಾದ ಮೇಲೆ ಈ ಪದ್ಧತಿಯನ್ನು ತೆಗೆದು ಹಾಕಿ, ನಮ್ಮ ತಹಸೀಲ್ದಾರರೇ ಆರ್‌ಟಿಸಿಯನ್ನು ಎಂಟ್ರಿ ಮಾಡಬೇಕೆಂದು ತಿಳಿಸಿದೆ. ಅದರ ಮಾಹಿತಿ ಉದ್ದೇಶಕ್ಕೋಸ್ಕರ ಬೇಕಾದರೆ ಅವರು ಫೀಡ್ ಮಾಡಬಹುದು. ಅದು ಬಿಟ್ಟು, ಅವರ ಅನುಮತಿ ಬರುವವರೆಗೂ ಕಾಯುವುದಕ್ಕೆ ಹೋಗಬೇಡಿ ಎಂದು ಆದೇಶ ಕೊಡುವುದಕ್ಕೆ ಹೊರಟಿದ್ದೇನೆ. ನ್ಯೂನತೆ ಪರಿಹರಿಸುವ ನಿಟ್ಟಿನಲ್ಲಿ ನಾವು ಮುಂದಿನ ಹೆಜ್ಜೆ ಇಡುತ್ತೇವೆ. ಮಾನ್ಯ ಉಗ್ರಪ್ಪನವರು ಕೂಡ ಅವರ ಅನುಭವದ ಮಾತುಗಳನ್ನು ಹೇಳಿದರು. ಹಿಂದೆ ಇದ್ದಂಥ ಶಾನುಭೋಗರುಗಳು ಆಯಾ ಕ್ಷೇತ್ರಗಳಲ್ಲೇ ವಾಸ ಮಾಡುತ್ತಿದ್ದರು. ಪ್ರತಿವರ್ಷ ಒಂದು ಸಲ ಪ್ರತಿಯೊಂದು ಸರ್ವೆ ನಂಬರ್‌ನ ಜಮೀನಿಗೆ ಹೋಗಿ ಅಲ್ಲಿ ಯಾವ ಬೆಳೆ ಹಾಕಿದ್ದಾರೆ ಅಥವಾ ಆ ಜಾಗ ಹಾಳು ಬಿದ್ದಿದೆಯೇ, ಅಲ್ಲಿ ನೀರು ಇದೆಯೇ ಈ ಎಲ್ಲವನ್ನೂ ನೋಡುತ್ತಿದ್ದರು. ಆದರೆ ಈಗ ವಿಲೇಜ್ ಅಕೌಂಟೆಂಟ್‌ಗಳು ಆಯಾ ಜಾಗಗಳಲ್ಲಿ ವಾಸ ಮಾಡುತ್ತಿಲ್ಲ, ಪ್ರತಿಯೊಂದು ಸರ್ವೆ ನಂಬರ್‌ಗಳನ್ನು ನೋಡುತ್ತಿಲ್ಲ, ಅಲ್ಲೇನು ದುರುಪಯೋಗ ಆಗುತ್ತಿದೆ ಎಂದು ಕೇಳುವವರು ಇಲ್ಲ. ಈ ನಿಟ್ಟಿನಲ್ಲಿ ವರದಿ ಮಾಡದೇ ಇರುವುದರಿಂದ ತಹಶೀಲ್ದಾರರು ಕ್ರಮ ಕೈಗೊಳ್ಳುವುದಕ್ಕೆ ಆಗುತ್ತಿಲ್ಲ. ಹಾಗಾಗಿ ವಿಲೇಜ್ ಅಕೌಂಟೆಂಟ್‌ಗಳು ಆಯಾ ಪ್ರದೇಶಗಳಲ್ಲಿ ವಾಸ ಮಾಡುವಂತಾಗಬೇಕು ಎನ್ನುವ ದೃಷ್ಟಿಯಿಂದ ಅಲ್ಲೇ ವಸತಿ ಸಮುಚ್ಛಗಳನ್ನು ಕಟ್ಟಿಸಿಕೊಡಬೇಕು ಎನ್ನುವ ಯೋಜನೆಯನ್ನು ತಯಾರು ಮಾಡಿ ಇಟ್ಟುಕೊಂಡಿದ್ದೇನೆ. ಈ ನ್ಯೂನತೆಗಳನ್ನು ಸರಿ ಮಾಡಬೇಕಾದರೆ ನಮ್ಮ ವಿಲೇಜ್ ಅಕೌಂಟೆಂಟ್‌ಗಳು ಅವರ ವ್ಯಾಪ್ತಿಯಲ್ಲೇ ವಾಸವಿರುವಂತೆ ವ್ಯವಸ್ಥೆ ಮಾಡಬೇಕಾಗುತ್ತದೆ. ಅವರುಕಡ್ಡಾಯವಾಗಿ ಪ್ರತಿವರ್ಷ, ಪ್ರತಿ ಸರ್ವೆ ನಂಬರ್‌ಗೆ ಭೇಟಿಕೊಟ್ಟು ಅದರ ಬಗ್ಗೆ ವರದಿಯನ್ನು ಇಟ್ಟುಕೊಳ್ಳಬೇಕು ಎಂದು ಹಿಂದೆ ಇದ್ದ ನಿಯಮದಂತೆ ಈಗಲೂ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಮಾನ್ಯ ಸಭಾಪತಿಗಳೆ, ಕೃಷಿ ಭೂಮಿಯಲ್ಲಿ ಒಂದು ಮನೆ ಕಟ್ಟಿಕೊಳ್ಳುತ್ತಾರೆ, ನಂತರ ರಸ್ತೆ ಮಾಡುತ್ತಾರೆ. ಇಂಥದ್ದನ್ನು ಪೂರ್ವಭಾವಿಯಾಗಿ ಅನುಮತಿಯನ್ನು ಪಡೆದೇ ಮಾಡಬೇಕಾಗುತ್ತದೆ. ಫಾರ್ಮ್‌ಹೌಸ್ ಮಾಡುವುದಕ್ಕೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯ ಕಾನೂನಿನಲ್ಲಿ ಬೇರೆ ನಿಯಮಗಳಿವೆ. ಕೆಲವು ನ್ಯೂನತೆಗಳು ಆಗುವುದಕ್ಕೆ ಕಾರಣ ಏನೆಂದರೆ ಆಡಳಿತದಲ್ಲಿ ತಪ್ಪಿರುವ ಬಿಗಿ. ಇಂಥದ್ದನ್ನು ಒಂದು

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ದಾರಿಗೆ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಬಡಾವಣೆಗಳನ್ನು ಮಾಡುವ ಸಂದರ್ಭದಲ್ಲಿ, ಅಲ್ಲಿ ನೀರಿನ ಸೌಲಭ್ಯ ಇದೆಯೇ ಅಥವಾ ಅವಶ್ಯಕ ಇತರ ಸೌಲಭ್ಯಗಳು ಇವೆಯೇ ಎನ್ನುವುದನ್ನು ತಿಳಿದುಕೊಂಡು ಅದಕ್ಕೆ ಅನುಮತಿ ಕೊಡುವ ಅವಶ್ಯಕತೆ ಇರುವುದು ನಿಜ. ವಿಶೇಷವಾಗಿ ಬೆಂಗಳೂರಿನಂತಹ ಪ್ರದೇಶಗಳಲ್ಲಿ ಹೆಚ್ಚು ಗಮನ ಕೊಡಬೇಕಾಗುತ್ತದೆ. ಮಾನ್ಯ ಉಗ್ರಪ್ಪನವರು ಹೇಳಿದಂತಹ ಸಲಹೆಗಳನ್ನು ಗಂಭೀರವಾಗಿ ತೆಗೆದುಕೊಂಡು ಅದಕ್ಕೆ ಹೊಸ ನಿಯಮಾವಳಿಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಸಬ್-ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿರುವ ನ್ಯೂನತೆಗಳನ್ನು ಮತ್ತು ತಂತ್ರಾಂಶ ವ್ಯವಸ್ಥೆಯಲ್ಲಿ ಕಂಡು ಬರುತ್ತಿರುವ ನ್ಯೂನತೆಗಳನ್ನು ಸರಿಪಡಿಸುವಂಥದ್ದು ನಮ್ಮ ಕರ್ತವ್ಯವಾಗಿದೆ.

**(233) 16.03.2017 ಕೆಹೆಚ್/ಜಿಆರ್ 1.10**

**ಶ್ರೀ ಕಾಗೋಡುತಿಮ್ಮಪ್ಪ(ಮುಂದು):-**

ಶ್ರೀಮತಿ ಮೋಟಮ್ಮನವರು ಹೇಳಿದ ಸರ್ವೇ ಬಗ್ಗೆಯೂ ಸಹ ಗೊತ್ತಿದೆ. ಒಟ್ಟಿನಲ್ಲಿ ಇದಕ್ಕೆ ಒಂದು ಹೊಸ ರೂಪ ಕೊಡುವುದಕ್ಕೆ ಮತ್ತು ನ್ಯೂನತೆ ಹಾಗೂ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನುಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಆಧಾರ್ ಅನ್ನು ಲಿಂಕ್ ಮಾಡುವ ವಿಚಾರವನ್ನು ಸಹ ಗಂಭೀರವಾಗಿ ಪರಿಗಣಿಸುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಫಾರ್ಮ್‌ಹೌಸ್‌ಗೆ ಸಂಬಂಧಿಸಿದಂತೆ ಸರಿಯಾದ ಮಾರ್ಗಸೂಚಿ ಇಲ್ಲ. ಇದು ಯಾವ ಪ್ರಾಧಿಕಾರಕ್ಕೆ ಹೋಗಬೇಕು, ಯಾವ ಪ್ರಾಧಿಕಾರವನ್ನು ಕೇಳಬೇಕು ಎನ್ನುವ ಬಗ್ಗೆ ಮಾಹಿತಿಯಿಲ್ಲ. ಎರಡನೆಯದು ವಿದ್ಯುತ್ ಸಂಪರ್ಕಕ್ಕೆ ನಿರಾಕ್ಷೇಪಣಾ ಪತ್ರವನ್ನು ನೀಡುವುದಕ್ಕೆ ಮತ್ತು ಫಾರ್ಮ್‌ಹೌಸ್ ಒಳಗಡೆ ವಿದ್ಯುತ್ ಸಂಪರ್ಕವನ್ನು ತೆಗೆದುಕೊಳ್ಳಬೇಕು ಎಂದರೆ ನಾವು ಯಾರ ಹತ್ತಿರ ಹೋಗಬೇಕು ಎನ್ನುವುದು ಗೊಂದಲವಾಗಿದೆ. ರೈತರಿಗೆ ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಇದರ ಬಗ್ಗೆ ಸ್ಪಷ್ಟತೆ ಬೇಕು. ವಿದ್ಯುತ್ ಸಂಪರ್ಕಕ್ಕೆ ನಿರಾಕ್ಷೇಪಣಾ ಪತ್ರವನ್ನು ನೀಡುವವರು ಯಾರು? ಇದಕ್ಕೆ ಸ್ಪಷ್ಟವಾದ ಆದೇಶವಿಲ್ಲ. ಆದ್ದರಿಂದ ನಮಗೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳುವುದಕ್ಕೆ ಸಮಸ್ಯೆಯಾಗುತ್ತಿದೆ. ಮೊದಲನೆಯದು ಫಾರ್ಮ್‌ಹೌಸ್ ಅನ್ನು ಕಟ್ಟುವುದಕ್ಕೆ ಮತ್ತು ಎರಡನೆಯದು ವಿದ್ಯುತ್ ಸಂಪರ್ಕವನ್ನು ಒದಗಿಸುವುದಕ್ಕೆ, ಇದುಯಾವ ಪ್ರಾಧಿಕಾರಕ್ಕೆ ಬರುತ್ತದೆ ಎಂಬುದು ಗೊತ್ತಿಲ್ಲ. ರೈತರು ಎಲ್ಲಿಗೆ ಹೋಗಬೇಕು. ಅವರನ್ನು ಕೇಳಿದರೆ ಅಲ್ಲಿಗೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಹೋಗು, ಇವರನ್ನು ಕೇಳಿದರೆ ಇಲ್ಲಿಗೆ ಹೋಗು ಎಂದು ಹೇಳುತ್ತಾರೆ. ಅದು ಯಾರಿಗೆ ಹೋಗಬೇಕು. ಎಲ್ಲಿ ಮಾಡಿಸಿಕೊಳ್ಳಬೇಕು ಎಂಬುದು ಆಗಬೇಕು.

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ನಾವು ಗುಡ್ಡಗಾಡು ಪ್ರದೇಶದಿಂದ ಬಂದವರು. ನಮಗೆ ಖಾಸಗಿ ಜಾಗ ಇದ್ದರೆ ಮತ್ತು ಸರ್ಕಾರಿ ಜಾಗದಲ್ಲೂ ಸಹ ಬಂದಿದೆ. ಅಲ್ಲಿ ಕಟ್ಟಿಕೊಂಡು ಬಿಡುತ್ತಾರೆ. ಖಾತೆ ಮಾಡಿಸಿದರೆ, ಕಂದಾಯ ಕೊಟ್ಟರೆ ಅವರು ವಿದ್ಯುತ್ ಸಂಪರ್ಕವನ್ನು ಕೊಡುವಂಥದ್ದು ಸಹ ಇದೆ. ಕಂದಾಯ ಕಾನೂನಿನಲ್ಲಿ ಫಾರ್ಮ್‌ಹೌಸ್‌ನ್ನು ಕಟ್ಟಿಸಿಕೊಳ್ಳುವಾಗ ಅದನ್ನು ಪರಿವರ್ತನೆ ಮಾಡಬೇಕೆನ್ನುವ ಅಗತ್ಯವಿಲ್ಲ. ಅವರ ಸ್ವಂತ ಜಾಗದಲ್ಲಿ ಅನುಮತಿಯನ್ನು ತೆಗೆದುಕೊಂಡು ಫಾರ್ಮ್‌ಹೌಸ್‌ನ್ನು ಕಟ್ಟಿದರೆ ಮತ್ತು ಮೆಸ್ಕಾಂರವರಿಗೆ ಅರ್ಜಿಕೊಟ್ಟರೆ ಅವರು ವಿದ್ಯುತ್ ಸಂಪರ್ಕವನ್ನು ಕೊಡುತ್ತಾರೆ. ತಾವು ಹೇಳಿರುವುದು ನನಗೆ ಹೊಸದಾಗಿ ಕಾಣುತ್ತಿದೆ. ಆದರೂ ಕೂಡ ತಾವು ಹೇಳಿರುವಂತಹ ವಿಷಯಗಳು ಗಂಭೀರವಾಗಿವೆ. ಇದನ್ನು ಸರಿಪಡಿಸುವಂತಹ ಅಗತ್ಯ ಕೂಡ ಇದೆ. ಯಾರು ಎಂದು ತಿಳಿದುಕೊಂಡು ಒಂದು ಸೂಕ್ತ ಆದೇಶವನ್ನು ಹೊರಡಿಸಬೇಕಾದ ಅಗತ್ಯವಿದೆ. ಅದನ್ನು ಖಂಡಿತವಾಗಿಯೂ ಮಾಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಈ ಹಿಂಗಾರು ಮತ್ತು ಮುಂಗಾರು ಬೆಳೆಗಳನ್ನು ಬೆಳೆಯುವಂತಹ ಸಮೀಕ್ಷೆಯನ್ನು ಕಡ್ಡಾಯವಾಗಿ ಮಾಡುವುದಕ್ಕೆ ಸರ್ಕಾರ ಮುಂದಾದರೆ, ಆಗ ಏನಾಗುತ್ತದೆ ಎಂದರೆ ಆರ್.ಟಿ.ಸಿ ಯಲ್ಲಿ . . . .

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಹಿಂಗಾರು ಮತ್ತು ಮುಂಗಾರು ಬೆಳೆಗಳನ್ನು ಪರೀಕ್ಷೆ ಮಾಡುವುದಕ್ಕೆ ಈಗ ಇದ್ದೇಇದೆ. ಆದರೆಇದನ್ನು ಕಾರ್ಯಗತಗೊಳಿಸುತ್ತಿಲ್ಲ. ಏಕೆಂದರೆ ಅಲ್ಲಿರುವ ತಹಶೀಲ್ದಾರ್ ಮತ್ತು R.I., ಗಳು ಹೆಚ್ಚು-ಕಡಿಮೆ ಒಂದು ರೀತಿಯಲ್ಲಿ ಸತ್ತು ಹೋಗಿದ್ದಾರೆ. ಅಲ್ಲಿ ನೇಮಕಾತಿ ಮಾಡುತ್ತಿಲ್ಲ. Promotees ಎಲ್ಲಾ ಇದ್ದಾರೆ. ಆದ್ದರಿಂದ ಅದನ್ನು ಬಿಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ಆ ನೋವು ಗೊತ್ತಿದೆ. ಹಾಗಾಗಿ ನೀವು ಹೇಳಿದ್ದು ನಿಜ. ಏಕೆಂದರೆ ಮುಂಗಾರು ಬೆಳೆನೇ ಆಗಲಿ, ಹಿಂಗಾರು ಬೆಳೆನೇ ಆಗಲಿ, ಅವರು ಏನು ಬೆಳೆ ಬೆಳೆಯುತ್ತಾರೆ ಎನ್ನುವುದನ್ನು ಯಾರು ಹೋಗಿ ಕಂಡುಹಿಡಿಯುತ್ತಾರೆ. ಅದನ್ನು V.A., ಗಳೇ ಮಾಡಬೇಕು. ಬೇರೆ ಯಾರು ಮಾಡುವುದಕ್ಕೆ ಆಗುವುದಿಲ್ಲ. ಇದು ಸ್ವಲ್ಪ ದಾರಿ ತಪ್ಪಿದೆ. ನೀವು ಹೇಳಿದ ಹಾಗೆ ಇದನ್ನು ದಾರಿಗೆ ತರುವಂತಹ ಕೆಲಸ ಮತ್ತೊಮ್ಮೆ ಇದಕ್ಕೆ ಅಧಿಕೃತವಾದಂತಹ ಆದೇಶವನ್ನು ಹೊರಡಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಉಪಸಭಾಪತಿಯವರು:–** ಶ್ರೀ ಪುಟ್ಟಣ್ಣನವರೇ, ಸರ್ಕಾರ ನಾಳೆ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೇವೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಪ್ರಶ್ನೆಗಳು ಬರುವುದೇ ಅಪರೂಪ. ಈಗ ತೆಗೆದುಕೊಳ್ಳುವುದಿಲ್ಲ ಎಂದರೆ ಏನು ಮಾಡುವುದು.

**ಉಪಸಭಾಪತಿಯವರು:–** ಈ ಪ್ರಶ್ನೆಗೆ ನಾಳೆ ಅವಕಾಶವನ್ನು ಕೊಡುತ್ತೇನೆ. ಈಗ ಗಮನ ಸೆಳೆಯುವ ಸೂಚನೆಗಳು ಮುಕ್ತಾಯಗೊಂಡಿದೆ. ನಿಯಮ 330 ರಡಿಯಲ್ಲಿ ಶ್ರೀ ಎಂ.ಡಿ.ಲಕ್ಷ್ಮೀನಾರಾಯಣರವರು ಮಾತನಾಡುತ್ತಾರೆ.

**06. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

**ವಿಷಯ:– ಶಿಕ್ಷಣ ಇಲಾಖೆ ಶಾಲಾ ಸಮವಸ್ತ್ರಗಳ ದರ ಕಡಿತ ಮಾಡಿರುವುದರಿಂದ ರಾಜ್ಯದ ನೇಕಾರರು ಉದ್ಯೋಗ ತೊರೆದು ವಲಸೆ ಹೋಗುವ ಪರಿಸ್ಥಿತಿ ಉಂಟಾಗಿರುವ ಬಗ್ಗೆ**

****

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಿಯಮ 330ರ ಅಡಿಯಲ್ಲಿ ರಾಜ್ಯದ ನೇಕಾರರ ಸಮುದಾಯಕ್ಕೆ ಅನ್ಯಾಯವಾಗಿರುವಂತಹ ಸಂದರ್ಭದಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ತಾವು ಅನುಮತಿಯನ್ನು ಕೊಟ್ಟಿರುವುದಕ್ಕೆ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಶಿಕ್ಷಣ ಇಲಾಖೆಯ ಮೂಲಕ ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡುತ್ತಿರುವ ವಿದ್ಯಾ ವಿಕಾಸ ಯೋಜನೆಯಡಿ ಸರಬರಾಜು ಆದೇಶಗಳನ್ನು ರಾಜ್ಯ ಸರ್ಕಾರದ ಅಧೀನ ಸಂಸ್ಥೆಗಳಾದ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮಗಳ ಮೂಲಕ ರಾಜ್ಯದ ನೇಕಾರರಿಗೆ ನೀಡಿ ಅವರಿಗೆ ನಿರಂತರ ಉದ್ಯೋಗ ಭರವಸೆಯನ್ನು ನೀಡುವುದು ಸರ್ಕಾರದ ಉದ್ದೇಶವಾಗಿದೆ. ಅದರಂತೆ ಹಿಂದೆ ಎರಡು ವಿಭಾಗಗಳ ಆದೇಶವನ್ನು ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಎರಡು ವಿಭಾಗಗಳ ಆದೇಶವನ್ನು ವಿದ್ಯುತ್ ಮಗ್ಗ ನಿಗಮಕ್ಕೆ (ಈಗಿನ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ) ನೀಡಲಾಗುತ್ತಿತ್ತು. ಕ್ರಮೇಣ ವಿದ್ಯುತ್ ಮಗ್ಗ ವಲಯಕ್ಕೆ ನೀಡುತ್ತಿರುವ ಸರಬರಾಜು ಆದೇಶಗಳನ್ನು ಕಡಿಮೆ ಮಾಡಿ ಒಂದು ವಿಭಾಗಕ್ಕೆ ಸೀಮಿತಗೊಳಿಸಿರುವುದು ಮತ್ತು ನಂತರದ ವರ್ಷಗಳಲ್ಲಿ ಬೆಳಗಾವಿ ವಿಭಾಗದ ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸಿ ಸರಬರಾಜು ಆದೇಶದ ಪ್ರಮಾಣವನ್ನು ತೀವ್ರವಾಗಿ ಕಡಿತಗೊಳಿಸಿ ಈ ಬಟ್ಟೆಯನ್ನು ಟೆಂಡರ್ ಮೂಲಕ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಖರೀದಿಸುತ್ತಿರುವುದರಿಂದ ರಾಜ್ಯದ ವಿದ್ಯುತ್ ಮಗ್ಗ ನೇಕಾರರು ಕೆಲಸವಿಲ್ಲದೆ ತೀವ್ರ ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಈ ಬಗ್ಗೆ ಹಾಗೂ ಕಳೆದ ಸಾಲಿನಲ್ಲಿ ವಿದ್ಯುತ್ ಮಗ್ಗ ನಿಗಮಕ್ಕೆ ಸಮವಸ್ತ್ರ ಪೂರೈಕೆಗೆ ಸರ್ಕಾರವೇ ನಿಗದಿಪಡಿಸಿರುವ ದರದಲ್ಲಿ ಶಿಕ್ಷಣ ಇಲಾಖೆಯು ಪ್ರಸಕ್ತ ವರ್ಷದಲ್ಲಿ ಅವೈಜ್ಞಾನಿಕವಾಗಿ ತೀವ್ರ ಪ್ರಮಾಣದಲ್ಲಿ ದರಕಡಿತ ಮಾಡಲು ಪ್ರಸ್ತಾಪಿಸಿರುವುದರಿಂದ ವಿದ್ಯುತ್ ಮಗ್ಗ ನೇಕಾರರು ಕಂಗಾಲಾಗಿ ಉದ್ಯೋಗವನ್ನು ತೊರೆದು ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿರುವ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೆ,

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ.)**

ಗೌರವಾನ್ವಿತ ಸದಸ್ಯರು ಕೇಳಿರುವಂತಹ ನಿಯಮ 330 ರಡಿಯಲ್ಲಿ ಬಹಳ ಸಮಗ್ರವಾದಂತಹ ಉತ್ತರವನ್ನು ನೀಡಿದ್ದೇನೆ. ಬಹಳ ಸ್ಪಷ್ಟವಾಗಿ ಹೇಳಬೇಕಾದರೆ, ಶಿಕ್ಷಣ ಇಲಾಖೆ, ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗಗಳಿಗೆ ಪ್ರೋತ್ಸಾಹ ಕೊಡಬೇಕು. ಆ ಉದ್ದೇಶದಿಂದ ನಮ್ಮ ಇಲಾಖೆಗೆ ಬರುವಂತಹ ಎಲ್ಲ ಸಮವಸ್ತ್ರಗಳನ್ನು ಕೈಮಗ್ಗದ ನೇಕಾರರಿಂದ ಪಡೆಯಬೇಕು ಎಂಬುವುದಕ್ಕೆ ಇದನ್ನು ವಿದ್ಯಾ ಸಿರಿ ಯೋಜನೆಯಡಿಯಲ್ಲಿ ಮಾಡುತ್ತಿದ್ದೇವೆ. ಕಳೆದ ವರ್ಷ ಎಪ್ಪತ್ತೆರಡು ಲಕ್ಷ ಮೀಟರ್ ಬಟ್ಟೆಯನ್ನು ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ವಿದ್ಯಾ ವಿಕಾಸ ಸಂಸ್ಥೆಗಳಿಂದ ವಿದ್ಯುತ್‌ಚಾಲಿತ ಮಗ್ಗಗಳಿಂದ ಖರೀದಿ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಕೆಲವೊಂದು ಕಡೆಗಳಲ್ಲಿ ಸ್ವಲ್ಪ ವಿಳಂಬ ಕೂಡ ಆಯಿತು. ಆ ಕಾರಣದಿಂದ ಸನ್ಮಾನ್ಯ ಮುಖ್ಯಮಂತ್ರಿಗಳ ಮಧ್ಯಪ್ರವೇಶದಿಂದ ಒಂದು ಸಭೆಯನ್ನು ಮಾಡಿ, ಅವರ ಉತ್ಪಾದನೆಯ ಸಾಮರ್ಥ್ಯವನ್ನು ಮನಗಂಡು ಅವರಿಂದ ಖರೀದಿ ಮಾಡುವಂತಹ ಮೂರು ವರ್ಷದ ಒಪ್ಪಂದ ಕೂಡ ಮಾಡುವುದಕ್ಕೆ ಮುಂದಾಗಿದ್ದೇವೆ. ಇವರ ಸಾಮರ್ಥ್ಯವನ್ನು ಮೀರಿ ನಮ್ಮ ಅವಶ್ಯಕತೆಗೆ ಇರುವಂತಹ ಬಟ್ಟೆಗಳನ್ನು ಮಾರುಕಟ್ಟೆಯಿಂದ ಟೆಂಡರ್ ಮೂಲಕ ಖರೀದಿ ಮಾಡುವಂತಹ ಪದ್ಧತಿ ಕೂಡ ನಮ್ಮ ಇಲಾಖೆಯಲ್ಲಿದೆ. ಕಳೆದ ವರ್ಷ ನಾವು ಮಾರುಕಟ್ಟೆಯಿಂದ ಖರೀದಿ ಮಾಡಿರುವಂತಹ ಬಟ್ಟೆಯ ದರಗಳೇನು ಇತ್ತು. ಆ ದರಗಳನ್ನು ಆಧಾರವಾಗಿ ಇಟ್ಟುಕೊಂಡಿದ್ದೇವೆ. ಕೈಮಗ್ಗದ ನೇಕಾರರಿಗೆ ಸುಮಾರು 64.31 ಲಕ್ಷ ಮೀಟರ್ ಬಟ್ಟೆಗಳನ್ನು ನಾವು ಈಗಾಗಲೇ ಅವರಿಂದ ಖರೀದಿ ಮಾಡುವಂತಹ ಒಪ್ಪಂದವನ್ನು ಮಾಡಿಕೊಂಡು, ಅವರಿಗೆ ದರಗಳನ್ನು ನಿಗದಿ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಮಾಡಿಕೊಟ್ಟಿದ್ದೇವೆ. ವಿದ್ಯುತ್‌ಚಾಲಿತ ಮಗ್ಗಗಳಿಂದ ಖರೀದಿ ಮಾಡುವುದಕ್ಕೆ 14.62 ಲಕ್ಷ ಮೀಟರ್ ಬಟ್ಟೆಯನ್ನು ಖರೀದಿ ಮಾಡುವಂತಹ ಆದೇಶವನ್ನು ಕೊಟ್ಟಿದ್ದರೂ ಕೂಡ ಅಕ್ಟೋಬರ್ ತಿಂಗಳಿನಲ್ಲಿ ಕೊಟ್ಟರೆ ಅವರು ಇಲ್ಲಿಯವರೆಗೂ ನಮ್ಮಿಂದ ಒಪ್ಪಂದವನ್ನು ಮಾಡಿಕೊಂಡಿರಲಿಲ್ಲ. ಇದು ಸರ್ಕಾರದ ನಿಯಮವಾಗಿರುವುದರಿಂದ ಯಾವುದೇ ಒಂದು ಸಂಸ್ಥೆಗೆ ನಾವೇ ಪ್ರೋತ್ಸಾಹ ಕೊಡಬೇಕೆಂದು ಹೇಳಿ, ನಾವು ಮಾರುಕಟ್ಟೆ ದರದ ಶೇಕಡಾ 15 ರಷ್ಟು ಹೆಚ್ಚುವರಿ ಶುಲ್ಕವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳ ಬಳಿ ಇವರು ನಿಗದಿ ಮಾಡಿರುವಂತಹ ಹಣ ಸರಿಯಿಲ್ಲ. ಸಾಲದು ಎಂದು ಹೇಳಿದ್ದು, ಅದಕ್ಕೆ ಮತ್ತಷ್ಟು ಸೇರಿಸಿ ಕೊಡುವಂತಹ ಒಪ್ಪಂದವನ್ನು ಮಾಡಿದ ಮೇಲೆ ಪ್ರಸ್ತುತ ಮಾರುಕಟ್ಟೆ ದರದಿಂದ ಶೇಕಡಾ 26 ರಷ್ಟು ಹೆಚ್ಚುವರಿಯಾಗಿ ಹಣಕೊಡುವಂತಹ ಒಪ್ಪಂದವನ್ನು ನಾವು ಮಾಡಿಕೊಂಡಿದ್ದೇವೆ. ನಮ್ಮ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತರವರಿಂದ ನಮಗೆ ಒಪ್ಪಿಗೆ ಕೂಡ 14ನೇ ತಾರೀಖು ಸೂಚಿಸಿದೆ. ಅದರಂತೆ ಅವರಿಂದ ನಾವು 14.62 ಲಕ್ಷ ಮೀಟರ್ ಬಟ್ಟೆಯನ್ನು ಏಪ್ರಿಲ್–2017 ರೊಳಗಾಗಿ ಕೊಡುವಂತಹ ನಿರ್ಬಂಧವನ್ನು ಹಾಕಿ, ಇದನ್ನು ಸರಿಪಡಿಸುತ್ತಿದ್ದೇವೆ. ಹಾಗಾಗಿ ಮಾನ್ಯ ಸದಸ್ಯರು ಕೇಳುವಂತಹ ವಿಚಾರ ಈಗ ಪ್ರಸ್ತುತ ಆಗುವುದಿಲ್ಲ. ಏಕೆಂದರೆ, ಅವರೇ ಒಪ್ಪಿಕೊಂಡು ನಮ್ಮಿಂದ ಒಪ್ಪಂದ ರುಜುವಾತು ಆಗಿರುವುದರಿಂದ, ಈ ಹಂತದಲ್ಲಿ ಆ ದರವನ್ನು ಹೆಚ್ಚಿಸುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ ಎನ್ನುವಂತಹ ಮಾತನ್ನು ತಮ್ಮ ಮೂಲಕ ಹೇಳಬಯಸುತ್ತೇನೆ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬಹುಶಃ ಸಚಿವರು ಕೊಟ್ಟಂತಹ ಉತ್ತರ ಸಮಂಜಸವಾಗಿಲ್ಲ. ಪ್ರಶ್ನೆ ಇರುವಂತಹದ್ದು. ಬರೀ ಮಾರುಕಟ್ಟೆ ದರದ ಪರಿಸ್ಥಿತಿಯನ್ನು ನೋಡುವಂತಹ ಪ್ರಶ್ನೆ ಅಲ್ಲವೇ ಅಲ್ಲ. ಸನ್ಮಾನ್ಯ ಸಚಿವರಿಗೆ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ. ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಒಂದು ಯೂನಿಫಾರಂಗೆ ಬಟ್ಟೆ ಸಹಿತವಾಗಿ ಮತ್ತು ಹೊಲಿಗೆ ಸೇರಿಸಿ  ಇನ್ನೂರು ರೂಪಾಯಿಗಳು ಕೊಡುತ್ತಿರುವಂತದ್ದು. ನೀವು ಬೆಂಗಳೂರು ನಗರದಲ್ಲಿ ಶರ್ಟ್ ಹೊಲಿಯುವುದಕ್ಕೆ ಮುನ್ನೂರು ರೂಪಾಯಿ ಮತ್ತು ನಾಲ್ಕು ನೂರು ರೂಪಾಯಿಗಳು ತೆಗೆದುಕೊಳ್ಳುತ್ತಾರೆ. ಪ್ಯಾಂಟ್ ಹೊಲಿಯುವುದಕ್ಕೆ ನಾಲ್ಕು ನೂರು ಮತ್ತು ಐನ್ನೂರು ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಆ ರೀತಿಯಲ್ಲಿ ಕೊಡಿ ಎಂದು ನಾನು ಹೇಳುತ್ತಿಲ್ಲ. ಒಂದು ನೇಕಾರರ ಕುಟುಂಬವನ್ನು ರಕ್ಷಣೆ ಮಾಡಬೇಕಾಗುತ್ತದೆ. ಮಾರುಕಟ್ಟೆಯಲ್ಲಿರುವಂತಹ ಮತ್ತು ಖಾಸಗಿಯಲ್ಲಿ ಏನಾಗುತ್ತದೆ ಎಂದರೆ, ಬೇರೆಯವರು ಬೇಕೆಂದು ಟೆಂಡರ್ ಅನ್ನು ಕಡಿಮೆ ಹಾಕುತ್ತಾರೆ. ಇಲ್ಲಿ ಗೃಹ ಕೈಗಾರಿಕೆಗಳು ಏನಿವೆ.

"ತಿದ್ದುಪಡಿಯಾಗದ ಪ್ರತಿ/ ಗಿಬಿಜಬಾಜಜ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೇಕಾರರು ಏನು ಇದ್ದಾರೆ ಮತ್ತು ಸ್ವಂತ ಕೈಗಾರಿಕೆಯನ್ನು ನಡೆಸುವಂತಹವರಿಗೆ ಉತ್ತೇಜನವನ್ನು ಕೊಡುವುದಕ್ಕೋಸ್ಕರ ನೀವು ಅವರಿಗೆ ಈ ಒಂದು ಗುತ್ತಿಗೆಯನ್ನು ಕೊಡುತ್ತೀದ್ದೀರಾ. ಆ ಕಾರಣಕ್ಕೋಸ್ಕರ ಸ್ವಲ್ಪ ಸಹಾನುಭೂತಿಯಿಂದ ನೀವೆಲ್ಲ ನಿಯಮದೊಳಗೆ ಮಾಡುತ್ತೇವೆಂದರೆ ನೇಕಾರರ ಭವಿಷ್ಯ ಕಷ್ಟವಾಗುತ್ತದೆ. ಇವತ್ತು ರಾಜ್ಯದಲ್ಲಿ ಬೆಂಗಳೂರು ನಗರ ಅಲ್ಲ. ಇಡೀ ರಾಜ್ಯದಲ್ಲಿ ನೇಕಾರರು ಅವರ ವೃತ್ತಿ ಬಿಟ್ಟು ಬೇರೆ ವೃತ್ತಿಗೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

**(234) 16.03.2017 ಎಸ್‌ಪಿಆರ್/ಎಂಡಿ 1.20**

**ಶ್ರೀ ರಮೇಶ್ ಬಾಬು (ಮುಂದು):-**

ಅವರನ್ನು ರಕ್ಷಣೆ ಮಾಡುವಂತಹ ಹೊಣೆ ಸರ್ಕಾರದ ಕರ್ತವ್ಯವಾಗಬೇಕಾಗುತ್ತದೆ. ದಯಮಾಡಿ ಇದನ್ನು ಸಹಾನುಭೂತಿಯಿಂದ ಪರಿಗಣಿಸಿ. ಮೊದಲನೆಯದಾಗಿ ತಾವು ಹೇಳುತ್ತಿರುವಂತಹ ಬಟ್ಟೆಯ ಮೀಟರ್‌ನ ಉದ್ದವನ್ನು ಜಾಸ್ತಿ ಮಾಡುವಂತಹದ್ದು ಹಾಗೂ ಈ ಸಂಬಂಧ ನೇಕಾರರಿಗೆ ಆದೇಶ ಕೊಡುವಂತಹದ್ದು. ಎರಡನೆಯದಾಗಿ, ಬಟ್ಟೆಯ ದರವನ್ನೂ ಸಹ ಸ್ವಲ್ಪ ವೈಜ್ಞಾನಿಕವಾಗಿ ಹೆಚ್ಚಿಗೆ ಕೊಟ್ಟರೆ ಬಹುಶ: ಒಳ್ಳೆಯ ಗುಣಮಟ್ಟದ ಬಟ್ಟೆಗಳು ವಿದ್ಯಾರ್ಥಿಗಳಿಗೆ ಸಿಗುತ್ತದೆ, ಮತ್ತು ಇದರಿಂದಾಗಿ ನೇಕಾರರ ಕುಟುಂಬಕ್ಕೆ ಅನುಕೂಲವಾಗುತ್ತದೆ. ಈ ಅಂಶವನ್ನು ಸರ್ಕಾರವು ಪರಿಗಣಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ)(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ತಾತ್ಕಾಲಿಕವಾಗಿರುವಂತಹ ಈ ವರ್ಷದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿರುವ ಪ್ರಶ್ನೆ ಅದಲ್ಲ. ಈ ಹಿಂದೆ 1973 ರಲ್ಲಿ ನಮ್ಮ ಸರ್ಕಾರದ ಹಿಂದಿನ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ.ವೀರಪ್ಪ ಮೊಯ್ಲಿರವರು ಅಧ್ಯಕ್ಷರಾಗಿದ್ದರು. ಅವತ್ತಿನಿಂದ ಇವತ್ತಿನವರೆಗೂ ಕೂಡ ನೇಕಾರರ ಅಭಿವೃದ್ಧಿಗೋಸ್ಕರವೇ ಎರಡು ನಿಗಮಗಳನ್ನು ಮಾಡಿದ್ದಾರೆ. ನೇಕಾರರಿಗೆ ಉದ್ಯೋಗವನ್ನು ಒದಗಿಸುವಂತಹ ವಾತಾವರಣದಲ್ಲಿ ಕೈಮಗ್ಗ ನಿಗಮ ಮತ್ತು ವಿದ್ಯುತ್‌ಚಾಲಿತ ನಿಗಮಗಳೆಂಬ ಎರಡು ನಿಗಮಗಳನ್ನು ಮಾಡಿ ಸಂಪೂರ್ಣವಾಗಿ ಬಟ್ಟೆಯನ್ನು ಸರ್ಕಾರದ ಮೂಲಕ ಮಕ್ಕಳಿಗೆ ವಿದ್ಯಾವಿಕಾಸ ಯೋಜನೆಯಡಿ ಒದಗಿಸಬೇಕೆಂಬ ಕಾನೂನನ್ನು ಮಾಡಿದ್ದರು. ದಕ್ಷಿಣಕರ್ನಾಟಕ ಭಾಗದಲ್ಲಿ ವಿದ್ಯುತ್‌ಚಾಲಿತ ಮಗ್ಗಗಳ ಸಂಖ್ಯೆಗಳು ಜಾಸ್ತಿಯಿವೆ. ಉತ್ತರ ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕ ಭಾಗಗಳಲ್ಲಿ ಕೈಮಗ್ಗಗಳ ಸಂಖ್ಯೆಗಳು ಜಾಸ್ತಿಯಿರುವುದನ್ನು ನಾವು

"ತಿದ್ದುಪಡಿಯಾಗದ ಪ್ರತಿ/ ಗಣಕಯಂತ್ರ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಾನೂ ಕೂಡ ಹಿಂದಿನ ಸರ್ಕಾರದಲ್ಲಿ ಆರು ವರ್ಷಗಳ ಕಾಲ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿ ಕೆಲಸವನ್ನು ಮಾಡಿದ್ದೇನೆ. ಇದು ಇವತ್ತಿನ ಸಮಸ್ಯೆಯಲ್ಲ. ಹಲವಾರು ವರ್ಷಗಳಿಂದಲೂ ಕೂಡ ಈ ಸಮಸ್ಯೆಯಿದೆ. ಮಾನ್ಯ ಮಂತ್ರಿಗಳು ಆಗಸ್ಟ್ ತಿಂಗಳಿನಲ್ಲಿ ಸಮವಸ್ತ್ರ ಒದಗಿಸಲು ಆದೇಶ ನೀಡಿರುವುದಾಗಿಯೂ, ಅದಕ್ಕೆ ಅವರು ಒಪ್ಪಿಗೆ ಕೊಟ್ಟಿಲ್ಲವೆಂದು ಹೇಳಿದರು. ಇಲ್ಲಿ ಪೈಪೋಟಿಯ ಪ್ರಶ್ನೆ ಬರುವುದಿಲ್ಲ. ರೈತರು ಬೆಳೆದಂತಹ ಪದಾರ್ಥಗಳು ಹಾನಿಯಾದಂತಹ ಸಂದರ್ಭದಲ್ಲಿ ಆವರ್ತ ನಿಧಿಯ ಮೂಲಕ ಪದಾರ್ಥಗಳನ್ನು ಯಾವ ರೀತಿಯಲ್ಲಿ ಖರೀದಿ ಮಾಡುತ್ತೇವೆಯೋ ಹಾಗೆಯೇ ಇದನ್ನು ಕೂಡ ಮಾಡಬೇಕೆಂದು ಈ ಹಿಂದೆಯೂ ಕೂಡ ಕಾನೂನು ಆಗಿದೆ. ಇದು ವ್ಯಾಪಾರವಲ್ಲ. ಇವು ಗುಡಿ ಕೈಗಾರಿಕೆ, ಗೃಹ ಕೈಗಾರಿಕೆಗಳಾಗಿವೆ. ಬಟ್ಟೆ ಕೊಡಲಿಕ್ಕೆ ನಿರ್ಲಕ್ಷ್ಯ ಮಾಡಿದ್ದಾರೆ ಹಾಗೂ ಸಮವಸ್ತ್ರಗಳನ್ನು ಒದಗಿಸಲು ನೇಕಾರರಿಗೆ ಶಕ್ತಿಯಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ನೇಕಾರರ ಸಹಕಾರ ಸಂಘಗಳೆಷ್ಟು ಎಂಬ ಪ್ರಶ್ನೆಯನ್ನು ನಾನು ಇವತ್ತಿನ ದಿನವೇ ಪ್ರಶ್ನೋತ್ತರಅವಧಿಯಲ್ಲಿ ಕೇಳಿದ್ದೇನೆ. ಸರ್ಕಾರವುಇವತ್ತಿನ ದಿನವೇ ಉತ್ತರವನ್ನೂ ಸಹ ಒದಗಿಸಿದೆ. ಅದು ಈಗ ನನಗೆ ಸಿಕ್ಕಿದೆ. ರಾಜ್ಯದಲ್ಲಿ ಒಟ್ಟು 905 ನೇಕಾರರ ಸಹಕಾರ ಸಂಘಗಳಿವೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಳೆದ 20 ವರ್ಷಗಳಿಂದ ನೇಕಾರರ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷನಾಗಿ ನಾನು ಕೆಲಸವನ್ನು ಮಾಡುತ್ತಿದ್ದೇನೆ. ಇಂತಹ ಸಂದರ್ಭದಲ್ಲಿ ನೇಕಾರರ ಸಂಘಗಳು ಅಸ್ತಿತ್ವದಲ್ಲಿಲ್ಲ ಎಂಬ ಮಾತುಗಳು ಕೇಳಿ ಬರುತ್ತಿವೆ. ಅವುಗಳನ್ನು ಸರ್ಕಾರ ನಿರ್ಲಕ್ಷ್ಯ ಮಾಡಬಾರದು ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ. 905 ನೇಕಾರರ ಸಹಕಾರ ಸಂಘಗಳು ಈ ರಾಜ್ಯದಲ್ಲಿವೆ. ಸರ್ಕಾರಕ್ಕಿರುವ ಬೇಡಿಕೆಯ 10 ಪಟ್ಟಷ್ಟು ಸಮವಸ್ತ್ರವನ್ನು ತಯಾರು ಮಾಡುವ ಶಕ್ತಿ ರಾಜ್ಯದ ನೇಕಾರರಿಗಿದೆ. ಇವತ್ತಿನ ದಿವಸ ರಾಜ್ಯದ ಜನಸಂಖ್ಯೆಯು ಆರೂವರೆ ಕೋಟಿಯಷ್ಟಿದೆ. ಇದಕ್ಕನುಗುಣವಾಗಿ ಇವತ್ತಿನ ದಿವಸ ರಾಜ್ಯದಲ್ಲಿ ಶೇಡಕ 9 ರಷ್ಟು ನೇಕಾರರು ಇದ್ದಾರೆ. ಇಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಸಕಾಲದಲ್ಲಿ ಬಟ್ಟೆಯನ್ನು ಪೂರೈಕೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ತಕ್ಷಣವೇ ಬಟ್ಟೆಯನ್ನು ಒದಗಿಸಲು ಇದು ಜೆರಾಕ್ಸ್ ಯಂತ್ರವಲ್ಲ. ಇದು ಕಾಯಕ ಮಾಡುವಂತಹ ವೃತ್ತಿಯಾಗಿದೆ. ಇವತ್ತಿನ ದಿವಸ ಇಡೀ ಕುಟುಂಬ ಕುಳಿತುಕೊಂಡು ಪರಿಪೂರ್ಣವಾಗಿ ಕೈಮಗ್ಗದಲ್ಲಿ 5 ರಿಂದ 6 ಮೀಟರ್ ಬಟ್ಟೆಯನ್ನು ಮಾತ್ರ ನೇಯಲಿಕ್ಕೆ ಸಾಧ್ಯವಾಗುತ್ತದೆ. ಹಾಗೆಯೇ ವಿದ್ಯುತ್‌ಚಾಲಿತ ಮಗ್ಗದಲ್ಲಿ 50 ಮೀಟರ್ ಬಟ್ಟೆಯನ್ನು ನೇಯ್ಗೆ ಮಾಡುವಂತಹ ವ್ಯವಸ್ಥೆಯಿದೆ. ರಾಜ್ಯದ

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

30 ಜಿಲ್ಲೆಗಳಲ್ಲಿಯೂ ಕೂಡ ಸಂಘಟಿತವಾದ ಸಂಘಗಳಿರುವಂತಹ ಸಂದರ್ಭವಿದೆ. ರಾಜ್ಯದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದರ ನಿಗದಿ ಇರಬಹುದು, ಬಟ್ಟೆಯನ್ನು ಸರಬರಾಜು ಮಾಡುವಂತಹ ವ್ಯವಸ್ಥೆಗಳಿಗೆ ಸಂಬಂಧಪಟ್ಟಂತೆ ಪ್ರತಿ ಐದು ವರ್ಷಕ್ಕೊಮ್ಮೆ ಆದೇಶವನ್ನು ಮಾಡಬೇಕು ಎಂಬ ಆದೇಶವನ್ನು ಈ ಹಿಂದೆ ಸರ್ಕಾರವು ಮಾಡಿತ್ತು. ಇಂತಹ ಪರಿಸ್ಥಿತಿಯಲ್ಲಿ ಇಲಾಖೆಯು ಏನು ಕೆಲಸವನ್ನು ಮಾಡುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇಲಾಖಾಧಿಕಾರಿಗಳು ಒದಗಿಸಿದಂತಹ ಉತ್ತರವನ್ನಷ್ಟೇ ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಅವರು ಸ್ವಂತ ಬುದ್ಧಿಯನ್ನು ಏಕೆ ಉಪಯೋಗಿಸಿಲ್ಲವೆಂಬುದು ನನಗೆ ಅರ್ಥವಾಗುತ್ತಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಹಿಂದುಳಿದ ವರ್ಗಗಳ ಸದನ ಸಮಿತಿಯ ಅಧ್ಯಕ್ಷರಾಗಿ ಮಾನ್ಯ ಮಂತ್ರಿಗಳು ಕೆಲಸ ಮಾಡಿದ್ದಾರೆ. ಹಾಗೆ ಕೆಲಸ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಸಂಪೂರ್ಣವಾಗಿ ನೇಕಾರರ ಪರವಾಗಿದ್ದರು. ಎರಡೂ ಸದನಗಳಲ್ಲಿ ಸಮಿತಿಯ ವರದಿಯನ್ನೂ ಕೊಡುವಂತಹ ಸಂದರ್ಭದಲ್ಲಿ ಸಂಪೂರ್ಣವಾಗಿ ನೇಕಾರರ ಪರವಾಗಿದ್ದರು. ಆದರೆ, ಅವರು ಮಂತ್ರಿಗಳಾದ ಮೇಲೆ ನೇಕಾರರ ವಿರುದ್ಧವಾಗಿ ಏಕೆ ಕೆಲಸವನ್ನು ಮಾಡುತ್ತಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ಅವರಿಂದ ಏನು ವ್ಯತ್ಯಾಸಗಳಾಗಿವೆಯೋ ಅಥವಾ ಇಲಾಖೆಯಿಂದ ಏನು ವ್ಯತ್ಯಾಸಗಳಾಗಿವೆ ಎಂಬ ಬಗ್ಗೆ ಮಂತ್ರಿಗಳು ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ಏಕೆಂದರೆ, ಕಳೆದ ನಾಲ್ಕು ವರ್ಷಗಳಿಂದಲೂ ಕೂಡ ನಾನು ಹಿಂದುಳಿದ ವರ್ಗಗಳ ಸದನ ಸಮಿತಿಯಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಇಡೀ ರಾಜ್ಯದ 30 ಜಿಲ್ಲೆಗಳಲ್ಲಿ ನಾನು ಖುದ್ದಾಗಿ ಭೇಟಿಕೊಟ್ಟು ಕಣ್ಣಿನಿಂದ ನೋಡಿಕೊಂಡು ಬಂದಿರುವಂತಹ ಸಂದರ್ಭಗಳಿವೆ. ತಾವು ಟೆಂಡರ್ ಎನ್ನುವ ಮಾತನ್ನು ಹೇಳಿದ್ದೀರಿ. ಇಲ್ಲಿ market or competition ಎನ್ನುವಂತಹ ಪ್ರಶ್ನೆಗಳು ಬರುವುದಿಲ್ಲ. ನೇಕಾರರನ್ನು ಉಳಿಸುವಂತಹ ವ್ಯವಸ್ಥೆಯಲ್ಲಿ ಹಿಂದಿನಿಂದಲೂ ಬಂದಿರುವಂತಹ ಯಾವುದೇ ಸರ್ಕಾರವಿರಬಹುದು. ನೀವು ದರವನ್ನು ರೂಪಾಯಿ 34–21 ಪೈಸೆಗಳೆಂದು ನಮೂದಿಸಿದ್ದೀರಿ. ಸ್ಪರ್ಧೆ ಎನ್ನುವಂತಹ ಸಂದರ್ಭಗಳು ಬಂದರೆ, ಟೆಂಡರ್ ಪ್ರಕ್ರಿಯೆಗೆ ಹೋದರೆ, ನಾನು ಇಪ್ಪತ್ತೈದು ರೂಪಾಯಿಗಳಿಗೆ ಬಟ್ಟೆಯನ್ನು ಒದಗಿಸುತ್ತೇನೆ. ಆದರೆ ಇಲ್ಲಿರುವ ಪ್ರಶ್ನೆ ಅದಲ್ಲ. ನೇಕಾರರನ್ನು ಉಳಿಸುವಂತಹ ಜವಾಬ್ದಾರಿ ಸರ್ಕಾರದ್ದಾಗಿದೆ. ಇದಕ್ಕಾಗಿ ತಾವು ತುರ್ತಾಗಿ ಸಭೆಯೊಂದನ್ನು ಕರೆದು ಅಲ್ಲಿ ಚರ್ಚೆ ಮಾಡಿ ಎಂಬುದು ನನ್ನ ಆಗ್ರಹವಾಗಿದೆ. ನಮಗೆ ಶೀಘ್ರದಲ್ಲಿ ಬಟ್ಟೆ ಬೇಕು ಎಂದು ಅಧಿಕಾರಿಗಳು ಹೇಳಲಿ. ಅದಕ್ಕೆ ತೊಂದರೆಯೂ ಇಲ್ಲ, ಅಡ್ಡಿಯೂ ಇಲ್ಲ. ನೀವು ಡಿಸೆಂಬರ್‌ನಲ್ಲೋ ಅಥವಾ ಜನವರಿ ಮಾಹೆಯಲ್ಲಿ 30ನೇ ಮಾರ್ಚ್‌ರೊಳಗಾಗಿ ಬಟ್ಟೆಯನ್ನು

ತಿದ್ದುಪಡಿಯಾಗದ ಪ್ರತಿ/ ಗಣಕೀಕೃತ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಒದಗಿಸಬೇಕೆಂಬ ಆದೇಶವನ್ನು ಕೊಡುತ್ತೀರಿ. ಇದು ಹೇಗೆ ಸಾಧ್ಯ? ಇದೇನಾದರೂ ಜೆರಾಕ್ಸ್ ಯಂತ್ರವೇ ಬಟ್ಟೆಯನ್ನು ಪ್ರಿಂಟ್ ಮಾಡುವುದಕ್ಕೆ?. ಕಷ್ಟ ಪಟ್ಟು ವರ್ಷ ಪೂರ್ತಿಕಾಯಕ ಮಾಡಬೇಕಾಗುತ್ತದೆ. ಎರಡು ಅಭಿವೃದ್ಧಿ ನಿಗಮಗಳು ಏನು ಹೇಳುತ್ತವೇ? ನೂಲನ್ನು ಪೂರೈಕೆ ಮಾಡುತ್ತವೆ. ಮಗ್ಗಗಳಿಂದ ಖರೀದಿ ಮಾಡಿರುವಂತಹ ಬಟ್ಟೆಗಳಿಂದ ಉತ್ಪನ್ನವಾಗಿರುತ್ತವೆ. ಇಂತಹ ಸಂದರ್ಭದಲ್ಲಿ ಖರೀದಿ ಮಾಡುವಂತಹ ಜವಾಬ್ದಾರಿಯಿದೆ. ಮಗ್ಗಗಳ ನೌಕರರು ಎಷ್ಟು ಜನರಿದ್ದಾರೆ? ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ 1,200 ಜನ ನೌಕರರಿದ್ದಾರೆ. ವಿದ್ಯುತ್‌ಚಾಲಿತ ಮಗ್ಗಗಳಲ್ಲಿ ಕೆಲಸ ಮಾಡುವಂತಹ ನೌಕರರಿದ್ದಾರೆ. ಇವುಗಳು ಸರ್ಕಾರದ ಅಂಗ ಸಂಸ್ಥೆಗಳಾಗಿರುವಂತಹ ಸಂದರ್ಭದಲ್ಲಿ ಯಾವ ಕಾರಣಕ್ಕಾಗಿ ತಾವು ಈ ಎರಡೂ ನಿಗಮಗಳನ್ನು ಕೊನೆಗಾಣಿಸಲಿಕ್ಕೆ ಹೋಗುತ್ತಿದ್ದೀರಿ? ಇವತ್ತಿನ ದಿವಸ ಹೊರ ರಾಜ್ಯಗಳಿಂದ ಬರುವಂತಹ ಬಟ್ಟೆಗಳನ್ನು ಖರೀದಿ ಮಾಡುವಂತಹ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿರುವಂತಹ ಶೇಕಡ 10 ರಷ್ಟಿನ ನೇಕಾರರ ಜನಸಂಖ್ಯೆಯು ವಲಸೆ ಹೋಗಬೇಕಾ? ಅವರುಗಳು ಆತ್ಮಹತ್ಯೆ ಮಾಡಿಕೊಳ್ಳಬೇಕಾ? ಇದೊಂದು ಪಾಲಿಸಿ ಮಾಡಿ. ಇಲ್ಲವೆಂದಾದಲ್ಲಿ 905 ನೇಕಾರರ ಸಹಕಾರ ಸಂಘಗಳಿಗೆ ಏನು ಕೆಲಸವನ್ನು ಕೊಡುತ್ತೀರಿ? ತಾವೇ ಹೇಳಿದ ಹಾಗೆ ಪ್ರಸಕ್ತ ಸಾಲಿನಲ್ಲಿ ಸರ್ಕಾರದಿಂದ 982 ಲಕ್ಷ ರೂಪಾಯಿಗಳ ಅನುದಾನವನ್ನು ಮಾತ್ರ ಈ ಸಂಘ ಸಂಸ್ಥೆಗಳಿಗೆ ಬಿಡಗಡೆ ಮಾಡಿದ್ದೀರಿ. ಹೀಗಾದರೆ, ಈ ಸಹಕಾರ ಸಂಘಗಳು ಏನಾಗಬೇಕು? ಇವುಗಳನ್ನು ಮುಚ್ಚಬೇಕು ಎನ್ನುವುದಾರೆ, ನೀವು ಅವರಿಗೆ ಯಾವರೀತಿಯ ಕೆಲಸಗಳನ್ನು ಕೊಡುತ್ತೀರಿ? ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ನೇಕಾರರ ಸಂಘ ಸಂಸ್ಥೆಗಳಿಗೆ ಸಕಾಲದಲ್ಲಿ ಬಟ್ಟೆ ಸರಬರಾಜು ಮಾಡುವ ಶಕ್ತಿಯಿಲ್ಲ ಎನ್ನುವುದಾದರೆ 900 ನೇಕಾರರ ಸಹಕಾರ ಸಂಘ ಸಂಸ್ಥೆಗಳಿವೆ ಎಂಬ ಉತ್ತರವೂ ಕೂಡ ನಿಮ್ಮಿಂದ ಬಂದಿದೆ. ಆದಕಾರಣ ಇಂತಹ ಸಂದರ್ಭದಲ್ಲಿ ನೇಕಾರರನ್ನು ಉಳಿಸುವಂತಹ ಕೆಲಸವನ್ನು ತಾವು ಶೀಘ್ರದಲ್ಲೇ ಮಾಡಬೇಕು. ಟೆಂಡರ್ ಪ್ರಕ್ರಿಯೆಯಾದರೆ, ನಾವೇ ಬಟ್ಟೆಗಳನ್ನು ಕೊಡಲಿಕ್ಕೆ ತಯಾರಿದ್ದೇವೆ. ಆದರೆ, ಟೆಂಡರ್ ಪ್ರಕ್ರಿಯೆ ಮುಖೇನ ಬಟ್ಟೆಯನ್ನು ಖರೀದಿ ಮಾಡಿರುವಂತಹದ್ದು ಎಷ್ಟರಮಟ್ಟಿಗೆ ಗುಣಮಟ್ಟವನ್ನು ಹೊಂದಿರುತ್ತದೆ ಎನ್ನುವಂತಹದ್ದನ್ನು ನಾವು ಯೋಚಿಸಬೇಕಾಗುತ್ತದೆ. ಸರ್ಕಾರಿ ಅಂಗ ಸಂಸ್ಥೆಗಳಾಗಿರುವಂತಹ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮಗಳ ಮೂಲಕವೇ ಬಟ್ಟೆಗಳನ್ನು ಖರೀದಿ ಮಾಡಿ. ಇವತ್ತಿನ ದಿವಸ ನಾಲ್ಕೂ ವಿಭಾಗಗಳ ಪೈಕಿ ಮೈಸೂರು ಮತ್ತು ಬೆಳಗಾವಿ ವಿಭಾಗಗಳಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಮಾಡಿದ್ದೀರಿ. ಇದನ್ನು ಕೂಡಲೇ ರದ್ದು ಮಾಡಬೇಕು. ಸರ್ಕಾರವು ಕೊಟ್ಟಿರುವ ಉತ್ತರದಲ್ಲಿ 905

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಹಕಾರ ಸಂಘಗಳ ಪಟ್ಟಿಯಲ್ಲಿ ಪ್ರತಿಯೊಂದು ಊರುಗಳ ವಿವರಗಳಿವೆ. ಇದರ ಮುಖೇನ ನಾವು ಹೇಳುವುದೇನೆಂದರೆ, ಸಹಕಾರ ಸಂಘಗಳ ಮೂಲಕ ಬಟ್ಟೆಗಳನ್ನು ಖರೀದಿ ಮಾಡಬೇಕು. ಉತ್ತಮ ಗುಣಮಟ್ಟದ ಬಟ್ಟೆಯನ್ನು ಕೊಂಡುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕು. ಸರ್ಕಾರ ಸ್ಥಿತಿಗತಿಗಳ ಬಗ್ಗೆ ಯೋಚನೆಯನ್ನು ಮಾಡುವುದು ಬೇಡ. ಯಾವರೀತಿಯಲ್ಲಿ ರೈತರಿಗೆ ಆವರ್ತ ನಿಧಿಯನ್ನು ನೀಡಿತ್ತಿದ್ದೀರೋ ಅದೇ ರೀತಿಯಲ್ಲಿ ನೇಕಾರರಿಗೂ ಕೂಡ ಆವರ್ತ ನಿಧಿಯನ್ನು ಮೀಸಲಿಟ್ಟು ಅವರನ್ನು ಉಳಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಸರ್ಕಾರವು ಕೊಟ್ಟಿರುವಂತಹ ಉತ್ತರದಲ್ಲಿ ನೇಕಾರರಿಗೆ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದ ದರದಲ್ಲಿ ಆಗಿರುವಂತಹ ವ್ಯತ್ಯಾಸವು ಟೆಂಡರ್ ಪ್ರಕ್ರಿಯಿಂದಾದದ್ದು ಎಂಬುದಾಗಿ ಹೇಳಿದ್ದಾರೆ. ಈ ಹಿಂದಿನ ಅಂದರೆ, ಕಳೆದೆರೆಡು ವರ್ಷಗಳ ದಾಖಲೆಗಳನ್ನು ತೆಗೆದು ನೋಡಿದಾಗ, ಈ ನಿಗಮಗಳಿಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿರುವಂತಹ ಸಂದರ್ಭಗಳಿವೆ. ಹಿಂದೆ ಬಿಡುಗಡೆ ಮಾಡಿರುವ ಅನುದಾನದ ಮಾಹಿತಿಯು ಇಲ್ಲಿಲ್ಲ. ಅದನ್ನು ತಾವು ನೋಡಬೇಕು. ಏಕೆಂದರೆ, ಇವತ್ತಿನ ದಿವಸ ಮಾನ್ಯ ಸದಸ್ಯರುಗಳಾದ ಶ್ರೀ ರಮೇಶ್ ಬಾಬು ಹಾಗೂ ಶ್ರೀ ಎಂ.ಡಿ.ಲಕ್ಷ್ಮೀನಾರಾಯಣರವರುಗಳು ಹೇಳಿದಂತೆ, ರೈತಾಪಿ ವರ್ಗವನ್ನು ಬಿಟ್ಟರೆ, ನೇಕಾರರು ಅತೀ ಹೆಚ್ಚು ಕಾರ್ಮಿಕ ವರ್ಗದಲ್ಲಿರುವವರು. ಈ ವರ್ಗಕ್ಕೆ ಈ ಹಿಂದೆ ಶ್ರೀ ಎಂ.ವೀರಪ್ಪ ಮೊಯ್ಲಿರವರು ಕೈಗಾರಿಕಾ ಸಚಿವರಾಗಿದ್ದಂತಹ ಸಂದರ್ಭದಲ್ಲಿ, ಈ ಎರಡೂ ಸಂಸ್ಥೆಗಳು ಶ್ರೀ ದೇವರಾಜ್ ಅರಸುರವರ ಕನಸಿನ ಕೂಸುಗಳಾಗಿದ್ದವು. ಇದಾದ ನಂತರದಲ್ಲಿ ಶ್ರೀ ರಾಮಕೃಷ್ಣ ಹೆಗಡೆರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಕ್ಕಳಿಗೆ ಸಮವಸ್ತ್ರವನ್ನು ಒದಗಿಸಿಕೊಡುವಂತಹ ಕಾರ್ಯಕ್ರಮವನ್ನು ಈ ಸಂಸ್ಥೆಗಳಿಗೆ ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ನಡೆದು ಬಂದ ದಾರಿಯನ್ನು ನೋಡಿದಂತಹ ಸಂದರ್ಭದಲಿ ಇವತ್ತಿನ ಪರಿಸ್ಥಿತಿಯಲ್ಲಿ ಬೇರೆ ಬೇರೆ ಇಲಾಖೆಗಳಿಗೆ, ರೈತ ವರ್ಗಕ್ಕೆ, ಕಾರ್ಮಿಕ ವರ್ಗಕ್ಕೆ, ಹಿಂದುಳಿದ ವರ್ಗಕ್ಕೆ, ಎಲ್ಲದಕ್ಕೂ ಬೇರೆ ಬೇರೆ ಕಾರ್ಯಕ್ರಮಗಳನ್ನು ಕೊಡುತ್ತೇವೆ. ಇರುವ ಕಾಯಕವನ್ನೇ ಮಾಡುವಂತಹ ನೇಕಾರರ ವರ್ಗಕ್ಕೆ ಸರಿಯಾದ ಮಜೂರಿ ಸಿಗದಿದ್ದರೆ ಅಥವಾ ಒಂದು ಹಂತದಲ್ಲಿ ಬಟ್ಟೆಯನ್ನು ನಿಗದಿತ ಸಮಯದಲ್ಲಿ ಕೊಡಬೇಕೆಂಬ ಟೆಂಡರ್ ಪ್ರಕ್ರಿಯೆ ಎಂದು ಹೇಳಿ ಕೊನೆಯ ಘಳಿಗೆಯಲ್ಲಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ವ್ಯವಸ್ಥಿತವಾಗಿ ಅಧಿಕಾರಿ ವರ್ಗದವರು ಇದನ್ನು ನೇಕಾರರ ಕೈತಪ್ಪಿಸಿ ಬೇರೆಯವರಿಂದ ನೇರವಾಗಿ ಬಟ್ಟೆಯನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುವಂತಹದ್ದು ನಡೆಯುತ್ತಿದೆ.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**(235) 16.03.2017 ಡಿಎಸ್/ಎಂಡಿ 1.30**

**ಶ್ರೀ ಎಚ್.ಎಂ.ರೇವಣ್ಣ(ಮುಂದು):-**

ಮಾನ್ಯ ಸಚಿವರು ಅಧಿಕಾರ ವಹಿಸಿಕೊಂಡ ಮೇಲೆ ಬಹಳಷ್ಟು ಉತ್ತರಗಳನ್ನು ಕೊಟ್ಟಿರುವುದನ್ನು ನಾವು ನೋಡುತ್ತಿದ್ದೇವೆ. ಅವರು ಇಲಾಖೆಯಲ್ಲಿ ಬಹಳಷ್ಟು ಕೆಲಸ ಮಾಡುತ್ತಿದ್ದಾರೆ. ಆದರೆ ಈಗ ಕೊಟ್ಟಿರುವಂತಹ ಉತ್ತರದಲ್ಲಿ ಈ ವರ್ಷದ ಮಾಹಿತಿ ಮಾತ್ರಇದೆ. ನಾನೇ ನೋಡಿದ ಪ್ರಕಾರ ಹಿಂದಿನ ಮಾಹಿತಿಯನ್ನು ತೆಗೆದು ನೋಡಿದರೆ ಪ್ರತಿ ಮೀಟರ್‌ಗೆ ಸುಮಾರು 47 ರೂಪಾಯಿ ಇದೆ. ಇವತ್ತು 34 ರೂಪಾಯಿಗೆ ಕೊಡುವುದಾದರೆ ಪ್ರತಿ ವರ್ಷ ಬೆಲೆ ಹೆಚ್ಚಾಗುತ್ತದೆಯೇ ಅಥವಾ ಕಡಿಮೆ ಆಗುತ್ತದೆಯೇ? ಮಾನ್ಯ ಸಚಿವರಿಗೆ ಉತ್ತರ ಕೊಡುವ ಸಾಮರ್ಥ್ಯ ಇದೆ. ಆ ಸಾಮರ್ಥ್ಯ ಇರಲಿ. ಆದರೆ ಜನಕ್ಕೆ ಸಹಾಯವಾಗುವಂತಹ ರೀತಿಯಲ್ಲಿ ಕೊಡಿ ಎಂಬುದು ನಮ್ಮ ಬೇಡಿಕೆಯಾಗಿದೆ. ನಮ್ಮ ಸಮಾಜದಲ್ಲಿ ನೇಕಾರ ವರ್ಗದವರು 9 ರಿಂದ 10 ಪರ್ಸೆಂಟ್ ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ಬೆಳಗಾವಿ, ಬನಹಟ್ಟಿ, ಬಾಗಲಕೋಟೆಯಲ್ಲಿ ಅತಿ ಹೆಚ್ಚು ನೇಕಾರರು ಇದ್ದಾರೆ. ವಿದ್ಯುತ್‌ಚಾಲಿತ ಮಗ್ಗಕ್ಕೂ ಕೂಡ ನಮ್ಮ ಸರ್ಕಾರವೇ ವಿದ್ಯುಚ್ಛಕ್ತಿ ದರದಲ್ಲಿ ರಿಯಾಯಿತಿಕೊಟ್ಟಿರುವಂಥದ್ದು. ಆದರೆ ಇವತ್ತಿನ ದಿವಸ ಅವರು ಸಿದ್ಧಪಡಿಸಿದಂತಹ ಮಾಲನ್ನು ನಾವು ಖರೀದಿ ಮಾಡದೆ ಹೋದರೆ ಅದು ಸರಿಯಾಗುವುದಿಲ್ಲ. ಇವತ್ತು ನಮ್ಮಲ್ಲಿ ಬೇಡಿಕೆ ಇದೆ. ಬೇಡಿಕೆ ಇದ್ದರೂ ನಾವು ಬೇರೆ ಕಡೆ ಏಕೆ ಖರೀದಿ ಮಾಡಬೇಕು? ಅದನ್ನು ನಾವೇ ಖರೀದಿ ಮಾಡಬೇಕು ಎಂಬುದು ನನ್ನ ಉದ್ದೇಶ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ದುಡಿಯುವ ಕೈಗಳಿಗೆ ಕೆಲಸ ಕೊಡಬೇಕೆಂಬ ಆಲೋಚನೆ ಇದೆ. ಈಗ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ನಾವು ಆಗಾಗ್ಗೆ ಮಾತನಾಡುತ್ತಿರುತ್ತೇವೆ. ಜನ ಹಳ್ಳಿಯಿಂದ ಗುಳೆ ಹೋಗಬಾರದು, ಹಳ್ಳಿಗಳನ್ನು ಬಿಡಬಾರದು, ಅವರು ಬದುಕಬೇಕು. ಅವರು ಬದುಕಬೇಕೆಂದರೆ ಅವರ ಕೈಗೆ ಏನಾದರೂ ಕೆಲಸ ಕೊಡಬೇಕೆಂದು 250 ದಿನಗಳಿಗೆ ಟಾರ್ಗೆಟ್ ಇಟ್ಟುಕೊಂಡು 75 ದಿನಗಳಿಂದ 100 ದಿನಗಳಿಗೆ ಬಂದಿದ್ದೇವೆ. ಇವತ್ತು ತಮ್ಮ ಕಸಬು ಆಧಾರಿತ ನೇಕಾರರು ಬದುಕಬೇಕಲ್ಲವೆ, ಜೀವನ ಮಾಡಬೇಕಲ್ಲವೆ? ಒಂದುಕಡೆ ಅವರು ನಂಬಿಕೊಂಡಿರುವಂತಹ ಸಂಸ್ಥೆಗಳೇ 15 ಪರ್ಸೆಂಟ್ ಮಾರ್ಜಿನ್ ಇಟ್ಟುಕೊಂಡು ಅವರಿಗೆ ಕೊಡುತ್ತಿದ್ದಾರೆ. ಮತ್ತೊಂದು ಕಡೆ ಈ ದೇಶದಲ್ಲಿ ಯಾವ ಬೆಲೆಗಳು ಈ ವರ್ಷಕ್ಕಿಂತ ಮುಂದಿನ ವರ್ಷ ಕಡಿಮೆಯಾಗಿರುವುದನ್ನು ನಾವು ನೋಡಿಲ್ಲ. ಹೆಚ್ಚಾಗಿರುವುದನ್ನು ನಾವು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ನೋಡಿದ್ದೇವೆ. ಈ ಬಜೆಟ್ 1,86,561 ಕೋಟಿ ರೂಪಾಯಿಗೆ ಬಂದು ನಿಂತಿದೆ. ನಾವು ಎಲ್ಲಾದರೂ ಹೋಗಲಿ ಯಾವ ವ್ಯವಸ್ಥೆಯ ಮಾರ್ಕೆಟ್‌ಗೆ ಹೋದರೂ ಬೆಲೆ ಏರಿಕೆಯಾಗಿದೆಯೇ ಹೊರತು ಇಳಿಕೆಯನ್ನು ಕಂಡಿಲ್ಲ. ಮೊದಲೇ ನೇಕಾರರು ಬಡವರು ಇದ್ದಾರೆ. ಅವರು ಸಮಾಧಾನವಾಗಿ ಬದುಕಬೇಕಲ್ಲವೆ, ಆ ಕಾಯಕ ಉಳಿಯಬೇಕಲ್ಲವೆ, ವೃತ್ತಿ ಉಳಿಯಬೇಕಲ್ಲವೆ ಮತ್ತು ದುಡಿಯುವ ಕೈಗಳಿಗೆ ನಾವು ಕೆಲಸ ಕೊಡಬೇಕಲ್ಲವೆ? ಅದನ್ನು ಮಾನ್ಯ ಸಚಿವರು ಗಮನ ಇಟ್ಟುಕೊಳ್ಳಬೇಕಾಗುತ್ತದೆ. ಏಜನ್ಸಿಯವರ 15 percentage ಏನಿದೆ ಅದನ್ನು ಕಡಿಮೆ ಮಾಡುತ್ತೀರೋ ಅಥವಾ ಸರ್ಕಾರವೇ ಹೆಚ್ಚು ಮಾಡುತ್ತದೆಯೋ ಅಥವಾ ನೇರವಾಗಿ ನೇಕಾರರಿಗೆ ಕೊಡುತ್ತೀರೋ, ಮಾನ್ಯ ಸದಸ್ಯರು ಸುಮಾರು 900 ನೇಕಾರರ ಸಹಕಾರ ಸಂಸ್ಥೆಗಳಿವೆ ಎಂದು ಹೇಳಿದರು. ಆ ಸಂಸ್ಥೆಗಳಿಗೆ ಸರ್ಕಾರವೇ ಕೊಡಲಿ. ಆಗ 15 percent ಉಳಿಯುತ್ತದೆ. ಇಲ್ಲದಿದ್ದರೆ ಅವರಿಗೆ percentage ಕಡಿಮೆ ಮಾಡಿ. ಅವರು ಮಧ್ಯದಲ್ಲಿ ಮಾಡುವಂಥಾದ್ದು ಏನಿತರುತ್ತದೆ, ಏನು ಇರುವುದಿಲ್ಲ. ಹಾಗಾಗಿ ಎಲ್ಲಾ ದೃಷ್ಟಿಯಿಂದ ಆ ದುಡಿಯುವ ಕೈಗಳಿಗೆ ಕೆಲಸ ಉಳಿಸಿಕೊಡಬೇಕಲ್ಲವೆ? ಅವರು ಸಮಾಧಾನಕರವಾಗಿ ಬದುಕಬೇಕಲ್ಲವೆ? ಅವರು ಸದ್ಯ ಇನ್ನು ಬಟ್ಟೆಗಳನ್ನು ನೇಯ್ದುಕೊಡುತ್ತೇವೆಂದು ಹೇಳುತ್ತಿದ್ದಾರೆ. ಅವರಿಗೆ ನಾವು ಉತ್ತೇಜನ ಕೊಟ್ಟು ಬೆನ್ನು ತಟ್ಟಬೇಕಲ್ಲವೆ? ನೇಕಾರರನ್ನು ಉಳಿಸಿಕೊಳ್ಳುವಂತಹ ಒಂದು ಯೋಜನೆಯನ್ನು ಸರ್ಕಾರ ರೂಪಿಸಬೇಕು. ಅದಕ್ಕೆ ಏನು ಮಾಡುತ್ತೀರೋ ಗೊತ್ತಿಲ್ಲ. ಪ್ರತಿ ವರ್ಷ ಇಷ್ಟು ಎಂದು ಹೇಳಿ enhancement ಅನ್ನು ಸರ್ಕಾರವೇ ನಿಗದಿ ಮಾಡಲಿ. ಒಂದು ಕಡೆ ಮಕ್ಕಳಿಗೆ ಸಮವಸ್ತ್ರವನ್ನು ಪೂರೈಕೆ ಮಾಡುವುದು, ಗುಣಮಟ್ಟದ ಬಟ್ಟೆ ತೆಗೆದುಕೊಳ್ಳುವುದು, ಮತ್ತೊಂದು ಕಡೆ ನೇಕಾರರನ್ನು ಉಳಿಸಿಕೊಳ್ಳುವ ಕೆಲಸವನ್ನು ಮಾಡಬೇಕು. ಅದಕ್ಕೆ ಸ್ಪಷ್ಟವಾದ ಯೋಜನೆಯನ್ನು ರೂಪಿಸುವುದಕ್ಕೆ ಮುಂದಾಗುವುದಾದರೆ ನೇಕಾರರು ಎಲ್ಲಾ ಸೇರಿ ಮಾನ್ಯ ಸಚಿವರಿಗೆ ಧನ್ಯವಾದ ಹೇಳುತ್ತೇವೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ರಾಜ್ಯ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ರೂಪಿಸಿರುವಂತಹ ಹಿನ್ನೆಲೆಯಲ್ಲಿ ಎರಡು ವರ್ಗಕ್ಕೆ ಇದರ ಉಪಯೋಗವಿದೆ. ಮೊದಲನೆಯದು, ಮೂಲತಃ ವಿದ್ಯಾರ್ಥಿಗಳಿಗೆ, ಆ ವಿದ್ಯಾರ್ಥಿಗಳ ಜೊತೆಜೊತೆಗೆ ನೇಕಾರಿಕೆಯ ಕಸುಬನ್ನು ಮಾಡತಕ್ಕಂಥವರಿಗೆ ಉಪಯೋಗ ಆಗಬೇಕೆಂಬುದು ನಮ್ಮ ಆಶಯ. ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಈ ವರ್ಗದ ಜನರ ಹಿತವನ್ನು ಕಾಪಾಡುವುದಕ್ಕೆ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮಗಳು ಸ್ಥಾಪನೆಯಾಗಿರುವಂಥದ್ದು. 1984-85 ರಲ್ಲಿ ಮಾನ್ಯ ರಾಮಕೃಷ್ಣ

ಹೆಗಡೆಯವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಪ್ರಪ್ರಥಮವಾಗಿ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ಮತ್ತು ಸಮವಸ್ತ್ರಗಳನ್ನು ಮಕ್ಕಳಿಗೆ ಕೊಡುವುದರ ಜೊತೆಗೆ 25 ರೂಪಾಯಿಗೆ ಪಂಚೆ ಮತ್ತು ಸೀರೆ ಕೊಡುವಂತಹ ಕಾರ್ಯಕ್ರಮವನ್ನು ಅವತ್ತು ರೂಪಿಸಿದ್ದರು. ಆ ಕಾರ್ಯಕ್ರಮವನ್ನು ಯಾರಿಗೆ ವಹಿಸಿದರೆ ಬಳಕೆಯಾಗುತ್ತದೆ ಎನ್ನುವಂತಹ ಹಿನ್ನೆಲೆಯಲ್ಲಿ ಈ ಎರಡು ನಿಗಮಗಳಿಗೆ ವಹಿಸಿ ತನ್ಮೂಲಕ ಪೂರೈಕೆ ಮಾಡಿಕೊಳ್ಳುವಂಥದ್ದಕ್ಕೆ ಅವತ್ತಿನಿಂದ ಇವತ್ತಿನವರೆಗೂ ಬಂದಿರುವಂಥದ್ದು. ಈ ವರ್ಷ ಏನಾಗಿದೆ ಎಂದರೆ, ಮಾನ್ಯ ಸಚಿವರು ಉತ್ತರ ಕೊಟ್ಟಿರುವ ಹಾಗೆ KHDC ಯಲ್ಲಿ PV Shirting ಗೆ 71.28 ದರದಲ್ಲಿ, PC Suiting ಗೆ 147.84 ರೂಪಾಯಿ, PV Skirt 76.61 ರೂಪಾಯಿ ಪ್ರತಿ ಮೀಟರ್‌ಗೆ ಎಂದು ಹೇಳಿದ್ದಾರೆ. ಅದೇರೀತಿ KSTIDC ಯಲ್ಲಿ PV Shirting ಗೆ 59.29 ರೂಪಾಯಿ, PC Suiting ಗೆ 123.42 ರೂಪಾಯಿ, PV Skirt ಗೆ 63.85 ರೂಪಾಯಿ ಎಂದು ಹೇಳಿದ್ದಾರೆ. L1 Bidder ಯಾರಿದ್ದಾರೆ, ಇವರೇ ಹೇಳಿರುವ ರೀತಿಯಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. PV Shirting ಗೆ 34.21, PC Suiting ಗೆ 82.11, PV Skirt ಗೆ 43.21 ರೂಪಾಯಿ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇದರ ಜೊತೆಗೆ ಉತ್ತರದ ಮೊದಲ ಪ್ಯಾರಾದಲ್ಲಿ ಕೆ.ಎಸ್.ಟಿ.ಐ.ಡಿ.ಸಿ. ಸಂಸ್ಥೆಯವರು ಬೇರೆ ವ್ಯಾಪಾರಿಗಳಿಂದ ಬಟ್ಟೆ ಖರೀದಿಸಿ ಶಿಕ್ಷಣ ಇಲಾಖೆಗೆ ಪೂರೈಸಿದ್ದಾರೆ ಎಂದು ಹೇಳಿದ್ದಾರೆ. ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ. ಈ ರೀತಿ ಪೂರೈಕೆ ಮಾಡುವುದಕ್ಕೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾರೆ, ಆ ಒಡಂಬಡಿಕೆಯ ಷರತ್ತುಗಳಿಗೆ ವಿರುದ್ಧವಾಗಿದೆ ಎನ್ನುವ ಹಿನ್ನೆಲೆಯಲ್ಲಿ ಈ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ಜರುಗಿಸಿದ್ದಾರೆ? Have you initiated any action against the erring officials? If it is so, what action has been initiated against such officials? ಇದನ್ನು ಹೇಳಬೇಕಾಗುತ್ತದೆ. Any sort of violation, violation of contractual obligation is a ground to cancel the contract. ಹಾಗಾಗಿ ಈ ಹಿನ್ನೆಲೆಯಲ್ಲಿ, who are the officials who have violated the conditions? If it is so what are the action initiated against them? ಅವರ ಮೇಲೆ ಕ್ರಮ ಜರುಗಿಸಿದ್ದಾರೆಯೇ, ಅವರನ್ನು ಅಮಾನತ್ತು ಮಾಡಿದ್ದಾರೆಯೇ? ಎರಡನೆಯದು, ಇವತ್ತು ಈ ಎರಡು ನಿಗಮಗಳಿಗೆ ಸರಬರಾಜು ಮಾಡುವಂಥ ಅನೇಕರು ಏನಿದ್ದಾರೆ, ಕೆಲವರು ನೇಕಾರರು ಎಂದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ವ್ಯಾಪಾರಸ್ಥರು ಸರಬರಾಜು ಮಾಡಿರತಕ್ಕಂಥದ್ದು ಇದೆ. ಹೊಸಪೇಟೆ ಇರಬಹುದು ಅಥವಾ ಚಿಕ್ಕಮಗಳೂರು ಇರಬಹುದು, ಮತ್ತೊಂದು ಕಡೆ ಇರಬಹುದು. ಇಲ್ಲಿ ಎರಡು ರೀತಿಯ ತೊಂದರೆಗಳಿವೆ. ವಿಳಂಬವಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಒಂದು ಕಡೆ, ಮತ್ತೊಂದು ಕಡೆ ನೇಕಾರರ ಹೆಸರಿನಲ್ಲಿ ಯಾರೋ ಒಂದಿಷ್ಟು ಜನ trade ಮಾಡತಕ್ಕಂಥದ್ದು ಇದೆ. ಆದರೆ ಸರ್ಕಾರದ ಉದ್ದೇಶ ಇರಬೇಕಾಗಿರುವಂಥದ್ದು ವಿದ್ಯಾರ್ಥಿಗಳಿಗೆ time bound ಆಗಿ ಜೂನ್ ಕೊನೆಯಷ್ಟರಲ್ಲಿ ಸಮವಸ್ತ್ರ ಕಡ್ಡಾಯವಾಗಿ ಸಿಗಲೇಬೇಕು ಎನ್ನುವುದನ್ನು ಒಂದು ಕಡೆ ಮಾಡುವಂಥದ್ದರ ಜೊತೆಗೆ ಯಾವ ಇನ್ನೊಂದು ವರ್ಗ ಈ ಕಸುಬಿನ ಮೇಲೆ ಆಧಾರವಾಗಿದ್ದಾರೆ ಆ ಜನರಿಗೆ ಉಪಯೋಗವಾಗುವಂಥದ್ದಕ್ಕೆ ಇವತ್ತು ಸರ್ಕಾರ ಗಮನಹರಿಸಬೇಕಾಗುತ್ತದೆ.

(236) 16.03.2017 01.40 SV-AK

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):-**

ಈ ಸಂಸ್ಥೆಗಳು ಬೇರೆಯವರ ಬಳಿ ಕೊಂಡು ಸರಬರಾಜು ಮಾಡುವುದಾದರೆ ಅವರಿಗೇ ಏಕೆ ಕೊಡಬೇಕು? ನಾವೇ ನೇರವಾಗಿ ಟೆಂಡರ್ ಕರೆದು ಕಡಿಮೆ ದರನಿಗದಿ ಪಡಿಸುವವರಿಗೆ ಕೊಡುವುದು ಸಾಧ್ಯವಿದೆ. ಹಾಗೆಂದು ಸರ್ಕಾರಕ್ಕೆ ನಷ್ಟ ಮಾಡಿಕೊಳ್ಳಬೇಕೆಂದು ಯಾರೂ ಹೇಳುವುದಿಲ್ಲ. ರಾಜ್ಯದಲ್ಲಿ ಸಮವಸ್ತ್ರ ತಯಾರಿಸುವುದಕ್ಕೆ ಮತ್ತು ಅದನ್ನು ಸರಬರಾಜು ಮಾಡುವುದಕ್ಕೆ ತಾಲ್ಲೂಕುವಾರು ಅಥವಾ ಜಿಲ್ಲಾವಾರು ಅಲ್ಲಿರತಕ್ಕಂತಹ ನೇಕಾರರಿಗೆ ಆದ್ಯತೆಯನ್ನು ನೀಡಿ ಸ್ಪರ್ಧಾತ್ಮಕ ದರದಲ್ಲಿ ಉದಾಹರಣೆಗೆ ಬಾಗಲಕೋಟೆ, ಬಿಜಾಪುರ, ಬಳ್ಳಾರಿ, ರಾಯಚೂರು ಅಥವಾ ಕೊಪ್ಪಳ ಹೀಗೆ ವಿಕೇಂದ್ರೀಕರಣಗೊಳಿಸಿ ನೇಕಾರರು ಕೊಡತಕ್ಕಂತಹ ಬಟ್ಟೆಯನ್ನು ತೆಗೆದುಕೊಳ್ಳಬೇಕು. ನೇಕಾರರು ಕೊಡುತ್ತಾರೆಂದು ಹೇಳಿ ರೂ.50ಗಳ ಬಟ್ಟೆಯನ್ನು ರೂ.100ಗಳಿಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಎರಡನೆಯದಾಗಿ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಸಮವಸ್ತ್ರ ದೊರಕುವಂತೆ ಮಾಡುವ ಬಗ್ಗೆ ಸರ್ಕಾರ ಕ್ರಮ ಜರುಗಿಸಿದರೆ ಎರಡೂ ವರ್ಗದ ಜನರಿಗೆ ಇದು ಉಪಯೋಗವಾಗುತ್ತದೆ. ಇದರ ಉದ್ದೇಶವೂ ಸಹ ಈಡೇರುತ್ತದೆ ಎಂದು ಆಶಿಸುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದು ಬಹಳ ಪ್ರಮುಖವಾದ ವಿಚಾರವಾಗಿದೆ. ರೈತರನ್ನು ಬಿಟ್ಟರೆ ನೇಕಾರರೇ ಹೆಚ್ಚಿನ ಸಂಖ್ಯೆಯಲ್ಲಿರುವುದು. ನೇಕಾರರು ಯಂತ್ರಗಳ ಜೊತೆಯಲ್ಲಿ ಸ್ಪರ್ಧಿಸುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ಅಂತಹ ದರಿದ್ರ ಬಂದಿಲ್ಲ.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಸರ್ಕಾರದ ಬಳಿ ದುಡ್ಡಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಹೊರ ರಾಜ್ಯಗಳ ನೇಕಾರರು ಇಲ್ಲಿ ಮಾರಾಟ ಮಾಡುತ್ತಾರೆ. ನಾವು ನಮ್ಮ ರಾಜ್ಯದ ಜನತೆಗೆ ರಕ್ಷಣೆ ಕೊಡುವಂತಹ ವ್ಯವಸ್ಥೆಯನ್ನಂತೂ ಮಾಡುತ್ತಿಲ್ಲ. ನಾನು ಯಾರನ್ನೂ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರು ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ. ಈ ರೀತಿಯಾಗಿ ಮೈಸೂರು ಲ್ಯಾಂಪ್ಸ್, ಹೆಚ್.ಎಂ.ಟಿ., ಇತ್ಯಾದಿಗಳನ್ನು ಮುಚ್ಚಲಾಗಿದೆ. ಇನ್ನೇನು ಸೋಪು ಕಾರ್ಖಾನೆಯನ್ನೂ ಸಹ ಮುಚ್ಚಲಾಗುತ್ತದೆ. ನೇಕಾರರನ್ನು ಬದುಕಿಸದೆ ಹೋದರೆ ಅವರೆಲ್ಲಾ ಬೆಂಗಳೂರಿಗೆ ಲಗ್ಗೆಯಿಡುತ್ತಾರೆ. ಇಲ್ಲಿ ಒತ್ತಡ ಹೆಚ್ಚಾಗುತ್ತದೆ. ಅವರೂ ನಮ್ಮಂತೆಯೇ ಬದುಕಬೇಕಾದರೆ ಅವರಿಗೆ ಸಾಕಷ್ಟು ಆದಾಯ ಬರಬೇಕು. ಅದು ಕೊಡುತ್ತೇವೆ, ಇದು ಕೊಡುತ್ತೇವೆ ಎನ್ನುವುದಕ್ಕಿಂತ ಅವರಿಗೆ ಬೆಲೆಯನ್ನು ಕೊಟ್ಟರೆ ಅವರ ಕೆಲಸವನ್ನು ಮಾಡಿಕೊಂಡು ಅವರು ಬದುಕಿಕೊಳ್ಳುತ್ತಾರೆ. ವಿದ್ಯಾರ್ಥಿಗಳ ಸಮವಸ್ತ್ರದ ಬಗ್ಗೆ ಎಲ್ಲಾ ಸದಸ್ಯರೂ ಮಾತನಾಡಿದ್ದಾರೆ. ನೇಕಾರ ಬದುಕಬೇಕು. ನೇಕಾರ ಬದುಕುವುದಕ್ಕೆ ವಿದ್ಯಾರ್ಥಿಗಳಿಗೆ ನಾವು ಸಮವಸ್ತ್ರವನ್ನು ಕೊಡಬೇಕು. ನಮ್ಮ ವಿದ್ಯಾರ್ಥಿಗಳಿಗೆ ಸಮವಸ್ತ್ರವನ್ನು ನಮ್ಮ ನೇಕಾರರಿಂದಲೇ ತೆಗೆದುಕೊಳ್ಳದೆ ಹೋದರೆ ಆ ನೇಕಾರರ ಬಟ್ಟೆಯನ್ನು ಬೇರೆ ಯಾರು ತೆಗೆದುಕೊಳ್ಳುತ್ತಾರೆ?

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಗೃಹ ಇಲಾಖೆಯಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಕುಳಿತುಕೊಂಡು ಗೃಹ ಇಲಾಖೆಯಿದೆ ಎನ್ನುತ್ತಿದ್ದಾರೆ. ಗೃಹ ಇಲಾಖೆ ಮಾತ್ರವಲ್ಲ, ಆರೋಗ್ಯ ಇಲಾಖೆ ಹೀಗೆ ಇನ್ನೂ ಬೇಕಾದಷ್ಟಿವೆ. ಇವತ್ತಿನ ವಿಷಯ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿದೆ.

**ಶ್ರೀ ರಾಮಚಂದ್ರಗೌಡ:-** ಸರ್ಕಾರಿ ನೌಕರರಾಗಬಹುದು, ಶಾಸಕರಾಗಬಹುದು. ಆಸ್ಪತ್ರೆಗಳಲ್ಲಿರತಕ್ಕಂತಹವರಾಗಿರಬಹುದು. ನಾವು ನೇಕಾರರನ್ನು ಬದುಕಿಸಬೇಕಾದರೆ ಅವರು ತಯಾರು ಮಾಡಿದ ಬಟ್ಟೆಗೆ ಜಾಸ್ತಿ ಬೆಲೆಯನ್ನು ಕೊಟ್ಟರೆ ಇನ್ನಷ್ಟು ಚೆನ್ನಾಗಿ ಮಾಡುತ್ತಾರೆ. ಅದು ಮಾನ್ಯ ಶಿಕ್ಷಣ ಸಚಿವರ ನೇತೃತ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ ಆಗಿ ಆರೋಗ್ಯ ಇಲಾಖೆಗೆ ಹೋಗಿ ಶಾಸಕರಿಗೂ ಅದು ಬರಲಿ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಇಲ್ಲಿ ಮೂರು ವಿಚಾರಗಳಿವೆ. ಒಂದು ವಿದ್ಯಾರ್ಥಿಗಳ ಸಮವಸ್ತ್ರಕ್ಕೆ ಬೇಕಾದ ಒಳ್ಳೆಯ ಬಟ್ಟೆ ಸಿಗಬೇಕು. ಎರಡನೆಯದು ಈ ಬಟ್ಟೆ ಸರಿಯಾದ ಸಮಯಕ್ಕೆ ಸಿಗಬೇಕು. ಮೂರನೆಯದಾಗಿ ಡಿಮ್ಯಾಂಡ್

ತಿದ್ದುಪಡಿಯಾಗದ ಪ್ರತಿ/ ಗಜಟ್ಟಾಣಿಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಇರುವುದರಿಂದ ನಮ್ಮ ನೇಕಾರರಿಗೆ ಅನುಕೂಲವಾಗಬೇಕು. ಈ ಮೂರೂ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವುದರಲ್ಲಿಯೂ ಹೊಂದಾಣಿಕೆ ಮಾಡದೆ ಅಂದರೆ ಗುಣಮಟ್ಟದಲ್ಲಿಯೂ ಹೊಂದಾಣಿಕೆಯನ್ನು ಮಾಡಿಕೊಳ್ಳಬಾರದು. ಆ ಸಮಯಕ್ಕೆ ಸರಬರಾಜು ಮಾಡುವುದಕ್ಕೆ ಅವರಿಗೆ ಸಾಮರ್ಥ್ಯ ಇದೆಯೇ? ನೇಕಾರರಿಗೆ ಬೇಕೆಂದು ಹೇಳಿ ಸಂಘಟನೆಗಳು ಹೊರಗುತ್ತಿಗೆ ಮಾಡುವುದಕ್ಕೆ ಅವಕಾಶ ಕೊಡಬಾರದು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಶಿಕ್ಷಣ ಸಚಿವರು ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಸಮವಸ್ತ್ರ ಸರಿಯಾದ ಸಮಯದಲ್ಲಿ ಸಿಗುವ ಹಾಗೆ ಹಾಗೂ ಜೂನ್ ತಿಂಗಳಾದ ನಂತರ ಪತ್ರಿಕಾ ಮಾಧ್ಯಮದಲ್ಲಿ ವರದಿಯಾಗದ ರೀತಿಯಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನೇಕಾರರಿಗೆ ಸಹಾಯ ಮಾಡುವುದಕ್ಕೆ ಸ್ವಲ್ಪ ಹೆಚ್ಚಿನ ದರ ಕೊಡುವುದು ಸೂಕ್ತ. ಅದರಲ್ಲಿ ತಪ್ಪೇನಿಲ್ಲ. ಆದರೆಇಲ್ಲಿ ತೋರಿಸಿದ ಹಾಗೆ 70%, 80% ಎಂದಾಗ ಎಲ್ಲೋ ಒಂದಷ್ಟು ಗೊಂದಲವಿದೆ ಎಂದೆನಿಸುತ್ತದೆ. ಅವರು ನಮ್ಮವರು ಎನ್ನುವ ಕಾರಣಕ್ಕೆ ಸರ್ಕಾರವನ್ನೂ ಕೂಡ ಅವರು ಮೋಸ ಮಾಡದ ಹಾಗೆ ಎಲ್ಲಾ ಸಂಗತಿಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ನಿರ್ಣಯ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಎಲ್ಲಾ ಗೌರವಾನ್ವಿತ ಸದಸ್ಯರು ಮಾತನಾಡಿದ್ದು, ಅದರಲ್ಲಿ ನಾನು ಮೊಟ್ಟಮೊದಲನೆಯದಾಗಿ ಶ್ರೀ ವಿ.ಎಸ್.ಉಗ್ರಪ್ಪನವರಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಪ್ರಥಮ ಬಾರಿಗೆ ಅವರು ನನ್ನ ರಕ್ಷಣೆಗೆ ಬಂದಿದ್ದಾರೆ. ಎಲ್ಲರೂ ಮಾತನಾಡಿದ್ದಕ್ಕೆ ಪೂರಕವಾಗಿ ನೇಕಾರರ ವಿಚಾರವನ್ನು ಮಾತನಾಡುವ ಸಂದರ್ಭದಲ್ಲಿ ಎಲ್ಲಿ ತಪ್ಪಾಗಿದೆ ಎಂದೂ ಸಹ ಅವರು ಎತ್ತಿ ಹಿಡಿದಿದ್ದಾರೆ. ಆ ಕಾರಣಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. 2016-17ನೇ ಸಾಲಿನವರೆಗೂ ಮುಕ್ಕಾಲು ಪಾಲು ಟೆಂಡರ್ ಮೂಲಕವೇ ತೆಗೆದುಕೊಂಡಿರುವುದು. ಮಿಕ್ಕಿದ್ದು ಮಾತ್ರ ನೇಕಾರರಿಂದ ತೆಗೆದುಕೊಳ್ಳುತ್ತಿರುವಂತಹದ್ದು. ಇವತ್ತು ಶಿಕ್ಷಣ ಇಲಾಖೆಗೆ 80 ಲಕ್ಷ ಮೀಟರ್ ಬಟ್ಟೆಯ ಅವಶ್ಯಕತೆ ಇದೆ. ಈ ಎಲ್ಲಾ 80 ಲಕ್ಷ ಮೀಟರ್ ಬಟ್ಟೆಯಲ್ಲಿ 64,30,000 ಮೀಟರ್ ಬಟ್ಟೆಯನ್ನು ಕೈಮಗ್ಗದ ನೇಕಾರರಿಂದ ಪಡೆದುಕೊಳ್ಳುವುದಕ್ಕೆ ಆದೇಶ ಮಾಡಿ ಮಾರುಕಟ್ಟೆ ಬೆಲೆ ಏಕೆ ನೋಡುತ್ತಿದ್ದೀರಿ ಎಂದು ಕೇಳಿದಾಗ ಯಾವುದಾದರೊಂದು ಆಧಾರ ಇರಬೇಕಲ್ಲವೆ? ರೂ.34 ಮಾರುಕಟ್ಟೆ ಬೆಲೆ ಇರುವಂತಹ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯು 71 ರೂ. 28 ಪೈಸೆ ನೇಕಾರರಿಗೆ ಕೊಡುತ್ತಿದೆ. 108ರಷ್ಟು ಮಾರುಕಟ್ಟೆಗಿಂತ ಹೆಚ್ಚಿಗೆ ಕೊಡುತ್ತಿದೆ. 65 ಲಕ್ಷ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೀಟರ್ ಬಟ್ಟೆಯನ್ನು ಶಿಕ್ಷಣ ಇಲಾಖೆಯು ನೇಕಾರರಿಂದ ಖರೀದಿ ಮಾಡುತ್ತಿದೆ. ಕಾರಣ ಸರ್ಕಾರದ ಬದ್ಧತೆ ಇದೆ. ನೇಕಾರರನ್ನು ಬದುಕಿಸುವಂತಹ ವಿಧಾನವನ್ನು ಇಲಾಖೆಯಿಂದ ಮಾಡಬೇಕು ಎನ್ನುವುದಕ್ಕೆ ಇದನ್ನು ಮಾಡಲಾಗಿದೆ. ಇದನ್ನು ಮಾನ್ಯ ಸದಸ್ಯರು ಗಮನಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ 65 ಲಕ್ಷ ಮೀಟರ್ ಅನ್ನು ಕೈಮಗ್ಗಕ್ಕೆ ಕೊಡಬೇಕಾದರೆ ವಿದ್ಯಾವಿಕಾಸ್‌ನಲ್ಲಿ ಎಷ್ಟು ಜನ ನೋಂದಣಿ ಮಾಡಿಕೊಂಡಿದ್ದಾರೆ ಅವರ ಸಾಮರ್ಥ್ಯ ಎಷ್ಟಿದೆ ಎಂದು ಕೇಳಿದಾಗ ನಾವು 60 ಲಕ್ಷ ಮೀಟರ್ ತಯಾರಿಸಬಹುದು ಎಂದು ಹೇಳಿದರು. ಇನ್ನೂ ಐದು ಲಕ್ಷ ಹೆಚ್ಚಿಸಿ ಒಟ್ಟು 65 ಲಕ್ಷಕ್ಕೆ ಆರ್ಡರ್ಸ್ ಕೊಡುತ್ತೇವೆ ಎಂದು ಹೇಳಿ ನಾನು ಮಾನ್ಯ ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ಕೊಟ್ಟಿರುವುದು ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ ಅವರಿಗೂ ಗೊತ್ತಿದೆ. ಅದನ್ನು ಅವರು ಸ್ವಾಗತಿಸುತ್ತಾರೆಂದು ನಾನಾದರೂ ಭಾವಿಸಿದ್ದೆನು. ಎರಡನೆಯದಾಗಿ ಕೈಮಗ್ಗದಿಂದ ವಿದ್ಯುತ್‌ಚಾಲಿತ ಮಗ್ಗಕ್ಕೆ ಬದಲಾವಣೆಯಾಗುವಂತಹ ಸಂದರ್ಭದಲ್ಲಿ ಸಬ್ಸಿಡಿ ನೀಡಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ. ವಿದ್ಯುತ್‌ಚಾಲಿತ ಮಗ್ಗಗಳು ಯಾರ ಹಿಡಿತದಲ್ಲಿಯೂ ಇಲ್ಲ. ಅವರ ವ್ಯಾಪಾರವನ್ನು ನೇರವಾಗಿ ಮಾಡುತ್ತಿದ್ದಾರೆ. ಹಾಗಿದ್ದರೂ ಕೂಡ ಆ ಸಂಸ್ಥೆಯನ್ನು ಉಳಿಸುವುದಕ್ಕಾಗಿ ನಾನು ಅವರ ಜೊತೆಯಲ್ಲಿ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ 60,000 ಮೀಟರ್ ಮಾಡುವಂತಹ ಸಾಮರ್ಥ್ಯ ಅವರಿಗಿಲ್ಲ. ನೂಲು ಕೊಡುವಂತಹ ಪದ್ಧತಿ ಅವರಲ್ಲಿ ಇಲ್ಲ. ಕೈಮಗ್ಗದಲ್ಲಿ ನೂಲು ಕೊಡಬೇಕು ಎಂದು ಇದೆ. ಮಗ್ಗಗಳನ್ನು ಸರಿ ಮಾಡಿಕೊಳ್ಳಬೇಕಾದರೆ ಎರಡು ತಿಂಗಳು ಬೇಕಾಗುತ್ತದೆ. ಇಲಾಖೆಯು ಕೈಮಗ್ಗದ 65 ಲಕ್ಷ ಮೀಟರ್ ಬಟ್ಟೆಗೆ ಅವಕಾಶ ಮಾಡಿಕೊಟ್ಟಿದೆ, ಅವರೂ ಸಹ ಬಹುತೇಕ ಎಲ್ಲಾ ಬಟ್ಟೆಯನ್ನು ಸಿದ್ಧ ಪಡಿಸಿಕೊಂಡಿದ್ದಾರೆ.

**(237) 16.03.2017 ಬಿಕೆಪಿ/ಎಕೆ 1.50**

**ಶ್ರೀ ತನ್ವೀರ್ ಸೇಠ್(ಮುಂದು):-**

ಆ ಕಾರಣದಿಂದ, ಇವತ್ತು ಏನು 65 ಲಕ್ಷ ಮೀಟರ್ ಬಟ್ಟೆಯನ್ನು ಕೈಮಗ್ಗದಿಂದ ಕೊಡಲು ಅವರಿಗೆ ಅವಕಾಶವನ್ನು ಕೊಟ್ಟಿದ್ದೇವೆ, ಅವರು ಬಹುತೇಕವಾಗಿ ಎಲ್ಲವನ್ನೂ ಈಗಾಗಲೇ ಸಿದ್ಧ ಮಾಡಿಕೊಂಡಿದ್ದಾರೆ. ಅದನ್ನು ಸರಬರಾಜು ಮಾಡಲಿಕ್ಕೂ ತಯಾರು ಮಾಡಿಕೊಂಡಿದ್ದಾರೆ. ಆದರೆ, ವಿದ್ಯುತ್‌ಚಾಲಿತ ಮಗ್ಗಗಳು ಇದುವರೆವಿಗೂ ಯಾವುದೇ ಕೆಲಸ ಮಾಡಿಲ್ಲ. ಕಳೆದ ವರ್ಷವೂ ಸಹ ಟೆಂಡರ್ ಮೂಲಕ ಬೇರೆ ಕಡೆಯಿಂದ ಬಟ್ಟೆಯನ್ನು ತಂದು, ನನಗೆ ಕೊಟ್ಟಿರುವಂತಹ ಮಾಹಿತಿ ನನ್ನ ಹತ್ತಿರ ಇದೆ. ಆ ಒಂದು

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು”

ಕಾರಣದಿಂದ ಈ ವರ್ಷಯಾವುದೇ ರೀತಿಯಿಂದಲೂ ಒಂದು ಮೀಟರ್ ಬಟ್ಟೆಯನ್ನೂ ಸಹ ವಿದ್ಯುತ್‌ಚಾಲಿತ ಮಗ್ಗಗಳಿಂದ ಖರೀದಿ ಮಾಡಬಾರದೆನ್ನುವ ನಿರ್ಧಾರಕ್ಕೆ ನಾನು ಬಂದಿದ್ದೆ.

ಆದರೆ, ಆ ಒಂದು ಸಂಸ್ಥೆ ಸರ್ಕಾರದ ಸಂಸ್ಥೆಯಾಗಿರುವುದರಿಂದ ಒಂದು ಬಾರಿ ಅವರಿಗೆ ಅವಕಾಶ ಕೊಡಬೇಕೆಂದು ಹೇಳಿ ಅವಕಾಶ ಕೊಟ್ಟಿದ್ದು ನಿಜ. ನಮ್ಮ ಕೈಗಾರಿಕಾ ನೀತಿಯಲ್ಲಿ ಈ ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ ಶೇಕಡ 15 ರಷ್ಟು ಪ್ರೋತ್ಸಾಹವಾಗಿ ನಾವು ಕೊಡಬೇಕೆಂದು ಏನಿದೆ, ಅದನ್ನು ಸೇರಿಸಿ ಕೊಡುವಂತಹ ನಿಯಮವನ್ನಿಟ್ಟುಕೊಂಡು ನಾನು ಮಾಡಿದ್ದೆ. ಹಾಗಿರುವಂತಹ ಸಂದರ್ಭದಲ್ಲಿ ಸಾಲುವುದಿಲ್ಲವೆಂದು ಹೇಳಿ, ಬಹಳಷ್ಟು ಜನ ಸದಸ್ಯರು ಮತ್ತು ನಮ್ಮ ವಿದ್ಯುತ್‌ಚಾಲಿತ ಮಗ್ಗಗಳ ಒಕ್ಕೂಟದಿಂದ ಬಂದು ಕೇಳಿದಂತಹ ಸಂದರ್ಭದಲ್ಲಿ ಇನ್ನು 5% ಜಾಸ್ತಿ ಮಾಡಿಕೊಡುತ್ತೇವೆನ್ನುವ ಮಾತನ್ನು ನಾನು ಹೇಳಿದೆ. ಆದರೆ, ಇವತ್ತು ಅಂತಿಮವಾಗಿ ಮಾರುಕಟ್ಟೆಯಲ್ಲಿ ಬೆಲೆ ಏನಿದೆ, ಅದಕ್ಕಿಂತ ಶೇಕಡ 26 ರಷ್ಟು ಜಾಸ್ತಿ ಮಾಡಿಕೊಟ್ಟಿದ್ದೇವೆ. ಜೊತೆಗೆ ಇವತ್ತು ಮಾನ್ಯ ಶ್ರೀ ಉಗ್ರಪ್ಪನವರು ಮಾತನಾಡುವಂತಹ ಸಂದರ್ಭದಲ್ಲಿ ಆ ದರಗಳನ್ನು ಓದಿದರು. ಇವತ್ತು L1 Bidder ಯಾರಿದ್ದಾರೆ. . . ನಾನು ಅದನ್ನು ಏನು ಎಂದು ನಿಗದಿ ಮಾಡಿಕೊಳ್ಳಬೇಕಾಗುತ್ತದೆ. 80 ಲಕ್ಷ ಮೀಟರ್ ಬಟ್ಟೆ ಬೇಕಾಗಿದ್ದು, ಅದನ್ನು ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗಗಳಿಂದಲೇ ಖರೀದಿ ಮಾಡಲಾಗುತ್ತಿದೆ. ಜೊತೆಗೆ ಈ ವರ್ಷ 8 ರಿಂದ 10ನೇ ತರಗತಿಯವರೆಗಿನ ಸುಮಾರು 5 ಲಕ್ಷದ 8 ಸಾವಿರ ವಿದ್ಯಾರ್ಥಿಗಳಿಗೆ ಚೂಡಿದಾರ್ ಕೊಡಬೇಕಾಗಿದೆ. ಆ ಬಟ್ಟೆಯನ್ನು ತಕ್ಷಣ ಮಾಡುವುದಕ್ಕೆ ಕಷ್ಟ ಸಾಧ್ಯವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಅದನ್ನು ಟೆಂಡರ್ ಮೂಲಕ ಕರೆಯುವಂತಹ ಪ್ರಯತ್ನವನ್ನು ನಾನು ಮಾಡಿರುವಂತಹದ್ದಾಗಿದೆ. ನಮ್ಮ ಹತ್ತಿರ ನೋಂದಾಯಿತ ಕೈಮಗ್ಗದ ನೇಕಾರರು ಎಷ್ಟು ಜನರಿದ್ದಾರೆ, ಅವರೆಲ್ಲರಿಗೂ ನಾವು ಕೆಲಸವನ್ನು ಕೊಟ್ಟಿದ್ದೇವೆ. ಇದು ಇತಿಹಾಸದಲ್ಲಿಯೇ ಇಲ್ಲ. ಏಕೆಂದರೆ, ಮಾನ್ಯ ಸದಸ್ಯರು ಕೂಡ 6 ವರ್ಷಗಳ ಕಾಲ ನಿಗಮದ ಅಧ್ಯಕ್ಷರಾಗಿಯೂ ಸಹ ಕೆಲಸ ಮಾಡಿದ್ದಾರೆ. ನನ್ನಇಲಾಖೆಯಿಂದ 25 ಕೋಟಿ ರೂಪಾಯಿಗಳನ್ನು ಈ ಬಾರಿ ಮುಂಗಡವಾಗಿ ಕೊಟ್ಟಿದ್ದೇನೆ. ಏಕೆಂದರೆ, ಅವರ ಹತ್ತಿರ ಬಂಡವಾಳ ಇಲ್ಲವೆಂದು ಈ ಒಂದು ಕೆಲಸವನ್ನು ಮಾಡಿದ್ದೇವೆ. ಅವರಿಗೆ ಸಹಾಯ ಮಾಡುವಂತಹ ಉದ್ದೇಶ ಸರ್ಕಾರಕ್ಕೆ ಇದೆ. ಈ ಒಂದು ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇವತ್ತು ಏನು ವಿದ್ಯುತ್‌ಚಾಲಿತ ಮಗ್ಗದವರು ನಮಗೆ ಈ ರೀತಿಯಲ್ಲಿ ಮಾಡುತ್ತೇವೆಂದು ಒಪ್ಪಿಗೆ ಪತ್ರವನ್ನು ನೀಡಿದ ಮೇಲೆ ಈ ಒಂದು ಸಂದರ್ಭದಲ್ಲಿ, ಇಲ್ಲಿ ಈ ವಿಚಾರವನ್ನು ಚರ್ಚಿಸುವುದು ಸಮಂಜಸವಿಲ್ಲವೆಂದು ನಾನು ಭಾವಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಮಾನ್ಯ ಸಭಾಪತಿಯವರೆ, point of order.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಸರ್ಕಾರ ಈ ಕೆಲಸವನ್ನು ಗಮನದಲ್ಲಿಟ್ಟುಕೊಂಡು ಮಾಡಿದೆ. ಇದರಲ್ಲಿ ಬದಲಾವಣೆ ಮಾಡುವಂತಹ ಯಾವುದೇ ಅವಕಾಶವಿಲ್ಲ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಮಾನ್ಯ ಸಭಾಪತಿಯವರೆ, ಇದನ್ನು ಚರ್ಚೆ ಮಾಡುವ ಅವಶ್ಯಕತೆ ಇಲ್ಲವೆಂದು ಮಾನ್ಯ ಸಚಿವರು ಹೇಳುವುದು ಸರಿಯಿಲ್ಲ. No, please... Point of order.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಚೆನ್ನಾಗಿಯೇ ಕೊಟ್ಟರು.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರು ತಮ್ಮ ಉತ್ತರವನ್ನು ಮೊದಲು ಮುಗಿಸಲಿ. ಶ್ರೀಯುತ ರೇವಣ್ಣನವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ದರ ಹೆಚ್ಚಿಸುವ ಬಗ್ಗೆ ಚರ್ಚೆ ಮಾಡುವ ಅಗತ್ಯ ಇಲ್ಲ. ಏಕೆಂದರೆ, ಅವರುಗಳೇ ಇದಕ್ಕೆ ಒಪ್ಪಿಕೊಂಡಿದ್ದು, ಬಟ್ಟೆಯನ್ನು ಅವರು ನಿಗದಿತ ಸಮಯದಲ್ಲಿ ಕೊಡಬೇಕಾಗಿದೆ. ಕೊಡುವಂತಹ ಕೆಲಸ ಆಗಬೇಕು.

ಮತ್ತೆ, ಈ ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಉಗ್ರಪ್ಪನವರು ಮಾತನಾಡುತ್ತಾ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಎಂದು ಕೇಳಿದರು. ನಾನು ನನ್ನ ಇಲಾಖೆ ವತಿಯಿಂದ ಒಟ್ಟಾರೆ, ಅವರನ್ನು ಬ್ಲಾಕ್ ಲಿಸ್ಟ್ ಮಾಡಿದ್ದು, ಅವರಿಂದ ಒಂದು ಮೀಟರ್ ಬಟ್ಟೆಯೂ ಬೇಕಾಗಿಲ್ಲವೆಂದು ಹೇಳಿದ್ದೆ. ಆದರೆ, ಈ ಒಂದು ಬಾರಿ ಅವರಿಗೆ ಅವಕಾಶವನ್ನು ಕೊಡಬೇಕೆಂದು ಅವಕಾಶವನ್ನು ಕೊಟ್ಟಿದ್ದೇವೆ. ಅವರು ನಿಗದಿತ ಸಮಯಕ್ಕೆ ಬಟ್ಟೆಯನ್ನು ಕೊಟ್ಟಂತಹ ಸಮಯದಲ್ಲಿ ಇನ್ನು ಹೆಚ್ಚಿನ ಪ್ರೋತ್ಸಾಹವನ್ನು ಅವರಿಗೆ ಕೊಡುವಂತಹ ಸನ್ನಿವೇಶಗಳು ಬಂದರೆ, ಖಂಡಿತವಾಗಿಯೂ ಸಹ ಪ್ರೋತ್ಸಾಹ ಕೊಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ ಗಣಕಯಂತ್ರದ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಒಂದು ಮಾತನ್ನು ದಯಮಾಡಿ, ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಹಿಂದಿನ ಸರ್ಕಾರ ಮಾನ್ಯ ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಕೈಮಗ್ಗ ನೇಕಾರರಿಗೆ ಹೊಟ್ಟೆ ತುಂಬಲಿಕ್ಕೆ ಸಾಕಾಗುವುದಿಲ್ಲವೆನ್ನುವ ದೃಷ್ಟಿಯಲ್ಲಿ ಒಂದು ಸಾವಿರ ಕುಟುಂಬಗಳಿಗೆ ಉಚಿತವಾಗಿ ವಿದ್ಯುತ್‌ಚಾಲಿತ ಮಗ್ಗಗಳನ್ನು ಕೊಡುವಂತಹ ಯೋಜನೆಯನ್ನು ಮಾಡಿದರು. ಆ ಒಂದು ಐದು ವರ್ಷಗಳಲ್ಲಿ 5 ಸಾವಿರ ವಿದ್ಯುತ್‌ಚಾಲಿತ ಮಗ್ಗಗಳನ್ನು ಕೊಟ್ಟರು. ಈಗ ನಮ್ಮ ಸರ್ಕಾರ 4 ವರ್ಷಗಳಲ್ಲಿ 4 ಸಾವಿರ ವಿದ್ಯುತ್‌ಚಾಲಿತ ಮಗ್ಗಗಳನ್ನು ಕೊಟ್ಟಿದೆ. ಇದನ್ನು ನಾನು ಏತಕ್ಕೆ raise ಮಾಡುತ್ತಿದ್ದೇನೆಂದು ಮಾನ್ಯ ಮಂತ್ರಿಗಳು ಇದನ್ನು ಅರ್ಥ ಮಾಡಿಕೊಳ್ಳಬೇಕು. ಒಟ್ಟಾರೆ, 9 ಸಾವಿರ ವಿದ್ಯುತ್‌ಚಾಲಿತ ಮಗ್ಗಗಳನ್ನು ಸರ್ಕಾರ ಕೊಟ್ಟಿದೆ. ಆ ಸರ್ಕಾರವೂ ಕೊಟ್ಟಿದೆ, ಈ ಸರ್ಕಾರವೂ ಕೊಟ್ಟಿದೆ. ಜೊತೆಗೆ ಉಚಿತವಾಗಿ ವಿದ್ಯುತ್ ಕೊಡುವಂತಹ ವ್ಯವಸ್ಥೆಯೂ ಸಹ ಇದೆ. ತಾವೇ ಉತ್ತರ ಕೊಟ್ಟಿರುವಂತಹ ಸಂದರ್ಭದಲ್ಲಿ ಎಲ್ಲಾ ವಿದ್ಯುತ್‌ಚಾಲಿತ ಮಗ್ಗಗಳು ಕೂಡ ಚಾಲ್ತಿಯಾಗುತ್ತಿದ್ದು, ಅವರು ತಮ್ಮ ಹೊಟ್ಟೆ ಪಾಡಿಗೋಸ್ಕರ ದುಡಿಯುತ್ತಿದ್ದಾರೆ. ವಿದ್ಯುತ್‌ಚಾಲಿತ ಮಗ್ಗಗಳಿಗೆ ನಾನು ಆದೇಶವನ್ನೇ ಕೊಡುವುದಿಲ್ಲ, ಬಟ್ಟೆಯೇ ಬೇಡವೆಂದು ತಾವು ಹೇಳುವಂತಹ ಪ್ರಸಂಗವೇ ಬರುವುದಿಲ್ಲ. ದಯಮಾಡಿ, ತಾವು ಅರ್ಥ ಮಾಡಿಕೊಳ್ಳಬೇಕು. ಇದು ನಿಮ್ಮ ಇಲಾಖೆಗೆ ಸಂಬಂಧಪಡುವುದಿಲ್ಲವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇದು ಸರ್ಕಾರಕ್ಕೆ ಸಂಬಂಧಪಡುವಂತಹದ್ದಾಗಿದೆ. ಸರ್ಕಾರಕ್ಕೆ ಸಂಬಂಧಪಡುವಂತಹ ವಾತಾವರಣದಲ್ಲಿ ದಯಮಾಡಿ, ತಾವು ಅರ್ಥ ಮಾಡಿಕೊಳ್ಳಬೇಕು. ನೇಕಾರರ ಬಗ್ಗೆ ಕಳಕಳಿ ತೋರಿಸಬೇಕು. ಇಲ್ಲವೆಂದರೆ, ಈಒಂದು ಸಾವಿರ ಕುಟುಂಬಗಳಿಗೆ ಪ್ರತಿ ವರ್ಷ ಉಚಿತವಾಗಿ ವಿದ್ಯುತ್‌ಚಾಲಿತ ಮಗ್ಗಗಳನ್ನು ಕೊಡುವಂತಹ ಈ ಒಂದು ಯೋಜನೆ ಏನಿದೆ, ಇದನ್ನು ಸರ್ಕಾರ ನಿಲ್ಲಿಸಲಿ. ನಾನು ಬೇಡವೆಂದು ಹೇಳುವುದಿಲ್ಲ. ನೇಕಾರರಾದ ನಾವು ಸುಣ್ಣ-ಬಣ್ಣವನ್ನಾದರೂ ಬಳಿಯಲಿಕ್ಕೆ ಹೋಗುತ್ತೇವೆ. ಆದ್ದರಿಂದ, ನೇಕಾರರ ಬಗ್ಗೆ ಹಗುರವಾಗಿ ಮಾತನಾಡುವಂತಹದ್ದು ಬೇಡ. ನನ್ನ ಕಳಕಳಿ ಇಷ್ಟೆ. ಸರ್ಕಾರ ಏತಕ್ಕೆ ಒಂದು ಸಾವಿರ ಕುಟುಂಬಗಳಿಗೆ ಇವತ್ತು ವಿದ್ಯುತ್‌ಚಾಲಿತ ಮಗ್ಗಗಳನ್ನು ಕೊಡುತ್ತಿದೆ?

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ನಾನು ಹಗುರವಾಗಿ ಮಾತನಾಡುತ್ತಿಲ್ಲ. ದಯವಿಟ್ಟು ಗಮನಿಸಬೇಕು. ಇವತ್ತು ಕೈ ಮಗ್ಗದಿಂದ, ವಿದ್ಯುತ್‌ಚಾಲಿತ ಮಗ್ಗಗಳಿಗೆ ಸರ್ಕಾರ ಪ್ರೋತ್ಸಾಹ ಕೊಟ್ಟಿರುವುದು ತಮಗೆ ಗೊತ್ತಿದೆ. ಈಗ ನಾವು ಕೊಟ್ಟಿರುವಂತಹ 9 ಸಾವಿರ ವಿದ್ಯುತ್‌ಚಾಲಿತ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಗ್ಗಗಳನ್ನು ಸೇರಿದಂತೆ ಒಟ್ಟು 12,260 ಸಾವಿರ ವಿದ್ಯುತ್‌ಚಾಲಿತ ಮಗ್ಗಗಳು ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿವೆ. ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಅದಕ್ಕೆ ತನ್ನದೇ ಅದಂತಹ ವ್ಯವಸ್ಥಿತ ಮಾರುಕಟ್ಟೆ ಇದೆ. ಸರ್ಕಾರದ ಯಾವುದೇ ಯೋಜನೆ ಜೊತೆಗೆ ಅವರುಗಳು ಬರುತ್ತಿಲ್ಲ. ನಾವು ವಿದ್ಯಾ ವಿಕಾಸ ಯೋಜನೆ ಮಾಡಿದಂತಹ ಸಂದರ್ಭದಲ್ಲಿ ಸರ್ಕಾರದ ಜೊತೆ ಯಾರೂ ಸಹ ನೋಂದಾವಣೆ ಮಾಡಿಕೊಂಡಿರುವುದಿಲ್ಲ. ನಾವು ಆದೇಶವನ್ನು ಕೊಟ್ಟರೂ ಸಹಿತ ನಮಗೆ ನೇರವಾಗಿ ಬಟ್ಟೆಯನ್ನು ಕೊಡುವಂತಹ ಸಾಮರ್ಥ್ಯವನ್ನು ತೋರಿಸಿರುವುದಿಲ್ಲ. ಹೀಗಾಗಿ, ನಾವು ಯಾವುದೇ ಸಂದರ್ಭದಲ್ಲಿ ಕೊಟ್ಟಾಗ, ಮಾರುಕಟ್ಟೆಯಿಂದ ಖರೀದಿ ಮಾಡಿಕೊಡುವಂತಹದ್ದರಲ್ಲಿ ನಾವು ಕೆಲವೊಂದು ನಿರ್ಬಂಧಗಳನ್ನು ಹಾಕಿದ್ದೇವೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಒಂದು ನಿಮಿಷ, ಮಾನ್ಯ ಮಂತ್ರಿಗಳು ಇಲ್ಲಿ ಗಮನಿಸಬೇಕು. ದಯವಿಟ್ಟು ಒಂದು ನಿಮಿಷ ತಾವು yield ಆಗಬೇಕು.

**ಶ್ರೀ ತನ್ವೀರ್ ಸೇಠ್:-** ಕೈಮಗ್ಗ ನೇಕಾರರಿಗೆ ಶಕ್ತಿ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಿದೆ. ಈಗಲೂ ಮಾಡುತ್ತಿದೆ, ಆ ಒಂದು ಬದ್ಧತೆಯನ್ನು ನಾವು ತೋರಿಸಿದ್ದೇವೆ. ವಿದ್ಯುತ್‌ಚಾಲಿತ ಮಗ್ಗಗಳಿಗೆ ಶಕ್ತಿ ಕೊಡುವಂತಹ ನಿಟ್ಟಿನಲ್ಲಿ ನಾವು ಮುಂದಾಗಿದ್ದೇವೆ. ಅವರು ನಮ್ಮ ನಿಯಮಗಳಿಗೆ ಸ್ಪಂದಿಸಿ ಕೊಟ್ಟಂತಹ ಸಮಯದಲ್ಲಿ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವಂತಹ ಸನ್ನೀವೇಶ ಬಂದರೆ ನಾವು ಖಂಡಿತವಾಗಿಯೂ ಸಹ ಅವರಿಗೆ ಪ್ರೋತ್ಸಾಹ ಕೊಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀಯುತ ಶ್ರೀಕಂಠೇಗೌಡರವರೆ, ತಾವು ಕುಳಿತುಕೊಳ್ಳಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಮಾನ್ಯ ಸಭಾಪತಿಯವರೆ, ನನ್ನ ಕಳಕಳಿ ಏನೆಂದರೆ, ನಾನು ಕಳೆದ 21 ವರ್ಷಗಳಿಂದ ರಾಜ್ಯಾಧ್ಯಕ್ಷನಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದೇನೆ. ಏತಕ್ಕೋಸ್ಕರ ನಾನು ಕಳಕಳಿ ವ್ಯಕ್ತ ಮಾಡುತ್ತಿದ್ದೇನೆಂದರೆ ಮಾನ್ಯ ಸಭಾಪತಿಯವರೆ, ನನ್ನ ಮನೆಯಲ್ಲಿಯೂ ಸಹ ಮಗ್ಗಗಳಿವೆ. ನಾನು ನೇಕಾರನಾಗಿರುವುದರಿಂದ ಈಗಲೂ ಸಹ ನೇಯ್ಗೆ ಕೆಲಸವನ್ನು ಮಾಡುತ್ತಿದ್ದೇನೆ, ಇದು ಸರ್ಕಾರ ತಂದಂತಹ ಯೋಜನೆ. ನೌಕರರು ಅವರು ದಿವಸಕ್ಕೆ 4

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ರಿಂದ 5 ಮೀಟರ್ ಬಟ್ಟೆಯನ್ನಷ್ಟೆ ನೇಯುವುದಕ್ಕೆ ಸಾಧ್ಯವಾಗುತ್ತದೆ. ಅಷ್ಟಕ್ಕೆ ಅವರ ಹೊಟ್ಟೆ ತುಂಬುವುದಿಲ್ಲವೆನ್ನುವಂತಹ ಸಂದರ್ಭದಲ್ಲಿ ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರ ಇವತ್ತು 9 ರಿಂದ 10 ಸಾವಿರ ವಿದ್ಯುತ್‌ಚಾಲಿತ ಮಗ್ಗಗಳನ್ನು ಉಚಿತವಾಗಿ ಕೊಡುವಂತಹ ಕಾರ್ಯಕ್ರಮ ಹಾಕಿಕೊಂಡಿದೆ. ಹಾಗಾದರೆ, ಈ ಕಾರ್ಯಕ್ರಮವನ್ನು ನಿಲ್ಲಿಸಿಬಿಡಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ಎರಡು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ. ಅವರ ಮಾತು ಮುಗಿದ ಮೇಲೆ ಮಾನ್ಯ ಸಚಿವರ ಮಾತನಾಡಬೇಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಇಲ್ಲಿ ಏನಾಗುತ್ತದೆ ಎಂದರೆ ತಪ್ಪು ಮಾಹಿತಿ ಕಡತಕ್ಕೆ ಹೋಗುವುದು ಸರಿಯಾಗುವುದಿಲ್ಲ. ನನ್ನ ಇಲಾಖೆಯಿಂದ 80 ಲಕ್ಷ ಮೀಟರ್ ಬಟ್ಟೆಯನ್ನು ಕೊಡಲಿಕ್ಕೆ ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಹೀಗಾಗಿ, ಇಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ. ನಿಗಮದವರೇ ನಮ್ಮ ಹತ್ತಿರ ಈ ವಿಚಾರವಾಗಿ ಸಹಿ ಮಾಡಿದ ಮೇಲೆ ಇಲಿ ಮತ್ತೇನು ಚರ್ಚೆ ಮಾಡಬೇಕು?

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಮಾನ್ಯ ಮಂತ್ರಿಗಳು ಗಮನಿಸಬೇಕು. ಇದಕ್ಕೆ ಮೂರೇ ಮೂರು ತಿಂಗಳು ಸಾಕು. ರಾಜ್ಯದಲ್ಲಿರುವಂತಹ ನೇಕಾರರ ಸಂಖ್ಯೆಗೆ ಅನುಗುಣವಾಗಿ ಹಾಗೂ ನಾನು ನೇಕಾರನಾಗಿ practical ಆಗಿ ಅನುಭವ ಉಳ್ಳವನಾದ್ದರಿಂದ ಹೇಳುತ್ತಿದ್ದೇನೆ. ನೀವು ಸರಿಯಾದಂತಹ ಸಂದರ್ಭದಲ್ಲಿ ನಮಗೆ ಆದೇಶ ಕೊಟ್ಟರೆ 80 ಲಕ್ಷ ಮೀಟರ್ ಬಟ್ಟೆಯನ್ನು ನಾವು 3 ತಿಂಗಳಿನಲ್ಲಿ ಕೊಡುತ್ತೇವೆ. ಆ ರೀತಿಯ ಒಂದು ವ್ಯವಸ್ಥೆ ನಮ್ಮಲ್ಲಿ ಇದೆ.

ಆದ್ದರಿಂದ, ಈ ವಿಚಾರವಾಗಿ ತಾವು ಒಂದು ಸಭೆಯನ್ನು ಕರೆಯಿರಿ. ಆ ಎರಡು ನಿಗಮದ ಅಧ್ಯಕ್ಷರುಗಳನ್ನು ಮತ್ತು 905 ನೇಕಾರರ ಸಂಘಗಳ ಅಧ್ಯಕ್ಷರುಗಳು ಏನಿದ್ದಾರೆ, ಅವರುಗಳನ್ನು ನಾನು ಕರೆಸುತ್ತೇನೆ. ಅದನ್ನು permanent project ಮಾಡಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ,

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಸಚಿವರೆ, ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮೊದಲು ಮುಗಿಸಲಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ನಾನು ಬಟ್ಟೆಯನ್ನು ಖರೀದಿ ಮಾಡುತ್ತಿದ್ದೇನೆ. ಬಟ್ಟೆಯನ್ನು ಖರೀದಿ ಮಾಡಬೇಕಾದರೆ ಸಮಯವನ್ನು ನೋಡಬೇಕು, ಅದರ ಗುಣಮಟ್ಟವನ್ನು ನೋಡಬೇಕು, ಮಕ್ಕಳಿಗೆ ಸರಿಯಾದ ಸಂದರ್ಭಕ್ಕೆ ಬಟ್ಟೆಗಳನ್ನು ಪೂರೈಸುವಲ್ಲಿ ಏನೇನು ಮಾಡಬೇಕಾಗಿದೆ, ಅದು ನಮ್ಮ ಇಲಾಖೆ ಯಜವಾಬ್ದಾರಿಯಾಗಿದ್ದು, ನಾನು ಅದನ್ನು ಮಾಡಬೇಕಾಗಿದೆ. ನೇಕಾರರ ವಿಚಾರ ಕೈಮಗ್ಗ ಇಲಾಖೆಗೆ ಬರುತ್ತದೆ. ಆ ಇಲಾಖೆಯ ಸಚಿವರು ಯಾವುದೇ ಸಭೆಯನ್ನು ಮಾಡಲಿ, ಅಲ್ಲಿಂದ ಏನು ತೀರ್ಮಾನ ಬರುತ್ತದೆ, ಅದರ ಮೇಲೆ ಅವರು ಕ್ರಮ ತೆಗೆದುಕೊಳ್ಳುತ್ತಾರೆ. ಅದು ನಮ್ಮ ಇಲಾಖೆಗೆ ಸಾಧ್ಯವಾದರೆ, ಅದನ್ನು ನಾವು ಪಾಲನೆ ಮಾಡುತ್ತೇವೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:-** ಶ್ರೀಯುತ ಲಕ್ಷ್ಮೀನಾರಾಯಣರವರೆ, ತಾವು ಕುಳಿತುಕೊಳ್ಳಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಮಾನ್ಯ ಸಭಾಪತಿಯವರೆ, ನೇಕಾರರ ಬಗ್ಗೆ ನನ್ನ ಕಳಕಳಿ ಇದ್ದು, ನಾನು ಈ ಬಗ್ಗೆ ಕನ್‌ಕ್ಲೂಡ್ ಮಾಡುತ್ತೇನೆ. ಎರಡು ನಿಗಮದ ಅಧ್ಯಕ್ಷರುಗಳು, ಜವಳಿ ಸಚಿವರು, ಮಾನ್ಯ ಮಂತ್ರಿಗಳನ್ನು ಕರೆದು ಕುಳಿತು ಚರ್ಚೆ ಮಾಡಿದರೆ ಸಂದರ್ಭದಲ್ಲಿ ಗುಣಮಟ್ಟದ ಬಟ್ಟೆಯನ್ನು ಕೊಡುತ್ತೇವೆ. ಶಾಸ್ಸಕನಾಗಿ ನಾನು ಇವತ್ತು ಹಾಕಿರುವಂತಹ ಬಟ್ಟೆಯೂ ಸಹ ಕೈಮಗ್ಗ ನಿಮಗದಲ್ಲಿ ನೇಯ್ದಿರುವಂತಹ ಬಟ್ಟೆಯಾಗಿದೆ. ತಾವು ಅಪ್ಪಣೆಯನ್ನು ಕೊಟ್ಟರೆ 300 ಜನ ಶಾಸಕರುಗಳಿಗೂ ಕೂಡ ನಾಳೆ ಬೆಳಿಗ್ಗೆಯೇ ಬಟ್ಟೆಯನ್ನು ಕೊಡುತ್ತೇನೆ. ಅವರುಗಳು ನಾವು ಕೊಟ್ಟಂತಹ ಬಟ್ಟೆಯನ್ನು ಒಂದು ಬಾರಿ ಹಾಕಲಿ. 300 ಜನ ಶಾಸಕರುಗಳು ಕೂಡ ಬಟ್ಟೆಯನ್ನು ಹಾಕಿದ ಮೇಲೆ, ಇದು ಗುಣಮಟ್ಟ ಇದೆ ಎಂದಾದ ಮೇಲೆ ಇದನ್ನು ಒಪ್ಪಿಕೊಂಡು ಖರೀದಿ ಮಾಡಲಿ. ಇಲ್ಲದಿದ್ದರೆ, ಬೇಡ. ಇವತ್ತು ನಾನು ಹಾಕಿರುವಂತಹ ಬಟ್ಟೆ, ಕೈಮಗ್ಗದಿಂದ ನೇಯ್ದಿರುವಂತಹ ಬಟ್ಟೆಯಾಗಿದೆ. ಗುಣಮಟ್ಟದಲ್ಲಿ ಏನಾದರೂ ವಿಫಲವಾಗಿದ್ದರೆ ಯಾರೋ ಬ್ರೋಕರ್ ಮೂಲಕ ಖರೀದಿ ಮಾಡಿದ್ದರೆ, ಅದಕ್ಕೆ ಜವಾಬ್ದಾರರು ಯಾರು? ಅದಕ್ಕೆ ಸಂಬಂಧಪಟ್ಟಂತೆ ಶ್ರೀಮಾನ್ ಉಗ್ರಪ್ಪನವರು ಸಹ ಹೇಳಿದರು. ಇದುವರೆವಿಗೂ ಏತಕ್ಕೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ? ಆದ್ದರಿಂದ, ನೇಕಾರರ ಬಗ್ಗೆ ಸರ್ಕಾರ

"ತಿದ್ದುಪಡಿಯಾಗದ ಪ್ರತಿ/ಉಪಯೋಗಿಸತಕ್ಕದ್ದಲ್ಲ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಕಳಕಳಿ ಇಟ್ಟುಕೊಂಡು ದಯಮಾಡಿ, ರಾಜ್ಯದಲ್ಲಿನ ನೇಕಾರರನ್ನು ಉಳಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆನ್ನುವುದು ನನ್ನ ಕಳಕಳಿ.

**(238) 16.03.2017 2:00 MGN-RN**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ...

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ಈಗಾಗಲೇ ತಾವು ಈ ವಿಚಾರದ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿರುವುದರಿಂದ ದಯಮಾಡಿ ಕುಳಿತುಕೊಳ್ಳಿ.

ಮಾನ್ಯ ಸಚಿವರೆ, ಮಾನ್ಯ ಸದಸ್ಯರಾದ ಎಂ.ಡಿ.ಲಕ್ಷ್ಮೀನಾರಾಯಣ ಅವರು ಬಹಳ ಒತ್ತಾಯ ಮಾಡುತ್ತಿದ್ದಾರೆ. ಆದುದರಿಂದ ಆ ನೇಕಾರರ ಸಂಘದ ಸಂಘಟನೆಯವರ ಜೊತೆಗೆ ಮಾನ್ಯ ಲಕ್ಷ್ಮೀನಾರಾಯಣ ಅವರನ್ನೆಲ್ಲಾ ಕರೆದು ತಾವು ಒಂದು ಸಭೆಯನ್ನು ಮಾಡಿ. ಅವರೊಂದಿಗೆ ಚರ್ಚೆ ನಡೆಸುವ ಒಂದು ಅವಕಾಶವನ್ನು ಕೊಡಿ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ನೇಕಾರರ ಪ್ರತಿನಿಧಿಯಾಗಿರುವುದರಿಂದ ಒಂದಲ್ಲಾ ನಾಲ್ಕು ಬಾರಿ ಅವರೊಡನೆ ಚರ್ಚೆ ಮಾಡಿದ್ದೇನೆ. ನಾನು ನನ್ನ ಇಲಾಖೆಯ ಜವಾಬ್ದಾರಿಯಲ್ಲಿ ನೇಕಾರರ ಜೊತೆ ಸಭೆ ಮಾಡುವಂತಹ ಅವಕಾಶ ನನಗಿಲ್ಲ. ನಾನು ಜವಳಿ ಖಾತೆಯ ಸಚಿವರಿಗೆ ಹೇಳುತ್ತೇನೆ, ಅವರು ಸಭೆ ಕರೆದಂತಹ ಸಂದರ್ಭದಲ್ಲಿ ಭಾಗವಹಿಸುತ್ತೇನೆ.

**ಉಪ ಸಭಾಪತಿಯವರು:-**ಇಲ್ಲಿಗೆ ಈ ವಿಷಯದ ಮೇಲಿನ ಚರ್ಚೆ ಮುಕ್ತಾಯಗೊಂಡಿದೆ. ಈಗ ಸದನವನ್ನು ಮಧ್ಯಾಹ್ನ 3 ಗಂಟೆ 15 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

(239)/16-3-2017/3-30/RC-VK

**(ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಸಭಾಪತಿಯವರು:-** ನಿಯಮ 330ರ ಅಡಿಯಲ್ಲಿ ಮಾನ್ಯ ರಾಮಚಂದ್ರಗೌಡರ ಹೆಸರಿನ ಮುಂದೆ ಇರುವಂತಹ ವಿಷಯವನ್ನು ನಾಳೆ ತೆಗೆದುಕೊಳ್ಳಲಾಗುತ್ತದೆ. ಈಗ ಒಂದು ವಿಷಯವನ್ನು ಸಭೆಯ

"ತಿದ್ದುಪಡಿಯಾಗದ ಪ್ರತಿ/ ಗಟಿಜೀಜಿಣಜಜ ಅಠಠಿಥಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಮನಕ್ಕೆ ತರಬಯಸುತ್ತೇನೆ. ಏನೆಂದರೆ ಸಂಜೆ 5:00 ಗಂಟೆಗೆ ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕ ಮಾಲಿಕೆ ಬಿಡುಗಡೆ ಕಾರ್ಯಕ್ರಮ ಇರುವುದರಿಂದ ನಾವು ಸದನವನ್ನು ಸಂಜೆ 5:00 ಗಂಟೆಗೆ ಮುಕ್ತಾಯಗೊಳಿಸಬೇಕಾಗುತ್ತದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು 2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆಯನ್ನು ಪ್ರಾರಂಭಿಸುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೆ, ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಸಚಿವರ ಸ್ಥಾನದಲ್ಲಿ ಯಾರೂ ಇಲ್ಲ. ಅದೇ ರೀತಿ ವಿರೋಧ ಪಕ್ಷದ ಸ್ಥಾನದಲ್ಲಿಯೂ ಸಹ ಯಾರು ಇಲ್ಲ.

**ಉಪಸಭಾಪತಿಯವರು:-** ಸಭಾ ನಾಯಕರಿದ್ದಾರೆ ಕುಳಿತುಕೊಳ್ಳಿ.

**ಡಾ||ಜಿ.ಪರಮೇಶ್ವರ(ಸಭಾ ನಾಯಕರು):-** "ನಾನು ಇಲ್ಲಿ ಗುಂಡುಕಲ್ಲು ಕುಳಿತಂತೆ ಇಲ್ಲಿಯೇ ಕುಳಿತುಕೊಂಡಿದ್ದೇನೆ" ಏಕೆ ಈ ರೀತಿ ಹೇಳುತ್ತೀರಿ? ಮಂತ್ರಿಗಳೇ ಇಲ್ಲವೆಂದು ಹೇಳಿದರೆ ಹೇಗೆ? ಅವರನ್ನೇ ನಾನು ಪ್ರತಿನಿಧಿಸುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಗೃಹ ಸಚಿವರೆ, ಸರ್ಕಾರದ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ನೋಡಿ.

**ಶ್ರೀ ಆರ್.ಚೌಡರೆಡ್ಡಿತೂಪಲ್ಲಿ:-** ಮಾನ್ಯ ಸಭಾಪತಿಯವರೆ, ನಾವು ಸಭಾ ನಾಯಕರುಇಲ್ಲವೆಂದು ಹೇಳಲಿಲ್ಲ. ಮಂತ್ರಿಗಳು ಇಲ್ಲವೆಂದು ಹೇಳುತ್ತಿರುವುದು.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾನಾಯಕರೆ, ನೀವು ಯಾವಾಗಲು ನಮ್ಮ ಪರವಾಗಿಯೇ ಇರುತ್ತೀರಿ, ನೀವು ನಮ್ಮ ರಕ್ಷಣೆಗೆ ಬರುತ್ತೀರಿ ಅದರ ಬಗ್ಗೆ ನಮಗೆ ಚಿಂತೆ ಇಲ್ಲ. ಆದರೆ ನಿಮ್ಮ ಮಂತ್ರಿಗಳು ಇಲ್ಲವಲ್ಲ ಎಂದು ನಾವು ಹೇಳುತ್ತಿರುವುದು.

**ಡಾ:ಜಿ.ಪರಮೇಶ್ವರ:-** ಮಾನ್ಯ ಶರವಣರವರೆ, ನಾನು ಯಾವಾಗಲು ನಿಮ್ಮ ಪರವಾಗಿಯೇ ಇದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಪ್ರಾರಂಭ ಮಾಡಿ. ಸಚಿವರು ಬರುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾ ನಾಯಕರು ಕೆ.ಪಿ.ಸಿ.ಸಿ. ಅಧ್ಯಕ್ಷರೂ ಕೂಡ ಆಗಿದ್ದಾರೆ. ನಾನು ಅವರು ಯಾವರೀತಿ ಉತ್ತರ ಕೊಡುತ್ತಾರೆಂದು ತಿಳಿದುಕೊಂಡಿದ್ದೆ

"ತಿದ್ದುಪಡಿಯಾಗದ ಪ್ರತಿ/ ಸಂಪಾದಿಸದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದರೆ, 6 ಜನರನ್ನು ಗುಂಡ್ಲುಪೇಟೆಗೆ ಕಳುಹಿಸಿದ್ದೇನೆ, 6 ಜನರನ್ನು ನಂಜನಗೂಡಿಗೆ ಕಳುಹಿಸಿದ್ದೇನೆ, ನಾನು ಇದ್ದೇನೆ ಎಂದು ಹೇಳುತ್ತಾರೆಂದು ತಿಳಿದುಕೊಂಡಿದ್ದೆ. ಆದರೆ ಮಾನ್ಯ ಸಭಾ ನಾಯಕರು "ನಾನಿಲ್ಲಿ ಗುಂಡುಕಲ್ಲಿನಂತೆ ಕುಳಿತಿದ್ದೇನೆ" ಎಂದು ಹೇಳಿದರು. ನೀವು ಗುಂಡು ಕಲ್ಲಲ್ಲ, ಇನ್ನೂ ಗಟ್ಟಿ ಆಗಬೇಕು. ಏಕೆಂದರೆ ಇನ್ನೂ ಗಟ್ಟಿ ಆದರೆ ರಾಜ್ಯಕ್ಕೆ ಇನ್ನೂ ಸ್ವಲ್ಪ ಒಳ್ಳೆಯದಾಗುತ್ತದೆ.

**7. ವಿತ್ತೀಯ ಕಾರ್ಯಕಲಾಪ**

## 2017–18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಂದು ನಾಲ್ಕು ವರ್ಷಗಳು ಮುಗಿಯುತ್ತಾ ಬಂತು. ನಾನು ತುಂಬಾ ಇಲಾಖೆಗಳ ಬಗ್ಗೆ ಚರ್ಚೆ ಮಾಡಬೇಕೆಂದು ತಂದಿದ್ದೇನೆ. ಪ್ರಾರಂಭದಲ್ಲಿಯೇ ನಾನು ಮಾನ್ಯ ಸಭಾ ನಾಯಕರಿಗೆ ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. ರಾಜ್ಯದ ಜನತೆ ಗಮನಿಸುತ್ತಿರುವಂತಹ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವಂತಹ ಸಂದರ್ಭದಲ್ಲಿ ಈ ಅಂಶಗಳ ಬಗ್ಗೆ ತಾವು ಸ್ಪಷ್ಟೀಕರಣ ಕೊಡಿಸಿದರೆ ಒಳ್ಳೆಯದು.

ಮೊದಲನೆಯದಾಗಿ ಚುನಾವಣಾ ಪೂರ್ವದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ತಾವು ಏನು ಹೇಳಿದ್ದೀರಿ, ಎರಡನೆಯದಾಗಿ ಪಂಚಾಯ್ತಿ ಸಂಸ್ಥೆಗಳ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ರಾಜ್ಯದ ಜನತೆಗೆ ಕೊಟ್ಟಂತಹ ಭರವಸೆ ಏನು? ಮೂರನೆಯದಾಗಿ ಅದನ್ನು ಅನುಷ್ಠಾನಗೊಳಿಸುವಂತಹ ಅನುಪಾಲನಾ ವರದಿ. ಕೊನೆಯದಾಗಿ ಆಯವ್ಯಯದಲ್ಲಿ ಘೋಷಿಸಲಾದಂತಹ ಯೋಜನೆಗಳ ಅನುಪಾಲನಾ ವರದಿ. ಈ ಎಲ್ಲಾ ದಾಖಲೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟು ಬಿಟ್ಟರೆ ಇದನ್ನೇ ಇಟ್ಟುಕೊಂಡು ಚುನಾವಣೆಗೆ ಹೋಗಬೇಕು. ಇನ್ನೂ ಒಂದು ವರ್ಷ ಬಾಕಿ ಇದೆ. ನಾಲ್ಕು ವರ್ಷದಲ್ಲಿ ನಾವು ಇಷ್ಟು ಸಾಧನೆಯನ್ನು ಮಾಡಿದ್ದೇವೆ. ಚುನಾವಣಾ ಪ್ರಣಾಳಿಕೆಯಲ್ಲಿ ಇಷ್ಟು ಹೇಳಿದ್ದೇವೆ. ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಇಷ್ಟು ಹೇಳಿದ್ದೇವೆ. ನಾಲ್ಕು ಬಜೆಟ್‌ಗಳಲ್ಲಿ ಇಂತಿಂತಹ ಬಜೆಟ್‌ಗಳನ್ನು ಘೋಷಣೆ ಮಾಡಿದ್ದೇವೆ. ಇಷ್ಟೆಲ್ಲಾ ಸಾಧನೆ ಮಾಡಿದ್ದೇವೆಂದು ಹೇಳಿ ಒಂದು ಅನುಪಾಲನಾ ವರದಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

**ಡಾ||ಜಿ.ಪರಮೇಶ್ವರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಒಳ್ಳೆಯ ಸೂಕ್ತವಾದಂತಹ ಪ್ರಾರಂಭವನ್ನೇ ಮಾಡಿದ್ದಾರೆ. ನಿಜ, ಭಾರತೀಯ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನತಾ ಪಕ್ಷಕೊಟ್ಟಂತೆ ನಾವು ಸಹ ಒಂದು ಪ್ರಣಾಳಿಕೆಯನ್ನು ಕೊಟ್ಟಿದ್ದೇವೆ. ನಮ್ಮ ಪ್ರಣಾಳಿಕೆಯಲ್ಲಿ 165 ಭರವಸೆಗಳನ್ನು ಮಾಡುತ್ತೇವೆಂದು ಹೇಳಿದ್ದೆವು. ಅದನ್ನು 4 ವರ್ಷದಲ್ಲಿ ಎಷ್ಟು ಮಾಡಿದ್ದೇವೆಂದು ಅನೇಕ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ನಾನೂ ಕೂಡ ಹೇಳಿದ್ದೇನೆ. ಖಂಡಿತವಾಗಿಯು ನಾವು ಅದನ್ನು ಇಟ್ಟುಕೊಂಡೇ ಚುನಾವಣೆಗೆ ಹೋಗುತ್ತೇವೆ. ಅದರ ಜೊತೆಗೆ ಇನ್ನೂ ಒಂದು ಕೆಲಸವನ್ನು ಮಾಡುತ್ತೇವೆ. ಏನೆಂದರೆ, ಈ ಹಿಂದೆ ಭಾರತೀಯ ಜನತಾ ಪಕ್ಷ 5 ವರ್ಷ ಆಡಳಿತ ನಡೆಸಿದಂತಹ ಸಂದರ್ಭದಲ್ಲಿ ಏನೇನು ಕೆಲಸಗಳಾಗಿತ್ತು, ಏನೇನು ಕಾರ್ಯಕ್ರಮಗಳನ್ನು ಕೊಟ್ಟಿದ್ದರು, ಏನೇನು ಯೋಜನೆಗಳನ್ನು ಕೊಟ್ಟಿದ್ದರು, ನಮ್ಮ ಸರ್ಕಾರ ಮುಗಿಯುವಾಗ ನಾವು ಏನೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ, ಯಾವಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆ, ಎಷ್ಟು ಖರ್ಚು ಮಾಡಿದ್ದೇವೆ ಎಂದು ಹೇಳುತ್ತೇವೆ. ಅದನ್ನು ಸಹ ಒಂದು comparative study, academic purpose ಗೋಸ್ಕರ ಕೊಡುತ್ತೇವೆ. ಏಕೆಂದರೆ, ಹೌದಪ್ಪ ಇವರೇನು ಮಾಡಿದ್ದರು, ಅವರೇನು ಮಾಡಿದ್ದರು ಎಂದು ಜನಗಳಿಗೆ ಗೊತ್ತಾಗುತ್ತದೆ. ಆದುದರಿಂದ ಎರಡನ್ನೂ ಸಹ ನಾವು ಕೊಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಆ ರೀತಿ ಎರಡನ್ನೂ present ಮಾಡಿ ಬಿಟ್ಟರೆ ಕರ್ನಾಟಕ ರಾಜ್ಯದಲ್ಲಿ ಚುನಾವಣಾ ಪ್ರಚಾರಕ್ಕೆ ಹೋಗುವುದೇ ಬೇಡ, ನಾವು ಹಾಗೆಯೇ ಗೆದ್ದು ಬಿಡುತ್ತೇವೆ.

ಮೊದಲನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು 2013-14ನೇ ಸಾಲಿನಲ್ಲಿ ಸರ್ಕಾರ ಬಂದ ಮೊದಲನೇ ವರ್ಷದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ಸಿದ್ದರಾಮಯ್ಯನವರು ಮಂಡನೆ ಮಾಡಿರುವಂತಹ ಆಯವ್ಯಯದಲ್ಲಿರುವಂತಹ ಅಂಶಗಳ ಬಗ್ಗೆ ನಾನು ಅನುಮೋದನೆ ಮಾಡುತ್ತೇನೆ. ಅವರು ಎಷ್ಟು ಚೆನ್ನಾಗಿ ಹೇಳಿದ್ದಾರೆಂದರೆ, "ಹೆಚ್ಚಿನ ಸಾಲಗಳು ಎಂದರೆ ಹೆಚ್ಚಿನ ಬಡ್ಡಿಯ ಹೊರೆ ಎಂದೇ ಅರ್ಥ" ಇದನ್ನು ಹೇಳಿರುವುದು 2013-14ನೇ ಸಾಲಿನ ಬಜೆಟ್‌ನಲ್ಲಿ. 2006 ರಿಂದ 2013 ರ ಅವಧಿಯಲ್ಲಿ ರಾಜ್ಯಸ್ವದ ಸಂಗ್ರಹದ ಬಗ್ಗೆ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ಈ ದುಭಾರಿ ಸಾಲಗಳನ್ನು ತೆಗೆದುಕೊಂಡರೆ ಮುಂದಿನ ಪೀಳಿಗೆಯ ಮೇಲೆ ಬೃಹತ್ ಸಾಲದ ಹೊರೆಯನ್ನು ಹೊರಿಸಿದಂತಾಗುತ್ತದೆ. ನಾನು ಹಿಂದೆಯು ಹೇಳಿದಂತೆ ಹಾಗು ಈಗಲೂ ಹೇಳುವಂತೆ ಸಾಲ ಸಿಗುತ್ತದೆ ಎಂದು ನಾವು ಸಾಲ ಮಾಡಬಾರದು ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ ಅವರ ಮಾತನ್ನು ನಾನೂ ಕೂಡ ಒಪ್ಪುತ್ತೇನೆ. ನಮ್ಮಅಗತ್ಯ ಮತ್ತು ಸಾಲ ತೀರಿಕೆ ಸಾಮರ್ಥ್ಯವನ್ನು ಆಧರಿಸಿ

ತಿದ್ದುಪಡಿಯಾಗದ ಪ್ರತಿ/ ಗಣಕಯಂತ್ರ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಸಾಲ ಎತ್ತುವಳಿ ಮಾಡಬೇಕು. ಗೊತ್ತು-ಗುರಿ ಇಲ್ಲದ ಸಾಲ ಎತ್ತುವಳಿ ನಮ್ಮ ಆರ್ಥಿಕ ಆರೋಗ್ಯಕ್ಕೆ ಮಾರಕ. ಸಾಲದ ಎತ್ತುವಳಿ ಹೊಣೆಗಾರಿಕೆಯ ಮೊತ್ತ ಕಳೆದ 6 ವರ್ಷಗಳಲ್ಲಿ ಅಂದರೆ 2006-07ನೇ ಸಾಲಿನಿಂದ 2012-13ನೇ ಸಾಲಿನ ಅವಧಿಯಲ್ಲಿ ಅರವತ್ತೆರಡು ಸಾವಿರದ ಐನೂರ ಹತ್ತೊಂಭತ್ತು ಕೋಟಿ ರೂಪಾಯಿಗಳಿಂದ ಒಂದು ಲಕ್ಷದ ಹದಿನೇಳು ಸಾವಿರದ ಐನೂರ ಒಂದು ಕೋಟಿ ರೂಪಾಯಿಗಳಿಗೆ ಏರಿಕೆ ಆಗಿದ್ದು ಹೆಚ್ಚು ಕಡಿಮೆ ದುಪ್ಪಟ್ಟಾಗಿದೆ. ಒಟ್ಟು 2013ರ ಆಯವ್ಯಯದ ಕಂಡಿಕೆ 32ರಲ್ಲಿ ಉಲ್ಲೇಖಿಸಿರುವಂತೆ 2006-2007ನೇ ಸಾಲಿನಲ್ಲಿ ಸರ್ಕಾರಿ ಸಾಲ ಅರವತ್ತೆರಡು ಸಾವಿರದ ಐನೂರ ಹತ್ತೊಂಭತ್ತು ಕೋಟಿ ರೂಪಾಯಿಗಳಿಂದ 2013-2014ನೇ ಸಾಲಿನವರೆಗೆ ಒಂದು ಲಕ್ಷದ ಹದಿನೇಳು ಸಾವಿರದ ಐನೂರ ಹನ್ನೊಂದು ಕೋಟಿ ರೂಪಾಯಿಗಳಿಗೆ ಏರಿಕೆ ಆಗಿದ್ದು ಹೆಚ್ಚು ಕಡಿಮೆ ದುಪ್ಪಟ್ಟಾಗಿದೆ. ಅಂದರೆ ಆರು ವರ್ಷದಲ್ಲಿ ಐವತ್ತ ನಾಲ್ಕು ಸಾವಿರದ ಒಂಭೈನೂರ ಎಂಭತ್ತೆರಡು ಕೋಟಿ ರೂಪಾಯಿಗಳ ಸಾಲ ಹೆಚ್ಚುವರಿ ಮಾಡಿದ್ದು, ವಾರ್ಷಿಕ ಒಂಭತ್ತು ಸಾವಿರದ ನೂರ ಅರವತ್ತಮೂರು ಕೋಟಿ ರೂಪಾಯಿಗಳು. ಕಾಂಗ್ರೆಸ್ ಸರ್ಕಾರ ನಾಲ್ಕು ವರ್ಷದಲ್ಲಿ ಎಷ್ಟು ಮಾಡಿತು? ನಮ್ಮ ಕಡೆ ಒಂದು ಗಾದೆ ಮಾತಿದೆ. ಏನೆಂದರೆ, "ಹೇಳುವುದು ಒಂದು, ಮಾಡುವುದು ಒಂದು" "ಆಚಾರ ಹೇಳುವುದು, ಬದನೆಕಾಯಿ ತಿನ್ನುವುದು" ಎಂದು. ಕಾಂಗ್ರೆಸ್ ಸರ್ಕಾರ ಕಳೆದ ನಾಲ್ಕು ವರ್ಷದ ಅವಧಿಯಲ್ಲಿ 2013-2014ನೇ ಸಾಲಿನಲ್ಲಿ ಸರ್ಕಾರಿ ಸಾಲ ಒಂದು ಲಕ್ಷದ ಹದಿನೇಳು ಸಾವಿರದ ಐನೂರ ಒಂದು ಕೋಟಿ ರೂಪಾಯಿಗಳಿಂದ 2016-2017ನೇ ಅವಧಿಗೆ ಎರಡು ಲಕ್ಷದ ಎಂಟು ಸಾವಿರದ ಐನೂರ ಐವತ್ತೇಳು ಕೋಟಿ ರೂಪಾಯಿ ಸಾಲ. ಒಟ್ಟಾರೆ ನಾಲ್ಕು ವರ್ಷದ ಅವಧಿಯಲ್ಲಿ ಸರ್ಕಾರಿ ಸಾಲ ತೊಂಭತ್ತೊಂದು ಸಾವಿರದಐವತ್ತಾರುಕೋಟಿ ರೂಪಾಯಿಗಳಾಯಿತು. ಅಂದರೆಆವರೇಜ್ ನಾಲ್ಕು ವರ್ಷಕ್ಕೆಇಪ್ಪತ್ತೆರೆಡು ಸಾವಿರದ ಏಳುನೂರ ಅರವತ್ತ ನಾಲ್ಕು ಕೋಟಿ ರೂಪಾಯಿಗಳು. ನಾನು ಒಂಭತ್ತು ಸಾವಿರದ ನೂರ ಅರವತ್ತ ಮೂರು ಕೋಟಿ ರೂಪಾಯಿ ಕಡಿಮೆ ಎಂದು ಅಂದುಕೊಳ್ಳುತ್ತೇನೆ. ಇಪ್ಪತ್ತೆರೆಡು ಸಾವಿರ ಕೋಟಿ ರೂಪಾಯಿ ಜಾಸ್ತಿ ಎಂದು ಅಂದುಕೊಳ್ಳುತ್ತೇನೆ. ಕಾಂಗ್ರೆಸ್ಸಿನವರ ಲೆಕ್ಕಾಚಾರ ಏನೆಂದು ನನಗೆ ಗೊತ್ತಿಲ್ಲ. ಈ ಭಾಷಣ ಆಯವ್ಯಯಕ್ಕೋಸ್ಕರವೆ? ಅಥವಾ ಭಾಷಣಕ್ಕೋಸ್ಕರ ಮಾಡುವ ಭಾಷಣವೆ?

**(240) 16.03.2017 ಕೆ.ಜಿ./ವಿಕೆ 3.40**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-** "ಈ ವರ್ಷ ಎಷ್ಟು ಸಾಲ" 37,092 ಕೋಟಿ ರೂಪಾಯಿಗಳು ಸಾಲ. ಇದು ಪ್ರಜಾವಾಣಿ ದಿನಪತ್ರಿಕೆಯ ಮುಖ ಪುಟದಲ್ಲಿ ಇಂದು ಬಂದಿದೆ. ಇದು ಬಜೆಟ್ ಪುಸ್ತಕದಲ್ಲಿದೆ. ಅಂದರೆ, "ಗೊತ್ತುಗುರಿ ಇಲ್ಲದ ಸಾಲ ಎತ್ತುವಳಿ ನಮ್ಮ ಆರ್ಥಿಕ ಆರೋಗ್ಯಕ್ಕೆ ಮಾರಕ" ಎಂದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಗೊತ್ತಿದ್ದರೂ ಸಹ, 37,092 ಕೋಟಿ ರೂಪಾಯಿಗಳನ್ನು ಈ ವರ್ಷದಲ್ಲಿಯೇ ಸಾಲ ಮಾಡಿದ್ದಾರೆ ಎಂದರೆ, ಇದರ ಕಥೆ ಏನು? ಮತ್ತೆ ಖಾಸಗೀ ಬ್ಯಾಂಕ್‌ಗಳಲ್ಲಿ percentage ಬಡ್ಡಿ ಜಾಸ್ತಿ. ಆ ಬಡ್ಡಿಯನ್ನು ತೆಗೆದುಕೊಂಡು 37,092 ಕೋಟಿ ರೂಪಾಯಿಗಳನ್ನು ಈ ವರ್ಷದಲ್ಲಿ ಸಾಲ ಮಾಡಿದ್ದಾರೆ. ನಮ್ಮ ಕಡೆಯಲ್ಲಿ "ಮಾರಿ ಜಾತ್ರೆಗೂ ಸಹ ಕುರಿಯನ್ನು ತರಬೇಕಾದರೆ, ಸಾಲ ಮಾಡಿ ಯಾರು ಕುರಿಯನ್ನು ತೆಗೆದುಕೊಂಡು ಬರುವುದಿಲ್ಲ. ಚಿಕ್ಕ ಕುರಿ ಮರಿಯನ್ನು ಇಟ್ಟುಕೊಂಡು ಬೆಳೆಸಿ, ಬೆಳೆಸಿ ಕುರಿಯನ್ನು ಬೆಳೆಸುತ್ತಾರೆ". ಒಂದೇ ಬಾರಿ 37,092 ಸಾವಿರಕೋಟಿ ರೂಪಾಯಿಗಳನ್ನು ಸಾಲ ಮಾಡುವ ಮೂಲಕ ರಾಜ್ಯದ ಜನತೆಯನ್ನು ಕುರಿಗಳನ್ನು ಕತ್ತರಿಸುವಂತೆ ಬಲಿಗೊಡಲು ಹೊರಟ್ಟಿದ್ದಾರೆ". 2013-2014ನೇ ಸಾಲಿನಲ್ಲಿ ಮಾನ್ಯ ಸಿದ್ದರಾಮಯ್ಯನವರು ಹೊಸದಾಗಿ ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ "ಗೊತ್ತುಗುರಿ ಇಲ್ಲದೆ ಸಾಲ ಮಾಡುವುದು ಒಳ್ಳೆಯದು ಅಲ್ಲ ಎಂದು ಹೇಳಿದ್ದರು. ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತಿಎತ್ತಿ ಒಗೆದನಂತೆ. ಸಾಲ ಮಾಡಬಾರದು. ಸಾಲ ಮಾಡಿದ್ದು ತಪ್ಪು. ಹಿಂದಿನ ಸರ್ಕಾರಗಳು ಅಷ್ಟೊಂದು ಸಾಲ ಮಾಡಿದವು, ಇಷ್ಟೊಂದು ಸಾಲ ಮಾಡಿದವು ಎಂದು ಹೇಳಿದ್ದರು. ಈಗ ಸಾಲ ಎಷ್ಟಾಗಿದೆ? ಅವರು ಸಾಲ ಮಾಡಿ ಹೋಗಿ ಬಿಡುತ್ತಾರೆ. ಆದರೆ ಅದರ ಸಾಲವನ್ನು ತೀರಿಸುವವರು ನಾವು.

**ಡಾ॥ಜಿ.ಪರಮೇಶ್ವರ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸಾಲದ ವಿಚಾರದಲ್ಲಿ ಅಂಕಿ-ಸಂಖ್ಯೆಗಳ ಸಮೇತವಾಗಿ ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ಮನವಿ ಏನೆಂದರೆ, ಇದನ್ನು absolute terms ನಲ್ಲಿ ಹೇಳುವುದು ಬೇಡ. Percentage ನಲ್ಲಿ ಹೇಳಿ. ನಾವು 2006-2007ನೇ ಸಾಲಿನಲ್ಲಿ ನಮ್ಮ ಜಿ.ಡಿ.ಪಿಗೆ ಎಷ್ಟು per cent ಸಾಲ ತೆಗೆದುಕೊಂಡಿದ್ದೆವು. 2013ನೇ ಸಾಲಿನಿಂದ ಕ್ರಾಂಗೆಸ್ ಸರ್ಕಾರ ಅಧಿಕಾರಕ್ಕೆ ಬಂತು. ಕಳೆದ ನಾಲ್ಕು ವರ್ಷಗಳಲ್ಲಿ ಜಿ.ಡಿ.ಪಿ ಗೆ ಎಷ್ಟು per cent ನಿಗಧಿ ಮಾಡಿದ್ದಾರೆ. ಸಾಲದ ಮಿತಿ ಶೇಕಡಾ 25 ರ ಮೇಲೆ ಹೋಗುವಂತಿಲ್ಲ. ಇದನ್ನು ಅವರು ಒಪ್ಪುತ್ತಾರಲ್ಲವೆ? ನಾವು ಆ ಮಿತಿಯಲ್ಲೇ ಇದ್ದೇವೆ. ನಾವು ಕಳೆದ 4 ವರ್ಷಗಳಿಂದ ಶೇಕಡಾ 25 ರ ಒಳಗಡೆ ಇದ್ದೇವಾ ಅಥವಾ ಅದರ ಆಚೆಗೆ ಹೋಗಿದ್ದೇವಾ? ಅವರು ಹೇಳುತ್ತಿರುವ ಈ ವರ್ಷದ ಸಾಲ ಶೇಕಡಾ 25 ಕ್ಕೆ, ನಾವು ಶೇಕಡಾ 18 ಇದ್ದೇವೆ. ಅವರು absolute ನಂಬರ್ ಹೇಳಿಬಿಟ್ಟರೆ...

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 2011–2012 ಮತ್ತು 2012–2013 ನೇ ಸಾಲಿನಲ್ಲಿ ಇದೇ percentage ಇತ್ತು. ಆದರೆ, ಬಜೆಟ್‌ನಲ್ಲಿ ಏನೂ ಘೋಷಣೆ ಮಾಡಿದ್ದಾರೆ?

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ಅವತ್ತು ಏನು ಬಜೆಟ್ ಇತ್ತು? ಕಳೆದ ವರ್ಷ 1,63,000 ಕೋಟಿ ರೂಪಾಯಿಗಳ ಬಜೆಟ್ ಇದ್ದರೆ, ಈ ವರ್ಷ ಸುಮಾರು 1,86,000 ಕೋಟಿ ರೂಪಾಯಿಗಳ ಬಜೆಟ್ ಇದೆ. ಈ ಬಜೆಟ್‌ನ್ನು ಕೊಡುವಾಗ 24 ಸಾವಿರ ಕೋಟಿ ರೂಪಾಯಿಗಳು ಬಜೆಟ್ ಜಾಸ್ತಿ ಆದಾಗ absolute ನಂಬರ್ ಹೇಳುವುದಕ್ಕೂ ಮತ್ತು percentage ಹೇಳುವುದಕ್ಕೆ ವ್ಯತ್ಯಾಸ ಆಗುವುದಿಲ್ಲವೇ? ಮಾನ್ಯ ಸಭಾಪತಿಯವರೇ, ದಯಮಾಡಿ ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರೆ ಹೇಳಿ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶನ):–** ಮಾನ್ಯ ಸಭಾಪತಿಯವರೆ, ಅವರು ಸಾಲ ಮಾಡಿ ಮಾಡಿ ಹೋಗಲಿ. ಮುಂದೆ ಅಧಿಕಾರಕ್ಕೆ ಬರುವಂತಹ ನಮಗೆ ಎಂತಹ ಪರಿಸ್ಥಿತಿ ಮಾಡಿ ಇಡುತ್ತಾರೆ? ಅವರು ಮಾಡಿರುವ ಸಾಲವನ್ನು ನಾವು ಚುಕ್ತಾ ಮಾಡಬೇಕು.

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶಾಣಪ್ಪನವರಿಗೆ ಎಷ್ಟೊಂದು ಭ್ರಮೆ ಇದೆ. ನೀವು ಬಂದು ಸಾಲ ತೀರಿಸಬೇಕೆ, ನಾವು ಸಾಲ ಮಾಡಿದ್ದೇವೆ. ನಾವೇ ಅಧಿಕಾರಕ್ಕೆ ಬರುತ್ತೇವೆ. ನಾವೇ ಸಾಲವನ್ನು ತೀರುಸುತ್ತೇವೆ.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಒಂದು ಗಾದೆ ಮಾತು ಇದೆ. "ಸಾಲ ಮಾಡಿ ತುಪ್ಪ ತಿನ್ನು"ಎಂದು. ಈ ಬಜೆಟ್ ಆ ರೀತಿ ಇದೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವರಿಬ್ಬರೂ ಮುಂದೆ ಅಧಿಕಾರಕ್ಕೆ ಬರುವುದಿಲ್ಲ. ಜನ ನಮ್ಮ ಪಕ್ಷಕ್ಕೆ ಅಧಿಕಾರ ಕೊಡುತ್ತಾರೆ. ನಾವು ಸಾಲ ತೀರಿಸಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಇದನ್ನು ಸಮರ್ಥನೆ ಮಾಡಿಕೊಳ್ಳಲಿಕ್ಕೆ ಹೋದರೆ ನನ್ನ ಅಭ್ಯಂತರವೇನು ಇಲ್ಲ. ಹಾಗಾದರೆ, 2013–2014 ನೇ ಸಾಲಿನಲ್ಲಿ "ಗೊತ್ತು ಗುರಿ ಇಲ್ಲದ ಸಾಲ ಎತ್ತುವಳಿ ನಮ್ಮ ಆರ್ಥಿಕ ಆರೋಗ್ಯಕ್ಕೆ ಮಾರಕ" ಎಂದು ಹೇಳಿಕೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದಾರೆ. ಇದನ್ನು ತೆಗೆದು ಹಾಕಿಬಿಡಲಿ. ಇದನ್ನು ಜನರಿಗೆ ತೋರಿಸುವುದಕ್ಕೆ ಹಾಕಿಕೊಂಡಿದ್ದಾರೆಯೇ? ಬಿ.ಜೆ.ಪಿಯನ್ನು ಟೀಕೆ ಮಾಡಲಿಕ್ಕೆ ಹಾಕಿಕೊಂಡಿದ್ದಾರೆಯೇ? 2006-2007ನೇ ಸಾಲಿನಿಂದ ಹಾಕಿಕೊಂಡು ಬಂದಿರುವುದರಿಂದ ಇದನ್ನು ನೇರವಾಗಿ ವಿರೋಧ ಪಕ್ಷದವರನ್ನು ಟೀಕೆ ಮಾಡುವುದಕ್ಕೆ ಈ ಆಯವ್ಯಯದ ಪುಸ್ತಕವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಮಾನ್ಯ ಸಭಾಪತಿಯವರೆ, ಇಷ್ಟೊಂದು ಸಾಲ ಮಾಡಿರುವಂತಹ ಸಂದರ್ಭದಲ್ಲಿ ಮತ್ತು ಅದನ್ನೇ ಸಮರ್ಥನೆ ಮಾಡಿಕೊಂಡು ಹೋಗುತ್ತಿದ್ದಾರೆ. ಆದಕಾರಣ ಈ ಸಂದರ್ಭದಲ್ಲಿ, ನಾನು ಹೇಳುವುದೇನೆಂದರೆ, ಆರ್ಥಿಕ ಶಿಸ್ತು ಎನ್ನುವುದು ಒಂದು ದೊಡ್ಡ ಸಮಸ್ಯೆಯನ್ನು ಉಂಟು ಮಾಡುತ್ತದೆ. ಅವರಿಗೆ ಜವಾಬ್ದಾರಿ ಇದಿದ್ದರೆ ಸ್ವಲ್ಪ ಗಮನ ಕೊಡಬಹುದಾಗಿತ್ತು. ಇದುಅವರ ಕಾಲದಿಂದಲೇ ಆಗಿದೆ ಎಂದು ನಾನು ಹೇಳುವುದಿಲ್ಲ. ನಮ್ಮ ರಾಜ್ಯದಲ್ಲಿ ಕರ್ನಾಟಕ ಸರ್ಕಾರದ ಹೊಡಿಕೆಗಳು ಏನಿವೆ Statutory Corporation, ಕಾಯಿದೆ ನಿಗಮಗಳು, ಸರ್ಕಾರದ ಕಂಪನಿಗಳು, ಜಂಟೀ ಕಂಪನಿಗಳು, ಸಹಕಾರಿ ಸಂಘಗಳು ಮತ್ತು ಬ್ಯಾಂಕ್‌ಗಳು ಒಟ್ಟು investment by Government of Karnataka by way of equity as at the end of 31st March is 61,355 ಕೋಟಿ ರೂಪಾಯಿಗಳು. Dividend ಎಷ್ಟು? 69 ಕೋಟಿ ರೂಪಾಯಿಗಳು.

ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ನಾನು ಸಭಾ ನಾಯಕರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಈ ತರಹದ ಬಿಳಿ ಆನೆಗಳು ಇವೆಯಲ್ಲ ಈ ಬಿಳಿ ಆನೆಗಳನ್ನು ಯಾವ ರೂಪದಲ್ಲಿ ಮುಚ್ಚಬೇಕು ಎಂಬುದನ್ನು ಸ್ವಲ್ಪ ಗಮನಿಸಬೇಕು. ಇದನ್ನು ಖಾಸಗಿ ವ್ಯಕ್ತಿಗಳ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಮಾಡುತ್ತಾರೋ ಅಥವಾ... ನೋಡಿ loss making PSEs (Public Sector Enterprises). ಈ ತರಹ 97 ಕಂಪನಿಗಳು ಇವೆ. Mysore Sugar Company, Mysore Paper Mills, (NGEF) New Government Electrical Factory, Chamundeshwari Electricity Supply Company, Gulbarga Electricity Supply Company, North Eastern Karnataka Road Transport Corporation... ಈ ರೀತಿ ಬೇಕಾದಷ್ಟು ಕಂಪನಿಗಳು ಇವೆ. ಇವುಗಳೆಲ್ಲಾ ಮುಚ್ಚಿ ಎಂದು ನಾನು ಹೇಳುವುದಿಲ್ಲ. ಇದರ ಬಗ್ಗೆ mind apply ಮಾಡುತ್ತಿಲ್ಲ. ಇದರಲ್ಲಿ ಯಾವುದು ಬೇಕು? ಯಾವುದು ಬೇಡ? ಇದರ ಬಗ್ಗೆ ಗಮನ ಕೊಡಲಿಲ್ಲವೆಂದರೆ, ಸಾಲ ಮಾಡಬೇಕಾಗುತ್ತದೆ. ಮತ್ತೇ

ತಿದ್ದುಪಡಿಯಾಗದ ಪ್ರತಿ/ ಗಣಕಯಂತ್ರ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಮತ್ತೇ ಸಾಲ ಮಾಡಬೇಕಾಗುತ್ತದೆ. ಮತ್ತೇ ಮತ್ತೇ ಬಂಡವಾಳ ಹಾಕಬೇಕಾಗುತ್ತದೆ. ಸರ್ಕಾರ ಯಾವುದಕ್ಕೆ ಬಂಡವಾಳ ಹಾಕಬೇಕು? ಯಾವುದಕ್ಕೆ ಬಂಡವಾಳ ಹಾಕಬಾರದು ಎನ್ನುವಂತಹ ಪರಿಕಲ್ಪನೆ ಇಲ್ಲದಂತಹ ಸರ್ಕಾರ. ಆರ್ಥಿಕವಾಗಿ ಒಂದು ಶಿಸ್ತು ತರುವಂತಹ ದಿಕ್ಕಿನಲ್ಲಿ ಈ ಸರ್ಕಾರಕ್ಕೆ ಏನೇನು ಗಮನ ಇಲ್ಲ. ಸಾಲ ಮಾಡುವುದು ಕಂಪನಿಗಳನ್ನು ಪ್ರಾರಂಭ ಮಾಡುವುದು. ಅದರಿಂದ ಆರ್ಥಿಕವಾಗಿ ನಷ್ಟ ಮಾಡಿಕೊಳ್ಳುವುದು. ಮತ್ತೇ ಸಾಲ ಮಾಡುವುದು. ಅದಕ್ಕೆ ಬಡ್ಡಿಕಟ್ಟುವುದು. ಇದು ಯಾವುದೇ ಕಾಲಕ್ಕೂ ಸಹ ಸರಿ ಹೋಗುವುದಿಲ್ಲ. ನಾವು ಯಾವರೀತಿ ಯೋಚನೆ ಮಾಡಬೇಕು ಅಂದರೆ, ಇದನ್ನು ನಮ್ಮ ಸ್ವಂತ ಮನೆ ಅಂದುಕೊಂಡು ಯೋಚನೆ ಮಾಡಬೇಕು. ನಮ್ಮ ಆದಾಯ ಎಷ್ಟು ಇದೆ? ಅದಕ್ಕೆತಕ್ಕಂತೆ ಖರ್ಚು ಮಾಡುವಂತಹ ಪ್ರಯತ್ನವನ್ನು ನಡೆಸಬೇಕು. ನಮ್ಮ ಆದಾಯವೇ ಇಲ್ಲ. ನಾವು ಕಟ್ಟಡಗಳನ್ನು ಕಟ್ಟುತ್ತೇವೆ. ನಾವು ಗೋಪುರಗಳನ್ನು ಕಟ್ಟುತ್ತೇವೆ. ಇದನ್ನು ಈ ರೀತಿ ಮಾಡುತ್ತಾ ಹೋದರೆ, ಯಾವುದೇ ಕಾರಣಕ್ಕೂ ಇದು ಒಳ್ಳೆಯದಲ್ಲ. 2017-2018ನೇ ಸಾಲಿನ ತಮ್ಮ ಇಲಾಖೆಯ ಆಯವ್ಯಯದ ಪಕ್ಷಿನೋಟದಲ್ಲಿ ತುಂಬಾ ಸ್ಪಷ್ಟವಾಗಿದೆ. ಇದರಿಂದ ಎಷ್ಟೆಷ್ಟು ನಷ್ಟ ಬರುತ್ತಿದೆ? ಯಾವಯಾವ ಕಂಪನಿಗಳಿಂದ ನಷ್ಟ ಆಗುತ್ತಿದೆ? ಈ ತರಹ 97 ಕಂಪನಿಗಳು ಯಾವುಯಾವು ಇವೆ. ಅವುಗಳನ್ನು ಹುಡುಕಿ ಇದಕ್ಕೆ ಒಂದು ಆರ್ಥಿಕ ತಜ್ಞರ ಸಮಿತಿಯನ್ನು ಮಾಡಿ. ಆ ಸಮಿತಿಯ ಮೂಲಕ ಯಾವಯಾವ ಕಂಪನಿಗಳನ್ನು ಮುಚ್ಚಲಿಕ್ಕೆ ಸಾಧ್ಯವಾಗುತ್ತದೆ ಅಂತಹ ಕಂಪನಿಗಳನ್ನು ಖಂಡಿತ ಮುಚ್ಚಿ. ಆದರೆ, ಕಾರ್ಮಿಕರಿಗೆ ಅನ್ಯಾಯ ಆಗಬಾರದು ಮತ್ತು ರೈತರಿಗೆ ಅನ್ಯಾಯ ಆಗಬಾರದು. ಆ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಈ ರೀತಿಂ ಯೋಚನೆ ಮಾಡಿ ಯಾವಯಾವ ಸಂಸ್ಥೆಗಳು ರಾಜ್ಯಸರ್ಕಾರಕ್ಕೆ ಬಾರ ಆಗಿವೆ ಅಂತಹ ಕಂಪನಿಗಳನ್ನು ಮಾತ್ರ ಮುಚ್ಚಿ. ಮಾನ್ಯ ಸಭಾಪತಿಯವರೆ, ಕೆಲವು ಕಂಪನಿಗಳನ್ನು ಸಾಕುವುದು ಬಿಳಿ ಆನೆಗಳನ್ನು ಸಾಕಿದಂತೆ. ಇಂತಹ ಕಂಪನಿಗಳನ್ನು ಮುಚ್ಚುವಂತಹ ದಿಕ್ಕಿನಲ್ಲಿ ಅಥವಾ ಬೇರೆ ಏನಾದರೂ alternative ವ್ಯವಸ್ಥೆ ಮಾಡುವ ದಿಕ್ಕಿನಲ್ಲಿ ತಾವು ಏನಾದರೂ ಪ್ರಯತ್ನಗಳನ್ನು ನಡೆಸಬೇಕು ಎನ್ನುವಂತಹ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳ ಬಂಡವಾಳದ ಬಗ್ಗೆ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವು 2013-2014, 2014-2015 ಮತ್ತು 2015-2016, 2016-2017 ಜನವರಿ 31ಕ್ಕೆ ಅಂತ್ಯಗೊಂಡಂತೆ ಮಾನ್ಯ ಸಭಾನಾಯಕರ ಕಛೇರಿಯಿಂದ ದಿನಾಂಕ 9-3-2017 ಕ್ಕೆ ಬಂದ ಉತ್ತರ ಇದು. ಇಲ್ಲಿಯವರೆಗೆ ಎಷ್ಟು ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ? ಇದುವರೆಗೆ ಎಷ್ಟು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಬಂಡವಾಳ ರಾಜ್ಯಕ್ಕೆ ಹರಿದು ಬಂದಿರುತ್ತದೆ? ದಿನಾಂಕ 3–2–2016 ಮತ್ತು 4–2–2016 ರಂದು ಆಯೋಜಿಸಿದ್ದ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಅಂದಾಜು 1,27,821 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆದಾರರಿಗೆ ಒಟ್ಟು 122 ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಎಷ್ಟು ಬಂಡವಾಳ ಹೂಡಲಾಗಿದೆ? ಇದರಿಂದ ಸ್ವಷ್ಟವಾದ ಉದ್ಯೋಗಗಳು ಎಷ್ಟು? ಒಡಂಬಡಿಕೆ ಮಾಡಿಕೊಂಡ ಯೋಜನೆಗಳಲ್ಲಿ ಹಾಲಿ 40 ಯೋಜನೆಗಳು ವಿವಿಧ ಅನುಷ್ಠಾನದ ಹಂತದಲ್ಲಿವೆ 122ಕ್ಕೆ. ಇದರಿಂದ 27,610 ಕೋಟಿ ಬಂಡವಾಳ ಹೂಡಿಕೆಆಗಿದ್ದು, 49,740 ಉದ್ಯೋಗಗಳು ಸೃಷ್ಟಿಯಾಗಲಿವೆ.

**(241)16.03.2017 ಸಿಎಸ್/ಬಿಎನ್ಎಸ್ 3.50**

**ಶ್ರೀ ಕೆ.ಎಸ್.ಈಶ್ವರಪ್ಪ:–**

ಇನ್ನೂ ಆಶ್ಚರ್ಯ ಪಡುವಂತಹ ವಿಚಾರ ಏನೆಂದರೆ ಒಡಂಬಡಿಕೆಯ ಪ್ರಕಾರ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು ಎನ್ನುವ ಮಾಹಿತಿಯನ್ನು ಕೋರಿದಾಗ ಒಡಂಬಡಿಕೆ ಮಾಡಿಕೊಂಡ ಯೋಜನೆಗಳಲ್ಲಿ ಈಗಾಗಲೇ 122ರಲ್ಲಿ 5 ಯೋಜನೆಗಳು 6664 ಕೋಟಿ ರೂಪಾಯಿಗಳ ಬಂಡವಾಳದೊಂದಿಗೆ ಕಾರ್ಯಾರಂಭ ಮಾಡಿದ್ದು ಇದರಿಂದ 1940 ಹುದ್ದೆಗಳು ಸೃಷ್ಟಿಯಾಗಿವೆ. ಈ ವಿಚಾರವನ್ನು ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಇಡೀ ದೇಶ ಮತ್ತು ರಾಜ್ಯದಲ್ಲಿರುವ ಜನರು ಏನೆಂದುಕೊಂಡಿರುತ್ತಾರೆಂದರೆ ಕರ್ನಾಟಕ ರಾಜ್ಯಕ್ಕೆ ಇಡೀ ಪ್ರಪಂಚದಿಂದ ಜನರು ಬರುತ್ತಿದ್ದಾರೆ, ಇಲ್ಲಿನ ಕೈಗಾರಿಕೆಗಳಲ್ಲಿ ಸಾಕಷ್ಟು ಬಂಡವಾಳವನ್ನು ಹಾಕುತ್ತಿದ್ದಾರೆ, ಇದರಿಂದ ನಮ್ಮಲ್ಲಿ ಸಾಕಷ್ಟು ಉದ್ಯೋಗಗಳು ಸೃಷ್ಟಿಯಾಗುತ್ತವೆ, ಸಾಕಷ್ಟು ಕೈಗಾರಿಕೆಗಳು ಬಂದು ನಮ್ಮ ಯುವಕರಿಗೆ ಉದ್ಯೋಗ ದೊರೆಯುತ್ತದೆ ಎನ್ನುವ ಭ್ರಮೆಯಲ್ಲಿ ನಮ್ಮ ರಾಜ್ಯದ ಜನರನ್ನು ಇಡುವುದು ಬೇಡ. ಈ ಒಡಂಬಡಿಕೆಯನ್ನು ಮಾಡಿಕೊಂಡಂತಹ ಸಂದರ್ಭದಲ್ಲಿಯೂ ಕೂಡ ನಮ್ಮ ಸರ್ಕಾರ ಅವರಿಗೆ ಕಂಡಿಷನ್‌ಗಳನ್ನು ಹಾಕಬೇಕಾಗುತ್ತದೆ. ಏಕೆಂದರೆ ನಾವು ಅವರಿಗೆ ಭೂಮಿಯನ್ನು ಕೊಡುತ್ತೇವೆ, ನೀರು ಮತ್ತು ವಿದ್ಯುತ್ತನ್ನು ನೀಡುತ್ತೇವೆ, ನಾವು ನೀಡಿದ ಸೌಲಭ್ಯಗಳನ್ನೆಲ್ಲ ಇಟ್ಟುಕೊಂಡು ಅವರು ರಿಯಲ್ ಎಸ್ಟೇಟ್ ವ್ಯವಹಾರವನ್ನು ನಡೆಸುತ್ತಾರೆ. ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಎನ್ನುವ ಹೆಸರಿನಲ್ಲಿ ಇಲ್ಲಿ ಭೂಮಿಯನ್ನು ಖರೀದಿಸಿ, ಹತ್ತನ್ನೆರಡು ವರ್ಷ ಇಟ್ಟುಕೊಂಡು ಅದರ ಬೆಲೆ ಹೆಚ್ಚಾದಾಗ ವ್ಯವಹಾರ ಮಾಡಿಕೊಳ್ಳುವುದಕ್ಕೆ ಇದೊಂದು ದಾರಿ. ದಯಮಾಡಿ ಇವೆಲ್ಲದರ ಬಗ್ಗೆ ಸರ್ಕಾರ ಗಮನಿಸಬೇಕು. ಈ ರೀತಿ ಯಾವ ಕೈಗಾರಿಕೆಗಳು ರಾಜ್ಯದಲ್ಲಿ ಬಿಳಿಯಾನೆ ಆಗಿವೆ, ಅವುಗಳನ್ನು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಗಮನಿಸುವ ಸಲುವಾಗಿ ಒಂದು ಸಮಿತಿಯನ್ನು ಮಾಡಿ, ಆ ಸಮಿತಿಯ ಮೂಲಕ ರಾಜ್ಯಕ್ಕೆ ಏನು ಉಳಿತಾಯ ಮಾಡುವುದಕ್ಕೆ ಸಾಧ್ಯವೋ ಆ ದಿಕ್ಕಿನಲ್ಲಿ ಸಮಿತಿ ಕೆಲಸ ಮಾಡಬೇಕು. ಬಡ್ಡಿ ಹೆಚ್ಚಿರುವ ಬ್ಯಾಂಕುಗಳಿಂದ ದಯಮಾಡಿ ಸಾಲವನ್ನು ತರಬೇಡಿ. ಮೂರನೆಯದಾಗಿ ಈ ವಿಶ್ವಬಂಡವಾಳ ಹೂಡಿಕೆದಾರರ ಸಮಾವೇಶ ಕೇವಲ ದೃಷ್ಟಿಬೊಂಬೆಯ ರೀತಿ ಆಗಬಾರದು. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕೆಲವು ಜಮೀನುಗಳಲ್ಲಿ ದೃಷ್ಟಿ ಬೊಂಬೆಗಳನ್ನು ಇಡುತ್ತಾರೆ. ಅದನ್ನು ನೋಡುತ್ತಿದ್ದ ಹಾಗೆ ಪಶುಪಕ್ಷಿಗಳು ಇಲ್ಲಿ ಯಾವುದೇ ರಾಕ್ಷಸ ಇದೆ ಎಂದು ಹಾರಿ ಹೋಗುತ್ತವೆ. ಹಾಗೆಯೇ ವಿಶ್ವಬಂಡವಾಳ ಹೂಡಿಕೆದಾರರ ಸಮಾವೇಶ ಕೂಡ ಒಂದು ರಾಕ್ಷಸ ಇದ್ದ ಹಾಗೆ. ಸಾಮಾನ್ಯಜನರಿಗೆ ಇದರಿಂದ ಅನುಕೂಲ ಆಗುತ್ತಿಲ್ಲ. ಇದನ್ನು ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ, ಎಲ್ಲಾ ಜನರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಮಾಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅವುಗಳನ್ನು ಮಾಡುವಾಗ ಕೆಲವು ಕಂಡಿಷನ್‌ಗಳನ್ನು ಹಾಕಿ ಅದನ್ನು ಪಾಲನೆ ಮಾಡುವಂತಹ ನಿಬಂಧನೆಗಳನ್ನು ಹಾಕಬೇಕು. ಅವರು ಹಾಗೆ ನಡೆದುಕೊಳ್ಳದಿದ್ದರೆ ಅವರು ಎಷ್ಟೇ ದೊಡ್ಡವರಾದರೂ ಸಹ ಅವರನ್ನು ಕಿತ್ತು ಬಿಸಾಕಿ. ಬೇರೆ ಸಾಮಾನ್ಯರಿಗೆ ಅದನ್ನು ಕೊಡಿ. ಈ ರೀತಿ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ನೀಡಬೇಕೆಂದು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ.

ಇನ್ನು ಸರ್ಕಾರ ಮನೆ ಕಟ್ಟುವ ಯೋಜನೆಗಳೇನಿವೆ, ಅವುಗಳನ್ನು ಘೋಷಣೆ ಮಾಡುವುದೇ ಮನೆ ಕಟ್ಟಿದ ಹಾಗೆ. ಕರ್ನಾಟಕ ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆ ಎಂದು ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ನೀಡುತ್ತಾರೆ. ಸಂಯುಕ್ತಕರ್ನಾಟಕದಲ್ಲಿ ಬಂದಿರುವುದು "ಬಡವರ ಮನೆಯೇ ಅರಮನೆ" ಎಂದು ಸಚಿವ ಆಂಜನೇಯ, ಈರೀತಿ ಹೇಳಿಕೆ ನೀಡಿರುವುದು ಸಂತಸದ ವಿಚಾರ. ಆದರೆ ಆ ದಿಕ್ಕಿನಲ್ಲಿ ಎಷ್ಟರಮಟ್ಟಿಗೆ ಪ್ರಯತ್ನಆಗಿದೆ? ಮನೆ ಕಟ್ಟುವ ವ್ಯವಸ್ಥೆಯಲ್ಲಿರುವಷ್ಟು ಅವ್ಯವಸ್ಥೆ ಬೇರೆ ಯಾವುದರಲ್ಲಿಯೂ ಇಲ್ಲ. ಸಮಾಜಕಲ್ಯಾಣ ಇಲಾಖೆಯಿಂದ 2015-16ನೇ ಸಾಲಿನಲ್ಲಿ 56 ನಿವೇಶನಗಳನ್ನು ಹಂಚಿಕೆ ಮಾಡುವುದಾಗಿ ಘೋಷಣೆ., ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಕಾರ್ಮಿಕರಿಗೆ 1000 ವರ್ಕ್‌ಶೆಡ್‌ಗಳನ್ನು ನಿರ್ಮಿಸಲು ಘೋಷಿಸಿದೆ. ಮೀನುಗಾರಿಕೆ ಇಲಾಖೆಗೆ 3000, ಮಹಿಳಾ ನೇಕಾರರಿಗೆ 3000, ಪೌರಾಡಳಿತ ಕಾರ್ಮಿಕರಿಗೆ 1000, ನಗರಾಭಿವೃದ್ಧಿಯ ರಾಜೀವ್ ಅವಾಸ್ ಯೋಜನೆಯಡಿಯಲ್ಲಿ 22,000 ಮನೆಗಳ ನಿರ್ಮಾಣ ಮಾಡುವುದಾಗಿ ಘೋಷಿಸಿದೆ. ವಸತಿ ಎಂದ ತಕ್ಷಣ ಎಲ್ಲಾದರೂ ಒಂದುಕಡೆ ದೃಷ್ಟಿ ನಿಲ್ಲಬೇಕು. ಬಡವನೋ ಶ್ರೀಮಂತನೋ, ದಲಿತರೋ, ಮುಂದುವರೆದವರೋ, ಹಿಂದುಳಿದವರೋ, ಕೈಗಾರಿಕೆಗಳೋ, ಕಾರ್ಮಿಕರೋ ಯಾರಿಗಾದರೂ ವಸತಿಯ

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು”

ಹಂಚಿಕೆಗಳನ್ನು ಮಾಡಬೇಕಾಗುತ್ತದೆ. ಈಗಿನ ವಸತಿ ಸಚಿವರು ಬಹಳ ಅನುಭವಸ್ಥರು, ಅವರು ಇದಕ್ಕೆ ಏನಾದರೂ ಒಂದು ರೂಪವನ್ನು ನೀಡಬೇಕು. ಶಿವಮೊಗ್ಗ ನಗರದಲ್ಲಿ ನಾನು ವಿಧಾನಸಭಾ ಸದಸ್ಯನಾಗಿ ಆಯ್ಕೆ ಆಗಿ ನಾನು ಸಚಿವನಾಗಿದ್ದಾಗ ಒಂದಿಷ್ಟು ಮನೆಗಳನ್ನು ಕಟ್ಟಲಾಗಿತ್ತು. ಅಲ್ಲಿಂದ ಇಲ್ಲಿಯವರರೆಗೆ ಒಂದೇ ಒಂದು ಮನೆಯನ್ನು ಯಾರು ಕಟ್ಟಿಲ್ಲ. ಒಂದು ನಿವೇಶನವನ್ನು ಹಂಚಿಕೆ ಮಾಡಿಲ್ಲ, 250ಎಕರೆ ಭೂಮಿ ಇಲ್ಲವೇ, ನಾನು ಭೂಮಿಯನ್ನು ರೆಡಿ ಮಾಡಿ ಇಟ್ಟಿದ್ದೆನು. ಈಗಿನ ವಸತಿ ಸಚಿವರು ದಯಮಾಡಿ ಶಿವಮೊಗ್ಗ ನಗರಕ್ಕೆ ಬನ್ನಿ. ಇನ್ನು ಒಂದು ವರ್ಷ ಈ ಸರ್ಕಾರಕ್ಕೆ ಅವಕಾಶವಿದೆ. ನಿಮ್ಮಲ್ಲಿ ಯಾವುದೇ ಬಡಿದಾಟ ಇಲ್ಲದೇ ಇನ್ನೂ ಒಂದು ವರ್ಷ ನಿಮ್ಮ ಸರ್ಕಾರ ಇದ್ದಲ್ಲಿ ಇದಕ್ಕೆ ಒಂದು ರೂಪ ನೀಡಬಹುದು. ಏಕೆಂದರೆ ಅವರು ಸ್ವಲ್ಪ ಪ್ರಾಮಾಣಿಕರಿದ್ದಾರೆ. ಸಭಾನಾಯಕರಂತು ಕೆಪಿಸಿಸಿ ಅಧ್ಯಕ್ಷರಾದ ಮೇಲೆ ಕುಲಗೆಟ್ಟಿ ಹೋಗಿದ್ದಾರೆ.

**ಡಾ॥ಜಿ.ಪರಮೇಶ್ವರ್(ಸಭಾನಾಯಕರು):–** ಇವರು ಬಿಜೆಪಿ ಅಧ್ಯಕ್ಷರಾಗಿ ಅದನ್ನು ಹದಗೆಡಿಸಿ, ಆಮೇಲೆ ಬಿಟ್ಟುಬಿಟ್ಟರು. ತಾವು ಕೂಡ ಬಿಜೆಪಿಯ ಅಧ್ಯಕ್ಷರಾಗಿದ್ದೀರಿ,

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಸಿದ್ದರಾಮಯ್ಯನವರು, ಪರಮೇಶ್ವರ್‌ರವರು ತಮ್ಮ ಮನೆಗಳಲ್ಲಿ ಯಡಿಯೂರಪ್ಪನವರ ಫೋಟೋ ಇಟ್ಟುಕೊಳ್ಳಬೇಕು, ಬಿಜೆಪಿ, ಕೆಜೆಪಿ ಒಡೆಯದೇ ಇದ್ದಿದ್ದರೆ ಇವರ ಸರ್ಕಾರ ಆಡಳಿತಕ್ಕೆ ಬರುತ್ತಲೇ ಇರಲಿಲ್ಲ. ಇಡೀ ದೇಶದಲ್ಲಿ ಭೂತಕನ್ನಡಿ ಹಿಡಿದುಕೊಂಡು ಹೇಗೆ ಕಾಂಗ್ರೆಸ್ ಸರ್ಕಾರ ಹುಡುಕುತ್ತಿದ್ದಾರೆ ಹಾಗೆಯೇ ನಮ್ಮಲ್ಲೂ ಕಾಂಗ್ರೆಸ್ಸನ್ನು ಹುಡುಕುಬೇಕಾಗಿತ್ತು. ಮುಂದಿನ ದಿವಸಗಳಲ್ಲಿ ಆ ಪರಿಸ್ಥಿತಿಯೇ ಕರ್ನಾಟಕ ರಾಜ್ಯಕ್ಕೂ ಬರುತ್ತದೆ.

**ಡಾ॥ಜಿ.ಪರಮೇಶ್ವರ್(ಸಭಾನಾಯಕರು):–** 2018ಕ್ಕೆ ಇನ್ನೂ ಒಂದು ವರ್ಷದ ಸಮಯ ಇದೆ, ಆನಂತರ ನೋಡೋಣ. ನಿಮ್ಮ ಜಗಳ ಇದೆಯಲ್ಲ, ನಮಗೆ ನೀವು ಸರಿಯಾಗಿ ಇದ್ದರೆ ಎನ್ನುವ ಮಾತನ್ನು ಹೇಳುತ್ತೀರಿ, ಆದರೆ ನಿಮ್ಮ ಜಗಳ ಏನಿದೆ, ಅದನ್ನು ದಯಮಾಡಿ ಬೇಗ ಬಗೆಹರಿಸಿಕೊಳ್ಳಿ. ಏಕೆಂದರೆ ದಿನಬೆಳಗಾದರೆ ಪತ್ರಿಕೆಗಳನ್ನು ಓದಿ ನಮಗೂ ಸಾಕಾಗಿದೆ, ಏನೇನೋ ಹೆಸರುಗಳು, ಏನೇನೋ ಹೇಳಿಕೆಗಳು, ಈಶ್ವರಪ್ಪನವರ ಹೇಳಿಕೆ, ಯಡಿಯೂರಪ್ಪನವರ ಹೇಳಿಕೆ ಇವುಗಳನ್ನು ನೋಡಿ ನೋಡಿ ನಮಗೆ ಸಾಕಾಗುತ್ತಿದೆ. ದಯಮಾಡಿ ಇದನ್ನೆಲ್ಲ ಬೇಗ ಬಗೆಹರಿಸಿಕೊಂಡು ಬಿಡಿ.

ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ಸಭಾನಾಯಕರು, ಬಹಳ ಪ್ರಮಾಣಿಕವಾಗಿ ಹೇಳಿದರು. ಅಷ್ಟೆ ಪ್ರಾಮಾಣಿಕವಾಗಿ ನಾನು ಕೂಡ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಬಿಜೆಪಿ ಪಕ್ಷಕ್ಕೆ ಹೇಳುವವರು ಕೇಳುವವರು ಇದ್ದಾರೆ, ಇವರಿಗೆ ಯಾರು ಇಲ್ಲ ಎನ್ನುವುದನ್ನು ಬಾಯಿಬಿಟ್ಟು ಹೇಳಬೇಕಾಗಿಲ್ಲ. ನಮ್ಮ ಪಕ್ಷದಲ್ಲಿ ಮುಖ್ಯಮಂತ್ರಿಗಳನ್ನು ಯಾರಾದರೂ 'ಶನಿ' ಎಂದಿದ್ದರೆ ಅಲ್ಲಿಯೇ ಅವರ ಕುತ್ತಿಗೆ ಹಿಚುಕಿ ಹಾಕುತ್ತಿದ್ದೆವು. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗೆ 'ಶನಿ' ಎಂದು ಕರೆಯಬೇಕಾದರೆ ಅವರಿಗೆ ಎಷ್ಟು ಧೈರ್ಯ ಇರಬೇಕು? ಆದ್ದರಿಂದಲೇ ಈ ಪಕ್ಷದಲ್ಲಿ ಯಾರು ಹೇಳುವವರು ಕೇಳುವವರು ಇಲ್ಲ. ನಮ್ಮ ಪಕ್ಷದಲ್ಲಿ ನಮ್ಮ ಭಿನ್ನಾಭಿಪ್ರಾಯಗಳ ಬಗ್ಗೆ ನಮ್ಮನ್ನು ಕೂರಿಸಿಕೊಂಡು ಚರ್ಚೆ ಮಾಡಿ, ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡರು. ಈಗ ನಮ್ಮ ಸಮಸ್ಯೆ ಬಗೆಹರಿದಿದೆ. ಆದರೆ ನಿಮ್ಮದು ಬಗೆಹರಿಯುವುದಿಲ್ಲ.

**ಡಾ॥ಜಿ.ಪರಮೇಶ್ವರ್:-** ಆಯಿತು ಈಗ ವಿಷಯಕ್ಕೆ ಬನ್ನಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರೆ, ನೀವೇ ವಿಷಯವನ್ನು ಪ್ರಸ್ತಾಪಿಸಿ, ಈಗ ವಿಷಯಕ್ಕೆ ಬನ್ನಿ ಎಂದರೆ ಹೇಗೆ? ಇನ್ನು ವಸತಿಯ ಬಗ್ಗೆ ಸಚಿವರಾದ ಕೃಷ್ಣಪ್ಪನವರಿಗೆ ಹೇಳುವುದೇನೆಂದರೆ ಇನ್ನು 3-4 ತಿಂಗಳಾದ ಮೇಲೆ ಇದೇ ಪ್ರಶ್ನೆಯನ್ನು ನಾನು ಸದನದಲ್ಲಿ ಅಲ್ಲ, ವೈಯುಕ್ತಿಕವಾಗಿ ಕೇಳುತ್ತೇನೆ. ಏಕೆಂದರೆ ಸರ್ಕಾರದಲ್ಲಿ ಮಂತ್ರಿಯಾದರೆ ಮುಗಿಯಿತು ಈ ರೀತಿಯ ಘೋಷಣೆಗಳೇ, ಹಾಗೆಯೇ ಮುಖ್ಯಮಂತ್ರಿಗಳು ಸಹ ಸಾಲ ಮಾಡುವುದು ಬಹಳ ತಪ್ಪು, ಇದರಿಂದ ಮುಂದಿನ ಭವಿಷ್ಯಕ್ಕೆ ಅನ್ಯಾಯವಾಗುತ್ತದೆ. ಖಾಸಗಿಯಾಗಿ ಸಚಿವರನ್ನು ಏಕೆ ಕೇಳುತ್ತೇನೆಂದು ಹೇಳಿದೆ ಎಂದರೆ ಅವರು ಶಿವಮೊಗ್ಗಕ್ಕೆ ಬರಲಿ, ಅಲ್ಲಿ ಬೊಮ್ಮನಕಟ್ಟೆ ಎಂಬ ಗ್ರಾಮದಲ್ಲಿ ಸುಮಾರು 150 ಮನೆಗಳನ್ನು ಕಟ್ಟಲಾಗಿದೆ. ತುಮಕೂರಿನ ನಿರ್ಮಿತಿ ಕೇಂದ್ರದವರು ಹಣ ತೆಗೆದುಕೊಂಡು ಹೋಗಿ ಬಿಟ್ಟಿದ್ದಾರೆ, ಆ ಮನೆಗಳಿಗೆ ವಿದ್ಯುತ್, ನೀರು ರಸ್ತೆ ಯಾವುದೇ ಸೌಲಭ್ಯವನ್ನು ಒದಗಿಸಿರುವುದಿಲ್ಲ. ಜಿಲ್ಲಾಧಿಕಾರಿಗಳು ಇದರ ಬಗ್ಗೆ ಚರ್ಚೆ ನಡೆಸಲು ಏಜೆನ್ಸಿಗಳನ್ನು ಕರೆದರೆ ಅವರು ಮಾತನಾಡುವುದಕ್ಕೆ ಬರುವುದಿಲ್ಲ. ಈ ಸರ್ಕಾರದ ಬಗ್ಗೆ ಆ ಏಜೆನ್ಸಿಗಳಿಗೆ ಎಷ್ಟು ಭಯವಿದೆ? ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ, ಅರೆಸ್ಟ್ ಮಾಡಸಿ, ಅವರನ್ನು ಒಳಗೆ ಹಾಕಿಸುವುದಕ್ಕೆ ಆಗುವುದಿಲ್ಲವೇ? ಅವರ ಟೆಂಡರ್‌ಗಳನ್ನು ಕ್ಯಾನ್ಸಲ್ ಮಾಡಿ, ಅವರ ಆಸ್ತಿಗಳನ್ನು ಸೀಜ಼್ ಮಾಡಿ. ಬಡವರ ಮನೆಗಳನ್ನು ಲೂಟಿ ಮಾಡುವುದು ಯಾವ ನ್ಯಾಯ? ವಸತಿ ಮನೆಗಳು, ಆಶ್ರಯ ಮನೆಗಳು, ಅಂಬೇಡ್ಕರ್, ಬಸವೇಶ್ವರರಂತಹ ಮಹಾಪುರುಷರ ಹೆಸರುಗಳನ್ನಿಟ್ಟು ಈ ರೀತಿ ಮಾಡುವುದು, ಈ ಮಹಾಪುರುಷರ

ತಿದ್ದುಪಡಿಯಾಗದ ಪ್ರತಿ/ಅನಧಿಕೃತ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಹೆಸರುಗಳನ್ನು ಇಡುವುದಕ್ಕೆ ಈ ಯೋಜನೆಗಳು ಇರುವುದೇ? ವಸತಿ ಸಚಿವರು ಶಿವಮೊಗ್ಗಕ್ಕೆ ಬಂದು ಇದನ್ನೆಲ್ಲ ನೋಡಬೇಕು. ಶಿವಮೊಗ್ಗದಲ್ಲಿ ಭೂಮಿ ಇದೆ, ಆ ಸಂದರ್ಭದಲ್ಲಿ ಕರೆದಿದ್ದ 5-6 ಸಾವಿರ ಅರ್ಜಿಗಳು ಬಾಕಿಯಿವೆ, ಎಷ್ಟು ನಿವೇಶನ ಹಂಚಿಕೆ ಮಾಡಲು ಸಾಧ್ಯವೋ ಅದನ್ನು ಮಾಡಿ, ಈಗಾಗಲೇ ಕಟ್ಟಿರುವ ಮನೆಗಳಿಗೆ ವಿದ್ಯುತ್‌ಇಲ್ಲ, ನೀರು ಇಲ್ಲ ಎಲ್ಲದಕ್ಕೂ ಹಣ ಸಂದಾಯ ಆಗಿದೆ, ಏಜೆನ್ಸಿಯವರು ಹಣ ತೆಗೆದುಕೊಂಡು ಹೋಗಿದ್ದಾರೆ. ಇದಕ್ಕೆ ಸಂಬಂಧಪಟ್ಟ ಏಜೆನ್ಸಿಯವರನ್ನು ಕರೆದು ಮಾತನಾಡಿ, ಇದನ್ನೆಲ್ಲ ಬಿಗಿ ಮಾಡಿ. ಯಾವುದಾದರೂ ಒಂದು ಇಲಾಖೆಯ ಮೂಲಕ ಮನೆಗಳನ್ನು ಕಟ್ಟಿಸಿ. ಎಸ್‌ಸಿ/ಎಸ್‌ಟಿಯವರಿಗೆ ಎಷ್ಟು ಸಬ್ಸಿಡಿ ಕೊಡಬೇಕೋ ಅಷ್ಟನ್ನು ಕೊಡಿ.

**(242):4.00:16-03-2017:ಎಂವಿ:ಬಿಎನ್‌ಎಸ್**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ಅರ್ಜಿ ಮಾತ್ರ ನಿಮ್ಮ ಇಲಾಖೆಗೆ ಬರಬೇಕು. ನಿವೇಶನದ ಹಂಚಿಕೆ ನಿಮ್ಮ ಮುಂದೆಯೇ ಆಗಬೇಕು. ಯಾರು ನಿವೇಶನ ಹಂಚಬೇಕು, ಯಾರು ಮನೆ ಕಟ್ಟಬೇಕು, ಯಾರಿಗೆ ಕೇಳಬೇಕು? 2014-15ನೇ ಸಾಲಿನಲ್ಲಿ ಸದರಿ ವರ್ಷದಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ ಮೂರು ಲಕ್ಷ ಮನೆಗಳನ್ನು ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಈ ಮನೆಗಳ ಬಗ್ಗೆ ಹೇಳುವುದಕ್ಕೆ ಒಂದು ತರಹ ಮುಜುಗರವಾಗುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ಸರ್ಕಾರ ಆಶ್ರಯ ಮನೆಗಳ ಯೋಜನೆಯಡಿಯಲ್ಲಿ ಒಂಬತ್ತು ಲಕ್ಷ ಮನೆಗಳನ್ನು ಮಾತ್ರ ನಿರ್ಮಿಸಲು ಸಾಧ್ಯವಾಗಿದ್ದು, ಅದೇ ರೀತಿ 2017-18ನೇ ಸಾಲಿನ ಬಜೆಟ್‌ನಲ್ಲಿ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಏಳು ಲಕ್ಷ ಮನೆಗಳ ಮಂಜೂರಾತಿ. ಅವುಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆರು ಲಕ್ಷ, ಬೆಂಗಳೂರಿನಲ್ಲಿ ಒಂದು ಲಕ್ಷ ಮನೆಗಳ ನಿರ್ಮಾಣ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನೀವು ಒಳ್ಳೆಯ ವ್ಯಾಪಾರಸ್ಥರು, ಒಂದು ಮನೆಗೆ ಎಷ್ಟು ದುಡ್ಡು ಕೊಡುತ್ತೀರಾ, 1.20 ಲಕ್ಷಗಳು. ಮಾನ್ಯ ಸಭಾಪತಿಯವರೆ, ಹಾಗಾದರೆ ಏಳು ಲಕ್ಷ ಮನೆಗಳಿಗೆ ಎಷ್ಟು ದುಡ್ಡಾಗುತ್ತದೆ? 12x7=84. ಮಾನ್ಯ ಸಭಾನಾಯಕರಾದಂತಹ ಡಾ||ಜಿ.ಪರಮೇಶ್ವರ್‌ರವರೆ ಸುಮಾರು 8,400 ಕೋಟಿ ರೂಪಾಯಿಗಳಾಗುತ್ತದೆ. ವಸತಿ ಇಲಾಖೆಯಲ್ಲಿ ವಸತಿಗೆ ಇಟ್ಟುಕೊಂಡಿರುವ ಹಣ ಎಷ್ಟು? ಸುಮಾರು 4,700 ಕೋಟಿ ರೂಪಾಯಿಗಳು. ಇವರು ಘೋಷಣೆ ಮಾಡಿರುವುದು, ಈ ವರ್ಷದಲ್ಲಿ ಏಳು ಲಕ್ಷ ಮನೆಗಳು. ಒಂದು ಮನೆಗೆ ಸುಮಾರು 1.20 ಲಕ್ಷ ರೂಪಾಯಿಗಳು, ಅಂದರೆ 8,400 ಕೋಟಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ರೂಪಾಯಿಗಳು ಬೇಕು, ಇದರಲ್ಲಿ ನೀವು ವಸತಿಗೆ ಎಂದು 4,700 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡರೆ, ಛೂ-ಮಂತ್ರಗಾಳಿ ಮಾಡುತ್ತೀರಾ?

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೆ, ಸುಮಾರು ಆರು ಲಕ್ಷ ಮನೆಗಳನ್ನು ಬಸವ ವಸತಿ ಯೋಜನೆ ಮತ್ತು ಇತರೆ ಯೋಜನೆಗಳಲ್ಲಿ ಕೊಡುವುದು, ಸುಮಾರು ಒಂದು ಲಕ್ಷ ಮನೆಗಳನ್ನು ಬೆಂಗಳೂರಿನಲ್ಲಿ ಕಟ್ಟುವುದು ಅದು self financingನಲ್ಲಿ ಮಾಡುವುದು ಎಂದು ಇದೆ, ಸ್ವಲ್ಪ corrections ಇದೆ ಆಮೇಲೆ ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅವರು corrections ಮಾಡಿಕೊಳ್ಳಲಿ, ಮಾನ್ಯ ಕೃಷ್ಣಪ್ಪನವರೆ, ನಾನು ಅದಕ್ಕೆ ನಿಮಗೆ ಹೇಳುತ್ತಿರುವುದು ಇಲ್ಲಿ ನಾನು ಏನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಿಮಗೆ ಬಡವರ ಬಗ್ಗೆ ಕಳಕಳಿ ಇಲ್ಲವೆಂದಲ್ಲ, ಬರೀ ಘೋಷಣೆ ಮಾಡುತ್ತಿದ್ದಾರೆ, ಈ ಘೋಷಣೆ ಬಡವರತನಕ ಬರೀ ಘೋಷಣೆ ಮಾಡಿದರೆ ಸಾಕಾಗುವುದಿಲ್ಲ, ಅವರಿಗೆ ಸೂರು ಬೇಕು, ಇಡೀ ರಾಜ್ಯದಲ್ಲಿ ನೀವು ಎಲ್ಲಿಗೆ ಹೋದರೂ ಕೂಡ ಗುಡಿಸಲುಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆಂದು ಹೇಳುತ್ತೀರಿ, ಸುಮಾರು ಎಪ್ಪತ್ತು ವರ್ಷಕ್ಕಿಂತ ಜಾಸ್ತಿ ನೀವುಗಳೆ ಆಡಳಿತ ನಡೆಸಿರುವುದು, ಎಲ್ಲಿ ಹೋದರೂ ಕೂಡ ಬಡವರಿಗೆ ಮನೆ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ, ಉದ್ಯೋಗ ಇಲ್ಲ, ಶಿಕ್ಷಣ ಇಲ್ಲ, ಬರೀ ಘೋಷಣೆಗಳನ್ನು ಮಾಡಿದರೆ ಇದು ಯಾವ ನ್ಯಾಯ. 2017-18ನೇ ಸಾಲಿನಲ್ಲಿ ವಸತಿ ಇಲಾಖೆಗೆ ಒಟ್ಟಾರೆಯಾಗಿ ಸುಮಾರು 4,708 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ನಾನು ಏಕೆ ಹೇಳುತ್ತೇನೆಂದರೆ, ನೀವು ವಸತಿ ಸಚಿವರಿದ್ದೀರಿ, ಲೆಕ್ಕ ಹಾಕಿ, ನೀವು ಏಳು ಲಕ್ಷ ಎಂದು ಹೇಳಿದ್ದೀರಲ್ಲ, ನೀವು ಅದರಲ್ಲಿ ಅರ್ಧವನ್ನೆ ಕೊಡಿ, ಸುಮಾರು ಮೂರುವರೆ ಲಕ್ಷ ಹಣವನ್ನೆ ಕೊಡಿ, ಇನ್ನು ಕಡಿಮೆ ಕೊಡಿ, ಅಷ್ಟನಾದರೂ ಮಾಡಿ, ನಾವು ಓದುವುದಿಲ್ಲವೆಂದು ತಿಳಿದುಕೊಂಡುಬಿಟ್ಟರೇನು, ಪತ್ರಿಕೆ ಮತ್ತು ಟಿ.ವಿ., ಈಗ ಅಷ್ಟು ಸುಲಭವಿಲ್ಲ, ಈಗ ತಾವು ಏನು ಘೋಷಣೆ ಮಾಡುತ್ತೀರಿ ಅದನ್ನು ನಂಬಿಕೊಂಡೆ ಇರಬೇಕೆಂದು ಇಲ್ಲ, 1.20 ಲಕ್ಷಕ್ಕೆ ನೀವು ಏಳು ಲಕ್ಷಎಂದು 8,400 ಕೋಟಿ ರೂಪಾಯಿಗಳಿಗೆ ನೀವು ಹಣ ಇಟ್ಟುಕೊಂಡು 4,700 ಕೋಟಿ ರೂಪಾಯಿಗಳೆಂದು ಹೇಳುತ್ತಾ ರಾಜ್ಯದ ಜನರನ್ನು ಇಷ್ಟು ಮುಠ್ಠಾಳರನ್ನಾಗಿ ಮಾಡುತ್ತೀರ.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಡಾ||ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಅಲ್ಲ ಸ್ವಾಮಿ ವರ್ಷಕ್ಕೆ ಲೆಕ್ಕ ಹಾಕಿಕೊಳ್ಳಿ, ನೀವು ಏಳು ವರ್ಷದ್ದು, ಏಳು ಲಕ್ಷ ಹೆಚ್ಚಿಸಿ ಬಿಟ್ಟರೆ, no, for this year, ಈ ವರ್ಷಕ್ಕೆ ಎಷ್ಟು? ಸರಿಯಾಗಿ ಓದಿ ಸ್ವಾಮಿ, ಏಕೆ ನೀವು confusion ಮಾಡಿಕೊಳ್ಳುತ್ತೀರಾ? ಏಳು ಲಕ್ಷ ಮನೆಗಳು ನಾಲ್ಕು ವರ್ಷದಲ್ಲಿ ಎಂದು ಹೇಳಿರುವುದು. ಬೇರೆ ಬೇರೆ ಇಲಾಖೆಯಲ್ಲಿ ಎಸ್.ಸಿ.ಪಿ, ಮತ್ತು ಟಿ.ಎಸ್.ಪಿ. ಅದೆಲ್ಲಾ ಹಣ ಬರುವುದಿಲ್ಲವೆ, ನೀವು ಒಟ್ಟಾರೆಯಾಗಿ ತೆಗೆದುಕೊಳ್ಳಿ.

**ಶ್ರೀ ಎಂ.ಕೃಷ್ಣಪ್ಪ:-**ಮಾನ್ಯ ಸಭಾಪತಿಯವರೆ, ಇದುವರೆವಿಗೂ ಹನ್ನೊಂದು ಲಕ್ಷ ಮನೆಗಳನ್ನು ಕಟ್ಟಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ವಸತಿ ಸಚಿವರು ಮೊದಲು ಮನೆ ಬಗ್ಗೆ ಕ್ಲಿಯರ್ ಮಾಡಲಿ, ಇಲ್ಲವೆ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಬಗ್ಗೆ ಕ್ಲಿಯರ್ ಮಾಡಲಿ, ಎರಡನ್ನೂ ಮಿಕ್ಸ್ ಮಾಡುವುದು ಬೇಡ. ಅದಕ್ಕೆ ನಾನು ಹೇಳುತ್ತಿರುವುದು, ನಾನು ಕನ್ನಡದಲ್ಲಿ ಓದುತ್ತಿದ್ದೇನೆ, ವಿವಿಧ ಯೋಜನೆಗಳ ಅಡಿಯಲ್ಲಿ ಒಟ್ಟಾರೆ ಏಳು ಲಕ್ಷ ಮನೆಗಳನ್ನು ಮಂಜೂರು ಮಾಡಲಾಗುವುದು, ಇವುಗಳ ಪೈಕಿ ಗ್ರಾಮೀಣ ಪ್ರದೇಶಗಳಲ್ಲಿ ಆರು ಲಕ್ಷ ಮನೆಗಳನ್ನು ಮತ್ತು ಬೆಂಗಳೂರಿನಲ್ಲಿ ಒಂದು ಲಕ್ಷ ಮನೆಗಳನ್ನು ನಿರ್ಮಿಸಲಾಗುವುದು,

**ಡಾ||ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ವಿವಿಧ ಯೋಜನೆಗಳ ಅಡಿಯಲ್ಲಿ ಬರುವುದು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಅದರಲ್ಲಿ ವಿವಿಧ ಯೋಜನೆಗಳು ಎಂದು ಇರುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹೌದು ಸ್ವಾಮಿ, ನಾನು ಅದಕ್ಕೆ ಹೇಳುತ್ತಿರುವುದು, ಆಯಿತು ನೀವು ಉತ್ತರ ಕೊಡುವಂತಹ ಸಂದರ್ಭದಲ್ಲಿ ನೀವು ಹೇಗಾದರೂ ಕೊಡಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದ್ದು ಮತ್ತು ರಾಜ್ಯ ಸರ್ಕಾರದ್ದು ಎಂದು ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದವರು ಹೇಳುತ್ತಿರುವುದು ನೂರಕ್ಕೆ ನೂರು ಸರಿ. ಇವರು ಆಯೋಗದಲ್ಲಿ ಏನು ಹೇಳುತ್ತಾರೆ ಅದೇ ಸರಿ, ಪೇಪರ್‌ನಲ್ಲಿ ಏನು ಹೇಳಿಕೆಗಳನ್ನು ಕೊಡುತ್ತಾರೆ ಅದೇ ಸರಿ ಮತ್ತು ಟಿ.ವಿ.ಯಲ್ಲಿ ಏನು ಭಾಷಣ ಮಾಡುತ್ತಾರೆ ಅದೇ ಸರಿ, ನಾನು ಒಬ್ಬ ವಿರೋಧ ಪಕ್ಷದ ನಾಯಕನಾಗಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆ ಬಡವರ ಪರವಾಗಿ ಏನು ಹೇಳಬೇಕೋ, ಅದನ್ನು ಹೇಳುತ್ತಿದ್ದೇನೆ, ಧರ್ಮ-ಕರ್ಮ ನಿಮಗೆ ಬಿಟ್ಟಿರುವುದು, ನಾನು ಇನ್ನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಮನೆಗಳ ಬಗ್ಗೆ ಹೇಳಬೇಕೆಂದರೆ, ಕರ್ನಾಟಕ ಗೃಹ ಮಂಡಳಿ 1.70 ಲಕ್ಷ ನಿವೇಶನ ಮತ್ತು ಮನೆಗಳನ್ನು ನಿರ್ಮಿಸಲಾಗುವುದೆಂದು ಹಿಂದಿನ ಬಜೆಟ್‌ನಲ್ಲಿ ಘೋಷಿಸಿದ್ದು, ಕಾಗದದ ಮೇಲೆ ಹಾಗೆಯೇ ಇದೆ, ಕರ್ನಾಟಕ ಗೃಹ ಮಂಡಳಿ 1.07 ಲಕ್ಷ ನಿವೇಶನ ಮತ್ತು ಮನೆಗಳನ್ನು ಇದುಯಾವ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಲ್ಲಿ ಕೊಡುತ್ತಾರೋ ನನಗೆ ಗೊತ್ತಿಲ್ಲ. ವಿವಿಧ ಇಲಾಖೆಯ ಯೋಜನೆಗಳೆಂದು ಹೇಳುತ್ತಿದ್ದಾರಲ್ಲ. ಇದನ್ನು ಕೂಡ ಅವರೆ ಹೇಳಿರುವುದು, ಇದರಲ್ಲಿ ಏನಾದರೂ ವ್ಯತ್ಯಾಸ ಇದ್ದರೆ ಹೇಳಿ. ರಾಜ್ಯದಲ್ಲಿ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದಲ್ಲಿ ನಿವೇಶನ ಹಂಚಿಕೆಯಲ್ಲಿ ಶೂನ್ಯ ಪ್ರಗತಿ. ನಗರ ಪ್ರದೇಶದಲ್ಲಿ ನನಗೆ ಗೊತ್ತಿರುವ ಪ್ರಕಾರ ಯಾವಯಾವ ಊರಿನಲ್ಲಿ ಮತ್ತು ನಗರ ಪ್ರದೇಶದಲ್ಲಿ ಎಷ್ಟು ಕಟ್ಟಿದ್ದೀರೋ ನನಗೆ ಗೊತ್ತಿಲ್ಲ, ಕಟ್ಟಿದ್ದರೆ ದಯವಿಟ್ಟು ಉತ್ತರ ಕೊಡಿ. ಆದರೆ, ಬಿ.ಡಿ.ಎ.ನಲ್ಲಿ ಮಾತ್ರ 22 ಸಾವಿರ ಫ್ಲಾಟ್‌ಗಳನ್ನು ಹಂಚಿಕೆ ಮಾಡುತ್ತೇವೆಂದು ಹೇಳಿದ್ದೀರಿ, ಶೇಕಡಾ 40ರಷ್ಟು ಸಾಧನೆ ಮಾಡಿದ್ದೀರಿ, ನನಗೆ ಅನಿಸುತ್ತದೆ ಶೇಕಡಾ 40ರಷ್ಟು ಸಾಧನೆಯೇ, ತ್ರಿ-ವಿಕ್ರಮ ಸಾಧನೆ ಮಾಡಿದ ಹಾಗೆ ಇರಬಹುದು. ಇವರಿಗೆ ನೋಬಲ್ ಪ್ರಶಸ್ತಿ ಕೊಡಬೇಕು, ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, during the year 2014-15 Karnataka Housing Board proposes to acquire 10,750 acres of land through land acquisition, purchase in 14 districts of the State it is proposed to develop about 1.7 lakh properties in such land. ಮಾನ್ಯ ಸಭಾನಾಯಕರಾದಂತಹ ಡಾ||ಜಿ.ಪರಮೇಶ್ವರ್‌ರವರೆ ನಾವು ಮತ್ತು ನೀವು ಎಲ್ಲರೂ ರಾಜಕಾರಣ ಮಾಡುವವರೆ, ಬಜೆಟ್ ಎಂದರೆ ಒಂದು ಸ್ವಲ್ಪವಾದರೂ ಬಡವರ ಪರವಾಗಿ ಇರಬೇಕಲ್ಲವೇ? ಪೂರ್ತಿ ರಾಜಕಾರಣವೆ ಆಗಿಬಿಟ್ಟರೆ, ಬರೀ ಘೋಷಣೆ, ಬರೀ ಸುಳ್ಳು ಘೋಷಣೆ, ಅದಕ್ಕೋಸ್ಕರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಈ ವಸತಿಯ ಬಗ್ಗೆ ಏನು ತಾವು ಯೋಜನೆಗಳನ್ನು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಮಾಡುತ್ತಿದ್ದೀರಿ, ಈ ದಿಕ್ಕಿನಲ್ಲಿ ಸ್ವಲ್ಪ ನೀವು ಪ್ರಯತ್ನವನ್ನು ಮಾಡಿ ಮುಂದುವರೆದರೆ, ಆಗ ನಿಜಕ್ಕೂ ಕೂಡ ಕರ್ನಾಟಕ ರಾಜ್ಯದಲ್ಲಿ ಬಡವರಿಗೆ ಅನುಕೂಲ ಮಾಡಿಕೊಡಬಹುದು ಆಗ ಅವರಿಗೆ ವಿಶ್ವಾಸ ಬರುತ್ತದೆ ಎಂಬುದು ನನ್ನ ಭಾವನೆ. ಈ ದಿಕ್ಕಿನಲ್ಲಿ ನಾನು ನಿಮಗೆ ಒತ್ತಾಯ ಮಾಡುತ್ತೇನೆ. ಏಳು ಲಕ್ಷ, ಹತ್ತು ಲಕ್ಷ ಮತ್ತು ಇಪ್ಪತ್ತು ಲಕ್ಷ ಎಂದು ಸುಮ್ಮನೆ ಮೂಗಿಗೆ ತುಪ್ಪ ಹಚ್ಚುವ ವ್ಯವಸ್ಥೆ ಮಾಡಬೇಡಿ. ನೀವು ನಮಗೆ ಉತ್ತರ ಕೊಡಿ, ನಮ್ಮ ಕೈಯಲ್ಲಿ ಇಷ್ಟು ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಈ ರೀತಿಯಾಗಿ ಘೋಷಣೆ ಮಾಡಿಬಿಟ್ಟಿದ್ದಾರೆ, ಆದರೆ ನಾವು ಇಷ್ಟೇ ಮಾಡುವುದು. ಮೂಗಿಗೆ ತುಪ್ಪ ಬೇಡವಂತೆ, ಬಾಯಿಗಾದರೂ ತುಪ್ಪ ಹಚ್ಚಬೇಕಂತೆ, ಅದಕ್ಕೋಸ್ಕರ ಎಷ್ಟು ಸಾಧ್ಯವೋ ಅಷ್ಟನ್ನು, ಮಾನ್ಯ ಡಾ॥ಜಿ.ಪರಮೇಶ್ವರ್‌ರವರೆ even ನಿವೇಶನ, ಭೂಮಿ ಇಲ್ಲವೆಂದರೆ ಅದು ಒಂದು ತರಹ, ಆದರೆ ಭೂಮಿ ಎಲ್ಲಾ ಕಡೆ ಬಿದ್ದಿದೆ, ಸರ್ಕಾರಿ ಭೂಮಿ ಇದೆ, ಖಾಸಗಿ ವ್ಯಕ್ತಿಗಳು ತೆಗೆದುಕೊಂಡಂತಹ ಭೂಮಿ ಇದೆ. ಆಶ್ರಯ ಸಮಿತಿ ಎಂಬುದು ಇದೆಯಾ ಸ್ವಾಮಿ? ಎಲ್ಲಿದೆ ಎಂದು ಒಂದು ಚೂರು ಹೇಳಿ ನೋಡೋಣ.

**(243) 16.03.2017 ಎಲ್‌ಎಲ್/ಜಿಆರ್ 4.10**

**ಶ್ರೀ ಎಂ.ಕೃಷ್ಣಪ್ಪ(ವಸತಿ ಸಚಿವರು):-** ಮಾನ್ಯ ಸಭಾಪತಿಯವರೆ, ಎಲ್ಲಾ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿ ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಇದೆ. ಜಾಗೃತಿ ಸಮಿತಿಯೆಂದು ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ಹಳ್ಳಿಗಳಲ್ಲಿ ಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಒಂದು ಕೆಲಸ ಮಾಡಿ. ಈ ಆಶ್ರಯ ಸಮಿತಿಗಳಲ್ಲಿ ಸಭೆಯೇ ನಡೆಯುವುದಿಲ್ಲವಾದರೆ..? ಅಧ್ಯಕ್ಷರು ಯಾರು? ಎಂ.ಎಲ್.ಎ.ಗಳು, ಅವರು ಸಭೆ ಮಾಡದೇ ಇದ್ದರೆ ಏನು ಮಾಡುತ್ತೀರಿ? ನಾನು ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿಲ್ಲ. ಶಿವಮೊಗ್ಗ ನಗರದ ವಿಚಾರವನ್ನು ನಾನು ಅದಕ್ಕಾಗಿ ಹೇಳಿದೆನು. **(ಗೊಂದಲ)** ಎಂ.ಎಲ್.ಸಿ.ಗಳು ಇಂತಹ ಸಮಿತಿಗಳ ಉಪಾಧ್ಯಕ್ಷರೆಂದು, ಅವರಿಗೆ ಇಂದು ಸಭೆಯಿದೆಯೆಂದು ಒಂದು ನೋಟಿಸ್ ಏನಾದರೂ ಬಂದಿದ್ದರೆ...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ ಗಣಕೀಕರಣ ಅಥವಾ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ವಸತಿ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ, ಸರ್, ಜಾಗೃತಿ ಸಮಿತಿ ಎನ್ನುವುದು ಶಾಸಕರ ಮನೆಯಲ್ಲಿ ನಡೆಯತಕ್ಕಂತಹ ಸಭೆ. ಇವತ್ತಿನವರೆಗೂ... ನನ್ನ ನಾಲ್ಕು ವರ್ಷದಲ್ಲಿ ನಾನು ನೋಡುತ್ತಿದ್ದೇನೆ, ಯಾವುದೇ ಜಾಗೃತಿ ಸಮಿತಿ ಸಭೆ ನಡೆಯುವುದಿಲ್ಲ. ತಾಲ್ಲೂಕು ಪಂಚಾಯಿತಿ ಇ.ಓ. (ಕಾರ್ಯ ನಿರ್ವಾಹಕ ಅಧಿಕಾರಿ) ಯವರು ಶಾಸಕರ ಮನೆಗೆ ಹೋಗುತ್ತಾರೆ. ಪಟ್ಟಿ ಮಾಡುತ್ತಾರೆ. ಅಲ್ಲೇ ಸಹಿ ಮಾಡುತ್ತಾರೆ. ಯಾವ ನೋಟಿಸನ್ನು ಸಹ ಸಂಬಂಧಪಟ್ಟಂತಹ ಯಾವುದೇ ವಿಧಾನ ಪರಿಷತ್ತಿನ ಸದಸ್ಯರಿಗೆ ಅಥವಾ ಸಂಬಂಧಪಟ್ಟಂತಹ ಯಾವುದೇ ಸದಸ್ಯರಿಗೆ ನೋಟಿಸ್ ಕಳುಹಿಸುವುದಿಲ್ಲ. ನೋಟಿಸ್ ಕೇಳಿದರೆ, "ಇಲ್ಲಾ ಸರ್, ಅದು ಶಾಸಕರು ಮಾಡಿ ಮುಗಿಸಿದರು. ತಮಗೆ ಯಾರಿಗೆ ಬೇಕು ಅವರಿಗೆ ಕೊಟ್ಟು ಸಹಿ ಮಾಡಿದರು" ಎಂದು ಹೇಳುತ್ತಾರೆ. ದಯವಿಟ್ಟು ಇದನ್ನು ಸರ್ಕಾರ ಗಮನಿಸಬೇಕು. ನಾನು ಮೊನ್ನೆ ಹಕ್ಕುಚ್ಯುತಿ ಬಗ್ಗೆ ಅರ್ಜಿ ಸಲ್ಲಿಸಿದ್ದೇನೆ. ಚಿಕ್ಕೋಡಿ ತಾಲ್ಲೂಕು ಪಂಚಾಯಿತಿ ಇ.ಓ., ಅವರು "ಜಾಗೃತಿ ಸಮಿತಿಗೆ ಫೋನ್ ಮಾಡಿದ್ದೇ ಸರ್, ನಿಮಗೆ. ಸಭೆ ಕರೆಯಬೇಕಾಗಿತ್ತು, ಶಾಸಕರು ಇವತ್ತೇ free ಇದ್ದೇನೆ ಇವತ್ತೇ ಮಾಡಿಬಿಡೋಣ ಎಂದರು. ಅದಕ್ಕೆ ಮಾಡಿಬಿಟ್ಟಿದ್ದೇವೆ. ದಯವಿಟ್ಟು ಕ್ಷಮಿಸಿ" ಎಂದು ನನಗೆ ಫೋನ್ ಮಾಡುತ್ತಾರೆ. ಯಾವುದೆಂದು ಕೇಳಿದರೆ, "ಪಟ್ಟಿ ಮಾಡಿಬಿಟ್ಟಿದ್ದೇವೆ. ಸಹಿ ಕೂಡ ಮಾಡಿದ್ದಾರೆ ಶಾಸಕರು". ಈ ರೀತಿಯ ಜಾಗೃತಿ ಸಮಿತಿಗಳು ಬೇಕೇ? ಮಾನ್ಯ ಸಚಿವರು, ದಯವಿಟ್ಟು "ಇಲ್ಲಾ ನಾವು ಮಾಡುವುದಿಲ್ಲವೆಂದು ಹೇಳಲಿ". ಜಾಗೃತಿ ಸಮಿತಿ ಬೇಡವೆಂದು ಹೇಳಲಿ. ಇದರ ಬಗ್ಗೆ ಒಂದು ನಿರ್ಣಯ ಆಗಲಿ. ಅಂದರೆ, ಜಾಗೃತಿ ಸಮಿತಿ ಬೇಡ. ಯಾವುದೇ ಆಶ್ರಯ ಮನೆಗಳನ್ನು ಹಂಚಿಕೆ ಮಾಡುವುದರ ಬಗ್ಗೆ ಶಾಸಕರು ಏನು ಹೇಳುತ್ತಾರೆ ಅದನ್ನೇ ನಾವು ನಿರ್ಧಾರ ಮಾಡುತ್ತೇವೆ ಎನ್ನುವಂತಹ ನಿರ್ಣಯ ಮಾಡಿಬಿಡಿ. ಜಾಗೃತಿ ಸಮಿತಿ ನಾಮಕಾವಸ್ಥೆಗೆ ಏತಕ್ಕೆ ಬೇಕಾಗಿದೆ? ಜಾಗೃತಿ ಸಮಿತಿ ಸಭೆ ಮಾಡಿ, ನ್ಯಾಯಯುತವಾಗಿ ಯಾರಿಗೆ ಗ್ರಾಮ ಸಭೆಯಲ್ಲಿ ಮನೆಗಳು ಸಿಕ್ಕಿಲ್ಲ, ಯಾರಿಗೆ ಗ್ರಾಮ ಪಂಚಾಯತಿಯಲ್ಲಿ ಮನೆಗಳು ಸಿಕ್ಕಿಲ್ಲ ಎಂದು ಏಕೆ ಹೇಳುತ್ತೇವೆಂದರೆ, ಅಂತಹವರಿಗೆ ನ್ಯಾಯಯುತವಾದಂತಹ ಮನೆಗಳು ಸಿಗಬೇಕೆನ್ನುವುದು ನಮ್ಮ ಬೇಡಿಕೆ. ಜಾಗೃತಿ ಸಮಿತಿ ಸಭೆ ಶಾಸಕರ ಮನೆಯಲ್ಲಿಯೇ ನಡೆದರೆ ನಿಜವಾಗಿ ಯಾರು ವಸತಿಹೀನರಿದ್ದಾರೆ ಅವರಿಗೆ ಮನೆ ಸಿಗತಕ್ಕಂತಹ ವ್ಯವಸ್ಥೆ ಆಗುತ್ತಿದೆಯೇ? ಎಂದು ದಯವಿಟ್ಟು ಸನ್ಮಾನ್ಯ ವಸತಿ ಸಚಿವರು ತಿಳಿಸಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕೆ.ಬಿ. ಶಾಣಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿದಂತೆ, ಮಾನ್ಯ ಶಾಸಕರುಗಳು ಜಾಗೃತಿ ಮತ್ತು ಆಶ್ರಯ ಸಮಿತಿಯ ಅಧ್ಯಕ್ಷರುಗಳು. ಎಂ.ಎಲ್.ಸಿ.ಗಳು ಅದರ ಉಪಾಧ್ಯಕ್ಷರು ಎಂದು. ನಾನು ಎಂ.ಎಲ್.ಸಿ. ಅಲ್ಲವೇ? ದಯಮಾಡಿ ನಾನು ಯಾವ ಸಭೆಯಲ್ಲಿ ಉಪಾಧ್ಯಕ್ಷನಿದ್ದೇನೆಂದು ಮಾನ್ಯ ಸಚಿವರು ಹೇಳುತ್ತಾರೆಯೇ? ಅವರು ಏನಾದರೂ ನನಗೆ ಕರೆಸಿದ್ದಾರೆಯೇ? ಅಥವಾ ಸರ್ಕಾರದವರು ಯಾವುದಾದರೂ ಸಭೆಗೆ ನನ್ನನ್ನು ಕರೆಸಿದ್ದಾರೆಯೇ? I have been here since last eleven years. ಇದಂತು ನಾಲ್ಕೂವರೆ ವರ್ಷವಾಯಿತು. (**ಗೊಂದಲ**) ನನಗೆ ಎಲ್ಲಿಗಾದರೂ ನೋಟಿಸ್ ಕಳುಹಿಸಿದ್ದರೆ ಅದನ್ನು ದಯಮಾಡಿ ತಿಳಿಸಲಿ, so that I myself will feel about that. ನನಗೆ ಗೊತ್ತೇ ಇಲ್ಲ. ಉಪಾಧ್ಯಕ್ಷನೆಂದು ಗುರುತಿಲ್ಲ ಮತ್ತೆ ನೋಟಿಸ್ ಹೇಗೆ ಕಳುಹಿಸುತ್ತಾರೆ ನಮಗೆ? They have not intimated that I am the Vice President of the so and so Grama Panchayat. ನಾವುಗಳಂತೂ ನಮ್ಮ ಕೇಂದ್ರಸ್ಥಾನದ ವಿಳಾಸವನ್ನೂ ಸಹ ನೀಡಿದ್ದೇವೆ. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ಬಹಳ ಕತ್ತಲಲ್ಲಿ ಇಟ್ಟಿದ್ದಾರೆ. ಮಾನ್ಯಕೃಷ್ಣಪ್ಪನವರೇ You are a gentleman, I say. ಇದು ಬಹಳ ಅಪಾಯಕರವಾದ ಇಲಾಖೆಯಾಗಿದೆ. ನಾನು ಬಹಳ ವರ್ಷದಿಂದ ಈ ಇಲಾಖೆಯನ್ನು ನೋಡುತ್ತಿದ್ದೇನೆ. ಇದರ ಒಳಗೆ ಸಿಕ್ಕಿ ಹಾಕಿಕೊಂಡರೆ, ಜೇಡರ ಬಲೆಗೆ ಸಿಕ್ಕಿ ಹಾಕಿಕೊಂಡಂತೆ. ತಾವು ಒಳ್ಳೆಯ ಮನುಷ್ಯರಿದ್ದೀರಿ. ಇದನ್ನು ಬಿಡಿಸಿ ಸರಿ ಮಾಡುತ್ತೀರೆಂದರೆ, we have got faith on you. Kindly see whether I am the Vice President of so and so GramaPanchat.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವರ್ಷಕ್ಕೆ ಮೂರು ಲಕ್ಷ ಮನೆಗಳೆಂದು ತಾವುಗಳು ಗುರಿ ಇಟ್ಟುಕೊಂಡಿದ್ದೀರಿ. ಅಂಕಿ-ಅಂಶಗಳ ಮಾತು ಬಿಡೋಣ. ತಾವುಗಳು ಈಗಿರುವಂತಹ ಸ್ಥಿತಿಯಲ್ಲಿ ಇಂತಹ ಪ್ರಕರಣಗಳಲ್ಲಿ ಹೈಕೋರ್ಟ್ ತಡೆಯಾಜ್ಞೆ ಬಂದಿದೆ. ತಾವುಗಳು ಪಟ್ಟಿಯನ್ನು ಗ್ರಾಮ ಪಂಚಾಯತಿಗಳಿಂದ ತೆಗೆದುಕೊಳ್ಳಬೇಕು. ಆ ನಂತರ ಶಾಸಕರು ಅದಕ್ಕೆ ಮೇಲು ರುಜು ಹಾಕುತ್ತಾರೆ. ಈ ರೀತಿಇನ್ನು ಅನೇಕ ಇದೆ. ಅದರ ಸರಿ ತಪ್ಪುಗಳ ಬಗ್ಗೆ ನಂತರ ಚರ್ಚೆ ಮಾಡೋಣ. ಈಗ ಗುರಿ ತಲುಪಬೇಕಾದರೆ ಇದಕ್ಕೆ ಮೊದಲು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಒಂದೊಂದು ಗ್ರಾಮ ಪಂಚಾಯತಿಗೆ 100 ರಿಂದ 200 ಮನೆಗಳನ್ನು ಗುರಿ ನಿಗದಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು”

ಮಾಡಿತ್ತು. ಕೆಲವು ಪಂಚಾಯತಿಗಳಲ್ಲಿ ಹೆಚ್ಚಾಯಿತು. ಕೆಲವು ಪಂಚಾಯತಿಗಳಲ್ಲಿ ಕಡಿಮೆಯಾಯಿತು. ಕನಿಷ್ಟ 3 ಲಕ್ಷ ಮನೆಗಳನ್ನು ಮಾಡುವುದಕ್ಕೆ ಅವಕಾಶವಾಯಿತು. ಈಗ ಏನಾಗಿದೆಯೆಂದರೆ, 10 ರಿಂದ 12 ಮನೆಗಳನ್ನು ಕೊಡುತ್ತಿದ್ದಾರೆ. ದಯವಿಟ್ಟು ತಾವು ಕೇಳಿ. ಮೀಸಲಾತಿ ಪ್ರಕಾರ ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ, ಅಂಗವಿಕಲರಿಗೆ ಈ ರೀತಿ ಕೊಡುತ್ತಾರಲ್ಲವೇ? ಅದರಂತೆ, ಅವರಿಗೆ 10 ರಿಂದ 12 ಮನೆಗಳಿಂತ ಜಾಸ್ತಿ ಕೊಟ್ಟೇಇಲ್ಲ. ಆಗ ನಿಮ್ಮ ಗುರಿ ತಲುಪುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಈಗ ಕೆಲವು ಗ್ರಾಮ ಪಂಚಾಯತಿಗಳಲ್ಲಿ 100 ಮನೆಗಳು ಮತ್ತು 150 ಮನೆಗಳು ಬೇಕೆಂದು ಬೇಡಿಕೆ ಇಡುತ್ತಾರೆ. ಆದರೆ ಕೊಡುತ್ತಿರುವುದೇ 12 ಮನೆಗಳು. ಅದನ್ನು ಶಾಸಕರು ಹೇಗೆ ಹಂಚುವುದು? ಗ್ರಾಮ ಸಭೆಗಳಿಂದ ಬಂದಿರುವಂತಹ ಪಟ್ಟಿಗಳನ್ನು ಯಾವರೀತಿ ಮಾಡುವುದು? ಗ್ರಾಮ ಪಂಚಾಯತಿಯ ಸದಸ್ಯರು ಯಾವರೀತಿ ಆಯ್ಕೆ ಮಾಡಬೇಕು? ಏನು ಮಾಡಲಿಕ್ಕೂ ಸಹ ಸಾಧ್ಯವಿಲ್ಲ. ದಯವಿಟ್ಟು ಮೊದಲು ಅದರಲ್ಲಿ ಗುರಿಯನ್ನು ನಿಗದಿ ಮಾಡಿ. ಕನಿಷ್ಟ 100 ರಿಂದ 150 ಮನೆಗಳನ್ನು ಗ್ರಾಮ ಪಂಚಾಯತಿಗಳಿಂದ ಹಂಚುವಂತಹ ಸ್ಥಿತಿಯಿದ್ದರೆ ಮಾತ್ರ ತಾವುಗಳು ಕನಿಷ್ಟ ಗುರಿಯನ್ನಾದರೂ ಮುಟ್ಟಬಹುದು. ಇಲ್ಲವಾದರೆ ಗುರಿ ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದೇ ಒಂದು ನಿಮಿಷ.

**ಉಪಸಭಾಪತಿ:-** ಮಾನ್ಯ ರಮೇಶ್ ಬಾಬುರವರೇ, ದಯವಿಟ್ಟು ಬೇಡ.

**ಶ್ರೀ ರಮೇಶ್‌ಬಾಬು:-**ಮಾನ್ಯ ಸಭಾಪತಿಯವರೆ, ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನವರು ಎಲ್ಲಾ ಸದಸ್ಯರ ಭಾವನೆಗಳ ಪರವಾಗಿ ಮಾತನಾಡಿದರು. ನಾವುಗಳು ಯಾವುದನ್ನು ನೊಡೆಲ್ ತಾಲ್ಲೂಕುಗಳೆಂದು ಘೋಷಣೆ ಮಾಡಿಕೊಂಡಿದ್ದೇವೆ. ಅಲ್ಲಿ ಎಲ್ಲಾ ಸಂಸ್ಥೆಗಳಿಗೆ, ಎಲ್ಲಾ ಸಮಿತಿಗಳಿಗೆ ವಿಧಾನ ಸಭಾ ಶಾಸಕರು ಅಧ್ಯಕ್ಷರಾಗಿರುತ್ತಾರೆ. ವಿಧಾನ ಪರಿಷತ್ತಿನ ಸದಸ್ಯರು ಉಪಾಧ್ಯಕ್ಷರಾಗಿರುತ್ತಾರೆ. ಅವರು ಎತ್ತಿದಂತಹ ಪ್ರಶ್ನೆ ಅದು. ಇಲ್ಲಿ ಬಹುಶಃ ನಮ್ಮ ವಸತಿ ಸಚಿವರಗಿಂತಲೂ ಸರ್ಕಾರ ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಎಲ್ಲಾ ಕಡೆ ಸಮಸ್ಯೆಯಿದೆ. ಇದು ಒಂದು ಎರಡು ತಾಲ್ಲೂಕಿನ ಪ್ರಶ್ನೆಯಲ್ಲ, ಕಾಂಗ್ರೆಸ್ ಪಕ್ಷದ ಸದಸ್ಯರು ಸೇರಿದಂತೆ... ಬಹಳಷ್ಟು ಕಡೆ ನೊಡೆಲ್ ತಾಲ್ಲೂಕುಗಳೆಂದು ಎಲ್ಲಿ ಘೋಷಣೆ ಮಾಡಿಕೊಂಡಿದ್ದೇವೆ. ಅಲ್ಲಿ ಸಮಿತಿ ಸಭೆಗಳಿಗೆ ನಮ್ಮನ್ನು ಕರೆಯುತ್ತಿಲ್ಲ. ಇದಕ್ಕೆ ತಾವೇ ಒಂದು ಸೂಚನೆ ಕೊಟ್ಟು ಒಂದು ಆದೇಶವನ್ನು ಪಾಲನೆ ಮಾಡಬೇಕು. ಯಾವ ಅಧಿಕಾರಿ ಪಾಲನೆ ಮಾಡುವುದಿಲ್ಲ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳವಂತಹದ್ದಾಗಬೇಕು. ಇದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಒಟ್ಟಾರೆ ಎಲ್ಲರ ಅಭಿಪ್ರಾಯ. ಬಹುತೇಕ ಸದಸ್ಯರು ನಾವು ಪತ್ರದಲ್ಲಿದ್ದೇವೆ. ಆ ಸಮಿತಿಯ ಉಪಾಧ್ಯಕ್ಷರೆಂದು ಹೇಳಿ... ಆದರೆ ಯಾರಿಗೂ ಸಹ ಸಭೆಯ ಬಗ್ಗೆ ನೋಟಿಸ್ ಅಥವಾ ಅಜೆಂಡಾ ಬರುತ್ತಿಲ್ಲ. ಅವರನ್ನು ಸಭೆಗೆ ಆಹ್ವಾನಿಸುತ್ತಿಲ್ಲ. ಇಂತಹ ಒಂದು ಸಂದರ್ಭ ಇದೆ. ಬಹುತೇಕ ನಾವು ವಸತಿ ಸಚಿವರೊಬ್ಬರನ್ನೇ ಹೊಣೆ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ.

**ಶ್ರೀ ವಿ.ಎಸ್. ಉಗ್ರಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಲಾಗಿದೆ. ಇವತ್ತು ಸರ್ಕಾರ ಆಯವ್ಯಯದಲ್ಲಿ 7 ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿದೆಯೆಂದು ಪ್ರಾಮಾಣಿಕವಾಗಿ, ಬದ್ಧತೆಯಿಂದ ಘೋಷಣೆ ಮಾಡಿದೆ. 2018ರ ಮಾರ್ಚ್ ಒಳಗೆ 15ಲಕ್ಷ 50 ಸಾವಿರ ಮನೆಗಳನ್ನು ನೀಡುತ್ತೇವೆ ಎನ್ನುವಂತಹದ್ದನ್ನು ಹೇಳಿದ್ದಾರೆ. ಇದು ನಿಜಕ್ಕೂ ಸಹ ಜನಪರವಾಗಿದೆ. ಅದರಲ್ಲೂ ಸಮಾಜಮುಖಿಯಾಗಿ ಕೆಲಸ ಮಾಡತಕ್ಕಂತಹ ಬದ್ಧತೆಯನ್ನು ತೋರುತ್ತಿದೆ. ಇಲ್ಲಿ ನಾವು ಒಂದು ಕಡೆ ಸಂವಿಧಾನದ ಕಲಂ 243 ರ ಪ್ರಕಾರ ಮತ್ತು ಬೇಲೂರು ಘೋಷಣೆಯ ರೀತ್ಯಾ ಸುಮಾರು 29 ಇಲಾಖೆಗಳು ಪಂಚಾಯತ್ ವ್ಯವಸ್ಥೆಗೆ ಸೀಮಿತವಾಗಿರತಕ್ಕಂತಹದ್ದು. ಆದರೆ, ಒಂದು ಕಡೆ ಸಂವಿಧಾನದ ಕಲಂ 243 ರ ಪ್ರಕಾರ 73 ಮತ್ತು 74ನೇ ತಿದ್ದುಪಡಿಯ ಹಿನ್ನೆಲೆಯಲ್ಲಿ ಮತ್ತೊಂದು ಕಡೆ ನಾವೇ 2003-04ರಲ್ಲಿ ಬೇಲೂರು ಘೋಷಣೆಯ ಮೂಲಕ 29 ಇಲಾಖೆಗಳ ಜವಾಬ್ದಾರಿಯನ್ನು ಪಂಚಾಯತ್ ವ್ಯವಸ್ಥೆಗೆ ಕೊಟ್ಟಿದ್ದೇವೆ.

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ...

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಹೇಳಿ ಮುಗಿಸುತ್ತೇನೆ. ನಾನು intervene ಆಗಿದ್ದೇನೆನ್ನುವುದು ನನಗೆ ಅರಿವಿದೆ.

**(ಗೊಂದಲ)**

**ಉಪಸಭಾಪತಿಯವರು:-** ಇದು ವಿತ್ತೀಯ ಕಾರ್ಯಕಲಾಪದ ಮೇಲಿನ ಚರ್ಚೆ. ಇದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಆಯಿತು. ಇಲ್ಲಿ ಏನಾಗಿದೆಯೆಂದರೆ, ಮೊದಲನೆಯದು, ಜಾಗೃತಿ ಸಮಿತಿ ಇವತ್ತು ಏನು ಇವೆ. ಒಂದು ಕಡೆ ಜವಾಬ್ದಾರಿ ಇರುವಂತಹದ್ದು ಪಂಚಾಯತಿಗಳಿಗೆ. ಆ ಪಂಚಾಯತಿಗಳ ಕಾರ್ಯವೈಖರಿಯನ್ನು ಮೇಲ್ವಿಚಾರಣೆ ಮಾಡುವಂತಹ

ತಿದ್ದುಪಡಿಯಾಗದ ಪ್ರತಿ/ ಅನಧಿಕೃತ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿನ್ನೆಲೆಯಲ್ಲಿ ಶಾಸಕರ ಸಮಿತಿಯಿದೆ. ನಾನು ಇದು ಮೂರನೆಯ ಬಾರಿ ಈ ಸದನಕ್ಕೆ ಬರುತ್ತಿರುವಂತಹದ್ದು. ನಾನು ಸಹ ಮಾನ್ಯ ಈಶ್ವರಪ್ಪನವರ ಸ್ಥಾನದಲ್ಲಿ ಸುಮಾರು ಎರಡು ವರ್ಷಕ್ಕೂ ಹೆಚ್ಚು ಕಾಲ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಅತ್ಯಂತ ನೋವಿನಿಂದ ಈ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇದು ಕೇವಲ ಇವತ್ತಿನ ಸಮಸ್ಯೆಯಲ್ಲ. ದಶಕಗಳಿಂದಲೂ ಈ ಸದನದ ಸದಸ್ಯರನ್ನು ಯಾವುದೇ ಸಮಿತಿಗಳಿಗೆ ಕರೆದಿರುವಂತಹದ್ದಾಗಲೀ, ಅಭಿಪ್ರಾಯವನ್ನು ಪಡೆದಿರತಕ್ಕಂತಹದ್ದಾಗಲೀ, ಈ ಸರ್ಕಾರವಾಗಲೀ, ಹಿಂದಿನ ಸರ್ಕಾರವಾಗಲೀ ಅಥವಾ ಮತ್ತೊಂದು ಸರ್ಕಾರ ಮಾಡಿರುವುದಿಲ್ಲ. ನಾವು ಈ ಒಂದು ರೀತಿ ಈ ವ್ಯವಸ್ಥೆಯಲ್ಲಿ ತೆಗೆದುಕೊಂಡರೆ... ಮೇಲ್ಮನೆಯವರೆಂದು ಹೇಳಿದರೆ ಶಿಷ್ಟಾಚಾರದ ಪ್ರಕಾರ ಮೇಲೆ. ಈಗ ಇದು ನನಗೂ ಸಹ ಅರ್ಥವಾಗುತ್ತಿಲ್ಲ. ಈಗ ಆಮಂತ್ರಣ ಪತ್ರಿಕೆಯಲ್ಲಿಯೂ ಸಹ variations ಕಾಣುತ್ತಿದೆ. ಇನ್ನು ಯಾವಾಗ ಸಭಾಪತಿಯವರ ಹೆಸರನ್ನು ತೆಗೆದು ಮೊದಲು ಸಭಾಧ್ಯಕ್ಷರ ಹೆಸರು ಹಾಕಿ ನಂತರ ಸಭಾಪತಿಯವರ ಹೆಸರು ಹಾಕುತ್ತಾರೋ ಅದು ಗೊತ್ತಿಲ್ಲ. You kindly go and see any invitation. ಈಗ ನಮ್ಮ ಜಿಲ್ಲೆಯಲ್ಲೇ... ತುಮಕೂರು ಜಿಲ್ಲೆಯಲ್ಲಿ ಮೊದಲು ಎಂ.ಎಲ್.ಎ.ಗಳ ಹೆಸರು ಹಾಕುತ್ತಾರೆ. ತಪ್ಪು, ಸರಿಯೆಂದು ಅಲ್ಲ. ಸರಿ ಅಥವಾ ತಪ್ಪೋ ಕನಿಷ್ಟ ಪಕ್ಷ ಆ ಶಿಷ್ಟಾಚಾರದ ನಿಯಮಾವಳಿಗಳಿಗಾದರೂ ಬದಲಾವಣೆ ತರಬೇಕು. ತಾವುಗಳು ತಮ್ಮ ಶಿಷ್ಟಾಚಾರದ ರೀತಿಯಲ್ಲಿ ಮೊದಲು ಮೇಲ್ಮನೆಯವರು ನಂತರ ಕೆಳಮನೆಯವರು ಅಥವಾ ಮೊದಲು President of India ಆಮೇಲೆ Chief Justice of India, ಆಮೇಲೆ Prime Minister ಆಮೇಲೆ Ministers, MPs ಗಳು MLAs ಗಳು ಇರುತ್ತಾರೆ.

**(244) 16.03.2017 ಎಲ್‌ಎಂ/ಜಿಆರ್ 4.20**

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):–**

ಅದೇ ರೀತಿ ರಾಜ್ಯದಲ್ಲಿ Governor ಆಮೇಲೆ Chief Justice of High Court, ಆಮೇಲೆ Chairman ನಂತರ Speaker ನಂತರ ಮುಖ್ಯಮಂತ್ರಿಗಳು, ಎಂಎಲ್‌ಸಿಗಳು ನಂತರ ಎಂಎಲ್‌ಎ ಗಳು ಎಂದು ಇದೆ. ಒಂದು ಕಡೆ ಶಿಷ್ಟಾಚಾರದಲ್ಲಿಯು violation. ಇನ್ನೊಂದು ಕಡೆ ಜನಪರವಾದ ಕೆಲಸಗಳನ್ನು ಮಾಡುವ ವಿಚಾರದಲ್ಲಿಯು ಸಹ ಇವತ್ತು ನಿಯಮಾವಳಿಗಳ ಪಾಲನೆಯಾಗದಿರುವುದು

ತಿದ್ದುಪಡಿಯಾಗದ ಪ್ರತಿ/ ಗಣಕೀಕೃತ ಅಂತಿಮ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಇದೆ. ಇದರಲ್ಲಿ ನಾನು ರಾಜಕಾರಣ ಬೆರೆಸಲು ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಜನಪರವಾದ ಕೆಲಸಗಳನ್ನು ಮಾಡುವಲ್ಲಿ ಎಲ್ಲಾ ಶಾಸಕರ ಬೆಂಬಲವನ್ನು ಪಡೆಯುವ ಹಿನ್ನೆಲೆಯಲ್ಲಿ, ನಮ್ಮ ಶಿಷ್ಟಾಚಾರದ ಹಿನ್ನೆಲೆಯಲ್ಲಿ ಕೆಳಮನೆಯ ಶಾಸಕರನ್ನು ಮತ್ತು ಮೇಲ್ಮನೆ ಸದಸ್ಯರನ್ನು ಕಡ್ಡಾಯವಾಗಿ ಆ ಸಮಿತಿಗಳ ಸಭೆಗೆ ಕರೆಯಬೇಕು. ಇವರಿಬ್ಬರ ಅಭಿಪ್ರಾಯವನ್ನು ತೆಗೆದುಕೊಂಡ ನಂತರ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವ ದಿಕ್ಕಿನಲ್ಲಿ ನಿಯಮಾವಳಿಗಳಿಗೆ ಬದಲಾವಣೆಯನ್ನು ತಂದರೆ ಅದರಿಂದ ಸರ್ಕಾರ ಬಯಸಿದಂತಹ ಜನಪರವಾದ ಕಾರ್ಯಕ್ರಮಗಳು ಯಥಾವತ್ತಾಗಿ ಹೋಗಲು ಸಾಧ್ಯತೆ ಇದೆ. ಆ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಬೇಕು. ಮಾನ್ಯ ಕೃಷ್ಣಪ್ಪನವರು ನನ್ನ ಆತ್ಮೀಯ ಸ್ನೇಹಿತರು ಅವರು ಆ ಕೆಲಸವನ್ನು ಮಾಡುತ್ತಾರೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ(ವಸತಿ ಸಚಿವರು):-** ಮಾನ್ಯ ಸಭಾಪತಿಗಳೆ, ನಾನು ಕೆಳಮನೆ ಸದಸ್ಯನಾಗುವುದಕ್ಕಿಂತ ಮುಂಚೆ ಮೊದಲ ಬಾರಿಗೆ ಸದನವನ್ನು ಪ್ರವೇಶ ಮಾಡಿರುವುದು ಈ ಮನೆಯ ಸದಸ್ಯನಾಗಿ. ಇವತ್ತು ಬಂದಿರುವ ಈ ಭಾವನೆಗಳು ಅವತ್ತು ಇದ್ದವು, ಇವತ್ತು ಇವೆ. ಮೇಲ್ಮನೆ ಶಾಸಕರನ್ನು ಕೆಳಮಟ್ಟದಲ್ಲಿ ನೋಡುತ್ತಾರೆ, ಕೆಳಮನೆ ಸದಸ್ಯರನ್ನು ಮೇಲ್ಮಟದಲ್ಲಿ ನೋಡುತ್ತಾರೆ ಎನ್ನುವ ಭಾವನೆ ಇದೆ. ಶಿಷ್ಟಾಚಾರದ ಪ್ರಕಾರ ಮೇಲ್ಮನೆ ಸಭಾಪತಿಗಳೆ ಮೊದಲನೆಯ ಸ್ಥಾನದಲ್ಲಿ ಬರುತ್ತಾರೆ. ನಂತರ ಸಭಾಧ್ಯಕ್ಷರು ಎರಡನೆ ಸ್ಥಾನದಲ್ಲಿ ಬರುತ್ತಾರೆ. ಇದು ಎಲ್ಲವು ಗೊತ್ತಿರುವ ವಿಚಾರ ಇದ್ದರು, ವಿಧಾನ ಪರಿಷತ್ತಿನ ಸದಸ್ಯರನ್ನು ಎಲ್ಲಾ ಸಮಿತಿಗಳಲ್ಲಿ ಅದು ಕಾಲೇಜು ಅಭಿವೃದ್ಧಿ ಸಮಿತಿ ಇರಬಹುದು, ಶಾಲಾ ಅಭಿವೃದ್ಧಿ ಸಮಿತಿ ಇರಬಹುದು ಪ್ರತಿಯೊಂದರಲ್ಲಿಯು ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಿರುತ್ತಾರೆ. ನಮ್ಮ ಇಲಾಖೆಗೆ ಸೀಮಿತವಾಗಿ ಹೇಳುವುದಾದ್ದರೆ, ಇವರನ್ನು ಕರೆಯುವುದು ತಾಲ್ಲೂಕಿನಲ್ಲಿರುವ Executive Officer ಗಳು. ಮಾನ್ಯ ನಾರಾಯಣರವರು ಒಳ್ಳೆಯ ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. ಎಲ್ಲ ಜವಾಬ್ದಾರಿಗಳನ್ನು Panchayat Raj and Rural Development Department ಗೆ ಕೊಟ್ಟು ಅವರ ಮೇಲೆ ನಮಗೆ ಯಾವುದೆ ಕಂಟ್ರೋಲ್ ಇಲ್ಲದಂತಹ ಪರಿಸ್ಥಿತಿಯನ್ನು ತಂದಿದ್ದಾರೆ. ಅದಕ್ಕಾಗಿ ನಾನು ನಮ್ಮದೆ ಆದ ಒಂದು Establishment system ನ್ನು ತರುತ್ತಿದ್ದೇನೆ. ನಾಳೆ ಉತ್ತರ ಹೇಳುವಾಗ ಹೇಳುತ್ತೇನೆ. ಶಾಸಕರ ಅಧ್ಯಕ್ಷತೆಯಲ್ಲಿ ಇರುವ ಸಮಿತಿಗೆ ಹೆಚ್ಚಿನ ಅಧಿಕಾರಿಗಳು ಏನು ಇಲ್ಲ. ಅದು ಜಾಗೃತ ಸಮಿತಿ ಇರಬಹುದು, ಆಶ್ರಯ ಸಮಿತಿ ಇರಬಹುದು. ಇಲ್ಲಿ ಹೆಚ್ಚಿನ ಅಧಿಕಾರ ಏನು ಇಲ್ಲ. ಗ್ರಾಮಸಭೆಯಲ್ಲಿ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

video clipping ಸಮೇತ ಯಾವುದು ಬರುತ್ತದೆ. ಅದರಲ್ಲಿ 'ineligible' ಯಾರಾದರೂ ಸೇರಿಕೊಂಡಿದ್ದಾರೆಯೇ ಎನ್ನುವುದನ್ನು verify ಮಾಡಿ ಅವರನ್ನು ತೆಗೆದು ಹಾಕುವುದನ್ನು ಬಿಟ್ಟರೆ ಬೇರೆ ಯಾವುದೆ ರೀತಿಯ ಅಧಿಕಾರ ಇಲ್ಲ. ಎಲ್ಲಾ ಜಾತಿ ವರ್ಗದವರನ್ನು ಸೇರಿಸಿ ಐದು ಜನ ಸದಸ್ಯರ ಒಂದು ಸಮಿತಿ ಇದೆ. ಸ್ಥಳೀಯರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾರೆ. ಅದಕ್ಕೆ Convenor ರಾಗಿ E.O., ಇರುತ್ತಾರೆ. ಎಲ್ಲಾ ಸಭೆಗಳನ್ನು ಕರೆಯುವುದು ಅವರ ಜವಾಬ್ದಾರಿಯಾಗಿದೆ. ಒಂದೊಂದು ಸಾರಿ ಸರ್ಕಾರ ಎಲ್ಲ ಶಾಸಕರಿಗೆ ಪ್ರತ್ಯೇಕವಾದ ಕಛೇರಿಯನ್ನು ಕೊಟ್ಟಿರುವುದಿಲ್ಲ. ಆಗ ಅವರು ನಮ್ಮ ಮನೆಯನ್ನೆ ಕಛೇರಿಯಾಗಿ ಮಾಡಿಕೊಂಡು ಅಲ್ಲಿ ಸಭೆ ಮಾಡುತ್ತಾರೆ. ಇದರಿಂದ ಶಾಸಕರನ್ನು ಮನೆಗೆ ಕರೆಯುತ್ತಾರೆ ಎನ್ನುವುದು ಸರಿಯಲ್ಲ. ನನಗೂ ಸರ್ಕಾರಿ ಕಛೇರಿ ಕೊಟ್ಟಿರುವುದಿಲ್ಲ. ಆದ್ದರಿಂದ ನನ್ನ ಮನೆಯನ್ನೆ ಹೋಂ ಕಛೇರಿಯಾಗಿ ಮಾಡಿಕೊಂಡಿದ್ದೇನೆ. ಇದರಿಂದ ಕೆಲವರಿಗೆ ಬೇಜಾರು ಆಗಿರಬಹುದು. ಶಾಸಕರನ್ನು ಮನೆಗೆ ಕರೆದರುಆದರೆ ನಮಗೆ ತಿಳಿಸಲಿಲ್ಲ ಎಂದು ಮಾನ್ಯ ಕವಟಗಿಮಠ್‌ರವರು ಹೇಳಿದರು. ಎಲ್ಲರನ್ನು ಕರೆದು ಸಭೆ ಮಾಡುವುದು scrutiny ಮಾಡುವುದು E.O., ಜವಾಬ್ದಾರಿಯಾಗಿದೆ. ಆದ್ದರಿಂದ ಫಸ್ಟ್‌ಗ್ರೇಡ್, ಸೆಕೆಂಡ ಗ್ರೇಡ್‌ಎಂದು ಏನು ಇಲ್ಲ. ನೀವೆ ನಿಯಮಾವಳಿ ಮಾಡಿಕೊಂಡಿರುವ ಹಾಗೆ ವಿಧಾನಸಭೆಯ ಶಾಸಕರು ಅಧ್ಯಕ್ಷರಾಗಿರುತ್ತಾರೆ, ವಿಧಾನ ಪರಿಷತ್ತಿನ ಸದಸ್ಯರು ಯಾವಾಗಲೂ ಉಪಾಧ್ಯಕ್ಷರಾಗಿರುತ್ತಾರೆ. ಇದು ನೀವೆ ಮಾಡಿಕೊಂಡಿರುವ ನಿಯಮಾವಳಿ. ಇದರಲ್ಲಿ ಏನಾದರೂ ಲೋಪ-ದೋಷಗಳಾಗಿದ್ದರೆ ಮುಂದಿನ ದಿನಗಳಲ್ಲಿ ಸರಿಪಡಿಸುತ್ತೇನೆ. ಮಾನ್ಯ ಈಶ್ವರಪ್ಪನವರ ಗಮನಕ್ಕೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ, ಇದೇನು ಸರ್ಕಾರದ ಉತ್ತರವಲ್ಲ ಅವರ ಮಾಹಿತಿಗಾಗಿ ಹೇಳುತ್ತೇನೆ. ಈ ವರ್ಷ ಜನವರಿಯವರೆಗೆ 15ಲಕ್ಷ ಮನೆಗಳನ್ನು ಕಟ್ಟುವ ಗುರಿ ಇತ್ತು. ಅದರಲ್ಲಿ 11ಲಕ್ಷ ಮನೆಗಳನ್ನು ಕಟ್ಟಿದ್ದೇವೆ. ಉಳಿದ 5ಲಕ್ಷ ಮನೆಗಳನ್ನು ಮಾರ್ಚ್ ಅಂತ್ಯದಲ್ಲಿ ಕಟ್ಟಿ ಮುಗಿಸುತ್ತೇವೆ. ಇದರಲ್ಲಿ ಕೆಲವು ಅಡೆ-ತಡೆಗಳಿಂದ ನಿಧಾನವಾಗಿದೆ. ಇದು ವಿರೋಧ ಪಕ್ಷದ ನಾಯಕರಿಗೆ ಗೊತ್ತಿದೆ. ಇದಕ್ಕೆಲ್ಲ ಕಾರಣ, ನಮ್ಮದೇ ಆದ Establishment ಇಲ್ಲದೆ ಇರುವುದು. ಈ ಇಲಾಖೆಗೆ 4000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಕೇವಲ 400 ಜನ ಸಿಬ್ಬಂದಿ ಇಲ್ಲ. ಕೇವಲ 30 ಜನ ಸಿಬ್ಬಂದಿಗಳಿಂದ ಎಲ್ಲ ಕೆಲಸವನ್ನು ಮಾಡಬೇಕಾಗಿದೆ. ಆದ್ದರಿಂದ ನಮ್ಮದೆ ಆದ Establishment ಮಾಡಲಾಗುತ್ತದೆ. ಇದು ತಪ್ಪಾಗಿದೆ ಮುಂದಿನ ದಿನಗಳಲ್ಲಿ ಅದನ್ನು ಸರಿ ಮಾಡಿಕೊಂಡು ಬೇರೆ ಎಲ್ಲರಿಗಿಂತ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಗಳೆ, ಕಾಕತಾಳೀಯ ಎನ್ನುವ ರೀತಿಯಲ್ಲಿ ಸಭಾನಾಯಕರು ಕೆಳಮನೆ ಸದಸ್ಯರಾಗಿದ್ದರು ಈಗ ಮೇಲ್ಮನೆಗೆ ಬಂದಿದ್ದಾರೆ. ವಸತಿ ಸಚಿವರು ಈ ಮನೆಯ ಸದಸ್ಯರಾಗಿದ್ದರು, ಈಗ ಕೆಳಮನೆ ಸದಸ್ಯರಾಗಿದ್ದಾರೆ. ಅದೇ ರೀತಿ ಪಂಚಾಯತ್ ರಾಜ್ ಸಚಿವರು ಈ ಮನೆಯ ಸದಸ್ಯರಾಗಿದ್ದರು, ಈಗ ಕೆಳಮನೆ ಸದಸ್ಯರಾಗಿದ್ದಾರೆ. ನನ್ನ ಸ್ನೇಹಿತರಾದ ಕೃಷ್ಣಪ್ಪನವರು ಪಂಚಾಯತ್ ರಾಜ್ ಇಲಾಖೆಯವರು ನಮ್ಮ ಮಾತು ಕೇಳುತ್ತಿಲ್ಲ ಎಂದು ಹೇಳಿದರು. Here is a collective responsibility. ಇದು ಮೊದಲನೆಯದು. ಬಹುಷಃ collective ಆಗಿ ತೀರ್ಮಾನ ತೆಗೆದುಕೊಳ್ಳುವ ರೀತಿಯಲ್ಲಿ ಸರ್ಕಾರ ಜನಪರವಾದ ಕಾರ್ಯಕ್ರಮಗಳನ್ನು ಯಥಾವತ್ತಾಗಿ ಜಾರಿಗೆ ತರುವಂತಹ ಸಂದರ್ಭದಲ್ಲಿ ಯಾವುದೆ ಇಲಾಖೆಯಲ್ಲಿ ಅಡಚಣೆ ಬಂದರೆ ಅದನ್ನು ನಿವಾರಣೆ ಮಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಎರಡನೆಯದಾಗಿ, ಮನೆ ಯಾವತ್ತು official office ಆಗಲು ಸಾಧ್ಯವಿಲ್ಲ. It should be recognised as a Government Office. ಸರ್ಕಾರದ ಯಾವುದೆ ವಿಚಾರವನ್ನು ಮನೆಗೆ ತರಿಸಿ ನಾನು ಸಹ ಮಾಡಬಾರದು, ಯಾರು ಮಾಡಬಾರದು. ಮಂತ್ರಿಯಾಗಿದ್ದವರಿಗೆ ಹೋಂ ಕಛೇರಿ ಇರುತ್ತದೆ ಅದು ಬೇರೆ ವಿಚಾರ. ಆದರೆ ಶಾಸಕರಾದವರು, ಸಂಸತ್ ಸದಸ್ಯರಾಗಿರುವವರು ನಮ್ಮ ಮನೆಯ ಕಛೇರಿ ಇನ್ನೊಬ್ಬ ಶಾಸಕರು ಅಲ್ಲಿಗೆ ಬರಬೇಕು ಎನ್ನುವ attitude ಗೆ ತಿಲಾಂಜಲಿ ಅರ್ಪಿಸಬೇಕಾಗುತ್ತದೆ. ನಾವು ಅವರಿಗೆ ಹೇಳಬೇಕು, ಸರ್ಕಾರ ಕಛೇರಿ ಕೊಟ್ಟಿಲ್ಲ ಎಂದರೆ, ತಾಲ್ಲೂಕು ಕಚೇರಿ ಇರುತ್ತದೆ, ಡಿಸಿ ಕಛೇರಿ, ತಹಸೀಲ್ದಾರ ಕಛೇರಿ ಇರುತ್ತದೆ. ಅಲ್ಲಿ ಸಭೆ ನಡೆಸಬೇಕಾಗುತ್ತದೆ. ಇಷ್ಟು ನಡೆದುಕೊಂಡು ಬಂದಿದೆ. ಆದರೆ ಮಾನ್ಯಕೃಷ್ಣಪ್ಪನವರುಅವಧಿಯಲ್ಲಾದರೂಅದಕ್ಕೆ ಇತಿಶ್ರೀ ಹೇಳಬೇಕು. ಅದಕ್ಕೆ ನಿಯಮಾವಳಿಗಳನ್ನು ರಚಿಸುವಂತಹ ಕೆಲಸವನ್ನು ಮಾಡಬೇಕು. ಆಗ ಮೇಲ್ಮನೆಗೂ ಹಾಗೂ ಕೆಳ ಮನೆಗೂ ಗೌರವ ಬರುತ್ತದೆ. ಜನ ಸಾಮಾನ್ಯರ ಕೆಲಸಗಳನ್ನು ಅತ್ಯಂತ ಉತ್ತಮ ರೀತಿಯಲ್ಲಿ ಮಾಡಲು ಸಾಧ್ಯತೆ ಇದೆ. ಆ ದಿಕ್ಕಿನಲ್ಲಿ ಬದಲಾವಣೆ ಮಾಡಲು ಸರ್ಕಾರ ಮುಂದಾಗಬೇಕೆಂದು ಆಶಿಸುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಗಳೆ, ಎಲ್ಲ ಶಾಸಕರಿಗೂ ಸ್ಥಳೀಯವಾಗಿ ಸರ್ಕಾರಿ ಕಛೇರಿ ಕೊಟ್ಟಿರುತ್ತಾರೆ. ಅಲ್ಲಿಯೇ ಸಭೆಯನ್ನು ಕರೆಯುವಂತೆ ಸಂಬಂಧಪಟ್ಟವರಿಗೆ ಸೂಚನೆಯನ್ನು ಖಂಡಿತವಾಗಿ ನಾನು ಕೊಡುತ್ತೇನೆ. ಇದರ ಜೊತೆಯಲ್ಲಿ ಜಾಗೃತ ಸಮಿತಿ, ಆಶ್ರಯ ಸಮಿತಿ ಎಂದು ಏನು ಇದೆ, ಇದರಲ್ಲಿ ಯಾರ್‍ಯಾರು ಅರ್ಜಿಯನ್ನು ಕೊಟ್ಟಿದ್ದಾರೆ ಅವರಿಗೆಲ್ಲರಿಗೂ ಮಾಡಿಕೊಟ್ಟಿದ್ದೇನೆ. 5 ಜನರ ಸಮಿತಿ

"ತಿದ್ದುಪಡಿಯಾಗದ ಪ್ರತಿ/ ಉಪಯೋಗಿಸಕೂಡದು ಅಥವಾ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಮಾಡಿ ಅಧ್ಯಕ್ಷರನ್ನು ಮಾಡಿ ಎಲ್ಲಾ ಆದೇಶಗಳನ್ನು ಹೊರಡಿಸಿದ್ದೇವೆ. ತಾವು ಹೇಳುತ್ತಿರುವವರು ಅರ್ಜಿ ಕೊಟ್ಟಿಲ್ಲ ಎಂದು ಕಾಣುತ್ತದೆ. ಅವರು ಅರ್ಜಿಕೊಟ್ಟಿದ್ದರ 'ಖಂಡಿತವಾಗಿ ಮಾಡಿಕೊಡುತ್ತೇನೆ. ಯಾರು ಅರ್ಜಿ ಕೊಟ್ಟಿದ್ದಾರೆ ಅವರಿಗೆ ತಕ್ಷಣ ಒಂದೇ ದಿನದಲ್ಲಿ ಮಾಡಿಕೊಟ್ಟಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಮಂತ್ರಿಗಳು ಹೇಳಿರುವುದು ನನಗೆ ಅರ್ಥವಾಗಲಿಲ್ಲ.

**ಶ್ರೀ ಎಂ.ಕೃಷ್ಣಪ್ಪ:-** ಸಮಿತಿ full form ಆಗಬೇಕು. ಇಲ್ಲದಿದ್ದರೆ ಮೇಲ್ಮನೆ, ಕೆಳಮನೆ ಶಾಸಕರು ಮತ್ತು ಅಧಿಕಾರಿಗಳು ಮಾತ್ರ ಇರುತ್ತಾರೆ. ಅದಕ್ಕೆ private persons, ಅಂದರೆ ಎಲ್ಲಾ ವರ್ಗದ ನಾಗರೀಕರು ಇರಬೇಕು ಎಂದು ಮಾಡಿದ್ದೇವೆ. ಯಾರ್‍ಯಾರು ಅರ್ಜಿ ಕೊಟ್ಟಿದ್ದಾರೆ ಅವೆಲ್ಲ ಮಾಡಿಕೊಟ್ಟಿದ್ದೆನೆ.

**ಉಪಸಭಾಪತಿಯವರು:-** ಮಾನ್ಯ ಸಚಿವರೆ, ಯಾವುದೆ ಅಭಿವೃದ್ಧಿಗೆ ಸಂಬಂಧಪಟ್ಟಂತಹ ವಿಚಾರದಲ್ಲಿ ಯಾವುದೆ ಸಂದರ್ಭದಲ್ಲಿಯು ಶಾಸಕರ ಮನೆಯಲ್ಲಿ ಅಥವಾ ಶಾಸಕರ ಕಛೇರಿಯಲ್ಲಿ ಸಭೆ ನಡೆಸಬಾರದು. E.O., ಕಛೇರಿ ಇರುತ್ತದೆ, ತಹಶೀಲ್ದಾರ್ ಕಛೇರಿ ಇರುತ್ತದೆ, ಅಧಿಕೃತವಾದ ಕಛೇರಿಯಲ್ಲಿಯೇ ನಡೆಸಬೇಕೆಂದು ದಯಮಾಡಿ ಕಟ್ಟುನಿಟ್ಟಿನ ಆದೇಶವನ್ನು ಹೊರಡಿಸಿ.

**ಶ್ರೀ ಎಂ.ಕೃಷ್ಣಪ್ಪ:-** ಅದನ್ನು ಪರಿಶೀಲಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ( ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಈ ವರ್ಷದ ಬಜೆಟ್‌ನಲ್ಲಿ ರಾಜೀವ್ ಆವಾಸ್ ಯೋಜನೆಯಲ್ಲಿ 550 ಕೋಟಿ ರೂ.ಗಳ ವೆಚ್ಚದಲ್ಲಿ 22,133 ವಸತಿ ಗೃಹಗಳ ನಿರ್ಮಾಣವನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಎಲ್ಲರಿಗೂ ಸೂರು ಅಭಿಯಾನದಡಿ 2,612 ಕೋಟಿ ರೂ.ಗಳ ವೆಚ್ಚದಲ್ಲಿ 60,000 ಮನೆಗಳ ನಿರ್ಮಾಣವನ್ನು ಸ್ಥಳೀಯ ಸಂಸ್ಥೆಗಳ ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುವುದು. ಈ ರೀತಿ ಸಾಕಷ್ಟು ಯೋಜನೆಗಳು ಇರುವಂತಹ ಸಂದರ್ಭದಲ್ಲಿ ಈ ಎರಡು ತಮಗೆ ಗೊತ್ತಿರುವ ಹಾಗೆ ನಗರಪ್ರದೇಶದಲ್ಲಿ ನಡೆಯುವಂತಹ ವ್ಯವಸ್ಥೆಗಳು.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**(245) YL-MD/16.03.2017/4.30**

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು):–**

ನಗರ ಪ್ರದೇಶಗಳಲ್ಲಿ ಹನ್ನೊಂದು ಲಕ್ಷ ಮನೆಯನ್ನು ಕೊಟ್ಟಿದ್ದೇವೆಂದು ಮಾನ್ಯ ವಸತಿ ಸಚಿವರು ಹೇಳುತ್ತಿದ್ದಾರೆ. ಸರ್ಕಾರ ಕೊಟ್ಟಿರತಕ್ಕಂಥ ಮನೆಗಳು ನಗರ ಪ್ರದೇಶಕ್ಕೋ? ಅಥವಾ ಗ್ರಾಮೀಣ ಪ್ರದೇಶಕ್ಕೋ? ಏಕೆಂದರೆ ನಮ್ಮ ಭಾಗದಲ್ಲಿ ಒಂದೇ ಒಂದು ಮನೆಯೂ ಆಗಿಲ್ಲ. ಆದರೆ, ಹನ್ನೊಂದು ಲಕ್ಷ ಕೊಟ್ಟಿದ್ದೇವೆಂದು ಏನು ವಸತಿ ಸಚಿವರು ಹೇಳುತ್ತಿದ್ದಾರೆ. ಅದನ್ನು ನಾನು ಕಣ್ಣಿನಿಂದಲಾದರೂ ಒಂದು ಸಲ ನೋಡಬೇಕು.

**ಶ್ರೀ ಎಂ.ಕೃಷ್ಣಪ್ಪ (ವಸತಿ ಸಚಿವರು):–** ಮಾನ್ಯ ಸಭಾಪತಿಯವರೆ, ರಾಜೀವ್‌ಗಾಂಧಿ ವಸತಿಯೋಜನೆ ಮುಖಾಂತರ ಒಂದು ಮನೆಯೂ ಆಗಿಲ್ಲ. ಈ ವರ್ಷದಿಂದ ಎಲ್ಲ ಕಡೆಯೂ ಮಾಡುತ್ತೇವೆ.

**ಶ್ರೀ ರಾಮಚಂದ್ರಗೌಡ (ಪದವೀಧರರಕ್ಷೇತ್ರ):–** ಮಾನ್ಯ ಸಭಾಪತಿಯವರೆ, ವಸತಿ ಇಲಾಖೆಯಿಂದ ಮನೆಗಳನ್ನು ಕಟ್ಟುವುದು ಬೇರೆ, ಬಿಡಿಎಯವರು ಮನೆಗಳನ್ನು ಕಟ್ಟುವುದೇ ಬೇರೆಯೇ?

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಬಿಡಿಎಯವರು ಮನೆಗಳನ್ನು ಕಟ್ಟುವುದೇ ಬೇರೆ, ವಸತಿಇಲಾಖೆಯವರು ಮನೆಗಳನ್ನು ಕಟ್ಟುವುದೇ ಬೇರೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಅದಕ್ಕೆ ನಾನು ಹೇಳುತ್ತಿರುವುದು ವಸತಿಇಲಾಖೆಯಿಂದ ಒಂದು ಆಶ್ರಯ ಮನೆಯೂ ಆಗಿಲ್ಲ. ಆದರೆ ಸಮಿತಿಗಳಿವೆ. ಆ ಸಮಿತಿಗಳು ಲೆಕ್ಕಕ್ಕಿದೆ. ಮಾನ್ಯ ಸಚಿವರೆ ಆಶ್ರಯ ಸಮಿತಿ, ಜಾಗೃತಿ ಸಮಿತಿ ಇದೆ ಎಂದು ಹೇಳಿದ್ದಾರೆ. ಯಾವ ಸಮಿತಿಯ ಮೇಲೆಯೂ ಯಾರಿಗೂ ಹಿಡಿತವಿಲ್ಲ. ಇದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗುತ್ತಿರುವಂತಹ ಅಂಶ. ಆ ಪಕ್ಷ, ಈ ಪಕ್ಷವೆಂದು ಚರ್ಚೆಯಾಗುತ್ತಿಲ್ಲ. ನಾನು, ಮಾನ್ಯ ಭಾನುಪ್ರಕಾಶ್, ಮಾನ್ಯ ಪ್ರಸನ್ನಕುಮಾರ್ 3 ಜನ ಶಿವಮೊಗ್ಗ ನಗರದಲ್ಲಿ ಎಂಎಲ್‌ಸಿ ಗಳಾಗಿದ್ದೇವೆ. ಅವರು ಆಶ್ರಯ ಸಮಿತಿಯ ಉಪಾಧ್ಯಕ್ಷರೆಂದು ನಮ್ಮ 3 ಜನಕ್ಕೂ ನನಗೆ ತಿಳಿದ ಮಟ್ಟಿಗೆ ಇಲ್ಲಿಯವರೆಗೂ ಒಂದು ಪತ್ರವೂ ಬಂದಿಲ್ಲ ಅಥವಾ ಸಭೆಯನ್ನು ಮಾಡುತ್ತಿದ್ದೇವೆಂದು ಸಹ ಪತ್ರ ಬಂದಿಲ್ಲ. ಬೇರೆ ಯಾರಿಗೆ ಬಂದಿದೆಯೋ ಗೊತ್ತಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಯಾರಿಗೂ ಪತ್ರ ಬಂದಿಲ್ಲವೆಂದು ಹೇಳಿದರು)**

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ನಾನು ಒಬ್ಬ ಶಾಸಕನಾಗಿ 9 ವರ್ಷದಿಂದ ನೋಡುತ್ತಿದ್ದೇನೆ. ನನಗೂ ಒಂದು ಪತ್ರವೂ ಬಂದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮತ್ತೆ ಆಶ್ರಯ ಸಮಿತಿ ಏಕೆ ಇರಬೇಕು. ಬಹಳ ಪ್ರಮಾಣಿಕ ಮಂತ್ರಿಯಾರೆಂದರೆ ಶ್ರೀ ಎಂ.ಕೃಷ್ಣಪ್ಪನವರು ತುಂಬಾ ಪ್ರಮಾಣಿಕವಾಗಿ ಹೇಳುತ್ತಿದ್ದಾರೆ ದಯವಿಟ್ಟು ಅವರಿಗೆ ಒಂದು ಪ್ರಮಾಣಪತ್ರವನ್ನು ಕೊಡಿ. ಅವರು ಹೇಳುತ್ತಿರುವುದು ಸರಿ ಇದೆ. ಮಾನ್ಯ ಉಗ್ರಪ್ಪನವರು ಪ್ರಸ್ತಾಪ ಮಾಡಿದ್ದರು. ನಾನು ಕೂಡ ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ಉದ್ದೇಶ ಬಡವರಿಗೆ ವಸತಿ ಕಲ್ಪಿಸಬೇಕು. ಪ್ರಮಾಣಿಕವಾಗಿ ಬಡವರಿಗೆ ವಸತಿ ಸಿಗಬೇಕೆನ್ನುವ ಉದ್ದೇಶ ಬಿಟ್ಟರೆ, ಇಲ್ಲಿ ರಾಜಕಾರಣ ಬರುವುದಿಲ್ಲ. ಈಗಲೂ ಸಹ ನೀವು ತೀರ್ಮಾನ ಮಾಡಿ. ಎಂಎಲ್ಎ ಗಳನ್ನು ಆಶ್ರಯ ಸಮಿತಿಯ ಅಧ್ಯಕ್ಷರನಾಗಿ ಮಾಡಿದ್ದೀರಿ. ನೀವು ಷರತ್ತುಗಳನ್ನು ಹಾಕಿ.ಎರಡು ತಿಂಗಳಾದರೂ ಒಂದು ಸಭೆಯಾಗಲಿಲ್ಲವೆಂದರೆ ಆಶ್ರಯ ಸಮಿತಿ ಹೆಸರು ಹೇಳಿಕೊಂಡು ಬೆಂಕಿ ಹಾಕುತ್ತಾರೆಯೇ?

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ವಸತಿ ಸಚಿವರು ಮಂತ್ರಿಗಳಾಗಿದ್ದಾರೆ. ಅವರು ಅಧ್ಯಕ್ಷರಾಗಿರುತ್ತಾರೆಯೇ? ಮಂತ್ರಿಗಳು ಅವರ ಕ್ಷೇತ್ರದಿಂದ ಅವರೆ ಅಧ್ಯಕ್ಷರಾಗಿರುತ್ತಾರೆಯೇ?

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಶಾಸಕರು ಆಗಬಹುದು ಅಥವಾ ಶಾಸಕರು ಯಾರನ್ನಾದರೂ ನಾಮನಿರ್ದೇಶನ ಮಾಡಿದರೆ ಅವರು ಅಧ್ಯಕ್ಷರಾಗಬಹುದು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಶಾಸಕರು ಯಾರು ನಾಮನಿರ್ದೇಶನ ಮಾಡುತ್ತಾರೆಯೋ ಅವರೆ ಅಧ್ಯಕ್ಷರಾಗಬಹುದೇ?

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಹೌದು.

**ಕ್ಯಾಪ್ಟನ್‌ಗಣೇಶ್‌ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಶಾಸಕರುಯಾರು ನಾಮನಿರ್ದೇಶನ ಮಾಡುತ್ತಾರೆಯೋ ಅವರೇ ಅಧ್ಯಕ್ಷರಾಗಬಹುದೆಂದರೆ ಅದೇ ಸಮಿತಿಯಲ್ಲಿ ಮೇಲ್ಮನೆ ಸದಸ್ಯರು ಉಪಾಧ್ಯಕ್ಷರಾಗಿರುತ್ತಾರೆ. ಶಾಸಕರು ಹೋಗಿ ಯಾರನೋ ನಾಮನಿರ್ದೇಶನ ಮಾಡಿ ಅಧ್ಯಕ್ಷರನಾಗಿ ಮಾಡಿದರೆ ನಾವು ಏತಕ್ಕೆ ಹೋಗಿ ಕುಳಿತುಕೊಳ್ಳಬೇಕು. ಇದು ಹೇಗಾಗುತ್ತದೆ?

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಎಂ.ಕೃಷ್ಣಪ್ಪ:–** ಇರಲಿ ಬಿಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಇರಲಿ ಬಿಡಿ ಎಂದು ಹೇಳುವುದಲ್ಲ. ದಯವಿಟ್ಟು ಆ ಪದ್ಧತಿಯನ್ನು ಬದಲಾವಣೆ ಮಾಡಲಿ.

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಅದು ನಾನು ಮಾಡಿರುವ ಪದ್ಧತಿಯಲ್ಲ. ಮೊದಲಿನಿಂದಲೂ ನಡೆದುಕೊಂಡು ಬಂದಿರುವಂಥದ್ದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಯಾರನೋ ನಾಮನಿರ್ದೇಶನ ಮಾಡಿದರೆ ನಾವು ಅಲ್ಲಿ ಹೋಗಿ ಕುಳಿತುಕೊಳ್ಳಬೇಕೇ?

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಅವರು ಯಾರನ್ನು ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಿರುತ್ತಾರೆಯೋ ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಿ ಕೂರಿಸಬೇಕು. It is an insult to us. How can we sit there? ಎಂಎಲ್‌ಸಿ ಆಗದವರನ್ನು ಅಧ್ಯಕ್ಷರಾಗಿರುವಾಗ ಎಂಎಲ್‌ಸಿ ಆಗಿರುವವರನ್ನು ಉಪಾಧ್ಯಕ್ಷರನ್ನಾಗಿ ಮಾಡಿದರೆ ಹೇಗಾಗುತ್ತದೆ? ಉದಾಹರಣೆಗೆ ನೀವು ಉಪ ಸಭಾಪತಿಗಳಾಗಿ ಸದನದಲ್ಲಿ ಹಾಜರಿರುವಾಗ ನಮ್ಮನ್ನು ಸಭಾ ಪೀಠದಲ್ಲಿ ಕೂರಿಸುವುದಕ್ಕಾಗುತ್ತದೆಯೇ? ಈಗ ನಮ್ಮ ಮೂರು ಜನರನ್ನು ನಾಮನಿರ್ದೇಶನ ಮಾಡಿರುತ್ತಾರೆಯೇ, ಪ್ರತಿಯೊಂದು ಅಧಿವೇಶನದಲ್ಲಿ ಮೂರು ಜನರನ್ನು ಅಧ್ಯಕ್ಷರು ನಾಮನಿರ್ದೇಶನ ಮಾಡುತ್ತಾರೆ. ಅಧ್ಯಕ್ಷರು ಇರಲಿಲ್ಲ. ಉಪಾಸಭಾಪತಿಗಳಾದ ನೀವು ಸಹ ತಮಗೆ ಮೀಸಲಾಗಿರುವ ಸ್ಥಾನದಲ್ಲಿ ಕುಳಿತಿರುವಾಗ ಶ್ರೀ ಪ್ರತಾಪಚಂದ್ರಶೆಟ್ಟಿಯವರನ್ನು ಸಭಾಪತಿಯವರ ಸ್ಥಾನದಲಿ ಕೂರಿಸುವುದಕ್ಕಾಗುತ್ತದೆಯೇ? ಹೇಗೆ ಮಾಡುತ್ತಾರೆ? ಸಭಾಪತಿಯವರು ಇಲ್ಲದಂತಹ ಸಂದರ್ಭದಲ್ಲಿ ಉಪ ಸಭಾಪತಿಯವರು ಆ ಸ್ಥಾನದಲ್ಲಿ ಕುಳಿತುಕೊಂಡಿರುತ್ತಾರೆ.

**ಉಪ ಸಭಾಪತಿಯವರು:–** ಶ್ರೀ ಕೆ.ಬಿ.ಶಾಣಪ್ಪನವರೆ, ಇದುವರೆವಿಗೂ ಈ ರಾಜ್ಯದಲ್ಲಿ ಶಾಸಕರಿಗೆ ಯಾರಿಗಾದರೂ ಆ ಜವಾಬ್ದಾರಿಯನ್ನು ಕೊಟ್ಟಿರುವುದು ಉದಾಹರಣೆ ಇದೆಯೇ?

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಕೊಟ್ಟಿಲ್ಲ.

**ಉಪ ಸಭಾಪತಿಯವರು:–** ಮತ್ತೆ ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಅದಕ್ಕಾಗಿಯೇ ನಾನು ಹೇಳುತ್ತಿರುವುದು ಕೆಳಮನೆಯಲ್ಲಿಯೂ ಆ ರೀತಿಯಾಗಬಾರದೆಂದು.

**ಉಪ ಸಭಾಪತಿಯವರು:–** ಆ ರೀತಿ ಆಗುವುದಿಲ್ಲ. ಕುಳಿತುಕೊಳ್ಳಿ. ಮಾನ್ಯ ರಾಮಚಂದ್ರೇಗೌಡರೆ, ದಯವಿಟ್ಟು ತಾವು ಕುಳಿತುಕೊಳ್ಳಿ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ನಾನು ಒಂದು ಸಲಹೆಯನ್ನು ಕೊಡುತ್ತೇನೆ.

**ಉಪ ಸಭಾಪತಿಯವರು:–** ನೀವು ಸಲಹೆಯನ್ನು ಈಗ ಕೊಡುವುದು ಬೇಡ. ಕೊನೆಯಲ್ಲಿ ಕೊಡಿ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಈ ಸಮಸ್ಯೆಯನ್ನು ಬಗೆಹರಿಸೋಣ.

**ಉಪ ಸಭಾಪತಿಯವರು:–** ನೀವು ಈ ರೀತಿ ಮಾಡಿದರೆ ಹೇಗೆ?

**(ಗೊಂದಲ)**

**ಉಪ ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೆ, ಈ ರೀತಿ ಮಾತನಾಡಿದರೆ ಹೇಗೆ?

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಪೀಠಾಧಿಪತಿಗಳು, ಮುಖ್ಯ ಸಚೇತಕರು ಅಧ್ಯಕ್ಷರಾಗುವುದಿಲ್ಲ. ಅವರೇನು ಮಾಡಬಹುದೆಂದರೆ, ಎಂಎಲ್‌ಸಿ ಗಳಾಗಲಿ, ಲೋಕಸಭಾ ಸದಸ್ಯರಾಗಲಿ, ರಾಜ್ಯಸಭಾ ಸದಸ್ಯರಾಗಲಿ, ಸರ್ಕಾರನೇ ಮಾಡಿಕೊಳ್ಳಬೇಕಾಗುತ್ತದೆ. ಎಂಎಲ್‌ಎ ಗಳು ಯಾರನ್ನು ಹೇಳುತ್ತಾರೆಯೋ ಅವರನ್ನು ಮಾಡುವುದು ಬೇಡ. ಸಚಿವರಿಗೆ ಅರ್ಥವಾಗಿದೆ ಎಂದು ಭಾವಿಸುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಆಗಲಿ, ಈಗ ಎಂಎಲ್‌ಎ ಗಳು ಯಾರನ್ನು ಹೇಳುತ್ತಾರೆಯೋ ಅವರನ್ನು ಮಾಡಿದರೆತಪ್ಪಾಗುತ್ತದೆ. ನಾವು ಮಂತ್ರಿಗಳಾದಾಗ ಬೇರೆಯವರನ್ನು ನಾಮನಿರ್ದೇಶನ ಮಾಡುವ ಬದಲು ಇರತಕ್ಕಂಥ . . .

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಸಚಿವರು ಮಾಡುವಾಗ ಮಂತ್ರಿಗಳು, ಪೀಠಾಧಿಪತಿಗಳು, ಮುಖ್ಯ ಸಚೇತಕರು, ಈ ರೀತಿಯ positions ನಲ್ಲಿ ಯಾರು ಇದ್ದಾರೆ,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಅವರುಗಳು ತಮ್ಮತಮ್ಮ ಕ್ಷೇತ್ರಗಳಲ್ಲಿ ಮಾಡುವಾಗ ವಿಧಾನ ಪರಿಷತ್ತಿನ ಸದಸ್ಯರು, ಲೋಕಸಭಾ ಸದಸ್ಯರು ಅಥವಾ ರಾಜ್ಯ ಸಭಾ ಸದಸ್ಯರನ್ನು ಮಾಡಿದರೆ ಅನುಕೂಲವಾಗುತ್ತದೆಂದು ನನ್ನಗನಿಸುತ್ತದೆ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಆ ಪ್ರಕಾರವೇ ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮನೆಗಳನ್ನು ಕಟ್ಟಬೇಕು. 7 ಲಕ್ಷದಷ್ಟು ಮನೆಗಳು ಅಲ್ಲಿದೆ. ಅದಲ್ಲದೇ SC-ST, SCP & TSP (Scheduled Caste Sub Plan and Tribal Sub Plan) ನಲ್ಲಿ ಸಾಕಷ್ಟು ಬೇರೆ ಬರುತ್ತದೆ. ಆದಾದ ನಂತರ ಈಗ ರಾಜೀವ್ ಅವಾಜ್ ಯೋಜನೆ ಇರಬಹುದು. ಅದೇ ರೀತಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ಯೋಜನೆ ಇರಬಹುದು. ಈ ಯೋಜನೆಗಳಲ್ಲಿ ಸಾಕಷ್ಟು ಮನೆಗಳು ಬರುತ್ತದೆ. ಇವೆಲ್ಲವೂ ಕೂಡ ಆಶ್ರಯ ಸಮಿತಿಯವರು, ಜಾಗ್ರತಾ ಸಮಿತಿಯವರ ಮುಖಾಂತರವೇ ಆಗಬೇಕು. ಸಭೆಯೇ ಆಗಲಿಲ್ಲವೆಂದರೆ ಏನು ಮಾಡುತ್ತೀರಿ. ಒಂದು ಸಭೆಯೂ ಆಗಲಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿರುವುದು ಯಾರ ಮೇಲೆ ಆಪಾದನೆ ಮಾಡುವುದಕ್ಕೆ ಹೋಗುತ್ತಿಲ್ಲ. ಕನಿಷ್ಠ ಎರಡು ತಿಂಗಳಿಗೊಮ್ಮೆಯಾದರೂ ಕಡ್ಡಾಯವಾಗಿ ಸಭೆ ನಡೆಸಬೇಕೆಂದು ಒಂದು ಕಾನೂನು ತರಬಹುದೇ? ಸಾಧ್ಯವಾದರೆ ದಯವಿಟ್ಟು ಈ ರೀತಿ ಕಾನೂನನ್ನು ಮಾಡಿ. ಎರಡನೆಯದಾಗಿ, ವಿಧಾನ ಪರಿಷತ್ತಿನ ಸದಸ್ಯರನ್ನು ದಯವಿಟ್ಟು ಉಪಾಧ್ಯಕ್ಷರನ್ನಾಗಿ ಮಾಡಿ. ನನ್ನವರೆಗೂ ಇದು ಬಂದಿಲ್ಲ. ಅದಕ್ಕಾಗಿಯೇ ನಾನು ಹೇಳುತ್ತಿರುವುದು. ಬೇರೆಯಾವ ಸದಸ್ಯರುಗಳಿಗೂ ಸಹ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಉಪಾಧ್ಯಕ್ಷರೆಂದು ಅನೇಕರು ತಿಳಿದಿದ್ದಾರೆ. ಅದೇ ರೀತಿ ಸರ್ಕಾರವು ಭಾವಿಸಿದೆ. ಉಪಾಧ್ಯಕ್ಷರೆಂದು ಎಲ್ಲಿಯೂ ಬಂದಿಲ್ಲ. ಅದೊಂದು ಸ್ಥಾನಮಾನ ಎನ್ನುವುದಕ್ಕಿಂತಲೂ ಇಷ್ಟೊಂದು ಮನೆಗಳನ್ನು ಸಚಿವರು ಕಟ್ಟಬೇಕೆಂದು ಯೋಚನೆಯನ್ನು ಇಟ್ಟುಕೊಂಡಿದ್ದಾರೆ, ಅದು ಎಷ್ಟರಮಟ್ಟಿಗೆ ಸಾಧನೆಯಾಗುತ್ತದೆಯೋ ಅಥವಾ ಬಿಡುತ್ತದೆಯೋ ಅದು ಆಮೇಲೆ ಬರುತ್ತದೆ. ಈ ಯೋಚನೆಯನ್ನಿಟ್ಟುಕೊಂಡಂತಹ ಸಂದರ್ಭದಲ್ಲಿ ಆ beneficiaries ನ್ನು select ಮಾಡುವುದಕ್ಕೆ ಮನೆ ಕಟ್ಟುವುದಕ್ಕೆ supervise ಮಾಡುವುದಕ್ಕೆ ಕಮಿಟಿ ಏನು ಮಾಡಿದ್ದಾರೆ. ಅದಕ್ಕಾಗಿ ಕಡ್ಡಾಯವಾಗಿ ದಯವಿಟ್ಟು 2 ತಿಂಗಳಿಗೊಮ್ಮೆ ಸಭೆ ಮಾಡುವಂತೆ ಮಾಡಿ. ಒಂದು ವೇಳೆ ಎಂಎಲ್ಎ ಗಳು ಸಭೆಗೆ ಕರೆಯಲಿಲ್ಲವೆಂದರೆ, ಅಧಿಕಾರಿಗಳು ಸಭೆ ಕರೆಯಬೇಕೆಂದು ತಿಳಿಸಿ. ಆ ಅಧಿಕಾರಿಗಳು ಸಹ ಸಭೆಗೆ ಕರೆಯಲಿಲ್ಲವೆಂದರೆ ಅವರನ್ನು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಅಮಾನತ್ತಿನಲ್ಲಿರಿಸಿ. ಇಲ್ಲವೆಂದರೆ ಹೇಳುವವರು, ಕೇಳುವವರು ಯಾರು ಇಲ್ಲದಂತಾಗುತ್ತದೆ. ಸಭೆಯನ್ನು ಮಾಡಲೇಬೇಕೆಂದು ಮಾಡಿ.

**ಶ್ರೀ ಎ.ಮಂಜು (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೆ, ಪಾಪ ಮಾಜಿ ಮಂತ್ರಿಗಳು ಹೇಳುತ್ತಿದ್ದಾರೆ. ನಾವು ಶಾಸಕರು ಅವರು ಕೂಡ ಶಾಸಕರಾಗಿದ್ದವರು. ಶಾಸಕರುಗಳಿಗೆ ಮನೆ ಹಂಚುವ ಅಧಿಕಾರವಿಲ್ಲ ಹಾಗೂ ಪಂಚಾಯಿತಿಯವರಿಗೂ ಈ ಅಧಿಕಾರವಿಲ್ಲ. ಮನೆ ಹಂಚುವ ಅಧಿಕಾರ ಇರತಕ್ಕಂಥದ್ದು ಕೇವಲ ಗ್ರಾಮ ಸಭೆಗೆ ಮಾತ್ರ. ಗ್ರಾಮ ಸಭೆಯವರು ಮಾಡಿದಂತಹ ಕೆಲಸವನ್ನು ಸರಿ, ತಪ್ಪು, ಎನ್ನುವ ವಿಚಾರವನ್ನು ಹೇಳುವುದಕ್ಕೆ ಮಾತ್ರ ಸಮಿತಿಗೆ ಅಧಿಕಾರ ವಿದೆ ಎನ್ನುವುದನ್ನು ಹೇಳುವುದನ್ನು ಬಿಟ್ಟರೆ, ನಮಗೂ ಹಾಗೂ ನಿಮಗೂ ಈ ಅಧಿಕಾರವಿರುವುದಿಲ್ಲ. ಕಾರಣವೇನೆಂದರೆ, ಸಭೆ ನಡೆಸಿದರೂ ಸಭೆಗೆ ಏಕೆ ಕರೆಯುವುದಿಲ್ಲವೆಂದರೆ ಅಲ್ಲಿ ಯಾರನ್ನೋ ಸೂಚಿಸಿರುತ್ತಾರೆ. ಸೂಚಿಸಿರುವವರನ್ನು ತೆಗೆದು ಹಾಕುತ್ತಾರೆ ಎಂದು ತಿಳಿದಾಗ ಅವರು ನಿಷ್ಠುರರಾಗುತ್ತಾರೆಂದು ನಾವು ಸಭೆಯನ್ನೇ ಮಾಡುವುದಿಲ್ಲ. ಅವರು ಹೇಳುತ್ತಿರುವುದು ನಿಜ. ಜಾಗೃತಿ ಸಮಿತಿಯಲ್ಲಿ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳಿರುತ್ತಾರೆ. ತಾಲ್ಲೂಕು ಪಂಚಾಯತಿಯ ಸದಸ್ಯರುಗಳಿರುತ್ತಾರೆ. ಎಂಎಲ್‌ಎ ಗಳು ಅಧ್ಯಕ್ಷರಾಗಿರುತ್ತಾರೆ. ಸದಸ್ಯರು ಇರುತ್ತಾರೆ. ನನಗೆ ಗೊತ್ತಿರುವ ಹಾಗೆ 224 ಶಾಸಕರುಗಳೆ ಆಗಲಿ ಅಥವಾ ಈ ಮನೆಯ ಸದಸ್ಯರಾಗಲಿ ಒಬ್ಬರೂ ಕೂಡ ಇದನ್ನು ತೆಗೆದು ಹಾಕಿರುವುದು ಇಲ್ಲಿಯವರೆಗೂ ಗೊತ್ತಿಲ್ಲ. ನಾವು ಏತಕ್ಕೆ ನಿಷ್ಠುರರಾಗಬೇಕೆನ್ನುವ ದೃಷ್ಟಿಯಿಂದ ಮಾಡುವುದೂ ಇಲ್ಲ. ಬಹುಶಃ ನನಗೆ ತಿಳಿದ ಮಟ್ಟಿಗೆ ಸ್ಪಷ್ಟೀಕರಣಕೊಡುತ್ತೇನೆ. ನಮಗೆ ಗೊತ್ತಿರುವ ಹಾಗೆ ಗೌರವಾನ್ವಿತ ಎಂಎಲ್‌ಸಿ ಗಳು ಆ ಸಮಿತಿಯ ಸದಸ್ಯರಾಗಿರುತ್ತಾರೆ. ಈಗ ಶಿವಮೊಗ್ಗ ಜಿಲ್ಲೆಒಂದರಲ್ಲಿಯೇ 3 ಜನ ಎಂಎಲ್‌ಸಿಗಳಿದ್ದಾರೆ. ಯಾರನ್ನು ಉಪಾಧ್ಯಕ್ಷರನಾಗಿ ಮಾಡುತ್ತೀರಿ? ಎಲ್ಲಾ 3 ಜನ ಎಂಎಲ್‌ಸಿ ಗಳು ಶಿವಮೊಗ್ಗದ ವಿಳಾಸವನ್ನೇ ಕೊಟ್ಟಿದ್ದಾರೆ. ಯಾರು ನೋಡಲ್ ತಾಲ್ಲೂಕ್ ಎಂದು ಆಯ್ಕೆ ಮಾಡಿಕೊಂಡಿರುತ್ತಾರೆ ಅವರನ್ನೇ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡುವುದಕ್ಕೆ ಸಾಧ್ಯ. ಮಾನ್ಯ ಸಚಿವರು ಯಾವರೀತಿ ಮಾಡುತ್ತಾರೆಂದು ನೋಡಲಿ, ಮತ್ತೆ ಮನೆ ಆಯ್ಕೆ ಪಟ್ಟಿಯಲ್ಲಿ ಅವರಿಗೆ ಧೈರ್ಯ ಇದ್ದರೆ ಯಾವುದು ಸರಿಯಿಲ್ಲವೆಂದು ವಿರೋಧ ಪಕ್ಷದವರು ತೆಗೆದು ಹಾಕಿ ಒಂದು ಸಲ ನೋಡಲಿ. ನಾವು ಅನುಭವಿಸಿದ್ದು ಸಾಕಾಗಿದೆ. ಅವರು ಅನುಭವಿಸಿ ನೋಡಲಿ.

"ತಿದ್ದುಪಡಿಯಾಗದ ಪ್ರತಿ/ ಗಳು ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನಸಭಾಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಭೆಗೆ ನಮ್ಮನ್ನು ಆಹ್ವಾನಿಸಿದ್ದರೆ ಈ ರೀತಿಯ ವಿಚಾರ ಮಾಡಬಹುದು. ಸಭೆಗೆ ಆಹ್ವಾನಿಸಿಲ್ಲವೆಂದರೆ, ಯಾರ ಹೆಸರನ್ನು ಹೊಡೆಯುವುದು ತೆಗೆಯುವುದು ಹೇಗೆ ಬರುತ್ತದೆ? ಬರುವುದೇ ಇಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸೋಮಣ್ಣನವರೆ ಬೇಡ.

**ಶ್ರೀ ಸೋಮಣ್ಣ ಮ ಬೇವಿನಮರದ:-** ಮಾನ್ಯ ಸಭಾಪತಿಯವರೆ, ಸಭೆಗೆ ಆಹ್ವಾನಿಸಲಿಲ್ಲ. ಸಭೆಗೆ ಆಹ್ವಾನಿಸದೆ ಈ ಚರ್ಚೆ ಬರುತ್ತದೆ. ಸಭೆಗೆ ಆಹ್ವಾನಿಸಿಲ್ಲವೆಂದರೆ ಹೇಗೆ ಚರ್ಚೆ ಮಾಡಬೇಕು. ಸಭೆಗೆ ಆಹ್ವಾನಿಸಿ ನೋಡುವುದಕ್ಕೆ ಹೇಳಿ. ಧೈರ್ಯವನ್ನು ಅಲ್ಲಿ ನೋಡಲಿ. ತೆಗೆದು ಹಾಕಲಿ, ಯಾರ ಹೆಸರನ್ನು ಹೊಡೆಯಲಿ, ಯಾರು ಚಲೋ ಇದ್ದಾರೆಂಬುದನ್ನು, ಯಾರಿಗೆ ಅಧಿಕೃತವಾಗಿದೆ ಇಲ್ಲವೆಂಬುದನ್ನು ಅಲ್ಲಿ ನೋಡಲಿ.

**ಉಪ ಸಭಾಪತಿಯವರು:-** ಮಾನ್ಯ ಸೋಮಣ್ಣನವರೆ, ಮಂತ್ರಿಗಳು ಮಾತನಾಡುತ್ತಿದ್ದಾರೆ. ಆಮೇಲೆ ಮಾತನಾಡಿ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ನಾವು ಅವರ ಪರವಾಗಿಯೇ ಮಾತನಾಡುತ್ತಿದ್ದೇನೆ. ಸಂಬಂಧಪಟ್ಟ ಎಂಎಲ್‌ಸಿ ಗಳನ್ನು ಸಭೆಗೆ ಕರೆಯಿಸಿ, ಅವರ ಧೈರ್ಯವನ್ನು ಮೆಚ್ಚಿಸುವುದಕ್ಕೆ ನೋಡೋಣ. ಏಕೆಂದರೆ ಇವರು ಏನು ಮಾಡುತ್ತಾರೆಂಬುದನ್ನು ನೀವು ಕೂಡ ಎಂಎಲ್‌ಸಿ ಗಳಾಗಿ ನೋಡಿರುವುದೇ? ದಯವಿಟ್ಟು ಆ ರೀತಿ ಆಗಬೇಕೆನ್ನುವುದು ನನ್ನ ಆಸೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶನಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಮಾನ್ಯ ಸಚಿವರು ಒಂದು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. Ultimately, beneficiaries ನ್ನು select ಮಾಡುವಂತಹ ಅಧಿಕಾರ ಗ್ರಾಮ ಸಭೆಗೆ ಇರುವುದು. ಅದರ ಮೇಲೆ ಯಾರು ಅರ್ಹರಾದವರು ಎಷ್ಟು ಜನರಿದ್ದಾರೆ ಅಥವಾ ಇಲ್ಲವೆಂದು, ಮಾಡಿರುವ ಕಾರ್ಯ ವಿಧಾನ ಸರಿ ಇದೆಯೋ ಅಥವಾ ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡುವಂತಹ ಅಧಿಕಾರ ಮಾತ್ರ ಸಭೆಗೆ ಇರುವುದು.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**(246)16.03.2017 ಬಿಎಸ್‌ಡಿ/ಎಂಡಿ 4.40**

**ಶ್ರೀ ವಿ.ಎಸ್. ಉಗ್ರಪ್ಪ (ಮುಂದು):-**

ಹೇಳುವುದು ಮಾತ್ರ ಮೇಲ್ಮನೆ ಸದಸ್ಯರು ಎಂದು ಹೇಳುತ್ತಾರೆ. ನಾವು ಮೇಲ್ಮನೆಯವರನ್ನು ಉಪಾಧ್ಯಕ್ಷರನ್ನು ಮಾಡಿ, ಕೆಳಮನೆಯವರು ಅಧ್ಯಕ್ಷರು ಇರಲಿ ಎಂದು ಗೋಗರೆಯುವ ದಯನೀಯ ಸ್ಥಿತಿ ಉಂಟಾಗಿದೆ. ಒಂದುಕಡ ಅದನ್ನು ಬಿಡಿ. ಆದರೆ ಪ್ರಶ್ನೆ ಏನು? ಉದಾಹರಣೆಗೆ ಒಂದು ಘಟನೆ ಬಗ್ಗೆ ಹೇಳುತ್ತೇನೆ. ಪಾವಗಡದ ನಾಗಲಮಡಿಕೆ ಎಂಬ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಸಭೆಯಲ್ಲಿ ಫಲಾನುಭವಿಗಳ ಪಟ್ಟಿಯನ್ನು ಆಯ್ಕೆ ಮಾಡಿ ಅನೇಕ ತಿಂಗಳುಗಳು ಕಳೆದಿವೆ. ಆದರೆ ಆ ಪಟ್ಟಿಯನ್ನು ಒಪ್ಪಿಕೊಂಡಿಲ್ಲ ಅಥವಾ ತಿರಸ್ಕಾರ ಮಾಡಿಲ್ಲ. ಒಂದುಕಡೆ ಶಾಸಕರು ಮತ್ತು ಅಧಿಕಾರಿಗಳು ನೋಡೋಣ ಎನ್ನುತ್ತಿದ್ದಾರೆ. ಇದರಿಂದ ಎಲ್ಲೋ ಒಂದುಕಡೆ remote ಆಗಿ control ಮಾಡುವ ಪ್ರವೃತ್ತಿ ಕೆಲವರಲ್ಲಿ ಇದೆ. ಅದಕ್ಕೆ ತಾಳ ಹಾಕುವ ಅಧಿಕಾರಿಗಳು ಇದ್ದಾರೆ. ಒಂದು ಪಕ್ಷದವರು ಪಂಚಾಯಿತಿಯಲ್ಲಿದ್ದು, ಮತ್ತೊಂದು ಪಕ್ಷದ ಶಾಸಕರು ಇರುತ್ತಾರೆ. ಈ ಕಾರಣಗಳಿಂದ ತಡೆಯುತ್ತಾರೆ. ಆದ್ದರಿಂದ ಇದನ್ನು ಕಾಲಮಿತಿಯಲ್ಲಿ ಒಂದು ತಿಂಗಳು ಅಥವಾ ಎರಡು ತಿಂಗಳಲ್ಲಿ ಕ್ಲಿಯರ್ ಆಗುವ ರೀತಿ ಮಿತಿಯನ್ನು ಅಥವಾ ಸಮಯವನ್ನು ನಿಗದಿಪಡಿಸುವುದಕ್ಕೆ ನಿಯಮಗಳನ್ನು ಬದಲಾವಣೆ ಮಾಡುವ ಅವಶ್ಯ ಇದೆ ಎಂದು ಭಾವಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಸತಿ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ಕಳೆದ ಸದನದಲ್ಲಿ ಗ್ರಾಮ ಸಭೆಯ ಅಧಿಕಾರವನ್ನು ಮೊಟಕು ಮಾಡಿದ್ದರಿಂದ ನಾವೆಲ್ಲರೂ ಪ್ರತಿಭಟನೆ ಮಾಡಿದ್ದು, ನಂತರ ಅವರು ಉತ್ತರ ಕೊಟ್ಟರು. ಕೊನೆಗೆ ನಮ್ಮೊಟ್ಟಿಗೆ ಆ ವಿಷಯವು ನಿಂತು ಹೋಯಿತು. ಆದರೆ ಆ ಪ್ರಕರಣವು ಹೈಕೋರ್ಟ್‌ಗೆ ಹೋಗಿ, ಹೈಕೋರ್ಟ್‌ನಲ್ಲಿ ಒಂದು ಆದೇಶ ಆಗಿ, ಆ ಆದೇಶ ಏನು ಹೇಳಿದೆ?

**ಶ್ರೀ ಎಂ. ಕೃಷ್ಣಪ್ಪ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಯಾರು ಹೈಕೋರ್ಟ್‌ಗೆ ಹೋಗಿದ್ದಾರೆ ಮತ್ತು ಏನಾಗಿದೆ ಎಂಬ ಹೈಕೋರ್ಟ್ ವಿಷಯ ಮಾತನಾಡುವುದು ಬೇಡ. ಆ ವಿಷಯ ಅಲ್ಲಿಯೇ ಇರಲಿ. ಕೋರ್ಟ್ ವಿಷಯ ಮಾತನಾಡುವುದು ಬೇಡ, ಈಗ ವಿಷಯಕ್ಕೆ ಸೀಮಿತವಾಗಿ ಮಾತನಾಡೋಣ.

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಗ್ರಾಮ ಸಭೆಯ ಅಧಿಕಾರವನ್ನು ಮೊಟಕು ಮಾಡಬಾರದು ಎಂದು ಪ್ರಸ್ತಾಪಿಸಿದಾಗ ಅವರು ಉತ್ತರ ಕೊಟ್ಟರು. ಸರಿ-ತಪ್ಪು ಅಲ್ಲಿಗೆ ಮುಗಿಯಿತು. ಆನಂತರ ಸಾರ್ವಜನಿಕ ಹಿತಾಸಕ್ತಿಯಿಂದ ಕೆಲವರು ಗ್ರಾಮ ಸಭೆಯ ಅಧಿಕಾರವನ್ನು ಮೊಟಕು ಮಾಡಬಾರದು ಎಂದು ನ್ಯಾಯಾಲಯಕ್ಕೆ ಹೋದರು.

**ಶ್ರೀ ಎಂ.ಕೃಷ್ಣಪ್ಪ:-** ಯಾರು ಏಕೆ ಹೋಗಿದ್ದಾರೆ ಎನ್ನುವುದು ಈಗ ಅಪ್ರಸ್ತುತ. ಆ ವಿಷಯ ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಸರ್ಕಾರದ ಆದೇಶಕ್ಕೆ ನ್ಯಾಯಾಲಯವು ತಡೆಯಾಜ್ಞೆ ಕೊಟ್ಟಿದೆ ಎಂಬ ವಿಷಯ ಮಾತ್ರ ನಮಗೆ ಗೊತ್ತಿದೆ. ಸರ್ಕಾರ ತಡೆಯಾಜ್ಞೆಯನ್ನು ಅವಲಂಬಿಸಿ ಮುಂದೇನು ಕ್ರಮ ಕೈಗೊಳ್ಳುತ್ತದೆ ಎಂಬ ಮಾಹಿತಿ ಮಾನ್ಯ ಸಚಿವರ ಬಳಿ ಇದ್ದರೆ ಹೇಳಬಹುದು.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಕೋರ್ಟಿನ ತಡೆಯಾಜ್ಞೆ ತೆರವು ಮಾಡಲು ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಗ್ರಾಮ ಸಭೆ ಬಿಟ್ಟು ಆಯ್ಕೆ ಮಾಡಲು ಸಾಧ್ಯವಿಲ್ಲ ಎಂದು ಇವತ್ತೂ ಹೇಳುತ್ತೇನೆ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಮಂಜುರವರು ಶಾಸಕರು ಬೇಸರ ಮಾಡಿಕೊಳ್ಳುವ ಬಗ್ಗೆ ಹೇಳಿದರು. ಗ್ರಾಮ ಸಭೆಯವರು ಶಿಫಾರಸ್ಸು ಮಾಡಿದ್ದಕ್ಕೆ ಮಾತ್ರ ಒಪ್ಪಿಗೆಕೊಡಬೇಕಾಗಿದ್ದು, ಅವರಿಗೆ ಯಾವುದೇ ರೀತಿಯ ಅಧಿಕಾರ ಇಲ್ಲ ಎಂದು ಸಹ ಹೇಳಿದರು. ಆ ರೀತಿ ಕೆಲವು ಕಡೆ ನಡೆಯುತ್ತಿಲ್ಲ. ಗ್ರಾಮ ಸಭೆಗಳು ನಡೆದಂತೆ ಬರೆದುಕೊಂಡು, ಪಟ್ಟಿಯನ್ನು ಶಾಸಕರ ಪರವಾಗಿ ಅಂತಿಮಗೊಳಿಸುವ ಅನೇಕ ನಿದರ್ಶನಗಳಿವೆ.

**(ಗೊಂದಲ)**

**ಶ್ರೀ ಎ. ಮಂಜು:-** ಅವರು ಹೇಳುವುದರಲ್ಲಿ ಅರ್ಥವಿದೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಒಂದು ತಿಳಿದುಕೊಳ್ಳಬೇಕಾದ್ದೇನೆಂದರೆ ಆ ರೀತಿ ಶಾಸಕರು ಮಾಡಿಸುತ್ತಾರೆ ಎನ್ನುವುದಕ್ಕಿಂತ ಆ ರೀತಿ ಇದ್ದಾಗ ಇಲ್ಲಿಯವರೆಗೂ ಏಕೆ ಗಮನಕ್ಕೆ ತಂದಿಲ್ಲ ಮತ್ತು ದೂರು ಕೊಟ್ಟಿಲ್ಲ? ಯಾರೂ ದೂರು ಕೊಡುವುದಿಲ್ಲ, ಕೇವಲ ಹೇಳುತ್ತಾರಷ್ಟೇ!. ಈಗ ನನ್ನ ಕ್ಷೇತ್ರದಲ್ಲಿ ನಾನೊಬ್ಬ ಶಾಸಕ ಮತ್ತು ಮಂತ್ರಿಯಾಗಿ ನಾನು ಹೇಳಿದರೂ ಗ್ರಾಮ ಪಂಚಾಯಿತಿಯವರು ಮನೆಗಳನ್ನು ಕೊಡುವುದಿಲ್ಲ. ಅವರಿಗೆ

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಅರ್ಥವಾಗುವುದಿಲ್ಲ. ಆ ನೋವು ನನಗೆ ಗೊತ್ತಿದೆ. ರಾಜಕೀಯವಾಗಿ ಪರ–ವಿರೋಧ ಇದ್ದೇ ಇರುತ್ತದೆ, ಶ್ರೀ ಬಾಲಕೃಷ್ಣರವರ ವಿರುದ್ಧ ಎಂಎಲ್ಎ ಆಗಿದ್ದಾರೆ ಎಂದು ಅವರು ಹೇಳಬಹುದು. ಆದರೆ ಒಂದು ಸತ್ಯವನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಗ್ರಾಮ ಪಂಚಾಯಿತಿಯ ಸದಸ್ಯರು ಕಾನೂನಿನ ಪ್ರಕಾರ ಅಲ್ಲಿಗೆ ಬಂದಿದ್ದಾರೆ ಎಂದು ಬರೆದುಕೊಂಡು ಬರುತ್ತಾರೆ. ನನಗೆ ಗೊತ್ತಿರುವಂತೆ ಗ್ರಾಮ ಸಭೆಗೆ ಜನರೂ ಹೋಗದಂತಹ ಪರಿಸ್ಥಿತಿ ಗ್ರಾಮದಲ್ಲಿದೆ ಎಂಬುದನ್ನೂ ಯಾರೂ ಮರೆಯಬಾರದು.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಆದ್ದರಿಂದ ನಮ್ಮನ್ನೂ ಉಪಾಧ್ಯಕ್ಷರನ್ನಾಗಿ ಮಾಡಿ ನೋಟೀಸ್ ಕೊಟ್ಟರೆ ನಾವು ಕೇಳಬಹುದಲ್ಲವೇ? ನಮ್ಮನ್ನು ಕರೆಸದಿದ್ದರೆ ನಾವು ಕೇಳುವುದಕ್ಕೆ ಹೇಗಾಗುತ್ತದೆ?

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ):–** ಮಾನ್ಯ ಸಭಾಪತಿಯವರೇ, ನಮ್ಮ ಇಡೀ ಸದನ ಇದರ ಬಗ್ಗೆ ಚರ್ಚೆ ನಡೆಸುತ್ತಿದೆ.

**ಉಪ ಸಭಾಪತಿಯವರು:–** ಇದರ ಬಗ್ಗೆ ಚರ್ಚೆ ಮಾಡಿದರೆ ಉತ್ತರ ಕೊಡುವವರು ಯಾರು?

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸರ್ಕಾರ ಮತ್ತು ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನನಗೆ ಒಂದು ನಿಮಿಷ ಅವಕಾಶ ಕೊಡಿ. ಇದು ಇಡೀ ಸದನಕ್ಕೆ ಬೇಕಾಗಿರುವ ಉತ್ತರವಾಗಿದೆ. ಇದುವರೆಗೂ ವಿಧಾನ ಪರಿಷತ್ತಿನ ಸದಸ್ಯರನ್ನು ಮೇಲೆ ಹಾಕಬೇಕೋ ಅಥವ ಕೆಳಗೆ ಹಾಕಬೇಕೋ ಎನ್ನುವ ಚರ್ಚೆ ನಡೆಯುತ್ತಿದೆ. ವಿಧಾನ ಪರಿಷತ್ತಿನ ಸದಸ್ಯರ ಅವಶ್ಯಕತೆಯೇ ಇಲ್ಲ, ಅವರನ್ನು ಕರೆಯುವುದೇ ಇಲ್ಲ, ಮುದ್ರಣ ಮಾಡಿಸುವುದಿಲ್ಲ ಮತ್ತು ತಾಲ್ಲೂಕಿನ ಯಾವುದೇ ಸಭೆಗೆ ಬರಬಾರದು ಎನ್ನುವ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಯ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತಾರೆ?

**ಶ್ರೀ ರಾಮಚಂದ್ರಗೌಡ (ಪದವೀಧರಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ಕಾನೂನು ಬಂದಾಗ ನಾನು ಒಂದು ಗ್ರಾಮ ಪಂಚಾಯಿತಿ ಸಭೆಗೆ ಹೋಗಿದ್ದೆನು. ಸಭೆಗೆ ಹೋಗುವ ಮುಂದೆ ಡಂಗೂರ ಹೊಡೆಯುತ್ತಾರೆ. 'ಇವತ್ತಿನ ದಿವಸ ಗ್ರಾಮ ಪಂಚಾಯಿತಿ ಸಭೆ ನಡೆಯುತ್ತಿದೆ, ಇವತ್ತು ಸೈಟು, ಮನೆಗಳನ್ನು ಹಂಚುತ್ತಿದ್ದೇವೆ, ಯಾರಾದರೂ ವಿರೋಧ ಅಥವಾ ಆಕ್ಷೇಪಣೆ ಮಾಡುವುದಿದ್ದರೆ ಬರಬೇಕು' ಎಂದು ಊರಿನಲ್ಲೆಲ್ಲಾ ಡಂಗೂರ ಹೊಡೆಯುತ್ತಾರೆ. ನಾನು ಆ ಸಭೆಯಲ್ಲಿ ಇದ್ದೆನು. ಆ ರೀತಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಂಗೂರ ಹೊಡೆದಿದ್ದರ ಹಿನ್ನೆಲೆಯಲ್ಲಿ ಸುಮಾರು 250-300 ಜನರು ಗ್ರಾಮ ಸಭೆಗೆ ಬಂದಿದ್ದು, ಗ್ರಾಮ ಸಭೆಯಲ್ಲಿ ಇಂತಹವರಿಗೆ ಸೈಟುಗಳನ್ನು ಕೊಡಬೇಕು ಎಂದು ತೀರ್ಮಾನ ಮಾಡಿರುವುದರ ಬಗ್ಗೆ ಹೇಳಿದಾಗ ಅದರಲ್ಲಿ ಕೆಲವನ್ನು ಒಪ್ಪಿಕೊಂಡರು, ಕೆಲವನ್ನು ಒಪ್ಪಿಕೊಳ್ಳಲಿಲ್ಲ. ಅಲ್ಲಿ ಒಪ್ಪಿಕೊಂಡಿರುವುದನ್ನು approve ಮಾಡಿದರು, ಒಪ್ಪಿಕೊಳ್ಳದೇ ಇರುವುದನ್ನು ಪುನ: ಮಾಡಿದರು. ಈ ರೀತಿಯಾಗಿ ಅಧಿಕಾರವನ್ನು ವಿಕೇಂದ್ರಿಕರಣ ಮಾಡುವ ಪದ್ಧತಿ ಬಹಳ ಚೆನ್ನಾಗಿ ಬಂದಿತ್ತು. ನಾನು ಹೊಸದಾಗಿ ಕಾನೂನು ಬಂದಾಗ ಒಂದು ಗ್ರಾಮ ಪಂಚಾಯಿತಿ ಸಭೆಗೆ ಹೋಗಿದ್ದೆನು. ಈ ರೀತಿ ಆಗಿತ್ತು. ಇದೇ ರೀತಿ ಆದರೆ ಬಹಳ ಒಳ್ಳೆಯದು.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾಗಡಿಯಲ್ಲಿ....

**ಉಪ ಸಭಾಪತಿಯವರು:-** ಮಾನ್ಯ ರೇವಣ್ಣನವರೇ, ಬೇಡ, ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ರೀತಿ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡಿದರೆ ಹೇಗೆ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಅಯ್ಯೋ, ಅವರು ಎದ್ದರೆ ನಾನು ಬೇಡ ಎಂದು ಹೇಳಲೇ? ತಾವು ಹೇಳಿದಂತೆ ಮಾಡುತ್ತೇನೆ.

**ಉಪ ಸಭಾಪತಿಯವರು:-** ಈಗ್ಗೆ ಸಮಯ 5 ಗಂಟೆಯಾಗಿದ್ದು, ತಾವು ಒಂದೂವರೆ ಗಂಟೆಯಿಂದ ಮಾತನಾಡುತ್ತಿದ್ದೀರಿ. ನಾನು ಸದನವನ್ನು ನಡೆಸಬಾರದೇ? ತಾವು ಐದು ತಾಸು ಮಾತನಾಡಿದರೆ ಬೇರೆಯವರಿಗೆ ಅವಕಾಶ ಬೇಡವೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ತಾವು ಅಲ್ಲಿ ಕೇಳಿ ಸ್ವಾಮಿ, ನನ್ನ ಹತ್ತಿರ ಮಾತನಾಡಿದರೆ....... ನಾನು ಮಾತನಾಡುವುದು ಬೇಡವೇ? ಯಾರಿಗೆ ಹೇಳುತ್ತೀರಿ?

**ಉಪ ಸಭಾಪತಿಯವರು:-** ಮಾನ್ಯ ರೇವಣ್ಣನವರೇ, ದಯವಿಟ್ಟು ಕುಳಿತುಕೊಳ್ಳಿ. ಮಂತ್ರಿಗಳು ಆ ವಿಷಯಕ್ಕೆ ಒಳ್ಳೆಯ ಉತ್ತರ ಕೊಟ್ಟಿದ್ದಾರೆ ಕುಳಿತುಕೊಳ್ಳಿ. ತಾವು ಚರ್ಚೆಗೆ ಅವಕಾಶ ಕೇಳುವವರಿದ್ದು, ತಮಗೆ ಅವಕಾಶ ಬೇಡ ಎಂದರೆ ಮಾತನಾಡಿ. ಒಬ್ಬೊಬ್ಬರು ಮೂರು ತಾಸು ಮಾತನಾಡಿದರೆ ಹೇಗೆ ಅವಕಾಶ ಕೊಡುವುದು? ದಯವಿಟ್ಟು ಕುಳಿತುಕೊಳ್ಳಿ.

ತಿದ್ದುಪಡಿಯಾಗದ ಪ್ರತಿ/ ಗಣಕಜಾಲದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ತಾವು ವಿರೋಧ ಪಕ್ಷದಲ್ಲಿದ್ದಾಗಲೂ ಸಿಟ್ಟು ಮಾಡಿಕೊಳ್ಳುತ್ತಿದ್ದಿರಿ, ಅಲ್ಲಿ ಸಭಾಪತಿಯವರ ಜಾಗದಲ್ಲಿದ್ದಾಗಲೂ ಸಿಟ್ಟು ಮಾಡಿಕೊಳ್ಳುತ್ತಿದ್ದೀರಿ, ಇದರ ಕತೆ ಏನು? ಮಂತ್ರಿಗಳಾದ ಮೇಲೆ ಏನು ಮಾಡುತ್ತೀರಿ ಎಂಬುದನ್ನು ನೋಡೋಣ.

**ಉಪ ಸಭಾಪತಿಯವರು:-** ಆ ರೀತಿ ಅಲ್ಲ. ಕೆಲವು ಸಂದರ್ಭದಲ್ಲಿ ಅವರು ಎದ್ದು ನಿಂತಾಗ ನನಗೆ ಮಾತನಾಡಲು ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತೀರಿ. ಈಗ ತಮಗೆ ಅವಕಾಶ ಕೊಟ್ಟು, ಒಂದೂವರೆ ತಾಸಿನಿಂದ ಚರ್ಚೆಯಾಗುತ್ತಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಇನ್ನೂ ಒಂದೂವರೆ ತಾಸುಆಗುತ್ತದೆ. ಇಡೀ ರಾಜ್ಯದ ಬಡವರ ಮನೆ ಮತ್ತು ಸೈಟುಗಳ ಬಗ್ಗೆ ಈ ಸದನ ಚರ್ಚೆ ಮಾಡಬೇಕು.

**ಉಪ ಸಭಾಪತಿಯವರು:-** ಎಲ್ಲದ್ದರ ಬಗ್ಗೆ ಚರ್ಚೆ ಮಾಡಬೇಕು. ಕೇವಲ ಮನೆ ಮಾತ್ರವಲ್ಲದೇ ಬಹಳಷ್ಟು ಸಮಸ್ಯೆಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆಯಿತು, ಮಾನ್ಯ ವಸತಿ ಸಚಿವರು ಪ್ರತಿಯೊಬ್ಬ ವಿಧಾನ ಪರಿಷತ್ತಿನ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ. ಬಹಳ ಸಂತೋಷ. ಇದು ಬರೀ ಚರ್ಚೆಗೆ ನಿಲ್ಲಬಾರದು. ತಕ್ಷಣ ಒಬ್ಬರು ಅಥವಾ ಇಬ್ಬರು ಅಥವಾ ಎಷ್ಟೇ ಜನರಿದ್ದರೂ ವಿಧಾನ ಪರಿಷತ್ತಿನ ಸದಸ್ಯರನ್ನು ಉಪಾಧ್ಯಕ್ಷರು ಎಂದು ವಿಧಾನ ಪರಿಷತ್ತಿನಲ್ಲಿ ಘೋಷಣೆ ಮಾಡಬೇಕು. ಕನಿಷ್ಠ ಎರಡು ತಿಂಗಳಿಗೊಮ್ಮೆ ಸಭೆ ನಡೆಯಬೇಕು. ಶಾಸಕರು ಸಭೆ ಕರೆಯದಿದ್ದರೆ ಸಂಬಂಧಪಟ್ಟ ಅಧಿಕಾರಿ ಸಭೆ ಕರೆಯಬೇಕು. ಅಧಿಕಾರಿ ಕರೆಯದಿದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇಷ್ಟು ಒಪ್ಪಿಕೊಳ್ಳಬಹುದಲ್ಲವೇ?

ಇನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಸದನದಲ್ಲಿದ್ದು, ಕೊಳಚೆ ಪ್ರದೇಶದಲ್ಲಿ ವಾಸ ಮಾಡುವ ಬಡವರಿಗೆ ಹಕ್ಕುಪತ್ರ ಕೊಡಬೇಕೆಂದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ.

**ಶ್ರೀ ರಾಮಚಂದ್ರಗೌಡ:-** ಇದು ಮಾನ್ಯ ಸಚಿವರ ಕನಸು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆದ್ದರಿಂದಲೇ ನಾನು ಹೇಳುತ್ತಿದ್ದೇನೆ. ಆದರೆ ಪ್ರತಿದಿನ ಬೆಳಿಗ್ಗೆ , ಮಧ್ಯಾಹ್ನ ಮತ್ತು ರಾತ್ರಿ ಹೊತ್ತು ಕನಸು ಬೀಳುತ್ತಿದ್ದರೆ ಲಾಭ ಏನು? ಆ ಕನಸು ಜಾರಿಗೆ ಬರಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಚಿವರ ಆಸಕ್ತಿ ನನಗೆ ಗೊತ್ತಿದೆ. ಆದರೆಅವರು ಸಚಿವರಾದ ಸಮಯದಲ್ಲಿ ಜಾರಿಗೆ ಬರಬೇಕಲ್ಲವೇ?

**(247) 16.03.2017 ಎಸ್‌ಕೆ/ಎಕೆ 4.50**

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು):-**

ಮಂತ್ರಿಯಾದಂತಹ ಸಂದರ್ಭದಲ್ಲಿ ಅವರ ಆಸಕ್ತಿ ನನಗೆ ಗೊತ್ತಿದೆ. ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವಂತಹ ಬಡವರಿಗೆ ನನಗೆ ಗೊತ್ತಿರುವ ಪ್ರಕಾರ ಅನೇಕ ಭಾಗಗಳಲ್ಲಿ ಹಕ್ಕು ಪತ್ರ ಕೊಡಬೇಕೆಂದು ಹಿಂದೆ ನಮ್ಮ ಸರ್ಕಾರ ಹೇಳಿದಂತಹ ಸಂದರ್ಭದಲ್ಲಿ ಅದರ ಬಗ್ಗೆ ತೀರ್ಮಾನ ಮಾಡಿದ್ದು, ಅದೇರೀತಿ ನಮ್ಮ ಶಿವಮೊಗ್ಗ ನಗರದಲ್ಲಿ ಮತ್ತು ಶ್ರೀ ಜಯಚಂದ್ರರವರ ಕ್ಷೇತ್ರದಲ್ಲಿ ಈಗಾಗಲೇ ನಾವು ಹಕ್ಕು ಪತ್ರವನ್ನು ಕೊಟ್ಟಿದ್ದೇವೆ. ನಾವು ಕೊಟ್ಟಂತಹ ಹಕ್ಕುಪತ್ರಕ್ಕೆ ಏನು technical ಸಮಸ್ಯೆಯಿದೆ. ಕೊಳಚೆ ಪ್ರದೇಶ ಮಂಡಳಿಯಿಂದ ಕೊಡುವುದಕ್ಕೆ ಬರುವುದಿಲ್ಲ. ಅದು ನಗರ ಪ್ರದೇಶದಲ್ಲಿರುವವರು ನಗರ ಸಭೆಯವರು ಕೊಡಬೇಕು. ಈ ತರಹದ ಒಂದು ಸಮಸ್ಯೆ ಇದೆ. ನಾನು ನಿನ್ನೆ ಮಾನ್ಯ ಜಯಚಂದ್ರರವರ ಹತ್ತಿರ ಮಾತನಾಡುವಾಗ ಈ ವಿಷಯದ ಬಗ್ಗೆ ಈ ಸಾರಿ ಬಜೆಟ್‌ನಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ದಯವಿಟ್ಟು, ಅದಕ್ಕೆ clarify ಮಾಡಬೇಕು ಎಂದು ಹೇಳಿದ್ದೆ. ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವಂತಹ ಬಡವರಿಗೆ ಹಕ್ಕುಪತ್ರ ಕೊಡುವಂತಹ ದಿಕ್ಕಿನಲ್ಲಿ ಕೆಲವು ಸ್ವಂತ ಭೂಮಿಯಿದೆ ಮತ್ತು ಕೆಲವು ಸರ್ಕಾರಿ ಭೂಮಿಯಿದೆ. ಇದನ್ನು ನೀವು ಸೆಕ್ಷನ್ 94ಸಿಸಿ ಗೆ ತರುತ್ತೀರೋ ಅಥವಾ ಇದರಲ್ಲಿಯೇ ನಗರದ ಕಾರ್ಪೊರೇಷನ್‌ಗೆ ಮತ್ತು ನಗರ ಸಭೆ ಇವರಿಗೆ ಅವಕಾಶವನ್ನು ಕೊಡುತ್ತೀರೋ ಎನ್ನುವುದನ್ನು ತಿಳಿಸಬೇಕು. ಈಗಾಗಲೇ ಸರ್ವೇಕಾರ್ಯ ಮುಗಿದು ಹಕ್ಕು ಪತ್ರಗಳನ್ನು ಕೊಡಲಾಗಿದೆ. ಆದರೆ ಅವರ ಹಕ್ಕು ಪತ್ರದ ಬಗ್ಗೆ ಏನು ಎಂಬುದು ತೀಮಾನವಾಗಿಲ್ಲ. ಬ್ಯಾಂಕ್‌ನಲ್ಲಿ ಹೋಗಿ ಹಕ್ಕುಪತ್ರವನ್ನು ಕೊಟ್ಟರೆ ಇದಕ್ಕೆ ಬೆಲೆಯಿಲ್ಲ ಎಂದು ಸಾಲ ಕೊಡುವುದಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಸರ್ಕಾರ ತುಂಬಾ ಸ್ಪಷ್ಟವಾಗಿ ಕೊಳಚೆ ಪ್ರದೇಶದಲ್ಲಿ ವಾಸ ಮಾಡುವ ಬಡವರಿಗೆ ಹಕ್ಕು ಪತ್ರ ಕೊಡುವ ದಿಕ್ಕಿನಲ್ಲಿ ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತಿದ್ದೀರಿ ಎಂಬುದನ್ನು ಉತ್ತರದಲ್ಲಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಇದಲ್ಲದೇ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ Slum Board ಇದೆಯಲ್ಲಾ, ಈಗ Slum Board ಗಳಲ್ಲಿ ಅವರಿಗೆ ಹಣವಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ರಸ್ತೆಗಳಿಲ್ಲ, ವಿದ್ಯುತ್ ಇಲ್ಲ. ಕೊಳಚೆ ಪ್ರದೇಶದಲ್ಲಿ ವಾಸ ಮಾಡುವಂತಹ ಜನರಿಗೆ ಅನೇಕ ಸಮಸ್ಯೆಗಳಿವೆ. 'ಕೊಳಚೆ ಮುಕ್ತ ಕರ್ನಾಟಕ'

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇವೆಂದು ಹೇಳುತ್ತೀರಿ. ಇದು ಹೇಗೆ ಆಗುತ್ತದೆ? ಬರೀ ಘೋಷಣೆ ಮಾಡಿದರೆ ಆಗುತ್ತದೆಯೇ? ಆ ಕೊಳಚೆ ಪ್ರದೇಶದಲ್ಲಿ ವಾಸ ಮಾಡುವಂತಹ ಬಡವರಿಗೆ ಮೂಲಭೂತ ಸೌಕರ್ಯಗಳನ್ನು ಅಂದರೆ, ನೀರು, ವಿದ್ಯುತ್ ದೀಪ, ರಸ್ತೆ, ಚರಂಡಿ ಈ ಸೌಲಭ್ಯಗಳನ್ನು ಕೊಡುವುದಕ್ಕೂ ಸಹ ಬಜೆಟ್‌ನಲ್ಲಿ ಹಣವನ್ನು ಇಟ್ಟುಕೊಂಡಿಲ್ಲ. ಈ ರೀತಿಯಾದಂತಹ ಸಮಸ್ಯೆ ಇಡೀ ರಾಜ್ಯದಲ್ಲಿ ಸಾಕಷ್ಟು ಇದೆ. ಬೆಂಗಳೂರು ನಗರದಲ್ಲಿಯಂತೂ ಸಾಕಷ್ಟು ಜನರಿದ್ದಾರೆ.

**ಶ್ರೀ ಎಂ.ಕೃಷ್ಣಪ್ಪ (ವಸತಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ನೀರಿಲ್ಲ, ದೀಪವಿಲ್ಲ ಎಂದು ಮಾನ್ಯ ಸದಸ್ಯರು ಅದನ್ನು ತಿಳಿಸಿದರೆ ಖಂಡಿತವಾಗಿ ಮಾಡೋಣ. ನನಗೆ ತಿಳಿದಮಟ್ಟಿಗೆ ಬೆಂಗಳೂರಿನಲ್ಲಿ ಎಲ್ಲಾ declared slums ಗಳಲ್ಲಿ ಚೆನ್ನಾಗಿ ಅಭಿವೃದ್ಧಿ ಮಾಡಿದ್ದೇವೆ. ನಿಮಗೆ ಮಾಹಿತಿಗೆ ಇರಲಿ. ನಾವು ಎಲ್ಲಿ ಹಕ್ಕುಪತ್ರ ಅಥವಾ ಜಮೀನಿನ ಬಗ್ಗೆ declaration ಬೇರೆಯವರ ಜಮೀನಿನಲ್ಲಿ ಕಟ್ಟಿಕೊಂಡಿರುವುದನ್ನು ಬಿಟ್ಟು ಉಳಿದಿದ ಕಡೆ ಹಳೆ ಎಲ್ಲಾ ಹಕ್ಕುಪತ್ರ ಕೊಟ್ಟಿದ್ದವರಿಗೆ Sale Deed ನ್ನು ಮಾಡಿಕೊಡುತ್ತಿದ್ದೇವೆಂದು ತಮ್ಮ ಗಮನಕ್ಕೆ ತರುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ ದಯವಿಟ್ಟು ನಾನು ಅದಕ್ಕೆ ಹೇಳುತ್ತಿರುವುದು. ಶಿವಮೊಗ್ಗ ನಗರದಲ್ಲಿ ಸುಮಾರು 40 Declared Slums ಮತ್ತು ಸುಮಾರು 6 Undeclared Slums ಇದೆ. ಆ Undeclared Slums ಬಗ್ಗೆ ನಾನು ಮಾತನಾಡುವುದಿಲ್ಲ. ಇನ್ನು ಅದು ಕೋರ್ಟ್‌ನಲ್ಲಿ ತೀರ್ಮಾನವಾಗಿ ಯಾರದು private ಭೂಮಿಯಿದೆಯೋ ಅವರ ಜೊತೆಯಲ್ಲಿ ಮಾತುಕತೆ ನಡೆಸಿ ದುಡ್ಡು ಕೊಟ್ಟ ನಂತರ ಏನು ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ. ಆದರೆ Declared Slum ನಲ್ಲಿ ಸಾಮಾನ್ಯವಾಗಿ ಸೌಲಭ್ಯಗಳನ್ನು ಸಾಕಷ್ಟು ಒದಗಿಸಿದ್ದಾರೆ. ಅದಕ್ಕೆ ಹಕ್ಕುಪತ್ರವನ್ನು ಕೊಡುತ್ತೀರಾ?

**ಶ್ರೀ ಎಂ. ಕೃಷ್ಣಪ್ಪ(ವಸತಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ಅದನ್ನು ಕಳುಹಿಸಿಕೊಡಿ ನಾನು ಅದನ್ನು ನೋಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾವು ಅದನ್ನು ಕಳುಹಿಸಿಕೊಡುತ್ತೇವೆ. ಕಳುಹಿಸಿಕೊಡುವುದಕ್ಕೆ ಏನಿಲ್ಲ. ನಿಮ್ಮ ಅಧಿಕಾರಿಗಳಿಗೆ ಕಳುಹಿಸಿದ್ದರೂ ಅದು ಸಾಕಷ್ಟು ಸಲ ವಾಪಸ್ಸು ಬಂದಿದೆ.

"ತಿದ್ದುಪಡಿಯಾಗದ ಪ್ರತಿ/ಅಂತಿಮ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಕಾಗೋಡುತಿಮ್ಮಪ್ಪ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಹೇಳಿದ ರೀತಿಯಲ್ಲಿ ಕೊಳಚೆ ಪ್ರದೇಶದಲ್ಲಿ ಅವರು ಸರ್ಕಾರಿ ಜಮೀನಿನಲ್ಲಿದ್ದರೆ, ಸೆಕ್ಷನ್ 94 ಸಿಸಿ ಅಡಿಯಲ್ಲಿ ಕೊಡುವುದಕ್ಕೆ ಅವಕಾಶವಿದೆ. ಅದರಲ್ಲಿ ಕೊಡಿಸಿಕೊಡುತ್ತೇವೆ. ಒಂದು ವೇಳೆ ಅವರು ಖಾಸಗಿ ಜಮೀನಿನಲ್ಲಿದ್ದರೆ, ಆ ಜಮೀನನ್ನು ನಾವು ಸ್ವಾಧೀನಪಡಿಸಿಕೊಳ್ಳುತ್ತೇವೆ. ಆ ಸ್ವಾಧೀನಪಡಿಸಿಕೊಳ್ಳುವ ಕೆಲಸವನ್ನು ನಮ್ಮ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯವರೇ ಮಾಡಬೇಕು. ಅದನ್ನು ಮಾಡಿದರೆ ಅದಕ್ಕೂ ಕೂಡ ಕೊಡುವುದಕ್ಕೆ ಬರುತ್ತದೆ. ತಾವು ಹೇಳಿರುವ ಪ್ರಕಾರ ಈಗ ಇದೆ. ಮಾನ್ಯ ಸಭಾಪತಿಯವರೇ, ಶಿವಮೊಗ್ಗದಲ್ಲಿ ಜಿಲ್ಲೆಯಲ್ಲಿ ಕೆರೆ ಅಂಗಳ ಮುಂತಾದವು ಇವೆ. ಅವುಗಳನ್ನೆಲ್ಲಾ ಯಾವ ಅವಧಿಯಿತ್ತೊ ವಿರಹಿತಗೊಳಿಸಿ ಕೊಡಲಾಗುತ್ತಿದೆ. ಅದಕ್ಕೋಸ್ಕರ ಇಲ್ಲಿ ಇರಬಹುದು ಅಥವಾ ಎಲ್ಲಿಯಾದರೂ ಇರಬಹುದು. ಸರ್ಕಾರಿ ಜಮೀನಾದರೆ ನೇರವಾಗಿ ಸೆಕ್ಷನ್ 94 ಸಿಸಿ ಪ್ರಕಾರ ಕೊಟ್ಟರೆ ಅದರ ಪ್ರಕಾರ ತಹಶೀಲ್ದಾರ್‌ರವರು ಹಕ್ಕುಪತ್ರ ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಮಂತ್ರಿಗಳು ಒಂದು ವಿಚಾರದ ಮೇಲೆ ಬೆಳಕು ಚೆಲ್ಲಬೇಕು. ತಾವು ಬಂದು ಸ್ಥಳ ಪರಿಶೀಲನೆ ಮಾಡಿದ್ದೀರಿ ಅದು ಎಲ್ಲಾವೂ ಸರಿ ಇದೆ. ಕೆಲವು ವಿಚಾರದಲ್ಲಿ ತಹಶೀಲ್ದಾರ್‌ರವರು ಮತ್ತು ಜಿಲ್ಲಾಧಿಕಾರಿಗಳು ಹಕ್ಕುಪತ್ರ ಕೊಡುವುದಕ್ಕೆ ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತಿಲ್ಲ. ಉದಾಹರಣೆಗೆ ಗೋಮಾಳದಲ್ಲಿ ಕೆಲವು ಇದೆ. ಎಷ್ಟೋ ವರ್ಷಗಳಿಂದ ಅವನು ಮನೆ ಮಾಡಿಕೊಂಡಿದ್ದಾನೆ. ಅದನ್ನು ವಿರಹಿತಪಡಿಸಿ ಎಂದು ನೀವು ಹೇಳಿದರೂ ಕೂಡ ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ರವರು ಕಾರ್ಯಪ್ರವೃತ್ತರಾಗುತ್ತಿಲ್ಲ. ಕೆಲವು ಕಡೆ Deemed Forest ಇದೆ. Deemed Forest ನ ಬಗ್ಗೆ ಕೆಲವು ಮಾರ್ಗಸೂಚಿಗಳನ್ನು ಕೊಟ್ಟಿದ್ದೀರಿ. ಈ ಹಕ್ಕು ಪತ್ರಗಳನ್ನು ಯಾರುಯಾರಿಗೆ ಕೊಡಬೇಕು ಈ ಸೆಕ್ಷನ್ 94 ಸಿ ಅಡಿಯಲ್ಲಿ ಹಕ್ಕುಪತ್ರ ಕೊಡುವಂತಹದರಲ್ಲಿ ಗೊಂದಲ ಇರುವುದು ಏನೆಂದರೆ, ಕಂದಾಯ ಭೂಮಿಯಲ್ಲಿ ನಮಗೆ ಏನು ಗೊಂದಲವಿಲ್ಲ. ಗೋಮಾಳ, Deemed Forest, ಅರಣ್ಯ ಒತ್ತುವರಿ, ಕುಮ್ಕಿ ಇಂತಹ ಪ್ರದೇಶಗಳಲ್ಲಿ ಗೊಂದಲವಿದೆಯಲ್ಲಾ ನೀವು ಸ್ಪಷ್ಟವಾಗಿ ಜಿಲ್ಲಾಧಿಕಾರಿಯವರು ಎಂದು ಹೇಳಿದ್ದೀರಿ. ಇಂತಹ ಮಾರ್ಗಸೂಚಿಯಲ್ಲಿ ನೀವು ಕೊಡಿ. ಆದರೆ ನೀವು ಕೊಟ್ಟಿರುವಂತಹ ಮಾರ್ಗಸೂಚಿ ಜಿಲ್ಲಾ ಮಟ್ಟದಲ್ಲಿ ಪಾಲನೆಯಾಗುತ್ತಿಲ್ಲ. ಏನು ಮಾಡುತ್ತೀರಾ?

ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕಾಗೋಡುತಿಮ್ಮಪ್ಪ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಅದಕ್ಕೂ ಹೇಳುತ್ತೇನೆ. ಯಾವ ಬೆಳಕು ಚೆಲ್ಲಲಿ?

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:-** ಸನ್ಮಾನ್ಯ ಸಭಾಪತಿಯವರೇ, ಬೆಳಕು ಚೆಲ್ಲಿ ಎಂದು ನಾನು ಏಕೆ ಹೇಳಿದೇನೆಂದರೆ ನೀವು ಹೊರಗೆ ಹೋದ ಕೂಡಲೇ ನಮಗೆಲ್ಲಾ ಸಂಪೂರ್ಣವಾಗಿ ಕತ್ತಲೆಯಾಗಿ ಬಿಡುತ್ತದೆ ಎಂದು ಹೇಳಿದೆ.

**ಶ್ರೀ ಕಾಗೋಡುತಿಮ್ಮಪ್ಪ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಗೋಮಾಳವಿದ್ದರೆ ಹಕ್ಕುಪತ್ರಕೊಡುವುದಕ್ಕೆ ಏನು ತೊಂದರೆಯಿಲ್ಲ. Deemed Forest ಮತ್ತು ಕುಮ್ಕಿ ಇದೆಯಲ್ಲಾ ಇವುಗಳನ್ನು ಈಗಾಗಲೇ ಒಂದು ಕ್ಯಾಬಿನೆಟ್ ಸಬ್-ಕಮಿಟಿಯಲ್ಲಿಟ್ಟು ಅವುಗಳನ್ನೆಲ್ಲಾ ಚರ್ಚೆ ಮಾಡಿ Deemed Forest ನಿಂದ ಕೈ ಬಿಡುವುದಕ್ಕೆ ಈಗಾಗಲೇ ಪ್ರಸ್ತಾವನೆ ಬರುತ್ತಿದೆ. ಅದು ಬಂದಾದ ಮೇಲೆ ಅಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಈಗ ಹಾಡಿ ಬಿಟ್ಟಿದ್ದಾರೆ. ಕುಮ್ಕಿ ಅವು ಇವು ಎಂದು, ಅವುಗಳನ್ನೆಲ್ಲಾ ಕೈಬಿಡಬೇಕಾದ ಪ್ರಶ್ನೆ ಬಂದಿದ್ದು, ನಾನು ಅದನ್ನು ಬೆನ್ನು ಹತ್ತಿಕೊಂಡು ಕುಳಿತುಕೊಂಡಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:-** ಸನ್ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯಲ್ಲಿ ಮತ್ತು ಅರಣ್ಯ ಇಲಾಖೆಯಲ್ಲಿ ಸಣ್ಣ ಗೊಂದಲವಿದೆಯಲ್ಲಾ. ಕೆಲವು ಕಡೆ ಅರಣ್ಯ ಇಲಾಖೆಯವರೇ ಲಿಖಿತವಾಗಿ ಕೊಟ್ಟಿದ್ದಾರೆ. ಇದರಲ್ಲಿ ನಮ್ಮ ಅರಣ್ಯದ ಗುಣ ಲಕ್ಷಣಗಳು ಕಂಡು ಬರುತ್ತಿಲ್ಲ. ಅಂತಹ ಪ್ರದೇಶದಲ್ಲಿ ಕೊಡಬೇಕಾದರೆ Deemed Forest ಗೊಂದಲ ಏಕೆ?

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಆರ್.ಟಿ.ಸಿ.ಯೊಳಗೆ ಏನು ದಾಖಲೆಯಾಗಿದೆ ಅದು ಮುಖ್ಯ. ನೀವು ಹೇಳುವ ಪ್ರಕಾರ ಹಾಡಿ ಏನು ಇಂತಹದು ಇದೆಯಲಾ ್ಲDeemed Forest ಆಗಿ ಬಿಟ್ಟಿದೆ. ಅದನ್ನು ಕೈಬಿಡಬೇಕು ಈಗಾಗಲೇ ಸರ್ಕಾರದ ಮುಂದೆ ಬರುತ್ತಿದೆ. ಅದನ್ನು ತರಿಸುತ್ತಿದ್ದೇನೆ. ಅದು ಆಗಿ ಬಿಟ್ಟರೆ ಮುಂದೆ ಅವರಿಗೆ ಕೊಡುವುದಕ್ಕೆ ಅವಕಾಶವಿದೆ ಏನು ತೊಂದರೆಯಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:-** ಸನ್ಮಾನ್ಯ ಸಭಾಪತಿಯವರೇ, ನೀವು ಹೇಳುವುದಾದರೆ ಅದು ಸಚಿವ ಸಂಪುಟಕ್ಕೆ ಹೋಗಿ ಅದನ್ನು ಕೈಬಿಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಅದು ಶಾಸ್ತ್ರೋಕ್ತವಾಗಿ ಆಗಬೇಕಲ್ಲಾ. ಇಲ್ಲಿ ಮದುವೆ ಮಾಡಬೇಕಾದರೆ ಹಾಗೆ ಮಾಡಿಬಿಡುತ್ತಾರಾ? ತಾಳಿ ಕಟ್ಟಬೇಕು ಇವನು ಬರಬೇಕು, ಅಕ್ಷತೆ ಹಾಕಬೇಕು.

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:–** ಸನ್ಮಾನ್ಯ ಸಭಾಪತಿಯವರೇ, ಬೆಳಕು ಚೆಲ್ಲಿ ಎಂದು ಏಕೆ ಹೇಳಿದೇನೆಂದರೆ....

**ಶ್ರೀ ಕಾಗೋಡುತಿಮ್ಮಪ್ಪ (ಕಂದಾಯ ಸಚಿವರು):–**ಸನ್ಮಾನ್ಯ ಸಭಾಪತಿಯವರೇ, Deemed Forest ನಿಂದ ಇವಗಳನ್ನೆಲ್ಲಾ ಕೈಬಿಡಬೇಕೆಂದು ಎಷ್ಟು ಪ್ರಯತ್ನಿಸುತ್ತಿದ್ದೇನೆಂಬುದು ನಿಮಗೆ ಗೊತ್ತಾ?

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಬೆಳಕು ಚೆಲ್ಲಿ ಎಂದು ಏಕೆ ಹೇಳಿದೇನೆಂದರೆ ಇಂತಹ ಪ್ರಶ್ನೆಗಳನ್ನು ಕೇಳಿದಾಗ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಒಂದೇ ಸಾರಿ ಸಿಟ್ಟು ಬಂದು ಬಿಡುತ್ತದೆ. ಅದಕ್ಕೋಸ್ಕರ ಸ್ವಲ್ಪ ಸಮಾಧಾನ ಬರಲಿ ಎಂದು ಹೇಳಿದೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಬಹಳ legal issue ಚರ್ಚೆಯಾಗುತ್ತಿದೆ. ಈಗ ಖರಾಬ್ ಲ್ಯಾಂಡ್, 'ಎ' ಖರಾಬ್ ಮತ್ತು 'ಬಿ' ಖರಾಬ್ forest land ಮತ್ತೆ private land, regular allotment ಗೆ ಇರುವಂತಹ ಲ್ಯಾಂಡ್. So ಇಲ್ಲಿ government regular allotment ಮಾಡುವಂತಹ ಲ್ಯಾಂಡ್‌ನಲ್ಲಿ ಯಾವುದೇ ರೀತಿಯಾದಂತಹ rights ನ್ನು ಕೊಡುವುದಕ್ಕೆ ಇದೆ. Land Grant Rules ಪ್ರಕಾರ, Karnataka Land Revenue Act ಇರಬಹುದು, Land Grant Rules ಇರಬಹುದು, even for agricultural purpose, grant ಮಾಡಬೇಕಾದರೆ ಆ ಖರಾಬ್ ಲ್ಯಾಂಡ್‌ನ್ನು ಅದರಿಂದ release ಮಾಡಿ Availability List ಗೆ ತೆಗೆದುಕೊಳ್ಳದೇ grant ಮಾಡುವುದಕ್ಕೆ ಬರುವುದಿಲ್ಲ. There are umpteen numbers of judgments rendered by the Hon'ble High Court of Karnataka as well as the Supreme Court. ಇದು ಮೊದಲನೆಯದು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯದಾಗಿ, ಫಾರೆಸ್ಟ್ ಲ್ಯಾಂಡ್ ಏನಿದೆ? ಆ ಫಾರೆಸ್ಟ್ ಲ್ಯಾಂಡ್‌ನಿಂದ release ಆಗದೇ ಫಾರೆಸ್ಟ್ ಲ್ಯಾಂಡ್‌ನಲ್ಲಿ ಯಾವುದೇ ಮನೆಗಳನ್ನು 94 ಸಿ ಇರಬಹುದು, ಮತ್ತೊಂದು ಇರಬಹುದು, regularize ಮಾಡುವುದಕ್ಕೆ ಆಗುವುದಿಲ್ಲ. ಕಾನೂನಿನ ತೊಡಕುಗಳೇನಿದ್ದಾವೆ? ಇದನ್ನು ಸಂಬಂಧಪಟ್ಟಂತಹ rules ಇರಬಹುದು, acts ಇರಬಹುದು. ಇದಕ್ಕೆ amendment ತಂದಾಗ ಮಾತ್ರ ಇದನ್ನು regularize ಮಾಡುವುದಕ್ಕೆ ಸಾಧ್ಯತೆ ಇದೆ. ಇನ್ನೊಂದು ಖಾಸಗಿ ಜಮೀನು ಯಾವುದು ಇದೆ. ನಮ್ಮ Transfer of Property Act ಪ್ರಕಾರ ಯಾರು 12 ವರ್ಷ adverse possession ಇದ್ದಾರೆ, if it is a private land ಅವರಿಗೆadverse possession ನ rights ಬರುತ್ತದೆ. If it is a government land, ಯಾರು 30 years adverse possession ನಲ್ಲಿ ಇರುತ್ತಾರೋ ಅವರಿಗೆ ಮಾತ್ರ ಅವಕಾಶವಿದೆ. ಇದರ ಹಿನ್ನಲೆಯಲ್ಲಿ private land ನ್ನು acquire ಮಾಡಿಕೊಳ್ಳತಕ್ಕಂತಹ ಅಥವಾ adverse possession ಗೆ suit ಹಾಕಿ declare ಮಾಡಿಕೊಳ್ಳತಕ್ಕಂತಹದ್ದನ್ನು ಮಾಡಿದಾಗ ಈ ರೀತಿಯ slums ಇರಬಹುದು ಅಥವಾ ಯಾವ ಲಂಬಾಣಿ ತಾಂಡಗಳಿರಬಹುದು, ಮತ್ತೊಂದು ತಾಂಡಗಳಿರಬಹುದು. ಅದನ್ನು ಮಾಡುವುದಕ್ಕೆ ಅವಕಾಶವಿದೆ. ಈ ದಿಕ್ಕಿನಲ್ಲಿ ಸರ್ಕಾರ ಸಂಬಂಧಪಟ್ಟಂತಹ ಕಾನೂನಿಗಳಿಗೆ amendments ತಂದಾಗ ಮಾತ್ರ ಇದು ಸುಸೂತ್ರವಾಗಿ ನಡೆಸುವುದಕ್ಕೆ ಸಾಧ್ಯತೆಯಿದೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರು ಈ ಬಗ್ಗೆ ಏನಾದರೂ ಹೇಳುತ್ತೀರಾ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟದ್ದನ್ನು ಹೇಳಿದ್ದಾರೆ. ಅವರ ಹೇಳುವ ಪ್ರಕಾರ ಗೋಮಾಳ ಇವೆಲ್ಲಾ ಇದ್ದರೆ ಅದರಲ್ಲಿ ಕೊಡವುದಕ್ಕೆ ಏನು ತೊಂದರೆಯಿಲ್ಲ ಎಂದು ನೀವೇ ಒಪ್ಪಿಕೊಂಡಿದ್ದೀರಿ ಹೌದಾ. 'ಬಿ' ಖರಾಬ್ ಈಗ ಅದೇ ಬಂದಿತ್ತು. ಹಿರೀಕೇರೂರಿನಲ್ಲಿ ಇಂತಹದೇ ಬಂದಿತ್ತು.'ಬಿ' ಖರಾಬ್ ಅದು ಸರ್ಕಾರದ ಜಾಗವೇ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**(248)16.03.2017 ಹೆಚ್‌ವಿ/ಎಕೆ 5.00**

**ಶ್ರೀ ಕಾಗೋಡುತಿಮ್ಮಪ್ಪ (ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಅದರಲ್ಲಿ ಕೂಡ ಕೊಡುವುದಕ್ಕೆ ತೀರ್ಮಾನಿಸಲಾಗಿದೆ. ಕೆಲವು ಬಾರಿ ಸರ್ಕಾರಿ ಭೂಮಿಯಲ್ಲಿ ಬಂಡೆ ಇರುತ್ತದೆ ಅದನ್ನು ಸರ್ಕಾರಿ ಜಮೀನು 'ಬಿ' ಖರಾಬ್ ಎಂದು ಆಗುತ್ತದೆ. ಒಂದು ವೇಳೆ ಆ ಜಮೀನು ಸಾಗುವಳಿ ಮಾಡುವುದಕ್ಕೆ ಅಥವಾ ನಿವೇಶನಗಳನ್ನಾಗಿ ಹಂಚಿಕೆ ಮಾಡುವುದಕ್ಕೆ ಅನುಕೂಲಕರವಾಗಿದ್ದರೆ ಆ ಭೂಮಿಯನ್ನು ಕೊಡಬೇಕೆನ್ನುವ ತೀರ್ಮಾನ ಮಾಡಲಾಗಿದೆ. ಇವತ್ತು ಅದರ ಬಗ್ಗೆಯೇ ಚರ್ಚೆ ಮಾಡಿ ಬಂದಿದ್ದೇನೆ.

ಎರಡನೆಯದಾಗಿ, ಲಭ್ಯವಿರುವ ಜಮೀನುಗಳ ಪಟ್ಟಿಯ (Available List) ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ ಈಗಾಗಲೇ ಒಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಯಾವಯಾವ ಊರುಗಳಲ್ಲಿ ಜಮೀನು ಮಂಜೂರಾತಿ ಮಾಡುವುದಕ್ಕೆ ಜಮೀನು ಲಭ್ಯವಿದೆ ಅದನ್ನು ಪಟ್ಟಿ ಮಾಡಿ ಎಂದು ನಾನು ಕಳುಹಿಸಿಕೊಟ್ಟಿದ್ದೇನೆ. ಲಭ್ಯವಿರುವ ಜಮೀನುಗಳ ಪಟ್ಟಿ ಮಾಡಿದರೆ, 100 ಎಕರೆ ಜಮೀನು ಇದ್ದರೆ ಅದರಲ್ಲಿ 30 ಎಕರೆ ಗೋಮಾಳ ಜಾಗವಿರಬೇಕಾಗುತ್ತದೆ. ಅದಕ್ಕಿಂತ ಹೆಚ್ಚು ಜಮೀನು ಲಭ್ಯವಿದ್ದರೆ ಅದನ್ನು ಹಂಚಿಕೆ ಮಾಡುವುದಕ್ಕೆ ಅವಕಾಶವಿದೆ. ಆ ಪ್ರಕಾರ ಲೆಕ್ಕ ಮಾಡಿ ಪ್ರತಿಗ್ರಾಮದಲ್ಲಿ ಲಭ್ಯವಿರುವ ಜಮೀನಿನ ಪಟ್ಟಿಯನ್ನು ತಯಾರು ಮಾಡಿ ಪ್ರಕಟ ಮಾಡಲಾಗುತ್ತದೆ. ಆ ರೀತಿ ಪ್ರಕಟಪಡಿಸಿದ ಮೇಲೆ ಜಮೀನು ಲಭ್ಯವಿದ್ದರೆ, ಆ ಗ್ರಾಮದ ಜನರು ಮಂಜೂರಾತಿಗಾಗಿ ಅರ್ಜಿ ಕೊಡುವುದಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಅರಣ್ಯ ಜಮೀನಿನ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಅದು ನಮ್ಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದುಕೊಂಡು ಅರಣ್ಯ ಭೂಮಿಯನ್ನು ಬಿಡಿಸಿಕೊಳ್ಳಬೇಕಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಅರಣ್ಯ ಜಮೀನನ್ನು ಬಿಡಿಸಿಕೊಳ್ಳಬೇಕಾದರೆ, ನೇಣು ಹಾಕಿಕೊಳ್ಳಬೇಕಾಗಿದೆ. ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯುವುದೆಂದರೆ, ನರಕಕ್ಕೆ ಹೋಗಿ ಬಂದ ಅನುಭವವಾಗುತ್ತದೆ. ಅದ್ದರಿಂದ ಅರಣ್ಯ ಭೂಮಿಯನ್ನು ಬಿಡಿಸಿಕೊಳ್ಳುವುದು ನಮ್ಮಿಂದ ಸಾಧ್ಯವಾಗುವುದಿಲ್ಲ. 'The Forest Conservation Act' ಜಾರಿಗೆ ಬಂದ ಮೇಲೆ ಇಂತಹ ಪರಿಸ್ಥಿತಿ ಉದ್ಭವವಾಗಿದೆ. ಆದರೂ ಸಹ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಅದನ್ನು ಬಿಡಿಸಿಕೊಳ್ಳುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇಲ್ಲದಿದ್ದರೆ 'ಅರಣ್ಯ ಹಕ್ಕು ಕಾನೂನು' ಪ್ರಕಾರ ಒಂದು ಪ್ರಾವಿಜನ್ ಅನ್ನು ಕಲ್ಪಿಸಿಕೊಡಲಾಗಿದೆ. ಸಾರ್ವಜನಿಕರ ಉಪಯೋಗದ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

ಉದ್ದೇಶಕ್ಕಾಗಿ ಅಂದರೆ, ಶಾಲೆ, ಆಸ್ಪತ್ರೆ, ಕೆರೆ ಮತ್ತು ರಸ್ತೆಗಳ ನಿರ್ಮಾಣಕ್ಕಾಗಿ ಆ ಜಮೀನು ಬೇಕು ಎನ್ನುವುದಾದರೆ, ಆ ಪಂಚಾಯಿತಿಯವರು ಅಥವಾ ಸಂಬಂಧಪಟ್ಟ ಇಲಾಖೆಯವರು ನಿರ್ಣಯ ಮಾಡಬೇಕಾಗುತ್ತದೆ. ಈಗ ಉದಾಹರಣೆಗೆ ಹೇಳಬೇಕಾದರೆ, ಶಾಲೆಗೆ ಸ್ಥಳ ಬೇಕಾದರೆ, ಶಿಕ್ಷಣ ಇಲಾಖೆಯವರು ಅಥವಾ ಪಂಚಾಯಿತಿಯವರು ಒಂದು ನಿರ್ಣಯ ಮಾಡಿ 'ಬಿ' ಫಾರಂ ಎಂದು ಇದೆ, ಆ 'ಬಿ' ಫಾರಂ ಅನ್ನು ಅರಣ್ಯ ಹಕ್ಕು ಸಮಿತಿಗೆ ಕೊಟ್ಟರೆ ಅವರು 'ಈ ಉದ್ದೇಶಕ್ಕಾಗಿ ಆ ಜಾಗವನ್ನು ಬಿಡುಗಡೆ ಮಾಡಬಹುದು' ಎಂದು ಹೇಳಿದರೆ, ಆ ನಿರ್ಣಯವನ್ನು ನಮ್ಮ ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ಜಿಲ್ಲಾಧಿಕಾರಿಗಳನ್ನು ಒಳಗೊಂಡಂತಹ ಉಪ ವಿಭಾಗೀಯ ಹಂತದ ಸಮಿತಿಯವರು ಒಪ್ಪಿಗೆ ಕೊಟ್ಟರೆ ಅದನ್ನು ಸಹ ಬಿಡಿಸಿಕೊಳ್ಳಬಹುದಾಗಿದೆ. ಆದ್ದರಿಂದ ಆ ಪ್ರದೇಶದ ಜನರಿಗೆ ಸ್ವಲ್ಪ ತಿಳುವಳಿಕೆಯನ್ನು ನೀಡಿದರೆ ಎಲ್ಲೆಲ್ಲಿ ಜಾಗದ ಅವಶ್ಯಕತೆ ಇದೆ ಅಲ್ಲಿ ಅರಣ್ಯ ಜಮೀನನ್ನು ಸಾರ್ವಜನಿಕರ ಉಪಯೋಗಕ್ಕೆ, ಊರಿನ ಮೈದಾನಕ್ಕೆ, ಶಾಲೆ ಅಥವಾ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಬಳಸಿಕೊಳ್ಳುವುದಕ್ಕೆ ಅವಕಾಶವಿದೆ. ಈ ಅವಕಾಶವನ್ನು ನಾವು ಬಳಸಿಕೊಂಡರೆ ನಮ್ಮ ಉದ್ದೇಶ ಈಡೇರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಆಶ್ರಯ ಯೋಜನೆಯಡಿ ನಿವೇಶನ ಕೊಡುವ ವಿಚಾರದ ಬಗ್ಗೆ ಹೇಳಬೇಕಾದರೆ, ಅಲ್ಲಿ ಸರ್ಕಾರದ ಜಮೀನು ಲಭ್ಯವಿಲ್ಲದಿದ್ದರೆ ಖಾಸಗಿ ಜಮೀನನ್ನು ಖರೀದಿ ಮಾಡುವುದಕ್ಕೆ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಈ ರೀತಿ ಖಾಸಗಿ ಜಮೀನನ್ನು ಖರೀದಿ ಮಾಡುವುದಕ್ಕೆ ಒಂದು ದರವನ್ನು ನಿಗದಿ ಮಾಡಿದ್ದೇವೆ. ಆ ಹಣ ಸಾಕಾಗದೇ ಹೋದರೆ, ಹೆಚ್ಚು ಹಣವನ್ನು ನೀಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಸತಿ ಸಚಿವರಲ್ಲಿ ನನ್ನ ಮನವಿ ಏನೆಂದರೆ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿದ್ದ ಅನೇಕ ಜನ ಬಡವರಿಗೆ ಹಕ್ಕುಪತ್ರಗಳನ್ನು ನೀಡಲಾಗಿದೆ. ಅದಕ್ಕಿನ್ನು ಸಿಂದುತ್ವ ಕೊಟ್ಟಿಲ್ಲ. ಯಾವ ಕಾರಣದಿಂದಾಗಿ ಇನ್ನೂ ಸಿಂದುತ್ವ ದೊರೆತಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಇದರ ಬಗ್ಗೆ ವಸತಿ ಇಲಾಖೆಯ ಅಧಿಕಾರಿಗಳ ಜೊತೆಗೆ ಒಂದು ಸಭೆಯನ್ನು ಕರೆದರೆ ಈ ಸಮಸ್ಯೆಯನ್ನು ಬಗೆಹರಿಸಬಹುದಾಗಿದೆ. ಈ ನಿಟ್ಟಿನಲ್ಲಿ ಅಧಿವೇಶನ ಮುಗಿಯುವುದರೊಳಗೆ ಒಂದು ಸಭೆ ಕರೆಯಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿಉಪಯೋಗಿಸಕೂಡದು"

**ಶ್ರೀ ಎಂ.ಕೃಷ್ಣಪ್ಪ (ವಸತಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸೂಚಿಸಿರುವಂತೆ ಆ ಸಭೆಯನ್ನು ಕರೆಯಲಾಗುವುದು.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, 2017-18ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಯನ್ನು ನಾಳೆ ಮುಂದುವರೆಸುವುದಕ್ಕೆ ತಮಗೆ ಅವಕಾಶವನ್ನು ನೀಡಲಾಗಿದೆ.

ಸಂಜೆ 5.00 ಗಂಟೆಗೆ ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕ ಮಾಲಿಕೆ ಬಿಡುಗಡೆ ಕಾರ್ಯಕ್ರಮವಿರುವುದರಿಂದ ಸದನವನ್ನು ನಾಳೆ ಬೆಳಿಗ್ಗೆ 11,00 ಗಂಟೆಯವರೆಗೆ ಮುಂದೂಡಲಾಗುತ್ತಿದೆ.

**(ಸದನವು ಸಂಜೆ 5 ಗಂಟೆಗೆ 5 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ 17ನೇ ಮಾರ್ಚ್ ಮಾಹೆ 2017ರ ಶುಕ್ರವಾರದಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

><><><

"ತಿದ್ದುಪಡಿಯಾಗದ ಪ್ರತಿ/ ಗಟಿಜಜುಣಜಜ ಅರತಿಥಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"